# History of the Reformation

## ಸಂಕ್ಷೇಪವಾದ ಪುನಃಸ್ಥಾಪನೆಯ

# ಚರಿತ್ರವು

ಶಾಲೆಗಳಿಗೋಸ್ಕರವೂ ಮನೆತನಗಳಿಗೋಸ್ಕರವೂ
ರೇದೆನ್ಬಖರನಿಂದ ಹೇಳಲಾಯಿತು

ಮಿಶನೆರಿ

## ಹೆ. ಆ. ಕೌಂಡಿನ್ಯ

ಅದನ್ನು ಇಂಗ್ಲಿಷು ಸ್ಕೋತ ದೇಶಗಳ ಪುನಃಸ್ಥಾಪನೆಯ ಚರಿತ್ರ
ಕೂಡಿಸಿ ಕನ್ನಡಿಸಿದ್ದಾಯಿತು

ಮಂಗಳೂರು
ಬಾಸೆಲ್ ಮಿಶನ್ ಪ್ರೆಸ್
೧೮೭೩

§ ೧.

# ಆಪತ್ತು

ನಮ್ಮ ಕರ್ತನಾದ ಕ್ರಿಸ್ತನ ಸಭೆಯು ಆರಂಭದಲ್ಲಿ ಸುಂದರವಾಗಿ ಬೆಳದು, ಇಹಪರಕ್ಕೆ ಭಾಗ್ಯಕರವಾದ ಫಲಗಳನ್ನು ಧರಿಸಿದ ಮೇಲೆ, ಕಾಲ ಗತಿಸುತ್ತಾ, ಮನುಷ್ಯರ ಅಪರಾಧದಿಂದ ಬಹಳ ಬಹಳ ಕೆಟ್ಟು ಹೋಯಿತು. ಸುಮಾರು ಐನೂರು ಆರುನೂರು ವರುಷ ಪರ್ಯಂತ ಅದರಲ್ಲಿ ನಡದ ಬೋಧನೆಯು ಒಟ್ಟಾರೆ ನಿರ್ಮಲವಾಗಿತ್ತು. ಆಗ್ಯಾಗೈ ಹುಟ್ಟಿದ ಅಬದ್ಧಗಳನ್ನು ಹೊರಗೆ ಮಾಡಿದರು. ಆದರೆ ಮೆಲ್ಲ ಮೆಲ್ಲನೆ ಸುಳ್ಳು ಬೋಧನೆಯು ಬಲಗೊಂಡು, ಅದರ ಸಂಗಡ ಅಬದ್ಧವಾದ ಆರಾಧನೆಯೂ ದುರ್ಮರ್ಯಾದೆಗಳೂ ಒಳ ಹೊಕ್ಕವು. ಕತ್ತಲೆಯು ತನ್ನ ಕ್ರಿಯೆಗಳೊಡನೆ ಹೆಚ್ಚು ಹೆಚ್ಚಾಯಿತು. ಕಡೆಯಲ್ಲಿ ಮಧ್ಯ ಕಾಲದಲ್ಲಿ, ಕ್ರಿ. ಶ. ೧೦೦೦—೧೫೦೦, ಅನರ್ಥವು ಹೇಳ ಕೂಡದಷ್ಟು ದೊಡ್ಡದಾಯಿತು. ಆಗೈ ದೇವರ ಆಲಯವು ಎಷ್ಟೋ ಮಲಿನವಾಗಿ ಹೋಯಿತು! ಕ್ರಿಸ್ತನ ಮದುವಳು ಎಷ್ಟು ಕುರೂಪಿಯಾಗಿ ಹೋದಳು! ಎಷ್ಟು ಅಲ್ಪ ಮಂದಿಯಾಗಿಯೂ ಎಷ್ಟು ಮರೆಯಾಗಿಯೂ ಇದ್ದಾಗ್ಯೂ, ರಕ್ಷಣೆಗೆ ಬೇಕಾಗಿರುವ ದೇವರ ಸತ್ಯವನ್ನು ತಿಳುಕೊಂಡು, ಅದರ ಬೆಳಕಿನಲ್ಲಿ ನಡಿಯುವಂಥವರು ಯಾವ ಕಾಲದಲ್ಲಿ ಆದರೂ ಇಲ್ಲದಿರ ಕೂಡದೆಂಬದು ಸರಿ. ಎಂದಿಗೂ ಇಲ್ಲವಾಗಿ ಹೋಗ ಕೂಡದ ಕ್ರಿಸ್ತನ ಈ ಸತ್ಯ ಸಭೆಯಾದ ಪರಿಶುದ್ಧರ ಮಂಡಲಿಯು ಕಾರ್ಗತ್ತಲೆಯ ಕಾಲಗಳಲ್ಲಿ ಸಹಾ (ಫ್ರೆಂಚು ದೇಶದ) ವಲ್ಡೆನ್ಸರಲ್ಲಿಯೂ (ಅಂಗ್ಲದೇಶದ) ವಿಕ್ಲೆಫೇಯರಲ್ಲಿಯೂ ಕಾಣ ಬರುತ್ತದೆ; ಆದರೆ ಆ ಸತ್ಯ ಸಭೆ ಎಲ್ಲೆಲ್ಲಿ ಪ್ರತ್ಯಕ್ಷವಾಯಿತೋ, ಅಲ್ಲಲ್ಲಿ ಕ್ರೈಸ್ತ ಜನರಲ್ಲಿದ್ದ ಅಧಿಕಾರಿಗಳು ಅದನ್ನು ಹಿಂಸಿಸಿದರು, ಕೆಡಿಸಿದರು; ಅದರ ಅಂಗಗಳನ್ನು ನಿಷ್ಕರುಣೆಯಾಗಿ ಕೊಂದರು, ಉಳಿದವರನ್ನು ಮರೆಯಾಗಿ ಹೋಗುವ ಹಾಗೆ ಹಿಂಮೆಟ್ಟಿದರು. ಇದಲ್ಲದೆ ಕ್ರೈಸ್ತ ಜನಾಂಗಗಳೆಲ್ಲಾ ಒಟ್ಟಾರೆ ಕತ್ತಲೆಯಲ್ಲಿಯೂ ಮರಣದ ನೆರಳಿನಲ್ಲಿಯೂ ಕೂತು ಕೊಂಡಿದ್ದವು.

ಇಂಥಾ ವಿನಾಶಕಾಲಕ್ಕೆ ಏನು ಕಾರಣವಾಯಿತು ಎಂತ ಕೇಳಿದರೆ, ಕ್ರೈಸ್ತ ಸಭೆಯ ಎರಡು ಮುಖ್ಯ ಸೂತ್ರಗಳು ಕಳದು ಹೋದ್ದೇ ಕಾರಣವೆಂತ ಹೇಳ ಬೇಕು. ಆ ಸೂತ್ರಗಳು ಯಾವವೆಂದರೆ.

೧. ದೇವಾಶ್ವಾಸಿತವಾದ, ಅಂದರೆ, ದೇವರು ತನ್ನ ಆತ್ಮದಿಂದ ಪ್ರೇರೇಪಿಸಿದ ಲೇಖನ ಮಾತ್ರವೇ ರಕ್ಷಣೆಯ ಬೋಧನೆಗೆ ಬುಗ್ಗೆಯಾಗಿರುತ್ತದೆ ಎಂಬದೊಂದು.

೨. ಪಾಪಿ ಮನುಷ್ಯನು ಮಧ್ಯಸ್ಥ ಯೇಸು ಕ್ರಿಸ್ತನಲ್ಲಿ ವಿಶ್ವಾಸ ಇಡುವದರಿಂದ ಮಾತ್ರವೆ ನೀತಿನಿರ್ಣಯ ಪಡುತ್ತಾನೆಂಬದು ಮತ್ತೊಂದು.

ಪರಿಶುದ್ಧ ಬರಹವು ಉಂಟೆಂಬ ಸಂಗತಿ ತಿಳಿದಿತ್ತು ಸರಿ, ಅದಕ್ಕಿದ್ದ ದೈವವಾಕ್ಯವೆಂಬ ಹೆಸರನ್ನು ಸಹಾ ತೆಗಿಯಲಿಲ್ಲಾ. ಆದಾಗ್ಯೂ ಅಪಾಸ್ತಲರು ಬರೆದ ಪುಸ್ತಕಗಳ ಹೊರತು, ಅವರು ಬೋಧಿಸಿದ್ದೆಂಬ ದಂತಕಥೆಗಳನ್ನೂ ಸಂಪ್ರದಾಯಗಳನ್ನೂ ದೇವರ ವಾಕ್ಯಕ್ಕೆ ಸರಿಯಾಗಿ ಇಟ್ಟರು. ಆದರೆ ಈ ಸಂಪ್ರದಾಯ ಮುಂತಾದ್ದು, ಪರಿಶುದ್ಧಾತ್ಮದಿಂದ ಪ್ರೇರಣವಾದ ದೇವರ ಪರಿಶುದ್ಧ ಮನುಷ್ಯರ ಭದ್ರವಾದ ಸಾಕ್ಷಿಯಾಗಿರುವ ಬೈಬಲಿಗೆ ಅನೇಕ ಮತ್ತು ಪ್ರಾಮುಖ್ಯವಾದ ಸಂಗತಿಗಳಲ್ಲಿ ವಿರೋಧವಾಗಿರುವ ಒಂದೇ ಕಾರ್ಯದಿಂದಲೇ, ಅಬದ್ಧವೆಂತ ತಿಳಿಯ ತಕ್ಕದ್ದು.

ಈ ದಂತಕಥೆಯ ಮುಖ್ಯ ಬೋಧನೆಯು ಯಾವದೆಂದರೆ:—ಅಪಾಸ್ತಲರಲ್ಲಿ ಅಧಿಪತಿ ಎಂಬ ಹೆಸರಿಟ್ಟ ಪೇತ್ರನಿಗೆ ಉತ್ತರಾಧಿಕಾರಿ ಎಂದು ಅನಿಸಿ ಕೊಳ್ಳುತ್ತಾ ಇದ್ದ ರೋಮದ ಅಧ್ಯಕ್ಷಿಯು ಅದೃಶ್ಯನಾದ ಕ್ರಿಸ್ತನ ದೃಶ್ಯನಾದ ಪ್ರತಿನಿಧಿ ಎಂಬದಾಗಿತ್ತು. ಈ ಅಧ್ಯಕ್ಷಿಯು ಭೂಮಿಯಲ್ಲಿರುವ ಸಮಸ್ತಕ್ಕಿಂತ ಅಧಿಕನು. ಅವನು ಸೂರ್ಯನಂತೆ; ಮತ್ತು ಮಹಾರಾಜ, ರಾಜ, ಶ್ರೀಮಂತ ಮುಂತಾದವರು ಚಂದ್ರ ನಕ್ಷತ್ರಗಳಂತೆ, ಅವನಿಂದ ಬೆಳಕನ್ನೂ, ಅಧಿಕಾರವನ್ನೂ, ಮಹಿಮೆಯನ್ನೂ ಹೊಂದುತ್ತಾರೆ. ಅವನು ಮುಖ್ಯವಾಗಿ ಕ್ರೈಸ್ತ ಸಭೆಗೆ ಅಪ್ರತಿಬಂಧವಾದ ಮೇಲ್ವಿಚಾರಕನು, ಅವನ ಬೋಧನೆ ಸಲ್ಲ ಬೇಕು, ಅವನ ಅಪ್ಪಣೆ ನಡಿಯ ಬೇಕು. ಇದೆಲ್ಲಾ ಕ್ರಿಸ್ತನು ತಾನೇ ಮಾತಾಡಿದಂತೆ. ಯಾಕಂದರೆ ಅವನು ಪರಲೋಕದ ಕರ್ತನ ಸಂಪೂರ್ಣ ಪ್ರತಿನಿಧಿಯಾಗಿ, ಪರಿಶುದ್ಧಾತ್ಮದ ವಿಶೇಷವಾದ ಪ್ರಕಾಶೀಕರಣದಿಂದ ತಪ್ಪು ಕೂಡದವನು. ದಂತಕಥೆಯಾಗಿ ಬಂದ ಅಪಾಸ್ತಲ ಬೋಧನೆಯು ಅವನ ಹತ್ತರ ಅದೆ. ಅದರಿಂದಲೆ ಪರಿಶುದ್ಧ ಬರಹವನ್ನು ಚನ್ನಾಗಿ ತಿಳಿಯ ಬಹುದಾದ ಕಾರಣ, ಅವನೊಬ್ಬನು ಮಾತ್ರವೆ ಅದನ್ನು ಸಮವಾಗಿ ವ್ಯಾಖ್ಯಾನಿಸ ಬಹುದು. ಇಂಥಾ ಮಾತುಗಳನ್ನೆಲ್ಲಾ ಹೇಳಿದರು.

ಈ ಅಧ್ಯಕ್ಷಿಯು ಪೋಪನೆಂಬ ಹೆಸರು ತಕ್ಕೊಂಡನು, ಹಾಗೆಂದರೆ, ಕ್ರೈಸ್ತ ಜನರ ತಂದೆ (ಅಪ್ಪ). ಇದರಿಂದ (ಮತ್ಥಾ. ೨೩, ೯) "ಭೂಮಿಯ ಮೇಲೆ ತಂದೆ ಎಂದು ಯಾವನನ್ನಾದರೂ ಕರೆಯ ಬೇಡಿರಿ, ಯಾಕಂದರೆ ಪರಲೋಕದಲ್ಲಿರುವವನು ಒಬ್ಬನೇ ತಂದೆಯಾಗಿ ಇದ್ದಾನೆ" ಎಂದು ಕರ್ತನಾದ ಯೇಸು ಹೇಳಿದ ಮಾತು ಕೆಡವಿ ಬಿಟ್ಟನು. ಅದೇ ಪ್ರಕಾರ "ಗುರುಗಳೆಂದು ಕರೆಯಲ್ಪಡ ಬೇಡಿರಿ, ಯಾಕಂದರೆ ಕ್ರಿಸ್ತನೊಬ್ಬನೆ ನಿಮಗೆ ಗುರುವಾಗಿ ಇದ್ದಾನೆ." (ವ. ೧೦) ಎಂಬ ಮಾತನ್ನು ಸಹಾ ಕೆಡವಿ ಬಿಟ್ಟನು. ನಿಜವಾಗಿ ಈ ಅಧ್ಯಕ್ಷಿಯು ತಾನೇ ಗುರುವೂ ಯಜಮಾನನೂ ಎಂದು ಭಾವಿಸಿ ಕೊಂಡು, ದಿವ್ಯ ಗುರುವಿನ ಸ್ಪಷ್ಟವಾದ ವಾಕ್ಯಕ್ಕೆ ಪೂರ್ಣ ವಿರೋಧವಾಗಿ ಬೋಧನೆಯನ್ನೂ ಕಟ್ಟಳೆಯನ್ನೂ ಮನಸೋಯಿಚ್ಛೆ ಕಲ್ಪಿಸಿದನು.

ಇದು ಹೌದೋ ಅಲ್ಲವೋ ಎಂಬದನ್ನು ಆ ಕಾಲದಲ್ಲಿ ಸ್ವಲ್ಪ ಮಂದಿ ಮಾತ್ರವೆ ಗ್ರಹಿಸ ಶಕ್ತರಾಗಿದ್ದರು. ಹ್ಯಾಗಂದರೆ, ದೇವರ ವಾಕ್ಯಪುಸ್ತಕವು ಆಗ ಸಹಾ ಇತ್ತು ಸರಿ, ಆದರೆ ಅದೊಂದು ತಿಳಿಯದ ಪುಸ್ತಕವಾಗಿ ಹೋಗಿತ್ತು. (ಔಗುಸ್ತೀನರ ಮಠದಲ್ಲಿ ಎರ್ಫುರ್ತದಲ್ಲಿ ಅದು ಸಂಕೋಲೆಗೆ ಕಟ್ಟಿ ಇತ್ತು). ನೂರು ಬೋಧಕರಲ್ಲಿ ಒಬ್ಬನು ಅದರೊಳಗೆ ಕಣ್ಣಿಟ್ಟವನು ಇದ್ದನೋ ಇಲ್ಲವೋ! ಮತ್ತು ಭೂರಿ ಜನದ ಕೈಗೆ ಅದು ಶಿಕ್ಕಲೇ ಇಲ್ಲಾ. ಹೀಗಾಗಿ ರೋಮದಿಂದಲೂ ರೋಮಮಾರ್ಗವಾಗಿಯೂ ಅನೇಕಾನೇಕ ಮನುಷ್ಯಕಟ್ಟಳೆಗಳು ಬಂದವು. ಅದರಿಂದ ಬಡ ಕ್ರೈಸ್ತ ಜನವು ಭ್ರಷ್ಟವಾಯಿತು, ಕ್ರೈಸ್ತ ನಾಮವನ್ನು ಹೇಸುವ ಹಾಗೆ ಮಾಡ ತಕ್ಕ ಎಷ್ಟೋ ದುರಾಚಾರಗಳು ಹುಟ್ಟಿದವು.

ಇದಕ್ಕೆ, ಅಸಹ್ಯವಾದ ಮರೀಯ ಪೂಜೆಯನ್ನೂ ಸಂತರ ಪೂಜೆಯನ್ನೂ ನೆನಪು ಮಾಡಿದರೆ ಸಾಕು. ಜನರು ಆತ್ಮ ಶರೀರಗಳ ಸಂಕಷ್ಟಗಳಲ್ಲಿ ಕ್ರಿಸ್ತನ ಮರೆ ಹೊಕ್ಕಲಿಲ್ಲಾ, ದೇವರ ಆಶ್ರಯ ಮಾಡಲಿಲ್ಲಾ: ಮರೀಯಳನ್ನೂ ಬೇರೆ ಸತ್ತು ಹೋದ ಮನುಷ್ಯರನ್ನೂ ಮಧ್ಯಸ್ಥಿಕೆ ಮಾಡ ಬೇಕೆಂತಲೂ, ಕಾಪಾಡ ಬೇಕೆಂತಲೂ, ಸಹಾಯ ಮಾಡ ಬೇಕೆಂತಲೂ, ಬೇಡಿ ಕೊಂಡರು. ಈ ಪ್ರಕಾರ "ನಿಶ್ಚಯವಾಗಿ ನಮ್ಮ ದೇವರಾದ ಯೆಹೋವನಲ್ಲಿ ಅಲ್ಲದೇ, ಇಸ್ರಯೇಲಗೆ ಸಹಾಯವಿಲ್ಲ" ಯೆರೆ. ೩, ೨೩ — "ಯಾರಾದರೂ ಪಾಪ ಮಾಡಿದರೆ, ತಂದೇ ಹತ್ತರ ನಮಗೆ ನೀತಿವಂತನಾದ ಯೇಸು ಕ್ರಿಸ್ತನೆಂಬ ಕಾರ್ಯಕರ್ತನು ಇದ್ದಾನೆ" ೧ ಯೋಹಾ. ೨, ೧. ಎಂಬ ಮಾತುಗಳನ್ನು ನಿರರ್ಥಕ ಮಾಡಿದರು. ಇದಲ್ಲದೆ, ಈ ಕುರುಡ ಜನರು ಪರಲೋಕದಲ್ಲಿರುವ ನಿಜವಾದ ಪರಿಶುದ್ಧರನ್ನು ಬಿಟ್ಟು, ತಾವು ಮಾಡಿ ಕೊಂಡ ಕಣ್ಣ ಮುಂದಿರುವ ಅವರ ಪ್ರತಿಮೆಗಳಿಗೆ ಪ್ರಾರ್ಥನೆ ಮಾಡಿದರಲ್ಲವೆ!

ಮತ್ತೊಂದು ಅಬದ್ಧ ಬೋಧನೆಯು ಬ್ರಹ್ಮಚಾರಿತ್ವದ ವಿಷಯದಲ್ಲಿ ಇತ್ತು. ಮದಿವೆ ಮಾಡಿ ಕೊಳ್ಳದಿರುವದು ಯೋಗ್ಯವಾದ ಪರಿಶುದ್ಧ ಆಶ್ರಮವೆಂತಲೂ, ಮದಿವೆ ಮಾಡಿ ಕೊಳ್ಳುವದು ಅಶುದ್ಧ ಆಶ್ರಮವೆಂತಲೂ, ಈ ಕಾರಣದಿಂದ ಪಾರಮಾರ್ಥಿಕರಾದ ಬೋಧಕರು ತಮ್ಮ ಘನಕ್ಕೋಸ್ಕರ ಮದಿವೆ ಮಾಡಿ ಕೊಳ್ಳದಿರುವದು ಅವಶ್ಯವೆಂತಲೂ ಹೇಳಿದರು. ಆದರೆ ವಿವಾಹವು ದೇವರು ತಾನೇ ಪರದೈಸದಲ್ಲಿ ನೇಮಿಸಿ, ಪರಿಶುದ್ಧ ಮಾಡಿ, ಆಶೀರ್ವದಿಸಿದ ಆಶ್ರಮವೆಂಬದನ್ನು ಅವರು ಮರತು ಬಿಟ್ಟರು. ಇದಲ್ಲದೆ ಪೌಲನು ೧ ತಿಮೊ. ೪, ೨. ಇಂಥಾ ಬೋಧನೆಗಳಿಗೆ ದೆವ್ವಗಳ ಬೋಧನೆಗಳೆಂತ ಹೇಳುತ್ತಾನೆ. ಅಲ್ಲಿ ಬರದದ್ದೇನಂದರೆ ವ. ೧—೩ "ಆದರೆ ಆತ್ಮವು ಸ್ಪಷ್ಟವಾಗಿ ಹೇಳುವದೇನಂದರೆ—ಕಡೇ ಕಾಲಗಳಲ್ಲಿ ಕೆಲವರು ವಿಶ್ವಾಸದಿಂದ ತಿರುಗಿ ಬಿದ್ದು, ಮೋಸಗೊಳಿಸುವ ಆತ್ಮಗಳಿಗೂ, ದೆವ್ವಗಳ ಬೋಧನೆಗಳಿಗೂ ಕಿವಿ ಕೊಡುವರು. ಅವರು ಕಪಟದಿಂದ ಸುಳ್ಳಾಡುವವರೂ, ಸ್ವಂತ ಮನಸ್ಸಾಕ್ಷಿಯಲ್ಲಿ ಬರೆ ಹಾಕಲ್ಪಟ್ಟವರೂ, ಮದುವೆಗೆ ಅಡ್ಡಿ ಮಾಡುವವರೂ, ಸತ್ಯವನ್ನು ತಿಳಿದ ವಿಶ್ವಾಸಿಗಳಿಂದ ಸ್ತೋತ್ರದ ಸಂಗಡ ಅನುಭವಿಸಲ್ಪಡುವದಕ್ಕೆ ದೇವರು ಸೃಷ್ಟಿಸಿದ ಆಹಾರಗಳನ್ನು ಬಿಟ್ಟು ಬಿಡಬೇಕೆಂಬುವವರೂ ಆಗಿರುವರು."

ಇದಲ್ಲದೆ ರಾತ್ರಿ ಭೋಜನವನ್ನು ಒಂದು ಭಾಗವಾಗಿ ಮಾತ್ರವೆ ಕೊಡುವದು ಪರಿಶುದ್ಧ ಬರಹಕ್ಕೆ ಕೇವಲ ವಿರೋಧ. ಅವರು ಲೌಕಿಕರಿಗೆ ರಾತ್ರಿಭೋಜನದಲ್ಲಿ ರೊಟ್ಟಿಯನ್ನು ಮಾತ್ರವೆ ಕೊಟ್ಟರು, ಆದರೆ ಹೊಸ ಒಡಂಬಡಿಕೆಯ ಪಾತ್ರವನ್ನು ಕೊಡಲಿಲ್ಲಾ. ಮತ್ತಿದು ಕರ್ತನ ವಾಕ್ಯಕ್ಕೆ ವಿರೋಧ, ಹ್ಯಾಗಂದರೆ, ಕರ್ತನು ಹೇಳಿದನು: "ಇದರಲ್ಲಿ ನೀವೆಲ್ಲರು ಕುಡಿಯಿರಿ."

ಭಯಂಕರವಾದ ಮತ್ತೊಂದು ಅಬದ್ಧ ಬೋಧನೆಯು ಯಾಜಕನ ಮೀಸ್ ಆಗಿತ್ತು, (ಹಾಗಂದರೆ ಯಾಜಕನು ತಾನೆ ಆಚರಿಸುವ ರಾತ್ರಿಭೋಜನ). ಮನುಷ್ಯರ ಪಾಪಗಳಿಗೋಸ್ಕರ ಯಾಜಕನು ನಿರಂತರ ಅರ್ಪಿಸುತ್ತಾ ಇರುವ ಬಲಿ ಎಂದು ಅದಕ್ಕೆ ಹೇಳಿದರು. ಈ ಪ್ರಕಾರ ಕ್ರಿಸ್ತನು ತಾನೆ ಕ್ರೂಜೆ ಎಂಬ ಬಲಿಪೀಠದಲ್ಲಿ ಅರ್ಪಿಸಿದ ಬಲಿಯು ಸಾಲದೆಂಬ ಹಾಗೆ ಮಾಡಿ ಬಿಟ್ಟರು. ಆದರೆ ದೇವರ ವಾಕ್ಯ ಏನು ಹೇಳುತ್ತದೆ? "ಆದರೆ ಈಗ ಒಂದೇ ಸಾರಿ ಯುಗಗಳ ಅಂತ್ಯದಲ್ಲಿ ತನ್ನನ್ನು ಬಲಿಯಾಗಿ ಅರ್ಪಿಸುವದರಿಂದ ಪಾಪನಿವರ್ತನೆ ಮಾಡುವದಕ್ಕೆ ಪ್ರತ್ಯಕ್ಷವಾದನು" ಇಬ್ರಿ. ೯, ೨೬. — "ಒಂದೇ ಅರ್ಪಣೆಯಿಂದ ಪರಿಶುದ್ಧ ಮಾಡಲ್ಪಡುವವರನ್ನು ಸದಾಕಾಲಕ್ಕೆ ಸಂಪೂರ್ಣ ಮಾಡಿದ್ದಾನೆ" ಇಬ್ರಿ. ೧೦, ೧೪.

ಮತ್ತೊಂದು ಮನುಷ್ಯರ ಕಟ್ಟಳೆಯೂ ಮನಸ್ಸಾಕ್ಷಿಗಳ ಮೇಲೆ ಹಾಕಿದ ಕಠಿಣವಾದ ಭಾರವೂ ಕಿವಿಯರಿಕೆ ಆಗಿತ್ತು. ಹಾಗಂದರೆ, ಒಬ್ಬೊಬ್ಬನು ತನ್ನ ಪಾಪಗಳನ್ನು ತನ್ನ ಪುರೋಹಿತನಿಗೆ ಹೆಸರು ಹೆಸರಾಗಿ ಕಿವಿಯಲ್ಲಿ ಅರಿಕೆ ಮಾಡ ಬೇಕು. ಆ ಪ್ರಕಾರ ಮಾಡದಿದ್ದರೆ, ಅಂಥಾ ಪಾಪಗಳಿಗೆ ಕ್ಷಮೆ ಇಲ್ಲವೆಂತ ಹೇಳಿದರು. ಆದರೆ ದವೀದನು ೧೯ನೆ ಕೀರ್ತನೆಯಲ್ಲಿ ಏನು ಹೇಳುತ್ತಾನೆ? ವ. ೧೨. “ತನ್ನ ತಪ್ಪುಗಳನ್ನು ತಿಳಿದು ಕೊಳ್ಳುವವನ್ಯಾರು?” ಹಾಗಂದರೆ, ಯಾರೂ ಇಲ್ಲಾ.

ಇದರ ಹೊರತು ಪಾತಾಳದ ಅಗ್ನಿಯ ಬೋಧನೆಯನ್ನು ಸ್ವಲ್ಪ ಕೇಳಿರಿ! ಭಕ್ತಿಯುಳ್ಳ ಕ್ರೈಸ್ತರು ಸತ್ತರೆ, ಪರದೈಸಿಗೆ, ವಿಶ್ರಾಂತಿಯ ಸ್ಥಳಕ್ಕೆ ಹೋಗದೆ, ಇಹದಲ್ಲಿ ಪುನೀತ ಮಾಡಿ ಕೊಳ್ಳದ ಪಾಪಗಳನ್ನೆಲ್ಲಾ ತೆರುವ ಬಗ್ಗೆ, ವೇದನೆಯುಳ್ಳ ಅಗ್ನಿಯ ಕುಂಡದಲ್ಲಿ ಮುಂಚೆ ಪ್ರವೇಶಿಸ ಬೇಕೆಂತ ಹೇಳಿದರು. ಆದರೆ ನಿಜಸತ್ಯವು ಯಾವದು? ದೇವರು ಕ್ರಿಸ್ತನಿಗೋಸ್ಕರ ನಮ್ಮ ಸಮಸ್ತ ಪಾಪಗಳನ್ನು ಬಿಡುತ್ತಾನೆಂಬದಲ್ಲವೆ! ಹಾಗೆಯೆ ಕ್ರೂಜೆಯಲ್ಲಿ ಆ ಕಳ್ಳನು ಕ್ರಿಸ್ತನ ಕಡೆಗೆ ಹೃದಯದಿಂದ ತಿರುಗಿ ಕೊಂಡ ಕಾರಣ, ಸತ್ತಾಗಲೇ ಪರದೈಸಕ್ಕೆ ವೈಯ್ಯಲ್ಪಟ್ಟನಲ್ಲವೆ!

ಅದೇ ಪ್ರಕಾರ ಕ್ರೈಸ್ತ ಧರ್ಮದ ಎರಡನೇ ಮುಖ್ಯ ಸೂತ್ರವನ್ನು ಸಹಾ ಕಳಕೊಂಡಿದ್ದರೆಂತ ಮೇಲೆ ಹೇಳಿದೆವು. ಅದು ಸುವಾರ್ತೆಯ ಮೂಲ ಬೋಧನೆಯೂ, ಕ್ರೈಸ್ತ ರಕ್ಷಣೋಪಾಯದ ಮಧ್ಯಮಣಿಯೂ ಆಗಿರುತ್ತದೆ. ಅದೇನೆಂದರೆ — ಪಾಪಿಮನುಷ್ಯರಾದ ನಾವು, ನಮ್ಮ ಪುಣ್ಯವಿಲ್ಲದೆ, ವಿಮೋಚಕನಾದ ಕ್ರಿಸ್ತನಲ್ಲಿಡುವ ವಿಶ್ವಾಸದಿಂದ ಮಾತ್ರವೆ ನೀತಿನಿರ್ಣಯ ಪಡುತ್ತೇವೆ, ಭಾಗ್ಯ ಹೊಂದುತ್ತೇವೆ ಎಂಬದು. ಇದು ದೇವರ ವಾಕ್ಯದಲ್ಲಿ ಅನೇಕ ಕಡೆಯಲ್ಲಿ ಸ್ಪಷ್ಟವಾಗಿಯೂ ಖಂಡಿತವಾಗಿಯೂ ಹೇಳಿಯದೆ. ರೋಮ. ೩, ೨೩. ೩, ೨೮. “ಎಲ್ಲರು ಪಾಪ ಮಾಡಿ, ದೇವರ ಮಹಿಮೆಗೆ ತಪ್ಪಿ, ಈಗಿನ ಕಾಲದಲ್ಲಿ ತನ್ನ ನೀತಿಯನ್ನು ತೋರಿಸ ಬೇಕೆಂದು, ಯೇಸುವಿನಲ್ಲಿರುವ ವಿಶ್ವಾಸವುಳ್ಳವನನ್ನು ನೀತಿನಿರ್ಣಯ ಪಡಿಸುವದರಲ್ಲಿ, ತಾನು ನೀತಿವಂತನಾಗಿರುವ ಹಾಗೆ, ದೇವರ ತಾಳ್ಮೆಯಲ್ಲಿ ಮುಂಚೆ ಆದ ಪಾಪಗಳ ಪರಿಹಾರವನ್ನು ಕುರಿತು, ತನ್ನ ನೀತಿಯನ್ನು ತೋರಿಸುವದಕ್ಕೆ, ಅವನ ರಕ್ತದಲ್ಲಿರುವ ವಿಶ್ವಾಸದಿಂದ ಶಾಂತೀಕರಣವಾಗಿ, ದೇವರು ಮುಂದಿಟ್ಟ, ಯೇಸು ಕ್ರಿಸ್ತನಿಂದಾದ ವಿಮೋಚನೆಯ ಮುಖಾಂತರ, ಅವನ ಕೃಪೆಯಿಂದ ಉಚಿತವಾಗಿ ನೀತಿನಿರ್ಣಯ ಪಡುತ್ತಾರೆ” ಯೋಹಾ. ೩, ೧೬. “ಅವನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯಜೀವವನ್ನು ಹೊಂದುವ ಬಗ್ಗೆ, ದೇವರು ಒಬ್ಬನಾಗಿ ಹುಟ್ಟಿದ ತನ್ನ ಮಗನನ್ನು ಕೊಡುವ ಹಾಗೆ, ಲೋಕವನ್ನು ಅಷ್ಟು ಪ್ರೀತಿ ಮಾ

ಡಿದನು." ೬, ೪೦. "ನನ್ನನ್ನು ಕಳುಹಿಸಿದವನ ಚಿತ್ತವು ಇದೆ — ಮಗನನ್ನು ನೋಡಿ ಅವನಲ್ಲಿ ವಿಶ್ವಾಸವಿಡುವವರೆಲ್ಲರಿಗೆ ನಿತ್ಯಜೀವವು ಇರ ಬೇಕೆಂಬುವದೆ" ಅಪೊಸ್ತ. ಕ್ರಿ. ೧೫, ೧೧. "ಅವರ ಹಾಗೆಯೇ ನಾವು ಕರ್ತನಾದ ಯೇಸು ಕ್ರಿಸ್ತನ ಕೃಪೆಯಿಂದ ರಕ್ಷಿಸಲ್ಪಡುತ್ತೇವೆಂದು ನಂಬುತ್ತೇವಲ್ಲ" ೧೬, ೩೧. "ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸ ಇಡು; ಆಗ ನೀನೂ ನಿನ್ನ ಮನೆಯವರೂ ರಕ್ಷಿಸಲ್ಪಡುವಿರಿ" ಗಲ. ೨, ೧೬. "ಯೇಸು ಕ್ರಿಸ್ತನ ವಿಶ್ವಾಸದ ಮೂಲವಾಗಿ ಅಲ್ಲದೆ, ನ್ಯಾಯಪ್ರಮಾಣದ ಕ್ರಿಯೆಗಳಿಂದ ಮನುಷ್ಯನು ನೀತಿನಿರ್ಣಯ ಪಡುವದಿಲ್ಲವೆಂದು ತಿಳಿದು, ನಾವು ನ್ಯಾಯಪ್ರಮಾಣದ ಕ್ರಿಯೆಗಳಿಂದಲ್ಲ, ಕ್ರಿಸ್ತನ ವಿಶ್ವಾಸದಿಂದ ನೀತಿನಿರ್ಣಯ ಪಡುವದಕ್ಕೆ ಕ್ರಿಸ್ತ ಯೇಸುವನ್ನು ವಿಶ್ವಾಸಿಸಿದೆವು; ಯಾಕಂದರೆ ನ್ಯಾಯಪ್ರಮಾಣದ ಕ್ರಿಯೆಗಳಿಂದ ಯಾವ ಮಾಂಸವಾದರೂ ನೀತಿನಿರ್ಣಯ ಪಡದು." ೩, ೨೬. "ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದ ಮೂಲವಾಗಿ ಎಲ್ಲರು ದೇವರ ಮಕ್ಕಳಾಗಿದ್ದೀರಿ." ಈ ಮುಂತಾದ ವಾಕ್ಯಗಳು ಇದ್ದರೂ, ಆ ಜನರು, ಮನುಷ್ಯನು ತನ್ನ ಸತ್ಕ್ರಿಯೆಗಳಿಂದ ತನ್ನ ಪಾಪಗಳನ್ನು ಪರಿಹರಿಸಿ, ಪರಲೋಕವನ್ನು ದುಡಿಯ ಬೇಕೆಂದು ಬೋಧಿಸಿದರು.

ಅದು ಹಗುರ ಮನಸ್ಸಿನವರಿಗೆ ಒಳ್ಳೇದು ಕಂಡಿತು. ಅಂಥವರು ಬಹಿರಂಗದ ಕೆಲವು ಸತ್ಕ್ರಿಯೆಗಳಿಂದ ತಮ್ಮ ಮನಸ್ಸಾಕ್ಷಿಯನ್ನು ಸಮಾಧಾನ ಪಡಿಸಿ ಕೊಂಡು, ಅವುಗಳಿಂದ ಮುನಿದ ದೇವರ ಸಂಗಡ ಸಂಧಾನವಾಯಿತೆಂದು ಅಂದು ಕೊಂಡು, ಆತನ ಸಂಗಡ ಹೃದಯದ ಸಂಸರ್ಗವಿಲ್ಲದೆ, ಅಂತರ್ಯದ ತಿದ್ದುಪಾಟಿ ಸಹಾ ಇಲ್ಲದೆ, ನಾಶನದ ಅಗಲವಾದ ಮಾರ್ಗದಲ್ಲಿ ನಡಕೊಂಡು ಹೋದರು. ಆದಾಗ್ಯೂ ಯಥಾರ್ಥ ಮನಸ್ಸಿನವರಿಗೆ ಈ ಬೋಧನೆಯಿಂದ ಮನಸ್ಸಾಕ್ಷಿಗೆ ಬಹಳ ಭಾರವಾಯಿತು. ಹ್ಯಾಗಂದರೆ ಅವರು ಸತ್ಕ್ರಿಯೆಗಳಿಂದ ಎಷ್ಟು ಪೀಡಿಸಿ ಕೊಂಡರೂ, ಅವರ ಹೃದಯಕ್ಕೆ ಸಮಾಧಾನ ಬರಲಿಲ್ಲಾ, ಮನಸ್ಸಿನೊಳಗಿನ ಧ್ವನಿಯು ನಿಮ್ಮ ಕ್ರಿಯೆಗಳೆಲ್ಲಾ ಸಾಲದೆಂತ ಹೇಳುತ್ತಾ ಇತ್ತು. ಈ ಪ್ರಕಾರ ಅವರಿಗೆ ಸಮಾಧಾನ ಸಿಕ್ಕಲಿಲ್ಲ, ಪಾಪಿಯ ಬಡ ಹೃದಯಕ್ಕೆ ಸಮಾಧಾನ ಬರಲಿಲ್ಲಾ.

ಆದರೆ ಈ ಸಂಕಟ ಆಪತ್ತು ಹೆಚ್ಚಾಗುವದಕ್ಕೆಂಬ ಹಾಗೆ, ಅವರು, ದೇವರು ತನ್ನ ವಾಕ್ಯದಲ್ಲಿ ಆಜ್ಞಾಪಿಸಿದ ಕ್ರಿಯೆಗಳನ್ನಲ್ಲಾ, ಮನುಷ್ಯರು ಉಂಟು ಮಾಡಿ ಪ್ರಬಲ ಮಾಡಿದ ಕ್ರಿಯೆಗಳನ್ನೇ ವಿಶೇಷ ಮಾಡಿದರು.

ದೇವರ ವಾಕ್ಯದಲ್ಲಿ ಎಲ್ಲಿಯೂ ಕಾಣದಂಥಾ ಮತ್ತೊಂದು ಸತ್ಕ್ರಿಯೆ ಎಂಬದಾಗಿ, ಮಠದಲ್ಲಿ ಹೋಗಿ ಬೈರಾಗಿ ಆಗುವದು ಪರಮೋತ್ತಮವೆಂದು ಹೇಳಿದರು.

ಮೊದಲು ದುರ್ಗುಣ ದುರ್ವ್ಯಸನಗಳಲ್ಲಿ ಬದುಕಿ ಆದ ಮೇಲೆ, ಕಡೆಯಲ್ಲಿ ವಿಮೋಚಿಸಿ ಕೊಳ್ಳುವದಕ್ಕೆ ಇದೇ ಪರಿಶುದ್ಧ ಕಾರ್ಯವೆಂದೆಣಿಸಿದರು.

ಮತ್ತೇನು ಅತಿ ಪುಣ್ಯಕರವೆಂದು ಹೇಳಿದರೆಂದರೆ: ಅದ್ಭುತಗಳನ್ನು ಮಾಡುವ ಪರಿಶುದ್ಧರ ಪ್ರತಿಮೆಗಳ ಬಳಿಗೂ, ಯೇಸುವಿನಿಂದಲೂ ಪರಿಶುದ್ಧರಿಂದಲೂ ಉಳಿದವುಗಳೆಂಬ ವಸ್ತುಗಳ ಬಳಿಗೂ, ಪೋಪನ ಸ್ವಂತ ನಿವಾಸಸ್ಥಾನವಾದ ರೋಮಕ್ಕೂ ಯಾತ್ರೆ ಮಾಡ ಬೇಕೆಂತ ಹೇಳಿ ಕೊಂಡರು. ಆದರೆ ದೇವರ ವಾಕ್ಯದಲ್ಲಿ ದೇವರ ನಿತ್ಯ ಪಟ್ಟಣಕ್ಕೆ ಮಾಡುವ ಒಂದೇ ಯಾತ್ರೆಯ ಸಂಗತಿ ಹೇಳಿ ಅದೆ.

ಅದೇ ಪ್ರಕಾರ ಕೊಲಸ್ಸೆ. ೨, ೨೦—೨೩. ಇರುವ ವಾಕ್ಯಕ್ಕೆ ವಿರೋಧವಾಗಿ, ಉಪವಾಸ ಮಾಡುವದೂ ಶರೀರ ದಂಡಿಸುವದೂ ದೇವರ ಕೋಪವನ್ನು ಶಾಂತ ಪಡಿಸುವಂಥಾ ಸತ್ಕಾರ್ಯವೆಂದು ನೆನಸಿದರು. ಆದರೆ ದೇವರ ವಾಕ್ಯವು ಏನು ಹೇಳುತ್ತದೆ? “ನೀವು ಲೋಕದ ಸೂತ್ರಗಳನ್ನು ಬಿಟ್ಟು, ಕ್ರಿಸ್ತನ ಸಂಗಡ ಸತ್ತವರಾಗಿದ್ದರೆ, ಲೋಕದಲ್ಲಿ ಬದುಕುವವರ ಹಾಗೆ, ಕೈ ಹಾಕ ಬೇಡ, ರುಚಿ ನೋಡ ಬೇಡ, ಮುಟ್ಟ ಬೇಡ, ಎಂಬುವ ಮನುಷ್ಯರ ಕಟ್ಟಳೇ ಬೋಧನೆಗಳ ಪ್ರಕಾರ, ಆಜ್ಞೆಗಳಿಗೆ ಒಳಗಾಗಿರುವದೇನು? ಇವುಗಳೆಲ್ಲಾ ಬಳಸುವದರಲ್ಲಿ ನಾಶವಾಗಿ ಹೋಗುತ್ತವೆ. ಅವು ಮಾಂಸದ ತೃಪ್ತಿಗಾಗಿ ಯಾವ ಮಾನದಲ್ಲಿಯೂ ಅಲ್ಲ, ಇಚ್ಛಾಪೂಜೆಯಲ್ಲಿಯೂ, ಮನೋದೀನತ್ವದಲ್ಲಿಯೂ, ದೇಹದಂಡನೆಯಲ್ಲಿಯೂ ಜ್ಞಾನದ ಹೆಸರುಳ್ಳವುಗಳಾಗಿವೆ.”

ಬಹು ಪುಣ್ಯಕರವೆಂದೂ ಪಾಪಹರವೆಂದೂ ನೆನಸಿದ ಮತ್ತೊಂದು ಕಾರ್ಯವೇನಂದರೆ:—ಯಾಜಕರಿಂದ ಹಣಕ್ಕೆ ಮಿಸ್ ಓದಿಸುವದೂ, ಪೋಪನ ಕ್ಷಮೆಚೀಟು ಗಳನ್ನು ಕ್ರಯಕ್ಕೆ ಕೊಳ್ಳುವದೂ, ಆಗಿತ್ತು. ಆದರೆ ಪೇತ್ರನು ಸೀಮೋನನಿಗೆ ಯಾವ ಮಾತು ಹೇಳಿದನು? ಅಪೊಸ್ತ. ಕ್ರಿ. ೮, ೨೦. “ದೇವರ ವರವನ್ನು ಹಣದಿಂದ ಕೊಂಡು ಕೊಳ್ಳ ಬಹುದೆಂದು ನೀನು ನೆನಸಿದ ಕಾರಣ, ನಿನ್ನ ಬೆಳ್ಳಿಯು ನಿನ್ನ ಸಂಗಡ ನಾಶವಾಗಲಿ!”

ಈ ಕ್ಷಮೆಚೀಟುಗಳ ಅನರ್ಥವು ಅಸಹ್ಯವಾಗಿಯೂ ಭಯಂಕರವಾಗಿಯೂ ಇತ್ತು. ಪೋಪನ ಕಡೆಯ ಕಾರ್ಯಸ್ಥರು ಎಲ್ಲಾ ಕಡೆಗೂ ಹೋಗಿ, ದೇವಾಲಯಗಳಲ್ಲಿ ಪೋಪನ ಮುದ್ರೆ ಇರುವ ಕಡಶಿಕಾಗದದ ದೊಡ್ಡ ಚೀಟುಗಳನ್ನು ತೋರಿಸಿ, “ಇಲ್ಲಿ ಪಾಪಗಳ ಪರಿಹಾರ ಉಂಟು, ಇಲ್ಲಿ ಪರಲೋಕರಾಜ್ಯ ನಿಶ್ಚಯ, ಕ್ರಯಕ್ಕೆ ಕೊಳ್ಳಿರಿ, ಕೊಳ್ಳಿರಿ” ಎಂದು ಸಾರಿದರು. ಕ್ಷಮೆಚೀಟುಗಳು ಎಲ್ಲಾ ಪಾಪಗಳನ್ನೂ, ಅತಿ ಭಯಂಕರವಾದ ವ್ಯಭಿಚಾರಗಳನ್ನೂ, ಪಿತೃ ಮಾತೃ ಹತ್ಯವನ್ನೂ, ಮುಂಚೆ

ಮಾಡಿದಂಥಾ ಮಾತ್ರವಲ್ಲ, ಇನ್ನೂ ಮುಂದೆ ಮಾಡಲಿಕ್ಕಿರುವ ಪಾಪಗಳನ್ನೂ ಕ್ಷಮಿಸಿದವು, ಹಣಕ್ಕೋಸ್ಕರ ಎಲ್ಲಾ ಬಿಟ್ಟವು. ಇದಲ್ಲದೆ ಅಂಥಾ ಚೀಟುಗಳ ಕ್ರಯ ಸಹಾ ಜನರ ಆಶ್ರಮ ಸಂಪತ್ತಿಗೆ ಅನುಸಾರವಾಗಿತ್ತು. ಇಂದಿನ ಪರ್ಯಂತಕ್ಕೂ ಇರುವ ಪಟ್ಟಿಯನ್ನು ನೋಡುವಾಗ್ಯೆ, ಅರಸುಗಳು ಇಪ್ಪತ್ತೈದು ಭಂಗಾರದ ಟಂಕೆಗಳನ್ನೂ, ಮಹಾ ಶ್ರೀಮಂತರೂ ಪ್ರಭುಗಳೂ ಹತ್ತು, ಬೇರೆ ಸಂಪತ್ತುಳ್ಳವರು ಆರು, ಬಡಿಗೆ ಮುಂತಾದ ಕೈ ಕೆಲಸದವರು ಒಂದು ಭಂಗಾರದ ಟಂಕೆಯನ್ನು ಕೊಡಬೇಕಾಯಿತು. ಈ ಪ್ರಕಾರ ಕ್ರೈಸ್ತ ಸೀಮೆಗಳಿಂದ ಮೊಗದು, ಹಣವನ್ನೆಲ್ಲಾ ಪ್ರಾಣಿಗಳ ಕ್ಷೇಮಕ್ಕೆಂಬ ನೃವನದಿಂದ ರೋಮಕ್ಕೆ ವೈದು, ತಿಂದು ಕುಡಿದು ವ್ಯಯ ಮಾಡಿದರು.

ನಿಶ್ಚಯವಾಗಿ ಕ್ರೈಸ್ತ ಸಭೆಯಲ್ಲಿ ಮಹಾ ದುಃಖಕರವಾದ ಭಯಂಕರ ಅನರ್ಥವು ನಡಿಯಿತು!

ಇಂಥಾ ಸುಳ್ಳು ವಿಶ್ವಾಸ, ಸುಳ್ಳು ದೇವಾರಾಧನೆಗಳ ಹೊರತು, ಕ್ರೈಸ್ತ ಜನಕ್ಕೆ ಮಾದ್ರಿಗಳಂತಿರ ಬೇಕಾದವರಿಂದ ದುಷ್ಟ ನಡತೆ ಸಹಾ ಹೊರಟು ಬಂತು. ಪಾರಮಾರ್ಥಿಕರೆಂಬ ಯಾಜಕರು, ಅಧಿನಾಯಕನಾಗಿರುವ ಪೋಪನ ಸಹಿತವಾಗಿ, ತಾವು ಬೇರೆ ಮನುಷ್ಯರಿಗಿಂತ ಅಧಿಕವಾದ ಘನವುಳ್ಳ ಸಂತಾನವೆಂದೆಣಿಸಿ ಕೊಂಡರು. ಮತ್ತು ಅವರೇ, ಶ್ರೇಷ್ಠ ಅಲ್ಪ ಯಾಜಕರೆಲ್ಲರೂ ಸಾಧಾರಣವಾಗಿ ಕೇವಲ ದುಷ್ಟತನದಲ್ಲಿ ನಡಕೊಳ್ಳುವವರಾಗಿದ್ದರು. ಗರ್ವ, ಡಂಭ, ಕಾಮ, ಲೋಭ, ಮೋಹ, ಮದ, ಮತ್ಸರ, ಅಭಿಲಾಷೆ, ಜಾರತ್ವ ಮುಂತಾದ್ದು ಅವರೊಳಗೆ ಭಯಂಕರ ರೀತಿಯಿಂದ ಪ್ರಬಲವಾಗಿ, ಭೂರಿ ಜನರಲ್ಲಿ ಸಹಾ ಹಬ್ಬಿತು. ಈ ವಿಷಯದಲ್ಲಿ ರೋಮಿಯ ಸಭೆಯವರ ಸ್ವಂತ ಸಾಕ್ಷಿಗಳನ್ನು ಕೇಳುವಾ. ಅವರು ತಾವೇ ತಮ್ಮ ವಿಷಯದಲ್ಲಿ ಸುಳ್ಳು ಹೇಳಲಿಕ್ಕಿಲ್ಲವಲ್ಲಾ!

ಭಕ್ತಿಯುಳ್ಳ ವೈರಾಗಿಯಾಗಿರುವ ಮಂತುವಾನನು ಲುಥರನ ಜನನಕಾಲದ ಸಮಯದಲ್ಲಿ ಬರಿಯುವದೇನಂದರೆ:—“ರೋಮ ಪಟ್ಟಣದಿಂದ ಯಥಾರ್ಥತ್ವವನ್ನು ಗಡಿ ದಾಟಿಸಿದ ಮೇಲೆ, ಈ ಪಟ್ಟಣವನ್ನು ಹಣವೇ ಆಳುತ್ತದೆ. ಮತ್ತು ದೇವರಿಗೆ ರೋಮದಲ್ಲೆಲ್ಲಾ ಒಂದೇ ಒಂದು ಸ್ಥಳವಾದರೂ ಇಲ್ಲಾ. ರೋಮದಲ್ಲಿ ಎಷ್ಟು ಮನುಷ್ಯರಿದ್ದಾರೋ, ಅಷ್ಟು ಕಳ್ಳರು ಬೀದಿಗಳಲ್ಲಿ ನಡಿಯುತ್ತಾರೆಂತ ಹೇಳಬೇಕು. ತೋಳಗಳ ದೇಶದಲ್ಲಿ ಎಲ್ಲರು ತೋಳಗಳು, ಕುಂಟರ ಮಧ್ಯದಲ್ಲಿ ಯಾರಿಗೂ ತಾನು ಸಣ್ಣ ಆಳು ಎಂಬ ನಾಚಿಕೆ ಇಲ್ಲ.”

ಅದೇ ಮಂತುವಾನನು ಅದಕ್ಕೆ ಮುಂಚೆ ಪೋಪನಾದ ನಾಲ್ಕನೇ ಸೆಕ್ಸ್ತನಿಗೆ ಬರದದ್ದೇನಂದರೆ:—“ನಾನೇನಾದರೂ ರಹಸ್ಯವನ್ನು ತಿಳಿಸ ಹೋಗುವದಿಲ್ಲ,

ಪಟ್ಟಣಗಳೂ ಜನಾಂಗಗಳೂ ಹೇಳುವದನ್ನು ಬರಕೊಳ್ಳುವದಕ್ಕೆ ಅಪ್ಪಣೆ ಕಾದಬೇಕು: ಪೇತ್ರನ ಸ್ಥಾನವು ಹೊಟ್ಟೆಬಾಕತನದಿಂದ ದಣಿದು ಹೋಗುತ್ತದೆ, ತಂದೆಯಾದ ಸೆಕ್ಸ್ತನೇ, ಇವುಗಳ ಮೇಲೆ ಕತ್ತಿ ನಡಿಸು! ದೇವಾಲಯ, ಪೀಠ, ಬಿನ್ನಹಗಳು, ಪರಲೋಕ, ದೇವರು ಸಹಾ, ಎಲ್ಲಾ ರೋಮದಲ್ಲಿ ಕ್ರಯಕ್ಕೆ ಶಿಕ್ಕುತ್ತದೆ ಅಲ್ಲ!"

ಆ ಕಾಲದಲ್ಲಿದ್ದ ಮತ್ತೊಬ್ಬ ಪೋಪೇಯ ಸಭೆಯವನಾದ ವಿಂದೆಕ್ಕ ಎಂಬವನು ರೋಮಿಯ ಯಾಜಕರ ಭಂಡು ನಡತೆಯನ್ನು ವಿವರಿಸಿದ ಮೇಲೆ, ಹೇಳುವದೇನಂದರೆ:—"ಕ್ರೈಸ್ತ ಜನರಲ್ಲಿ ಯಾಜಕರ ಸ್ಥಿತಿಯು ಹ್ಯಾಗಿತ್ತೆಂದರೆ: ಏನಾದರೂ ಕೇಡಿನ ವಿಷಯ ಕೇಳ ಬಂದರೆ, ಅಥವಾ ಯುದ್ಧವಾದರೆ, ಅದು ಯಾರು ಮಾಡಿದರು ಎಂತ ಪ್ರಶ್ನೆ ಕೇಳಿದ್ದಾದರೆ, ಓ ಇಂಥಾ ಅಧ್ಯಕ್ಷ, ಇಂಥಾ ಮಠಪತಿ, ಇಂಥಾ ಯಾಜಕ, ಇತ್ಯಾದಿ ಉತ್ತರ ಬಂತು."

ರೋಮಿಯ ಯಾಜಕಪ್ರಧಾನನಾದ ಬೆಲ್ಲರ್ಮೀನನು (೧೫೪೨—೧೬೨೧) ಸುವಾರ್ತಾಪಕ್ಷದ ಸಭೆಗೆ ಅತ್ಯಂತ ವಿರೋಧಿಯಾಗಿದ್ದರೂ, ಈತ ಸಹಾ ಹೇಳುವದೇನಂದರೆ: "ಲೂಥರನ ಪಾಷಂಡವು ಉಂಟಾಗುವ ಕೆಲವು ವರುಷದ ಮುಂಚೆ, ಸಭೆಯ ನ್ಯಾಯತೀರ್ಪುಗಳಲ್ಲಿ ಗಂಭೀರತ್ವವು ಇರಲಿಲ್ಲಾ, ಮರ್ಯಾದೆಗಳಲ್ಲಿ ಸುಶಿಕ್ಷೆಯೂ ಇರಲಿಲ್ಲಾ, ಪರಿಶುದ್ಧ ಬರಹದ ವಿದ್ವತ್ಸಂಪತ್ತಿಯು ಇರಲಿಲ್ಲ, ದಿವ್ಯ ಕಾರ್ಯಗಳಲ್ಲಿ ಭೀತಿಯು ಇರಲಿಲ್ಲ, ನಿಶ್ಚಯವಾಗಿ ಸ್ವಲ್ಪ ಕಡಿಮೆ ಭಕ್ತಿಯೇ ಇರಲಿಲ್ಲ, ಅದಕ್ಕೆ ಬದಲಾಗಿ ನಾನಾ ಪ್ರಕಾರದ ದುರ್ವ್ಯಸನಗಳು ಪ್ರಬಲವಾಗಿದ್ದವು."

ರೋಮಿಯ ಯಾಜಕರ ಸಮಾಗಮವು ೧೫೩೭ರಲ್ಲಿ ಪೋಪನಾದ ಮೂರನೆ ಪೌಲನಿಗೆ ಬರದದ್ದೇನಂದರೆ:—"ಸಭೆಯು ಬಿದ್ದು ಹೋಗುತ್ತದೆ, ಹೌದು, ಅದು ಮಹಾ ವ್ಯಾಧಿಯ ರೋಗದಿಂದ ಬಿದ್ದು ಹೋಯಿತು. ಅದಕ್ಕೆ ಮಹಾ ರೋಗಗಳು ಪ್ರಾಪ್ತಿಯಾಗಿರುವ ಕಾರಣ, ಗುಣವಾದೀತೆಂಬದು ಸಂಶಯಕರವಾಗಿರುತ್ತದೆ."

ಯಥಾರ್ಥರಾದ ಯಾಜಕರಲ್ಲಿ ಮಾತ್ರವಲ್ಲ, ಎಲ್ಲಾ ಕ್ರೈಸ್ತ ಜನದಲ್ಲಿ ಸಹಾ, ಬೇಗ ಸಮವಾಗಿ ಗುಣವಾಗದಿದ್ದರೆ, ವಿನಾಶಕಾಲವು ಬಂತೆಂತ ವೇದನೆಯುಳ್ಳ ಭಯ ಹುಟ್ಟಿತು. ಜನಾಂಗಗಳು "ತಲೆಯಿಂದ ಅಡಿ ವರೆಗೆ ಸಭೆಯ ಪುನಸ್ಥಾಪನೆಯು" ಆಗ ಬೇಕೆಂತ ಕೂಗಿದವು.

ಆದರೆ ಯಾರಾದರೂ ಒಬ್ಬನು ದೇವರ ಕೃಪೆಯಿಂದ ಪ್ರಕಾಶೀಕೃತನಾಗಿ, ಕೆಟ್ಟು ಹೋದ ಸಭೆಯನ್ನು ತಿರಿಗಿ ತಿದ್ದುವದಕ್ಕೆ ಯಥಾರ್ಥವಾಗಿ ಪ್ರಯತ್ನ ಮಾಡಿದ ಪಕ್ಷದಲ್ಲಿ, ಅತಿ ಬಲಾಢ್ಯವಾದ ಯಾಜಕಸಮುದಾಯವು ಅಂಥವನನ್ನು ನಾಶ ಮಾಡಿ ಬಿಟ್ಟಿತು. ಆ ಪ್ರಕಾರ ಬೋಹೆಮ್ಯದ ಸತ್ಪುರುಷನಾದ ಯೋಹಾನ ಹುಸ್ಸನೆಂಬ ಪ್ರಾಗ ಪಟ್ಟಣದ ಸರ್ವಶಾಲೆಯ ದೇವವಿದ್ಯೆಯ ಶಾಸ್ತ್ರಿಯು ಮಡಿದು ಹೋದನು. ಹ್ಯಾಗಂದರೆ ಅವನನ್ನು ಕಾಸ್ತ್ನಿಚ್ಚದ ಸಭೆಯ ಸಮಾಗಮವು ಬೆಂಕಿಯ ಮರಣ ಶಿಕ್ಷೆಗೆ ೧೪೧೫ಇಲ್ಲಿ ಒಪ್ಪಿಸಿ ಬಿಟ್ಟರು. ಅದಕ್ಕೆ ಕಾರಣವೇನಂದರೆ — ಪೋಪನೂ ಅವನ ಪಾಳ್ಯದವರೂ “ಪಾಷಂಡಿಗಳನ್ನು ಮನುಷ್ಯನ್ಯಾಯದಿಂದಲೂ ದೈವನ್ಯಾಯದಿಂದಲೂ ಬೆಂಕಿಯಿಂದಲೇ ಶಿಕ್ಷಿಸ ಬೇಕು” “ಖಡ್ಡು ಪಾಷಂಡಿಗಳನ್ನು ಕೊಲ್ಲುವದು ಅವರಿಗೆ ಸತ್ಕಾರ್ಯವಾಗಿರುತ್ತದೆ” ಎಂಬ ಬೋಧನೆಗೆ ಒಪ್ಪಿಸಿದರು.

ಅಯ್ಯೋ! ಸಭೆಯ ಮೇಲೆ ಎಂಥಾ ಆಪತ್ತು ಬಂತು! ಕರ್ತನು ಸಭೆಯನ್ನು ಕರುಣಿಸ್ಯಾನಾ? ಹೌದು, ನಿಶ್ಚಯವಾಗಿ ಆತನು ಕರುಣೆಯುಳ್ಳವನು, ಆತನು ಕರುಣಾಳು ರಕ್ಷಕನು! ದೇವರಿಗೆ ಮಹಿಮೆ ಬರಲಿ!

§ ೨.

# ದೇವರ ಮನುಷ್ಯನು

“ದೇವರಿಂದ ಕಳುಹಿಸಲ್ಪಟ್ಟ ಒಬ್ಬ ಮನುಷ್ಯನಿದ್ದನು” — ಎಂದು ಸ್ನಾನಿಕನಾದ ಯೋಹಾನನ ವಿಷಯ ಹೇಳಿ ಅದೆ; ಅದೇ ಪ್ರಕಾರ ಲುಥರನ ವಿಷಯದಲ್ಲಿಯೂ ಹೇಳ ಬಹುದು. ಈತನನ್ನು ಸಹ, ಮನುಷ್ಯರ ಹೃದಯಗಳಲ್ಲಿ ಕರ್ತನಾದ ಕ್ರಿಸ್ತನಿಗೆ ಮಾರ್ಗ ಸಿದ್ಧ ಮಾಡುವದಕ್ಕೆ, ನಿಶ್ಚಯವಾಗಿ ದೇವರು ಕಳುಹಿಸಿದನು. ನಾವು ಸದ್ಯಕ್ಕೆ ಅವನ ಸ್ವಂತ ವಿಷಯದಲ್ಲಿ ಮಾತಾಡಿ, ಅವನ ಚರಿತ್ರವನ್ನು ಬಾಲ್ಯದಿಂದ ಪುನಸ್ಥಾಪನೆಯ ಆರಂಭದ ಪರ್ಯಂತ ಸಂಕ್ಷೇಪವಾಗಿ ವಿಚಾರಿಸಿ, ಅವನು ಸಭೆಯ ಪುನಸ್ಥಾಪಕನಾಗುವ ಹಾಗೆ ಸಮಸ್ತ ಸಂಗತಿಗಳನ್ನೂ, ಅವನನ್ನೇ ಸಹಾ ದೇವರು ಹ್ಯಾಗೆ ನಡಿಸಿದನೆಂಬದನ್ನು ಲಕ್ಷಿಸುವಾ.

ಅವನು ಆ ಕಾಲದಲ್ಲಿ ಮನ್ಸ್‌ಫೆಲ್ದದ ಮಹಾ ಶ್ರೀಮಂತನಿಗೆ ಶೇರಿದ್ದಂಥಾ, ಈಗ ಪ್ರುಸ್ಸ್ಯ ರಾಜ್ಯದ ಸಕ್ಸ ಜಿಲ್ಲೆಯಲ್ಲಿ ಇರುವಂಥಾ, ಐಸ್ಲೇಬನ್ ಎಂಬಲ್ಲಿ ೧೪೮೩ನೆ

ಯೇಸುವಿ ನವಂಬರ ೧೦ನೆ ಸುಮಾರು ೧೧ ಘಂಟೆ ರಾತ್ರಿಯಲ್ಲಿ ಹುಟ್ಟಿದನು. ಅವನ ತಂದೆ ತಾಯಿಗಳು ಐಸೆನಬದ ಮೇರಾ ಎಂಬ ಹಳ್ಳಿಯನ್ನು ಬಿಟ್ಟು, ಐಸ್ಲೇಬನಕ್ಕೆ ಬಂದಿದ್ದರು. ಇವರ ಹೆಸರೇನಂದರೆ: ಹನ್ಸ್ ಲುಥರನು ಮತ್ತು ಮರ್ಗರೇಥೆ ಹುಟ್ಟಿದ ಗೋತ್ರ ಲಿಂದೆಮನ್. ಇವರಿಬ್ಬರು ಸತ್ಯವಂತರೂ, ಶಕ್ತಿಯುಳ್ಳವರೂ ಆಗಿದ್ದರೂ ಬಡವರಾಗಿದ್ದರು. ಲುಥರನು ತಾನೇ "ನಾನು ಒಬ್ಬ ಒಕ್ಕಲಿಗನ ಮಗನು, ನನ್ನ ತಂದೆ ಅಜ್ಜ ಮುತ್ತಜ್ಜ ಎಲ್ಲಾ ಒಕ್ಕಲಿಗರಾಗಿದ್ದರು" ಎಂದು ಬರದನು. ಹುಟ್ಟಿದ ಮರುದಿನ ಐಸ್ಲೇಬನದ ಪೇತ್ರ ಎಂಬ ಸಭಾಲಯದಲ್ಲಿ ಅವನಿಗೆ ಸ್ನಾನವಾಗಿ, ಅದು ಮರ್ತೀನನ ದಿನವಾಗಿದ್ದ ಕಾರಣ, ಅವನಿಗೆ ಮರ್ತೀನನೆಂಬ ಹೆಸರು ಇಟ್ಟರು. ಆ ಹಿರೇ ಪರಿಶುದ್ಧ ಮರ್ತೀನನು ಶಕ್ತಿಯುಳ್ಳ ಯುದ್ಧಸ್ಥನಾಗಿದ್ದನು; ಆದರೆ ಈ ಕಿರಿ ಮರ್ತೀನನು ಆತ್ಮಿಕ ರಣಾಂಗಣದಲ್ಲಿ ಶಕ್ತಿಯುಳ್ಳ ಯುದ್ಧಶೂರನಾದನು.

ಅವನು ಹುಟ್ಟಿದ ಸುಮಾರು ಅರ್ಧ ವರುಷದ ಮೇಲೆ, ಅವನ ತಂದೆ ತಾಯಿಗಳು ಸಮೀಪದಲ್ಲಿ ಇರುವ ಮನ್ಸ್‌ಫೆಲ್ಡ್ ಪಟ್ಟಣಕ್ಕೆ ಹೋಗಿ ಉಳು ಕೊಂಡರು. ಅಲ್ಲಿ ಅವನ ತಂದೆಯು ಖನಿ ಕೆಲಸದವನಾದನು. ಇದನ್ನು ಲುಥರನು ತಾನೆ ಹೇಳುತ್ತಾನೆ.

ಮಗುವಿಗೆ ಗ್ರಹಿಕೆಯ ತ್ರಾಣ ಬಂದ ಕೂಡಲೆ, ತಂದೆ ತಾಯಿಗಳು ಅವನನ್ನು ಬಾಲ್ಯವಲ್ಲಿಯೆ ಶಾಲೆಗೆ ಹಾಕಿದರು. ಎಮ್ಲರ್ ಎಂಬ ಸ್ನೇಹಿತನೊಬ್ಬನು ಈ ಬುದ್ಧಿಯ ಕಣ್ಣುಳ್ಳ ಪ್ರಿಯ ಬಾಲಕನನ್ನು, ಮಳೇ ಕೆಸರು ಇದ್ದರೆ, ಶಾಲೆಗೂ ಶಾಲೆಯಿಂದ ಮನೆಗೂ ಎತ್ತಿ ಕೊಂಡು ಹೋಗುವನು. ಮನೆಯಲ್ಲಿ ದೇವರ ಭೀತಿಗೂ ಪ್ರಾರ್ಥನೆಗೂ ಮನಸು ಕೊಡ ಬೇಕೆಂದು, ಮರ್ತೀನನಿಗೆ ಬುದ್ಧಿ ಹೇಳಿ, ಅವನನ್ನು ಒಳ್ಳೇ ಬಿಗಿಯಾದ ಶಿಕ್ಷೆಯಲ್ಲಿ ನಡಿಸಿದರು. ಒಂದು ಸಾರಿ ಅವನ ತಂದೆಯು ಅವನಿಗೆ, ಶಿರಿಗಿ ತಂದೆಯ ಹತ್ತರ ಬಳಿಕೆಯಾಗಿರುವದಕ್ಕೆ ಬಹಳ ದಿವಸ ಬೇಕಾಗುವಷ್ಟು ಬಹಳ ಪೆಟ್ಟು ಕೊಟ್ಟನು.

ಅವನಿಗೆ ಒಳ್ಳೇ ಬುದ್ಧಿ ಸಾಮರ್ಥ್ಯದ ವರಗಳುಂಟೆಂತ ನೋಡಿ, ಅವನ ತಂದೆಯು ಅವನನ್ನು ಹದಿನಾಲ್ಕು ವರುಷ ಪ್ರಾಯದಲ್ಲಿ ಮಗ್ದೆಬುರ್ಗ್ಗಕ್ಕೆ ಕಳುಹಿಸಿದನು. ಅಲ್ಲಿ ಹುಡುಗನು ಫ್ರನ್‌ಸಿಸ್ಕಾನರ ಮಠಕ್ಕೆ ಲತೀನ ಕಲಿಯುವದಕ್ಕೆ ಹೋದನು. "ಅಲ್ಲಿ ಬೇರೆ ಬಡ ಗೃಹಸ್ಥರ ಮಕ್ಕಳ ಹಾಗೆಯೆ, ಈ ಹುಡುಗ ಸಹಾ ಪಾನೆಮ್ ಪ್ರೊಪ್ತರ್ ದೆಯುಮ್ (ದೇವರನ್ನು ನೋಡಿ ರೊಟ್ಟಿ ಕೊಡಿರೈಯಾ) ಎಂದು ಬೀದಿಗಳಲ್ಲಿ ಕೂಗ ಬೇಕಾಯಿತು. ಯಾಕಂದರೆ ದೊಡ್ಡದಾಗ ತಕ್ಕದ್ದು ಸಣ್ಣದಾಗಿ ಆರಂಭವಾಗ ಬೇಕು" (ಮಥೇಸ್ಯನು)



ಮಗದಿಬರ್ಗ ಪಟ್ಟಣದ ಬೀದಿಗಳಲ್ಲಿ ಲುಥರನು ಹಾಡಿದ್ದು.

ಆದಾಗ್ಯೂ ಮಗ್ದೆಬುರ್ಗ್ಗದಲ್ಲಿ ಅವನು ಒಂದೇ ವರುಷ ಇದ್ದನು. ಕ್ರಿ. ಶ. ೧೪೯೮ಲ್ಲಿ ಅವನ ತಂದೆಯು ಅವನನ್ನು ಐಸೆನಖದ ಫ್ರನ್ಸಿಸ್ಕಾನರ ಲತೀನ ಮಠಕ್ಕೆ ಕಳುಹಿಸಿದನು. ಕಾರಣವೇನಂದರೆ, ಆ ಪಟ್ಟಣದಲ್ಲಿಯೂ ಪ್ರಾಂತ್ಯದಲ್ಲಿಯೂ ಅವನ ಸಂಬಂಧಿಕರಿದ್ದರು. ಆದರೂ ಇವರು ಚಿಕ್ಕ ಲುಥರನನ್ನು ವಿಶೇಷವಾಗಿ ನೋಡಲಿಲ್ಲವೆಂತ ತೋರುತ್ತದೆ. ಹ್ಯಾಗಂದರೆ ಮಗ್ದೆಬುರ್ಗ್ಗದ ಹಾಗೆಯೆ, ಐಸೆನಖದಲ್ಲಿ ಸಹಾ ಅವನಿಗೆ ಕಷ್ಟ ಕಾಲವೇ ಇತ್ತು. ಅಲ್ಲಿ ಸಹಾ ಮನೆ ಮನೆಗೆ ಹೋಗಿ, ಗೀತಗಳನ್ನು ಹಾಡಿ, ಪ್ರಾರ್ಥನೆಗಳನ್ನು ಹೇಳಿ, ರೊಟ್ಟಿ ಬೇಡ ಬೇಕಾಯಿತು. ಒಂದಾಂದು ಸರ್ತಿ ಅವನ ಅವಸ್ಥೆಯು ವಿಪರೀತವಾದಾಗ, ದುಃಖದಲ್ಲಿಯೂ ಅಧೈರ್ಯದಲ್ಲಿಯೂ ಮುಳುಗುವವನ ಹಾಗೆ ಆಗಿ, ತಿರಿಗಿ ಮನೆಗೆ ಹೋಗಿ, ತಂದೆಯ ಸಂಗಡ ಖನಿ ಕೆಲಸ ಮಾಡುವದು ಒಳ್ಳೆದೆಂದು ನೆನಿಸಿದನು.

ಆದರೆ ಅದು ದೇವರ ಸಂಕಲ್ಪವಾಗಿರಲಿಲ್ಲ. ಆತನು ಅವನನ್ನು ಮನುಷ್ಯರ ಪ್ರಯೋಜನಕ್ಕೂ ಆನಂದಕ್ಕೂ ತಕ್ಕದಾಗಿರುವ ಬೆಲೆಯುಳ್ಳ ಹೊನ್ನು ಬೆಳ್ಳಿ ಸಿಕ್ಕುವ ಮತ್ತೊಂದು ಖನಿಯ ಕೆಲಸಕ್ಕೆ ನಿಶ್ಚಯಿಸಿ ಇದ್ದನು. ದೇವರು ತಾನೆ ಅವನಿಗೋಸ್ಕರ ಚಿಂತಿಸುತ್ತೇನೆಂತ ತಿಳಿಯ ಬರ ಮಾಡಿದನು. ಹ್ಯಾಗಂದರೆ, ದೇವರು ಆ ಪಟ್ಟಣದ ಗೃಹಸ್ಥನಾದ ಕೊತ್ತ ಎಂಬವನ ಹೆಂಡತಿಯಾದ ಥೋರೆಸಾನಿಯಲ್ಲಿ, ಈ ಹುಡುಗನ ಗಾಯನ ಪ್ರಾರ್ಥನೆಗಳಿಂದ, ಅವನ ಮೇಲೆ ಮಮತೆ ಹುಟ್ಟಿಸಲಾಗಿ, ಆಕೆಯು ಅವನನ್ನು ತನ್ನ ಮನೆಯಲ್ಲಿ ಅಂಗೀಕರಿಸಿ, ತನ್ನ ಮೇಜಿನಲ್ಲಿ ಊಟ ಕೊಟ್ಟಳು. ಅಂದಿನಿಂದ ಅವನಿಗೆ ಸುದಿನ ಬಂತು. ನಿಶ್ಚಿಂತವಾಗಿ ಆತ್ಮಸಂತೋಷದ ಪ್ರಕಾರ ವಿದ್ಯಾಭ್ಯಾಸ ಮಾಡಲಿಕ್ಕೆ ಉಪಾಯವಾಯಿತು.

ಅವನು ನಾಲ್ಕು ವರುಷ ಪರ್ಯಂತ ಐಸೆನಖದಲ್ಲಿ ಇದ್ದು, ಪೂರ್ಣ ಆಸಕ್ತಿಯಿಂದ ಕಲ್ತನು. ವರಗಳಿಂದಲೂ ಸಾಹಸದಿಂದಲೂ, ಈ ಪ್ರಕಾರ ವಿದ್ಯಾಭಿವೃದ್ಧಿಯಿಂದಲೂ ಸಹ ಶಿಷ್ಯರೆಲ್ಲರಿಗಿಂತ ಮಿಗಿಲಾದನು. ಅದರ ಹೊರತು ಮನೋಹರವಾದ ದೇವದಾನವಾಗಿರುವ ಗಾಯನವನ್ನು ಸಹಾ ಸಾಧಿಸಿದನು. ಅದರಲ್ಲಿ ಜೀವಕಾಲವೆಲ್ಲಾ ಅವನಿಗೆ ಸಂತೋಷವಾಯಿತು.

ಕ್ರಿ. ಶ. ೧೫೦೧ಲ್ಲಿ ಅವನು ಎರ್ಫುರ್ತದ ಸರ್ವಶಾಲೆಯಲ್ಲಿ ಸೇರಿದನು. ಅವನ ತಂದೆಯು ಖನಿ ಕೆಲಸದಿಂದ ಮೆಲ್ಲ ಮೆಲ್ಲನೆ ಸ್ವಲ್ಪ ಸಂಪಾದನೆ ಮಾಡಲಿಕ್ಕೆ ಉಪಾಯವಾಗಿ, ಹಣೆಯ ಬೆವರಿನಿಂದ ಕಷ್ಟ ಮಾಡುವದು ಬಿಡ ಕೂಡದೆ ಇದ್ದರೂ, ಮಗನಿಗೆ ಸಹಾ ಸ್ವಲ್ಪ ಸಹಾಯ ಮಾಡಲಿಕ್ಕೆ ತನ್ಮಧ್ಯ ಶಕ್ತನಾದನು. ಲುಥರನು ಮುಂಚೆ ಹಳೆ ಭಾಷೆಗಳನ್ನೂ, ಮತ್ತೆ ತತ್ವಜ್ಞಾನವನ್ನೂ ಕಲಿತನು. ಅವನು ಪರಮ

ಸಾಹಸದಿಂದ ವಿದ್ಯೆಗಳನ್ನು ಅಭ್ಯಾಸಿಸಿ, ಒಂದೇ ಪಾಠವನ್ನಾದರೂ ಕಳಕೊಳ್ಳದೆ, ಕೇಳಿದ್ದನ್ನು ಬಹು ಜಾಗ್ರತೆಯಿಂದ ತಿರಿಗಿ ತಿರಿಗಿ ಪಠಿಸಿ, ತನ್ನ ಬೋಧಕರ ಸಂಗಡ ಆಗ್ಗಾಗ್ಗೆ ಈ ಆ ವಿಷಯಗಳಲ್ಲಿ ಮಾತಾಡುತ್ತಾ ಇದ್ದನು. ಇದಲ್ಲದೆ ತನ್ನ ಅಭ್ಯಾಸವು ಚನ್ನಾಗಿ ಪ್ರವರ್ತಿಸುವ ಹಾಗೆ, ದೇವರ ಆಶೀರ್ವಾದಕ್ಕೋಸ್ಕರ ಬಿಡದೆ ಪ್ರಾರ್ಥಿಸುತ್ತಾ ಇದ್ದನು. ಈ ವಿಷಯದಲ್ಲಿ ಅವನು ತಾನೇ ಅನೇಕ ಸರ್ತಿ ಹೇಳಿದ್ದೇನಂದರೆ: "ಚನ್ನಾಗಿ ಪ್ರಾರ್ಥಿಸಿದ್ದು ಅರೆವಾಸಿಗೆ ಹೆಚ್ಚು ಕಲಿತ ಹಾಗೆ."

ಅವನು ಸರ್ವಶಾಲೆಯ ಪುಸ್ತಕಸಂಗ್ರಹಕ್ಕೆ ಹೋಗುತ್ತಾ ಇರುವನು. ಅಲ್ಲಿ ಒಂದು ಸಾರಿ ದೇವರ ಘಟನೆಯಿಂದ ಅವನ ಕೈ ಒಂದು ದೊಡ್ಡ ಪುಸ್ತಕದ ಮೇಲೆ ಬಿತ್ತು. ಅದು ಅವನೆಂದೂ ನೋಡದ, ಲತೀನ ಭಾಷೆಯ ಬೈಬಲ ಎಂಬ ದೇವವಾಕ್ಯ ಆಗಿತ್ತು. ಬಹು ವಿನಯದಿಂದಲೂ ಭೀತಿಯಿಂದಲೂ ಅದನ್ನು ತೆರದು ನೋಡಿದನು. ಇಷ್ಟು ವರೆಗೆ ಪರಿಶುದ್ಧ ಬರಹವೆಲ್ಲಾ ಆಗಿರುತ್ತದೆಂದು ಎಣಿಸಿದ, ಆದಿತ್ಯವಾರ ಮುಂತಾದವುಗಳಲ್ಲಿ ಓದುವ ಸುವಾರ್ತೆ ಪತ್ರಿಕೆಗಳಿಗಿಂತ ಈ ಪುಸ್ತಕದಲ್ಲಿ ಎಷ್ಟೋ ಹೆಚ್ಚು ಉಂಟೆಂತ ಕಂಡು, ಬಹಳ ಬೆರಗಾದನು. ತೆರಿಯುವಾಗ ಚಿಕ್ಕ ಸಮುವೇಲನ ಚರಿತ್ರವು ಅವನ ಕಣ್ಣಿಗೆ ಬಿತ್ತು (೧ ಸಮು. ಸ. ೧—೩) ಇದನ್ನು ಬಹಳ ಅಚ್ಚರಿಯಿಂದ ಓದಿದನು. ಅದು ಅವನ ಮನಸಿಗೆ ಬಹಳ ಬಹಳ ಸಂತೋಷ ಕೊಟ್ಟಿತು. ಪುಸ್ತಕವೆಲ್ಲಾ ಅವನಿಗೆ ಪ್ರಿಯವೂ ಪರಿಶುದ್ಧವೂ ಆಯಿತು. ಆಗಲವನು "ಆಹಾ, ಒಂದು ಸರ್ತಿ ಇಂಥಾ ಪುಸ್ತಕವು ನನಗೆ ಸ್ವಂತವಾಗಿರುತ್ತಿದ್ದರೆ" ಎಂದು ತನ್ನೊಳಗೆ ಹೇಳಿ ಕೊಂಡನು.

ದೇವರು ಲೌಕಿಕ ತತ್ವಜ್ಞಾನದ ವಿದ್ಯಾರ್ಥಿಯಾದ ಅವನನ್ನು ದೇವವಾಕ್ಯಕ್ಕೆ ನಡಿಸಿದನು. ಅಂದಿನಿಂದ ಅವನು ಅನೇಕಾವರ್ತಿ ಅಲ್ಲಿಗೆ ಹೋಗಿ, ಅದರಲ್ಲಿ ಓದುತ್ತಾ ಇದ್ದನು. ಆದಾಗ್ಯೂ ಆ ಕಾಲದಲ್ಲಿ ಪ್ರಬಲವಾಗಿರುವ ಅಬದ್ಧ ಬೋಧನೆಗಳಲ್ಲಿ ಬೆಳದವನಾಗಿ ಇದ್ದ ಕಾರಣ, ಅವನ ಗ್ರಹಿಕೆಯು ಅದರಲ್ಲಿ ವಿಶೇಷವಾಗಿರಲಿಲ್ಲಾ.

ತನ್ಮಧ್ಯ ಲೌಕಿಕ ತತ್ವಜ್ಞಾನವನ್ನು ಮಹಾ ಆಸಕ್ತಿಯಿಂದ ಕಲಿಯುತ್ತಾ ಇದ್ದನು. ಇದರಲ್ಲಿಯೂ ದೇವರ ಕೈ ಇತ್ತು. ಹ್ಯಾಗಂದರೆ, ಅವನು ಮತ್ತೆ ಅದರಲ್ಲಿರುವ ತಪ್ಪುಗಳನ್ನೂ, ಅದರಿಂದ ಬರುವ ಅನಾಚಾರಗಳನ್ನೂ, ಅದರ ಬಲದಿಂದಲೇ ತಿಳುಕೊಳ್ಳಲಿಕ್ಕೆ ಶಕ್ತನಾದನು. ತನಗಿದ್ದ ಮಹಾ ಬುದ್ಧಿಯಿಂದಲೂ ಬಹು ಬಲವಾದ ನೆನಪಿನ ಬಲದಿಂದಲೂ ಈ ದಣಿಯದ ವಿದ್ಯಾರ್ಥಿಯು ಬಹಳ ವಿದ್ಯಾಸಾಧನೆಗಳನ್ನು ಮಾಡಿ, ಕೆಲವು ವರುಷದೊಳಗೆ ಮಗಿಸ್ತರ್ ಎಂಬ ವಿದ್ಯಾನಾಮವನ್ನು ಪಡ

ಕೊಂಡು, ಬೇರೆ ವಿದ್ಯಾರ್ಥಿಗಳಿಗೆ ಉಪದೇಶ ಕೊಡಲಿಕ್ಕೆ ಶಕ್ತನಾದನು. ಮಹಾ ಜ್ಞಾನಿ ಎಂದೆನಿಸಿ ಕೊಂಡು ಗ್ರೀಕ ತತ್ವಜ್ಞಾನಿ ಆಗಿರುವ ಅರಿಸ್ತಾತೆಲನ ಪ್ರಕೃತಿವಿದ್ಯೆಯನ್ನೂ ನೀತಿಶಾಸ್ತ್ರವನ್ನೂ ವಿವರಿಸಿದನು. ಆದಾಗ್ಯೂ ಅವನ ತಂದೆಯು ಧರ್ಮಶಾಸ್ತ್ರವನ್ನು ಕಲಿಯ ಬೇಕೆಂಬದಾಗಿ ಅಪೇಕ್ಷಿಸಿದ ಕಾರಣ, ಇದರಲ್ಲಿಯೂ ಪರಿಶ್ರಮ ಮಾಡಲಿಕ್ಕೆ ಯತ್ನೈಸಿದನು.

ಅವನು ಅತಿರೇಕ ವಿದ್ಯಾಸಾಧನೆಗಳನ್ನು ಮಾಡುವದರಿಂದಲೂ, ಅವನ ಆಹಾರವು ಅಷ್ಟು ಒಳ್ಳೆದಾಗಿರದ್ದರಿಂದಲೂ, ಅವನ ಶರೀರಕ್ಷೇಮವು ಕುಂದಿ ಹೋಗುತ್ತಾ ಬಂತು. ಅವನ ವರ್ಣವೂ ಬೆಳ್ಳಗೆ ಆಯಿತು, ಅವನ ಶರೀರವೂ ಕ್ಷೀಣವಾಯಿತು. ಆಗ್ಯಾಗ್ಯೆ ಅಸ್ವಸ್ಥವಾಗಿ, ಕಡೆಯಲ್ಲಿ ಕಠಿಣವಾದ ರೋಗವು ಪ್ರಾಪ್ತಿಯಾಯಿತು. ಹೀಗೆ ಒಂದು ಸಾರಿ ಅಂಥಾ ರೋಗದಲ್ಲಿ ಹಾಸಿಗೆಯಲ್ಲಿ ಬಿದ್ದು ಕೊಂಡಿರುವಾಗ, ಒಬ್ಬ ಮುದುಕ ಬೋಧಕನು ಅವನ ಬಳಿಗೆ ಬಂದು, ಪ್ರವಾದನೆಯ ಆತ್ಮದಿಂದೆಂಬ ಹಾಗೆ, ಸುಂದರವಾದ ಮಾತನ್ನು ಅವನಿಗೆ ಹೇಳಿದನು; ಅದೇನಂದರೆ: "ನನ್ನ ಪ್ರಿಯ ಪಂಡಿತನೆ, ಧೈರ್ಯವಾಗಿರಿ, ನಮ್ಮ ಕರ್ತನಾದ ದೇವರು ನಿಮ್ಮನ್ನು ಅನೇಕ ಜನರನ್ನು ಆದರಿಸುವದಕ್ಕೆ ತಕ್ಕ ದೊಡ್ಡ ಮನುಷ್ಯನಾಗ ಮಾಡುವನು. ಹ್ಯಾಗಂದರೆ ಯಾರನ್ನು ದೇವರು ಪ್ರೀತಿ ಮಾಡುತ್ತಾನೋ, ಯಾರಿಂದ ಭಾಗ್ಯಕರವಾದ್ದು ಬರಮಾಡ ಇಚ್ಛೈಸುತ್ತಾನೋ, ಅಂಥವನ ಮೇಲೆ ಇಹದಲ್ಲಿ ಪರಿಶುದ್ಧ ಕ್ರೂಜೆಯ ಕಷ್ಟಗಳನ್ನಿಡುತ್ತಾನೆ; ಈ ಕ್ರೂಜೆಶಾಲೆಯಲ್ಲಿ ತಾಳ್ಮೆಯುಳ್ಳ ಜನರು ಬಹಳ ಕಲಿಯುತ್ತಾರೆ."

ಧರ್ಮಶಾಸ್ತ್ರದಲ್ಲಿ ಲುಥರನಿಗೆ ಬಹಳ ರುಚಿ ತಾಗಲಿಲ್ಲ; ಅವನ ಮನಸು ಪಾರಮಾರ್ಥಿಕ ಆಶ್ರಮದ ಮೇಲೆ ಹೋಯಿತು, ಮತ್ತು ಅದಕ್ಕೆ ದೇವರು ಅವನನ್ನು ನೇಮಿಸಿದ್ದನಲ್ಲವೇ! ಅವನು ಸ್ವಭಾವದಿಂದ ಸಂತೋಷದ ಮನಸ್ಸಿನವನಾಗಿದ್ದರೂ, ಅವನ ಅಂತರ್ಯದಲ್ಲಿ ಸಮಾಧಾನವೇನೂ ಇರಲಿಲ್ಲ; ಮತ್ತು ಅವನು ದೇವರನ್ನು ಸ್ಮರಿಸುವಾಗ್ಯೆ, ಲೋಕದ ಪರಿಶುದ್ಧ ನ್ಯಾಯಾಧಿಪತಿಯು ಉರಿಯುವ ಕಣ್ಣಿನಿಂದ ಅವನಿಗೆ ಎದುರಾದ ಹಾಗೆ ಆಯಿತು. ದೇವರ ಕೋಪವನ್ನೂ ಆತನ ನ್ಯಾಯಶಿಕ್ಷೆಗಳನ್ನೂ ಆಲೋಚಿಸಿ, ಹೃದಯದ ಅಡಿಯಿಂದ ನಡುಗಿದನು. ಹೀಗಾದ್ದರಿಂದ ಪಾರಮಾರ್ಥಿಕವಾದ ಆಶ್ರಮದಲ್ಲಿ, ಲೌಕಿಕ ಆಶ್ರಮಕ್ಕಿಂತ ಸುಲಭವಾಗಿ, ಈ ಭಯಂಕರವಾದ ಕೋಪಕ್ಕೆ ತಪ್ಪಿಸಿ ಕೊಂಡು, ಪರಲೋಕದ ಮಹಾ ಭಾಗ್ಯವನ್ನು ದುಡಿಯ ಬಹುದೆಂದು ಎಣಿಸಿದನು. ಆ ಕಾಲದಲ್ಲಿ ಸಾಧಾರಣವಾಗಿರುವ ಒಂದು ಚಿತ್ರದಿಂದ ಈ ಆಲೋಚನೆಯು ಅವನಲ್ಲಿ ಬಲವಾಯಿತು. ಆ ಚಿತ್ರದಲ್ಲಿ ಪರಿಶುದ್ಧ ಸಭೆ

ಯು ಒಂದು ದೊಡ್ಡ ಹಡಗವಾಗಿ ಕಾಣಿಸಿ ಇತ್ತು. ಈ ಹಡಗದಲ್ಲಿ ಪೋಪನೂ, ಅವನ ಮಂತ್ರಿಗಳೂ, ಅಧ್ಯಕ್ಷರೂ, ಪರಿಶುದ್ಧಾತ್ಮದ ಸಹಿತವಾಗಿ ಕೂತು ಕೊಂಡಿದ್ದರು; ಸಭೆಯ ಬೋಧಕರೂ ಬೈರಾಗಿಗಳೂ ಆಚೆ ಈಚೆ ಹೊಟ್ಟು ಹಾಕುವವರಾಗಿ ಇದ್ದರು. ಈ ಪ್ರಕಾರ ಪರಲೋಕಕ್ಕೆ ಹೋದರು. ಲೌಕಿಕರು ಯಾರಾದರೂ, ಶ್ರೀಮಂತನಾಗಲಿ ಅರಸನಾಗಲಿ, ಯಾರೂ ಹಡಗದೊಳಗೆ ಇರಲಿಲ್ಲ; ಅದೇ ಪ್ರಕಾರ ಯಾಜಕರಲ್ಲಿ ಯಾರಾದರೂ ಅದರ ಹೊರಗೆ ಇರಲಿಲ್ಲ. ಲೌಕಿಕರೆಲ್ಲರು ಆ ಹಡಗದ ಸುತ್ತಲು ಈಸುತ್ತಾ ಇದ್ದರು; ಕೆಲವರು ಸಹಾಯಕನಿಲ್ಲದೆ, ನೀರಿನಲ್ಲಿ ಮುಳುಗಿ ಹೋದರು. ಕೆಲವರು, ಪಿತೃಗಳ ಕೃಪೆಯಿಂದಲೂ ತಮ್ಮ ಸತ್ಕ್ರಿಯೆಗಳ ಸಂಪ್ರದಾನದಿಂದಲೂ ತಮ್ಮ ಕಡೆಗೆ ಬೀಸಿದ ಹಗ್ಗಗಳಿಂದ ಬದುಕಿಸಿ ಕೊಂಡರು; ಅವರು ಈ ಹಗ್ಗಗಳಿಂದ ಹಡಗಕ್ಕೆ ಸಮೀಪಿಸಿ ಕೊಂಡು, ಅದಕ್ಕೆ ಜೋತಾಡಿ, ಅದಕ್ಕೆ ಬಿಗಿ ಮಾಡಿ ಕೊಂಡು, ಹಾಗೆಯೇ ಅದರ ಸಂಗಡ ಪರಲೋಕಕ್ಕೆ ಏರಿದರು. ಎಂಥಾ ಹಾಸ್ಯಕರವಾದ ದೂಷಣೆಯ ಚಿತ್ರವಿದು! ಆದರೆ ದೇವರು ತನ್ನ ಸಂಕಲ್ಪವನ್ನು ಲೂಥರನಲ್ಲಿ ನಡಿಸುವ ಬಗ್ಗೆ, ಅದನ್ನು ಸಹಾ ಪ್ರಯೋಗಿಸಲಿಕ್ಕಾಯಿತು. ಹಾಗಂದರೆ, ಅದರ ದೃಷ್ಟಿಯಿಂದ ಎರಡನೆ ಸಮುವೇಲನಂತೆ, ತನ್ನ ಸೇವೆಯನ್ನು ದೇವರಿಗೆ ಒಪ್ಪಿಸಿ ಕೊಡುವದಕ್ಕೂ, ತನ್ನ ದುಖ್ಖದ ಹೃದಯದಲ್ಲಿ ಸಮಾಧಾನವನ್ನೂ ಹಾರೈಕೆಯನ್ನೂ ಪಡ ಕೊಳ್ಳುವದಕ್ಕೂ, ಅವನ ಅಭಿಲಾಷೆಯು ಹೆಚ್ಚಿತು.

ಆದಾಗ್ಯೂ ಭಯಂಕರವಾದ ಘಟನೆಗಳಿಂದ ಅವನ ಹೃದಯದ ಮಹಾ ಅಭಿಲಾಷೆಯು ಭದ್ರವಾಗದೆ ಇರುತ್ತಿದ್ದರೆ, ಅವನು ತಂದೆಯ ಕಡೆಗೆ ಇರುವ ಭೀತಿಯಿಂದಲೂ ವಿಧೇಯತ್ವದಿಂದಲೂ ಧರ್ಮಶಾಸ್ತ್ರದಲ್ಲಿಯೇ ಉಳಕೊಳ್ಳುವ ಹಾಗೆ ಆಗಬಹುದಿತ್ತು. ಆ ಘಟನೆಗಳು ಹ್ಯಾಗಂದರೆ: ಅವನ ಉತ್ತಮ ಸ್ನೇಹಿತನಾದ ಅಲೆಕ್ಸನು ಒಂದು ದಿನ ಅಕಸ್ಮಾತ್ತಾಗಿ ಶಿವಿಯಲ್ಪಟ್ಟು, ಸತ್ತ ಹೆಣವಾಗಿ ಹಾಸಿಗೆಯಲ್ಲಿ ಬಿದ್ದಿದ್ದನ್ನು ಕಂಡನು. ಹತವಾದ ಸ್ನೇಹಿತನನ್ನು ನೋಡಿದಾಗ, ಅವನಲ್ಲಿ ಮಹಾ ವ್ಯಥೆ ಉಂಟಾಯಿತು. ಇದಲ್ಲದೆ ಸುಮಾರು ಅದೇ ಕಾಲದಲ್ಲಿ ಗುಡುಗು ಮಿಂಚು ಇರುವಾಗ್ಯೆ, ಅವನ ಸಮೀಪದಲ್ಲಿಯೇ ಸಿಡಿಲು ಬಡಿಯಿತು, ಮತ್ತು ಅವನು ಮೂರ್ಛೆ ಆಗಿ ನೆಲಕ್ಕೆ ಬಿದ್ದನು. ಅವನಿಗೆ ಶಿರಿಗಿ ಸ್ಮರಣೆ ಬಂದ ಕೂಡಲೆ, ಅವನೊಳಗೆ, ಎದ್ದು ನಿನ್ನ ಪ್ರಾಣವನ್ನು ಬದುಕಿಸಿಕೊ, ಎಂಬ ಶಬ್ದವಾಯಿತು. ಆಗ್ಯೆ "ಏಕಾಂತವಾಗಿಯೂ ಮರಣದ ಭಯದಿಂದ ತುಂಬಿದವನಾಗಿಯೂ" ಪಾರಮಾರ್ಥಿಕ ಆಶ್ರಮದಲ್ಲಿ ಶೇರುತ್ತೇನೆಂತ ಹರಿಕೆ ಹೇಳಿ ಕೊಂಡನು.




ಗುಡುಗಾದಲ್ಲಿ ಲುಥರನಿಗೆ ಗಂಡಾಂತರವಾದ್ದು.

ಅವನು ಈಗ ಮಹಾ ಶಾಲೆಯಲ್ಲಿ ದೇವವಿದ್ಯೆಯನ್ನು ಕಲಿತು, ಸಂಸ್ಥಾನಯಾಜಕನಾಗಿ ಇರ ಬಹುದಿತ್ತು. ಆದರೆ ಬೈರಾಗಿಯಾಗಿ ಮಠಜೀವನ ಮಾಡುವದು ಅಧಿಕ ಪರಿಶುದ್ಧವೆಂದು, ಅವನೂ ಆಗಿನ ಜನರ ಹಾಗೆಯೇ ನೆನಸಿದನು; ಮತ್ತು ದೇವರು ಈ ಆಲೋಚನೆ ಸಹಾ ನಡಿಯ ಗೊಡಿಸಿದನು. —ಯಾಕಂದರೆ, ದೇವರಿಗೆ ಅನಾಚಾರವಾಗಿ ಸೇವೆ ಮಾಡುವದೂ, —ಪಾಪವೂ ದುರ್ಗುಣವೂ ಮಠಗಳಲ್ಲಿಯೆ ಅತಿ ವಿಪರೀತವಾಗಿರುವದರಿಂದ—ಲುಥರನು ಸ್ವಂತ ಅನುಭವದಿಂದ ಅದನ್ನೆಲ್ಲಾ ತಿಳುಕೊಳ್ಳುವದೂ ಒಳ್ಳೆದಾಗಿತ್ತು. ಅವನು ತಾನೆ ಹೇಳುವ ಪ್ರಕಾರ, ಮತ್ತೆ "ದೈವಹೀನವಾದ ಜನರು,—ಅವನು ತಾನು ತಿಳಿಯದ ಸಂಗತಿಗಳಿಗೆ ವಿರೋಧಿಯಾಗಿ ಮಾತಾಡುವವನೆಂತ, ಮುಂದಿನ ಪ್ರತಿಕಕ್ಷಿಕನ ಮೇಲೆ ಹೆಚ್ಚಳ ಪಡುವದಕ್ಕೆ ಎಡೆ ಆಗಲಿಲ್ಲ"

ಕ್ರಿಸ್ತ ಶಕ. ೧೫೦೫ನೆ ಸುಗ್ಗಿಕಾಲದಲ್ಲಿ ಒಂದು ರಾತ್ರಿಯಲ್ಲಿ ಏನಾಯಿತಂದರೆ: ಅವನು ಎರ್ಫುರ್ತದ ಔಗುಸ್ತೀನ ಮಠದ ಹೆಬ್ಬಾಗಲಿಗೆ ತಟ್ಟಿದನು. ಯೌವನಸ್ಥನಾದ ಲುಥರನು ಮಹಾಶಾಲೆಯಲ್ಲಿ ಅಷ್ಟು ಬೇಗನೆ ಹೆಸರುಗೊಂಡವನಾಗಿ ಇದ್ದ ಕಾರಣ, ಅವನನ್ನು ಸಂತೋಷದಿಂದ ಅಂಗೀಕರಿಸಿದರು. ಅವನು ಔಗುಸ್ತೀನರ ವರ್ಗವನ್ನು ಆರಿಸಿ ಕೊಂಡದ್ದು ವಿಶೇಷ; ಯಾಕಂದರೆ ಈ ವರ್ಗದ ಬೈರಾಗಿಗಳು, ಬೇರೊಬ್ಬರ ಹಾಗೆಯೇ, ತಮ್ಮ ಕ್ರಿಯೆಗಳಿಂದ ನೀತಿಯನ್ನೂ ರಕ್ಷಣೆಯನ್ನೂ ಪಡಕೊಳ್ಳುವದಕ್ಕೆ ಇಚ್ಛೈಸಿದಾಗ್ಯೂ—ಅವರು ತನ್ನ ಕಾಲದಲ್ಲಿದ್ದ ಬೇರೆ ಸಭಾಬೋಧಕರಿಗಿಂತ ಬಲವಾಗಿ ದೇವರ ಉಚಿತವಾದ ಕೃಪೆಯನ್ನು ಹೊಗಳಿ ಕೊಂಡಿದ್ದ ಮಹಾ ಪ್ರಖ್ಯಾತಿ ಪಟ್ಟ ಅಧ್ಯಕ್ಷನಾದ ಔಗುಸ್ತೀನನ († ೪೩೦.) ಹೆಸರನ್ನು ತಕ್ಕೊಂಡಿದ್ದರು. ಇನ್ನೊಂದು ವಿಶೇಷವೇನಂದರೆ: ಬೈರಾಗಿ ಆಗುವವರಿಗೆ ಹೊಸ ಹೆಸರು ಇಡುವ ಮರ್ಯಾದೆಯ ಪ್ರಕಾರ, ಲುಥರನಿಗೆ ಔಗುಸ್ತೀನನು ಎಂಬ ವರ್ಗನಾಮ ಸಹಾ ಬಂತು. (ಆದಾಗ್ಯೂ ಅವನು ಈ ಹೆಸರನ್ನು ಬರಿಯುತ್ತಿದ್ದಿಲ್ಲವೆಂತಲೂ—ಮತ್ತೊಬ್ಬರು ಸಹಾ ಆ ಹೆಸರಿನಿಂದ ಮಾತ್ರವೆ ಅವನನ್ನು ಕರಿಯುತ್ತಿದ್ದಿಲ್ಲವೆಂತಲೂ ತೋರುತ್ತದೆ.) ಅದು ಹ್ಯಾಗೂ ಇರಲಿ, ಲುಥರನು ತರುವಾಯ ಎರಡನೆ ಅಧಿಕ ಬಲಾಢ್ಯನಾದ ಔಗುಸ್ತೀನನಾಗಿ ಪ್ರತಿಷ್ಠೆ ಹೊಂದಿದನೆಂಬದು ನಿಶ್ಚಯ.

ಲುಥರನ ತಂದೆಯು, ಮಗನು ಬೈರಾಗಿಯಾದನೆಂತ, ಬಹಳ ಕೋಪಗೊಂಡನು. ಅವನು ಅಪ್ರೀತಿಯ ಕಠಿಣವಾದ ಕಾಗದವನ್ನು ಅವನಿಗೆ ಬರದು,—ಕಡೆಯಲ್ಲಿ ತಾನೇ ಎರ್ಫುರ್ತಕ್ಕೆ ಹೋಗಿ, ಅವನ ಮನಸ್ಸನ್ನು ತಿರುಗಿಸ ಪ್ರಯತ್ನ ಮಾಡಿದನು. ಅವನು ಅವನಿಗೆ "ನೀನು ದೇವರ ಆಲೋಚನೆ ಎಂದೆಣಿಸುವದು ಪಿಶಾಚ

ನ ಮೋಸವಾಗಿ ಹೋಗದ ಹಾಗೆ ನೋಡಿ ಕೊ; ಹೆತ್ತವರಿಗೆ ವಿಧೇಯವಾಗಿರ ಬೇಕೆಂತಲೂ, ಅವರಿಗೆ ತಿಳಿಯದೆ ಅವರ ಆಲೋಚನೆ ಕೇಳಿ ಕೊಳ್ಳದೆ ಏನೊಂದೂ ಮಾಡ ಬಾರದೆಂತಲೂ ನೀನು ಕೇಳದೆ ಇದ್ದಿಯಾ?" ಎಂದು ಹೇಳಿದನು. ಈ ಮಾತು ಲುಥರನ ಹೃದಯದ ಗುಂಡಿಯೊಳಗೆ ನುಗ್ಗಿತು, ಮತ್ತು ಅದಕ್ಕೋಸ್ಕರ ಬೈರಾಗಿಯ ಅಂಗಿ ಇರುವ ಮಟ್ಟಿಗೂ ದುಖ್ಖಿತನಾಗಿದ್ದನು. ಆದರೂ ಅವನು ಮಠದಲ್ಲಿ ಉಳುಕೊಂಡನು, ಮತ್ತು ಇದು ಸಹಾ ದೇವರ ಚಿತ್ತವಾಗಿತ್ತಲ್ಲವೇ!

ಮಠದಲ್ಲಿ ಅವನಿಗೆ ಆರಂಭದಲ್ಲಿ ಬಹಳ ಕಷ್ಟ ಬಂತು. ಧೊರೆಯಂತಿರುವ ಪಂಡಿತನು ಭಿಕ್ಷೆಯ ಜೋಳ್ಳಿ ತಕ್ಕೊಂಡು, ಪಟ್ಟಣದಲ್ಲಿ ಮನೆ ಮನೆ ತಿರುಗಾಡ ಬೇಕಾಯಿತು, ಮಠದ ಬಾಗಲು ಕಾಯ ಬೇಕಾಯಿತು, ದೇವಾಲಯವನ್ನು ಗುಡಿಸ ಬೇಕಾಯಿತು — ಪಾಯಖಾನೆ ಸಹಾ ಶುಚಿ ಮಾಡ ಬೇಕಾಯಿತು; ಆದರೆ ಅವನು ಎಲ್ಲಾದರಲ್ಲಿಯೂ ವಿಧೇಯನೂ ಅಧೀನನೂ ಆದನು. ಆದಾಗ್ಯೂ ಈ ಅವಸ್ಥೆಯು ಬಹುಕಾಲ ಉಳಿಯಲಿಲ್ಲ. ಹ್ಯಾಗಂದರೆ, ಈ ವರ್ಗದ ಮೇಲಧಿಕಾರಿಯಾಗಿದ್ದ ಪಂಡಿತನಾದ ಫೊನ್ ಸ್ತೌಪಿತ್ಸ ಧೊರೆಯು ಬಹು ಸ್ನೇಹಭಾವದವನಾಗಿದ್ದು, ಲುಥರನನ್ನು ನೋಡಿ, ಪರಿಚಿತಿಯಾಗಿ, ಅವನ ಗುಣಗಳನ್ನೂ ಬುದ್ಧಿಯನ್ನೂ ಸಾಮರ್ಥ್ಯವನ್ನೂ ತಿಳುಕೊಂಡು, ಅವನನ್ನು ಪ್ರೀತಿ ಮಾಡಿ, ತಂದೆಯಂತೆ ಅವನನ್ನು ನಡಿಸಿದನು.

ಕ್ರಿಸ್ತ ಶಕ ೧೫೦೭ಲ್ಲು ಲುಥರನು ಯಾಜಕ ಪ್ರತಿಷ್ಠೆಯನ್ನು ಹೊಂದಿದನು. ಪ್ರತಿಷ್ಠೆ ಮಾಡಿದ ಅಧ್ಯಕ್ಷನು ಲುಥರನ ಕೈಯಲ್ಲಿ ಪಾತ್ರವನ್ನು (ಕುಡಿಕೆಯನ್ನು) ಕೊಟ್ಟು, ಲತೀನ ಭಾಷೆಯಲ್ಲಿ "ಬದುಕುವವರಿಗೋಸ್ಕರವೂ ಸತ್ತವರಿಗೋಸ್ಕರವೂ ಬಲಿಯರ್ಪಿಸುವದಕ್ಕೆ ಅಧಿಕಾರವನ್ನು ಹೊಂದಿರಿ" ಎಂಬ ಮಾತು ಮಾತ್ರವೆ ಅಲ್ಲದೆ, ಬೇರೇನೂ ಹೇಳಲಿಲ್ಲಾ. ಲುಥರನು ಈ ಸಂಗತಿಯನ್ನು ತರುವಾಯ ತಿಳಿಸಿದಾಗ, "ಭೂಮಿಯು ನಂಮಿಬ್ಬರನ್ನು ನುಂಗಿ ಬಿಟ್ಟದ್ದು ಅನ್ಯಾಯವೂ ದೇವರ ವಿಪರೀತ ತಾಳ್ಮೆಯೂ ಆಗಿತ್ತು" ಎಂದು ಕಡೆಯಲ್ಲಿ ಹೇಳಿದನು.

ಮೇಲಧಿಕಾರಿಯು ಲುಥರನಿಗೆ ಬೇರೆ ಬೇರೆ ಅಭ್ಯಾಸಕ್ಕೆ ಸಮಯ ಬಿಡಬೇಕೆಂದು ಅಪೇಕ್ಷಿಸಿ ಇದ್ದನು; ಈ ಸಮಯವನ್ನು ಲುಥರನು ಬಹು ಆಸಕ್ತಿಯಿಂದ ಪ್ರಯೋಗಿಸಿದನು. ಅವನು ಪೂರ್ವದ ಮತ್ತು ಮತ್ತಿನ ಸಭಾಬೋಧಕರ ಗ್ರಂಥಗಳನ್ನೂ, ಮುಖ್ಯವಾಗಿ ಮಠದ ಹೆಸರಿಗೆ ಕಾರಣವಾದ ಪರಿಶುದ್ಧ ಔಗುಸ್ತೀನನ ಉತ್ತಮವಾದ ಗ್ರಂಥಗಳನ್ನೂ, ಪ್ರಾಮುಖ್ಯವಾಗಿ ಪರಿಶುದ್ಧವಾದ ದೇವವಾಕ್ಯವನ್ನೂ ಬಿಡದೆ ಅಭ್ಯಾಸ ಮಾಡುತ್ತಾ ಇದ್ದನು. ದೇವರ ವಾಕ್ಯದ ಕಿರಣಗಳು ದಿನ ಹೋಗು

ತ್ತಾ, ಹೆಚ್ಚು ಹೆಚ್ಚು ಬೆಳಕು ಕೊಟ್ಟವು, ಆದಾಗ್ಯೂ ಮುಖ್ಯ ಕಿರಣವನ್ನು, ಅಂದರೆ, ನೀತಿಸೂರ್ಯನನ್ನು ಅವನು ಅಷ್ಟು ವರೆಗೆ ಕಾಣಲಿಲ್ಲ.

ಈ ಕಾಲದಲ್ಲಿ ಮಠದಲ್ಲಿ ನಡಿಯುವ ಸಂಧ್ಯಾಧ್ಯಾನಗಳನ್ನು ಮನಸ್ಸಾಕ್ಷಿಪುರಸ್ಸರವಾಗಿ ಮಾಡುತ್ತಾ ಇದ್ದನು. ಇದರಲ್ಲಿಯೂ, ಉಪವಾಸ ಜಾಗರ ಛಳಿ ಮುಂತಾದ ಕಠಿಣವಾದ ತಪಃಕಾರ್ಯಗಳಲ್ಲಿಯೂ, ಮತ್ತೊಬ್ಬರಿಗಿಂತ ಅಧಿಕ ಮಾಡಿದನು. ಈ ಪ್ರಕಾರ ಕಠಿಣ ವೈರಾಗ್ಯದಿಂದ ಬದುಕುತ್ತಿರಲಾಗಿ, ಅವನ ಶರೀರವು ಎಲುಗಳ ಪಂಜರದಂತೆ ಕ್ಷೀಣವಾಯಿತು. ಈ ಪ್ರಕಾರ ಶರೀರದಲ್ಲಿ ಕ್ಷೇಮವೇನೂ ಇಲ್ಲದೆ, ಬಹು ದುರಾವಸ್ಥೆಯಲ್ಲಿ ಬಿದ್ದು, ಒಂದು ಕಾಲದಲ್ಲಿ ಏಳು ಸಪ್ತಕಗಳ ಪರ್ಯಂತ ಕಣ್ಣಿಗೆ ನಿದ್ರೆಯೇ ಬರಲಿಲ್ಲ. ಆದ್ದರಿಂದ ಅವನು ಬರದ ಮಾತು ಖರೆ; ಅದೇನಂದರೆ: "ಇದೊಂದು ಸತ್ಯ: ನಾನು ಭಕ್ತಿಯುಳ್ಳ ಬೈರಾಗಿಯಾಗಿದ್ದೆನು. ಮತ್ತು ನನ್ನ ವರ್ಗದ ಸೂತ್ರಗಳಿಗೆ ಅತ್ಯಾಸಕ್ತಿಯಿಂದ ಅಧೀನವಾಗಿ ನಡಕೊಂಡ ಕಾರಣ, ಬೈರಾಗಿತನದಿಂದ ಯಾವ ಬೈರಾಗಿಯಾದರೂ ಪರಲೋಕದಲ್ಲಿ ಪ್ರವೇಶಿಸಿದ್ದು ಇದ್ದರೆ, ನಾನು ಸಹಾ ಪ್ರವೇಶಿಸ ಬೇಕಾಗಿತ್ತು ಎಂದು ನಾನು ಹೇಳ ಬಹುದು. ಈ ಮಾತಿಗೆ ನನ್ನನ್ನು ತಿಳಿದವರಾದ ನನ್ನ ಸಹಬೈರಾಗಿಗಳು ಸಾಕ್ಷಿಯಾಗಿದ್ದಾರೆ. ಹಾಗೆ ಬಹು ಕಾಲ ನಡದ್ದಾದರೆ, ಮರಣದ ಪರ್ಯಂತ ನಾನು ನನ್ನನ್ನು ಪೀಡಿಸಿ ಕೊಳ್ಳುತ್ತಿದ್ದೆನು."

ಆದರೆ ಈ ಮಾರ್ಗದಲ್ಲಿ ಪರಲೋಕದೊಳಗೆ ಪ್ರವೇಶಿಸ ಕೂಡದೆಂಬದನ್ನು ಸಹಾ, ಅವನು ಆ ಮಠದಲ್ಲಿ ಕಲಿಯ ಬೇಕಾಯಿತು. ಈ ಪ್ರಕಾರ ಸ್ವಂತ ದುಃಖಕರವಾದ ಅನುಭವದಿಂದ ಆ ವಿಷಯದಲ್ಲಿ ಸಾಕ್ಷಿ ಕೊಡ ಶಕ್ತನಾದನು. ಹ್ಯಾಗಂದರೆ, ಅವನಿಗೆ ಇಷ್ಟೆಲ್ಲಾ ಬೈರಾಗಿ ಪರಿಶುದ್ಧತ್ವವಿದ್ದರೂ, ಅಸಮಾಧಾನವೂ ಮನಸ್ಸಂಕಟವೂ ದುಃಖವೂ ಅವನನ್ನು ಬಿಡಲಿಲ್ಲ. ಅವನು ಎಂದಾದರೂ ಬಹಿರಂಗದ ದೊಡ್ಡ ಪಾಪಗಳಲ್ಲಿ ಬೀಳಲಿಲ್ಲ ಸರಿ; ಆದರೆ ಪಾಪದ ಉತ್ಪಾತಗಳನ್ನು ಎಷ್ಟು ಬಲಾತ್ಕಾರದಿಂದ ಕೊಲ್ಲ ನೋಡಿದರೂ, ಅಣಗಿಸ ಕೂಡಲಿಲ್ಲ. ಇದಲ್ಲದೆ ದೇವರ ಮೇಲೆ ಪ್ರೀತಿಯೂ ಭರವಸವೂ ತನ್ನಲ್ಲಿ ಇಲ್ಲವೆಂತಲೂ, ಸತ್ಯವಾದ ಅಂತರ್ಯದ ಭಕ್ತಿಯು ತನ್ನಲ್ಲಿ ಇಲ್ಲವೆಂತಲೂ ನೋಡಿದನು. ಆಗ್ಯೆ ದೇವರು ಕೋಪಿಸುವ ದೇವರಾಗಿಯೂ, ತನಗೆ ಮರಣ ನರಕ ನ್ಯಾಯ ಶಿಕ್ಷೆಗಳಿಂದ ಬೆದರಿಸುವ ಭಯಂಕರ ನ್ಯಾಯಾಧಿಪತಿಯಾಗಿಯೂ, ಇದ್ದಾನೆಂತ ನೆನಸ ಬೇಕಾಯಿತು. ಆಗ್ಯೆ ಅನೇಕ ಸರ್ತಿ ನಿರಾಶೆಯಲ್ಲಿಯೂ, ದುಃಖದಲ್ಲಿಯೂ, ಮಹಾ ಭಯದಲ್ಲಿಯೂ ಮುಳುಗಿದನು. ಒಂದು ಸರ್ತಿ ಹೀಗೆಯೇ ಮನೋವ್ಯಥೆಯು ಅತಿ ಭಾರವಾಗಿ, ಅವನು ಕೆಲವು ದಿನ ಪರ್ಯಂ

ತ ಯಾರನ್ನೂ ನೋಡದ ಹಾಗೆ, ಬಾಗಲು ಮುಚ್ಚಿ ಕೋಣೆಯೊಳಗೆಯೇ ಉಳುಕೊಂಡನು. ಅವನ ಸ್ನೇಹಿತರು ಬಾಗಲು ತಟ್ಟಿದರು, ಚನ್ನಾಗಿ ಬಡದರು, ಆದರೆ ಅವನು ತೆರಿಯಲಿಲ್ಲ. ಕಡೆಯಲ್ಲಿ ಬಾಗಲು ಒಡದು ಒಳಗೆ ಹೋದರು. ನೋಡುವಾಗ್ಯೆ, ಅವನು ಮೂರ್ಛಾಗತನಾಗಿ ನೆಲದಲ್ಲಿ ಬಿದ್ದು ಕೊಂಡಿದ್ದಾನೆ. ಎಷ್ಟು ಕರದರೂ, ಅಲ್ಲಾಡಿಸಿದರೂ, ಪ್ರಯೋಜನ ಬರಲಿಲ್ಲ. ಕಡೆಯಲ್ಲಿ ಅವರು ಬಹು ರಮ್ಯವಾದ ಗಾಯನ ಮಾಡಿದ್ದಲ್ಲಿ, ಮನೋಹರವಾದ ಸ್ವರಗಳಿಂದ ಅವನಿಗೆ ತಿರಿಗಿ ಬೋಧ ಬಂತು.

ಆದರೆ ದೇವರು ಅವನನ್ನು ಈ ದುಖ್ಖಾವಸ್ಥೆಯಲ್ಲಿ ಮಡಿದು ಹೋಗ ಗೊಡಿಸಲಿಲ್ಲ; ಆತನು ಅವನ ಕಿವಿಯೊಳಗೆ ಕೊಳಲಿನ ಸ್ವರಕ್ಕಿಂತ ಅಧಿಕ ಮಧುರವಾಗಿಯೂ ಸಂಪ್ರಾಣಿಸುವದಾಗಿಯೂ ಇರುವ ಬೇರೊಂದು ಸ್ವರ ಬೀಳ ಮಾಡಿದನು: ಅದು ಸುವಾರ್ತಾವಾಕ್ಯ. ಇದನ್ನವನು ಬೈರಾಗಿ ಕತ್ತಲೆಯಲ್ಲಿಯೂ, ಪಾಪನ ಅಂಧಕಾರದಲ್ಲಿಯೂ ಇರುವಲ್ಲಿಂದ ಕೇಳಿದನು, ಅದು ಅವನ ಹೃದಯದ ಗುಂಡಿಯೊಳಗೆ ಪ್ರವೇಶಿಸಿತು. ಹ್ಯಾಗಂದರೆ, ಅವನು ಒಂದಾನೊಂದು ದಿನ ಮರಣಸಂಕಟ ಪ್ರಾಪ್ತಿಯಾಗಿ, ತಾನೀಗ ಸಾಯುತ್ತೇನೆಂತ ನೆನಸಿ, ಈ ಬಡ ಪಾಪಿ ಮನುಷ್ಯನು ಇಮ್ಮಡಿಯಾದ ದುಖ್ಖ ಚಯಗಳಿಂದಲೂ, ಪೂರ್ಣ ನಿರಾಶೆಯಿಂದಲೂ ಪೀಡಿಸಲ್ಪಡುತ್ತಿರುವಾಗ್ಯೆ, ಅವನ ಪುರೋಹಿತನಾದ ಒಬ್ಬ ವೃದ್ಧ ಬೈರಾಗಿಯು ಅವನ ಬಳಿಗೆ ಬಂದು, ಆದರಿಸಿ, ಹೇಳಿದ್ದೇನಂದರೆ: “ನನ್ನ ಮಗನೇ, ನಾನು ಪಾಪಪರಿಹಾರವನ್ನು ನಂಬುತ್ತೇನೆ ಎಂಬ ಅಪೋಸ್ತಲಿಕ ವಿಶ್ವಾಸಪ್ರಮಾಣದ ವಾಕ್ಯವನ್ನು ಮಗುವಿನಂತೆ ನೀನು ನಂಬ ಬೇಕು — ಮತ್ತು ದೇವರು ಅದನ್ನು ದಾವಿದನಿಗೂ, ಪೇತ್ರನಿಗೂ, ಬೇರೆ ಅನೇಕರಿಗೂ ಮಾತ್ರವಲ್ಲ, ಸಮಸ್ತರಿಗಾಗಿ ಶ್ರಮ ಪಟ್ಟ ಕ್ರಿಸ್ತನಿಗೋಸ್ಕರ ನಿನಗೆ ಸಹಾ ಕೊಡುತ್ತಾನೆಂದು ನೀನು ನಂಬ ಬೇಕು; ಯಾಕಂದರೆ ಪುಣ್ಯವಿಲ್ಲದೆ, ಮನುಷ್ಯನು ವಿಶ್ವಾಸದಿಂದಲೆ ನೀತಿನಿರ್ಣಯ ಪಡುತ್ತಾನೆಂದು ರೋಮ ೩. ಅಪೊಸ್ತಲನು ಹೇಳುತ್ತಾನೆ.” ಈ ವಾಕ್ಯವನ್ನು ಕೇಳಿದಾಗ ತನ್ನ ಹೃದಯದೊಳಗೆ ಪರಲೋಕದಿಂದ ಆದರಣೆ ಬಂದ ಹಾಗೆ ಆಯಿತೆಂತಲೂ, ಅದರ ಅಭಿಪ್ರಾಯವನ್ನು ಪೂರ್ಣವಾಗಿ ಗ್ರಹಿಸ ಶಕ್ತನಾಗದೆ ಇದ್ದರೂ, ಅದರ ಮುದ್ರಾಂಕಿತವು ಎಂದಿಗೂ ಮರೆಯಕೂಡದ್ದಾಗಿತ್ತೆಂತಲೂ, ಲುಥರನು ಹೇಳುತ್ತಾನೆ.

§ ೩.

# ಲುಥರನು ಪ್ರಖ್ಯಾತಿ ಪಟ್ಟ ಮಾರ್ಗ.

ಮಠದ ಏಕಾಂತದಲ್ಲಿ ಲುಥರನು ಸಭೆಯನ್ನು ಪುನಸ್ಥಾಪಿಸ ಆಗುತ್ತಿದ್ದಿಲ್ಲ; ಅವನು ಅಲ್ಲಿಂದ ಹೊರಗೆ ಬಂದು, ಅಧಿಕ ಮಾನದ ಸ್ಥಾನವನ್ನು ಹೊಂದುವದು ಅವಶ್ಯ. ದೇವರು ಆತನನ್ನು ಎರ್ಫುರ್ತದ ಮಠದ ಒಂದು ಕೋಣೆಯಿಂದ ಹೊರಗೆ ತಂದು, ಸರ್ವರ ಮುಂದೆ ಬೋಧಕೋದ್ಯೋಗವನ್ನು ನಡಿಸುವ ಹಾಗೆ ಮಾಡಿದ್ದು ಹ್ಯಾಗೆಂತ, ಸ್ವಲ್ಪ ನೋಡುವಾ. ಅವನು ಅಲ್ಲಿ, ಅವನ ಆಲೋಚನೆಗಳನ್ನೂ ಅವನು ತಿಳಿಸಿದ ದೈವಸತ್ಯಾರ್ಥಗಳನ್ನೂ ಸಮಸ್ತ ಲೋಕಕ್ಕೆ ತಕ್ಕೊಂಡು ಹೋಗ ತಕ್ಕ ಮುಂದಿನ ಬೋಧಕರ ಬೋಧಕನಾದ್ದು ಹ್ಯಾಗೆಂತ, ವಿಚಾರಿಸುವಾ.

ಸಕ್ಸದ ಆಯಿಕೆಯ ಅರಸನಾದ ಬುದ್ಧಿವಂತನೆಂಬ ಪ್ರತಿನಾಮವನ್ನು ಹೊಂದಿದ ಫ್ರೇದರಿಕನು ತನ್ನ ಪಟ್ಟಣವಾದ ವಿತ್ತೆನ್‌ಬೆರ್ಗದಲ್ಲಿ ಸ್ವಲ್ಪ ವರ್ಷ ಮುಂಚೆ (೧೫೦೨) ಒಂದು ಸರ್ವಶಾಲೆಯನ್ನು ಸ್ಥಾಪಿಸಿ ಇದ್ದನು. ಮತ್ತು ಪೋಪನ ಸರ್ವ ಪ್ರತಿನಿಧಿಯಾಗಿರುವ ಸ್ಟೌಪಿಚ್ಚನಿಗೆ ಘಟ್ಟಿಗರಾದ ಶಾಸ್ತ್ರಿಗಳನ್ನು ಶಿಫಾರಸು ಮಾಡ ಬೇಕೆಂದು ಹೇಳಿದ್ದನು. ಸ್ಟೌಪಿಚ್ಚನು ಬೇರೊಬ್ಬರ ಹೊರತು ಲುಥರನನ್ನು ಸಹಾ, ಅವನ ವಿಶೇಷ ಬುದ್ಧಿಗಾಗಿಯೂ ಸುಗುಣಗಳಿಗಾಗಿಯೂ, ಶಿಫಾರಸು ಮಾಡಿದನು. ಆಯಿಕೆಯ ಅರಸನು ಲುಥರನನ್ನು ನೇಮಿಸಿದನು. ಮತ್ತು ಇವನು ಮಗನಂತೆ ಪ್ರೀತಿಯಿಂದ ತಾನು ಸನ್ಮಾನಿಸುವ ಸರ್ವಪ್ರತಿನಿಧಿಗೋಸ್ಕರ ಸಹಾ ಆ ಉದ್ಯೋಗಕ್ಕೆ ಒಪ್ಪಿ ಕೊಂಡನು. ಈ ಪ್ರಕಾರ ೧೫೦೮ರಲ್ಲಿ ಲುಥರನು ವಿತ್ತೆನ್‌ಬೆರ್ಗಕ್ಕೆ ಹೋಗಿ, ಸರ್ವ ಪ್ರಸಿದ್ಧವಾದ ಜೀವನವನ್ನು ಮಾಡುವದಕ್ಕೂ, ಈ ವಿಶೇಷವಾದ ಉದ್ಯೋಗವನ್ನು ನಡಿಸುವದಕ್ಕೂ, ಆರಂಭಿಸಿದನು.

ಅವನು ಇದನ್ನು ದೇವರು ತನಗೆ ಕೊಟ್ಟದ್ದೆಂದೆಣಿಸಿ, ಪೂರ್ಣಮನಸ್ಸಾಕ್ಷಿಪುರಸ್ಸರವಾಗಿಯೂ, ಜಾಗ್ರತೆಯಿಂದಲೂ, ನಂಬಿಕೆಯಿಂದಲೂ ಉದ್ಯೋಗ ನಡಿಸಿದನು. ಮುಂಚೆ ಅವನು, ಸ್ವಂತ ಮನಸ್ಸು ಬೇರೆಯಾಗಿದ್ದರೂ, ತತ್ವಜ್ಞಾನವನ್ನು ಉಪದೇಶಿಸ ಬೇಕಾಯಿತು; ಆದಾಗ್ಯೂ ಮರುವರುಷದಲ್ಲಿಯೇ ದೇವವಿದ್ಯೆಯನ್ನು ಕಲಿಸಿ ಕೊಟ್ಟನು. ಆ ಕಾಲದಲ್ಲಿ ಶಾಲಾವಿದ್ಯೆ ಎಂಬ ಶಾಲೆಗಳಲ್ಲಿ ಕಲಿಸಿ ಕೊಡುವ ದೇವವಿದ್ಯೆಯು ಪ್ರಬಲವಾಗಿತ್ತು. ಧರ್ಮದ ವಿದ್ಯೆಯನ್ನು ದೇವರ ವಾಕ್ಯದ ಪ್ರಕಾರ

ವಲ್ಲಾ, ೧೩ನೆ ವರ್ಷಶತದ ಪ್ರಖ್ಯಾತಿ ಪಟ್ಟ ಸಭಾಬೋಧಕರ ಪ್ರಕಾರ, ಮುಖ್ಯವಾಗಿ ಅಲ್‌ಬರ್ತ್‌ಮಗ್ನ, ಥೋಮ ಫೊನ್ ಅಕ್ವೀನ, ದನ್ಸ್‌ಸ್ಕೋತ ಮುಂತಾದವರ ಪ್ರಕಾರ ಕಲಿಸಿ ಕೊಡುವರು. ಇವರು ಸಾಂಪ್ರದಾಯವಾಗಿ ನಡದು ಬಂದ ರೋಮಿಯ ವಿಶ್ವಾಸವನ್ನು ಓದಿ ಹೇಳಿ, ಪರಜನಾಂಗದ ತತ್ವಜ್ಞನಾಗಿರುವ ಅರಿಸ್‌ತೊತೇಲನ ಪ್ರಮಾಣಗಳಿಂದ ಆಧರಿಸಿ, ಒಬ್ಬರಿಗಿಂತ ಒಬ್ಬರು ಸೂಕ್ಷ್ಮ ಬುದ್ಧಿಯವರೆಂದು ಅನಿಸಿ ಕೊಳ್ಳುವದಕ್ಕೆ ಪೇಚಾಡಿದರು. ಹೀಗೆ ದೇವವಿದ್ಯೆಯು ಮುಂಚೆಯೇ ಅಲ್ಪವಾಗಿದ್ದು, ಈಗ ಚನ್ನಾಗಿ ನಿರ್ಜೀವವಾದ ಪ್ರಯೋಜನ ವಿಲ್ಲದ ಡೊಂಕಾದ ಒಣ ಹರಟೆಯಾಗಿ ಹೋಯಿತು. ಆದರೆ ಲುಥರನು ಬಹು ಆಸಕ್ತಿಯಿಂದ ಈ ಅನರ್ಥವನ್ನು ಖಂಡಿಸುವದಕ್ಕೆ ಜಟ್ಟಿ ಆಗಿ ನಿಂತನು; ಅವನು ಈ ವ್ಯರ್ಥ ಡಂಭವನ್ನೂ, ಹಾಸ್ಯಕರವಾದ ವಿನಾಶಕರವಾದ ವ್ಯರ್ಥ ಮಾನುಷ್ಯ ಜಾಣತನವನ್ನೂ ಬಿಸಾಡಿ, ಪರಲೋಕದ ಶ್ರೇಷ್ಟವಾದ ವಿಷಯಗಳಲ್ಲಿ ಯಾವ ಅನ್ಯ ತತ್ವಜ್ಞನಾದರೂ, ಯಾವ ಮನುಷ್ಯನಾದರೂ, ಏನೊಂದೂ ದೃಢವಾದ್ದನ್ನು ತಿಳಿಯ ಕೂಡದೆಂದು ತೋರಿಸಿ, ತನ್ನ ವಿವಾದಗಳಿಗೆ ಪರಿಶುದ್ಧ ಬರಹವನ್ನು ಮಾತ್ರವೇ ಆಧಾರ ಮಾಡಿಕೊಂಡನು.

ಆದರೆ ವಿತ್ತೆನ್‌ಬೆರ್ಗ್‌ದ ಬೇರೆ ಶಾಸ್ತ್ರಿಗಳು ಇದಕ್ಕೆಲ್ಲಾ ಏನು ಹೇಳಿದರು? ಅವರೆಲ್ಲರು ಆಶ್ಚರ್ಯ ಪಟ್ಟರು. ಕೆಲವರು ಸಂದೇಹದಿಂದಲೂ ಕೋಪದಿಂದಲೂ ತಲೆ ಅಲ್ಲಾಡಿಸಿದರು; ಆದಾಗ್ಯೂ ಲುಥರನ ವಿವಾದಗಳಲ್ಲಿ ಪ್ರತ್ಯಕ್ಷವಾದ ದಿವ್ಯ ಸತ್ಯವೂ ಶಕ್ತಿಯೂ ಆರಂಭದಿಂದಲೇ ಕೆಲವರಲ್ಲಿ ಸಮ್ಮತಿ ಹುಟ್ಟಿಸಿದವು. ಹಾಗೆ ಅವರಲ್ಲಿ ಒಬ್ಬನಾದ ಪಂಡಿತ ಮೆಲ್ಲರ್‌ಸ್ತ್ರತ್ತನು ಹೇಳಿದ್ದೇನಂದರೆ: "ಈ ಬೈರಾಗಿಯು ಎಲ್ಲಾ ಪಂಡಿತರನ್ನು ಕ್ರಮೆಗೊಳಿಸಿ, ಹೊಸ ಬೋಧನೆಯನ್ನು ಸಾಧಿಸಿ, ರೋಮಿಯ ಸಭೆಯನ್ನೆಲ್ಲಾ ತಿದ್ದುವನು. ಹ್ಯಾಗೆಂದರೆ, ಅವನು ಅಪೊಸ್ತಲರ ಮತ್ತು ಪ್ರವಾದಿಗಳ ಬರಹಗಳನ್ನು ಆಧರಿಸಿ ಕೊಂಡು, ಯೇಸು ಕ್ರಿಸ್ತನ ವಾಕ್ಯದಲ್ಲಿ ಸ್ಥಿರವಾಗಿ ನಿಂತಿದ್ದಾನೆ; ಅದನ್ನು ತತ್ವಜ್ಞಾನದಿಂದಲಾಗಲಿ, ಆಭಾಸವಾದದಿಂದಲಾಗಲಿ, ಸ್ಕೋತಿಕದಿಂದಲಾಗಲಿ, ಅಲ್‌ಬರ್ತಿಕದಿಂದಲಾಗಲಿ, ಥೋಮಿಕದಿಂದಲಾಗಲಿ, ಯಾವ ಕುಟಿಲದಿಂದಲಾದರೂ ಕೆಡವಿ ಹಾಕಿ, ಖಂಡಿಸ ಕೂಡದು". ನಿಶ್ಚಯವಾಗಿ ಈ ಬುದ್ಧಿಯುಳ್ಳ ಮೆಲ್ಲರ್‌ಸ್ತ್ರತ್ತನ ಮಾತು ಖರೆ.

ಲುಥರನು ಉಪಾಧ್ಯಾಯಪೀಠದಲ್ಲಿ ಅಷ್ಟು ಧೈರ್ಯವಾಗಿ ಇದ್ದರೂ, ಪ್ರಸಂಗ ಪೀಠವೇರುವದಕ್ಕೆ ಅವನು ಅಂಜಿದನು, ಬಹು ಕಾಲ ಪರ್ಯಂತ ಅನೇಕರು ಅಪೇಕ್ಷಿಸಿದರೂ, ಮುದುಕ ಸ್ತೌಪಿಚ್ಚನು ಪ್ರಸಂಗಿಸುವದರಲ್ಲಿ ಚನ್ನಾಗಿ ಸಾಧನೆ ಮಾ

ಡು ಎಂದು ಬುದ್ಧಿ ಹೇಳಿದರೂ, ಅವನಿಗೆ ಧೈರ್ಯವಿರಲಿಲ್ಲ. ಅವನು: "ದೇವರ ಹೆಸರಿನಲ್ಲಿ ಮನುಷ್ಯರ ಸಂಗಡ ಮಾತಾಡುವದು ಅಲ್ಪಕಾರ್ಯವಲ್ಲ ಅಪ್ಪಾ" ಎಂದು ಹೇಳಿದನು. ಸ್ಟೌಪಿಚ್ಚನು ಬಹು ವಿಧದಿಂದ ಅವನನ್ನು ಪ್ರೇರೇಪಿಸ ನೋಡಿದರೂ, ಅವನು, ತಾನು ಅಯೋಗ್ಯ, ಸಮ ಬೀಳದವನು, ಬಲ ಹೀನನು ಎಂದು ಇತ್ಯಾದಿ ನೆವನಗಳನ್ನು ಹೇಳಿದನು. ಆದರೆ ಸ್ಟೌಪಿಚ್ಚನು ಬಿಡಲಿಲ್ಲ. ಕಡೆಯಲ್ಲಿ "ಮರ್ತಿನ್, ನೀನು ಪ್ರಸಂಗಿಸ ಬೇಕು" ಎಂದು ಖಂಡಿತವಾಗಿ ಹೇಳಿದನು. ಆಗ್ಯೆ ಲುಥರನು "ಪಂಡಿತ ಸ್ವಾಮಿ, ನೀವು ನನ್ನ ಜೀವ ತೆಗಿಯುತ್ತೀರಿ; ನಾನು ಅದನ್ನು ಕಾಲು ವರುಷ ತಡೆಯಲಾರೆ" ಎಂದು ಹೇಳಿದಾಗ, ಸ್ಟೌಪಿಚ್ಚನು "ಒಳ್ಳೆದು, ದೇವರ ಹೆಸರಿನಲ್ಲಿ ಹಾಗಾಗಲಿ! ನಮ್ಮ ಕರ್ತನಾದ ದೇವರಿಗೆ ಮಹಾ ಕಾರ್ಯಗಳುಂಟು, ಆತನಿಗೆ ಮೇಲೆ ಸಹಾ ಜಾಣರು ಬೇಕು" ಎಂದು ಉತ್ತರ ಕೊಟ್ಟನು. ನಡುಗುವವನಾಗಿಯೂ, ವ್ಯಾಕುಲನಾಗಿಯೂ, ಲುಥರನು ಪ್ರಸಂಗಿಸಲಿಕ್ಕೆ ಆರಂಭಿಸಿದನು; ಆದರೆ ಬೇಗ ಮೇಲಿನಿಂದ ಅವನ ಹೃದಯದಲ್ಲಿ ಆಸಕ್ತಿಯೂ ಬಲವೂ ಬಂತು. ಆರಂಭದಿಂದಲೇ ಅವನ ಪ್ರಸಂಗಗಳಿಗೆ ಜನರು ಮೆಚ್ಚಿದ ಕಾರಣ, ದೇವಾಲಯವು ಸಾಲದೇ ಹೋಯಿತು. ಅವನು ತಿರಿಗಿ ತಿರಿಗಿ ಪ್ರಸಂಗಿಸ ಬೇಕಾಯಿತು. ಮತ್ತು ಅವನು ಸಹಾ ಮತ್ತೆ, ನಾವೊಲ್ಲೆನೆಂದು ಹೇಳಲಿಲ್ಲ. ಯಾಕಂದರೆ ತನ್ನ ಪರಲೋಕದ ಮೇಲಧಿಕಾರಿಯು "ಮರ್ತಿನ್, ನೀನು ಪ್ರಸಂಗಿಸ ಬೇಕು" ಎಂದು ಹೇಳುವ ಧ್ವನಿಯನ್ನು ತನ್ನೊಳಗೆ ಕೇಳಿದನು.

ಮತ್ತು ದೇವರ ಪರಿಶುದ್ಧ ಜಾಗ್ರುಕರವಾದ ವಾಕ್ಯದಿಂದ ತನ್ನನ್ನೂ ತನ್ನ ವಿದ್ಯಾರ್ಥಿಗಳನ್ನೂ ಎಲ್ಲಾ ಜನರನ್ನೂ ಎಷ್ಟು ಉಪದೇಶಿಸುತ್ತಾ ಹೋದನೋ, ಅಷ್ಟು ಅಧಿಕವಾಗಿ ದೇವರ ಮುಂದೆ ಭಯ ಪಡುವ ಅವನ ಹೃದಯದೊಳಗೆ ಆದರಣೆಯೂ ವಿಶ್ರಾಂತಿಯೂ ಸಂತೋಷವೂ ಬಂತು; ಅಷ್ಟಕ್ಕೆ ಹೆಚ್ಚಾಗಿ ಬೆಳಕು ರಕ್ಷಣೆಗಳ ಒಂದೇ ಬುಗ್ಗೆಯಾಗಿರುವ ಆ ವಾಕ್ಯದಿಂದ ತನಗೋಸ್ಕರವೂ ಮತ್ತೊಬ್ಬರಿಗೋಸ್ಕರವೂ ಬೇಕಾದಷ್ಟು ಮೊಗಿಯುವದಕ್ಕೆ ಅವನಲ್ಲಿ ಆಸಕ್ತಿ ಹೆಚ್ಚಿತು.

ಇಷ್ಟೆಲ್ಲಾ ನಡದರೂ, ಲುಥರನು ಔಗುಸ್ತೀನರ ವರ್ಗದಲ್ಲಿಯೆ ಉಳುಕೊಂಡು, ಬೈರಾಗಿವಸ್ತ್ರವನ್ನು ಧರಿಸಿ, ಮಠದಲ್ಲಿಯೆ ವಾಸವಾಗಿದ್ದನು. ಆ ಕಾಲದಲ್ಲಿ ತನ್ನ ಮಠದ ಕೆಲಸಕ್ಕಾಗಿ ಪರದೇಶಕ್ಕೆ ಹೋಗುವದು ಅವಶ್ಯವಾಯಿತು. ಇದರಲ್ಲಿಯೂ ಲುಥರನ ಮೇಲೆ ದೇವರು ಪ್ರತ್ಯೇಕವಾಗಿ ದೃಷ್ಟಿ ಇಟ್ಟು, ಸಮಸ್ತ ಕಾರ್ಯಗಳನ್ನು ನಡಿಸಿದನೆಂಬದು ಪ್ರತ್ಯಕ್ಷವಾಗುತ್ತದೆ. ಅವನು ಸಭೆಯ ಮಹಾದುರಾವಸ್ಥೆಯನ್ನು ಸಭೆಯ ಮಧ್ಯಸ್ಥಾನದಲ್ಲಿ, ಅಂದರೆ, ದೃಶ್ಯವಾದ ತಲೆಯು ಇರುವಲ್ಲಿ,



ಲುಥರನು ಪ್ರಸಂಗಿಸಿದ್ದು.

ಪರಮ ಪರಿಶುದ್ಧತ್ವವು ಇರ ಬೇಕಾದ್ದಲ್ಲಿ, ನೋಡಿ ತಿಳುಕೊಳ್ಳುವದು ಅವಶ್ಯವಾಗಿತ್ತು. ಅವನ ವರ್ಗದವರಿಗೆ ರೋಮದಲ್ಲಿ ಒಂದು ವಿಶೇಷ ಕೆಲಸವಿದ್ದಕಾರಣ, ಅವನ ವಿದ್ವಾಂಸತನವನ್ನೂ ಚಿಕ್ತಿಯನ್ನೂ ಜಾಗ್ರತೆಯನ್ನೂ ಕಂಡು, ಅವನನ್ನು ಕಾರ್ಯಸ್ಥನಾಗಿ ನೇಮಿಸಿದರು. ಅವನಲ್ಲಿಟ್ಟ ಈ ಚಿರವಸಕ್ಕೆ ಸರಿಯಾಗಿ ಹೇಳಿದ ಕೆಲಸವನ್ನು ಬಹಳ ಚನ್ನಾಗಿ ನಡಿಸಿದನು. ಕ್ರಿಸ್ತ ಶಕ ೧೫೧೦ಲ್ಲಿ ಲುಥರನು ಅವನ ಜೀವಚರಿತ್ರದಲ್ಲಿಯೂ ಸಾಧನಚರಿತ್ರದಲ್ಲಿಯೂ ಪರಮಾಶ್ಚರ್ಯವಾದ ಈ ಪ್ರಯಾಣವನ್ನು ಮಾಡಿದನು. ಕ್ರಿಸ್ತನ ಪ್ರತಿನಿಧಿಯ ನಿವಾಸಸ್ಥಾನವಾಗಿರುವ ರೋಮದ ಮೇಲೆ ಅವನಿಗೆ ಆ ಕಾಲದಲ್ಲಿ ಇನ್ನೂ ಬಹಳ ಚಿೀತಿ ಇತ್ತು. ಅವನು ಪಟ್ಟಣವನ್ನು ಕಾಣುತ್ತಲೆ, ನೆಲಕ್ಕೆ ಅಡ್ಡ ಬಿದ್ದು, ಕೈಗಳನ್ನು ಮೇಲಕ್ಕೆ ಎತ್ತಿ "ಪರಿಶುದ್ಧ ರೋಮವೇ ನಿನಗೆ ನಮಸ್ಕಾರ" ಎಂದು ಹೇಳಿದನು. ಒಳಗೆ ಬಂದ ಮೇಲೆ, ಮೊಣಕಾಲುಗಳಲ್ಲಿ ಪೇತ್ರಸಚಾಲಯದ ಪಾವಟಿಗೆಗಳನ್ನು ಏರಿದನು, ಎಲ್ಲೆಲ್ಲಿ ಪರಿಶುದ್ಧ ವಸ್ತುಗಳಿದ್ದವೋ "ಅಂಥಾ ಸಮಸ್ತ ದೇವಾಲಯಗಳಲ್ಲಿಯೂ ಗವಿಗಳಲ್ಲಿಯೂ" ದರ್ಶನ ಮಾಡ ಹೋದನು. ಆದಾಗ್ಯೂ ಅಧಿಕ ಸಮಾಧಾನವು ಅವನಿಗೆ ಬರಲಿಲ್ಲ; ಇದಲ್ಲದೆ ಮೇಲಿನಿಂದ ಗುಡುಗಿನ ಶಬ್ದದಂತೆ: ನೀತಿವಂತನು ವಿಶ್ವಾಸದಿಂದ ಬದುಕುತ್ತಾನೆ ಎಂಬ ವಾಕ್ಯವು ಅವನಿಗೆ ಹೇಳಿದ ಹಾಗೆ ಆಯಿತು. ಅವನು ಸ್ವಂತ ಕಣ್ಣುಗಳಿಂದ ರೋಮದ ಅಸಹ್ಯಗಳನ್ನು, ಎಲ್ಲಾ ಆಶ್ರಮಗಳಲ್ಲಿಯೂ, ಮುಖ್ಯವಾಗಿ ಯಾಜಕನಿಂದ ಹಿಡಿದು ಪೋಪನ ಪರ್ಯಂತಕ್ಕೆ ಪಾರಮಾರ್ಥಿಕ ಆಶ್ರಮದಲ್ಲಿಯೂ ನಡಿಯುವ ಬಂಡುತನವನ್ನೂ ದುರ್ವ್ಯಸನಗಳನ್ನೂ ಕಣ್ಣಾರೆ ಕಂಡನು. (ಆ ಕಾಲದಲ್ಲಿ ೨ನೆ ಯೂಲ್ಯನು ಪೋಪನಾಗಿದ್ದನು); ಅವನು ಅಲ್ಲಿ ಸಾಧಾರಣವಾಗಿ ಕ್ರಿಸ್ತನ ಹಲವು ಸೇವಕರಲ್ಲಿ ಪ್ರಬಲವಾಗಿರುವ ವಿಷಯಲಂಪಟತನವನ್ನೂ ದ್ರೋಹಕರವಾಗಿ ದೇವರನ್ನು ಅಲ್ಲಗಳಿಯುವದನ್ನೂ ಕಂಡನು; ಅವರು ಪರಿಶುದ್ಧತ್ವದ ಕಾರ್ಯಗಳನ್ನು ಆಟದ ಹಾಗೆಯೂ ಕುಚೋದ್ಯವಾಗಿಯೂ ನಿಂದೆಯಾಗಿಯೂ ನಡಿಸುವದನ್ನು ಕಂಡನು. ಅವನು ಅಲ್ಲಿ ನಿಧಾನವಾಗಿಯೂ ಗಂಭೀರವಾಗಿಯೂ ಯೋಗ್ಯವಾಗಿಯೂ ಮಿಸಾಸು ಓದುತ್ತಿರುವಾಗ್ಯೆ, ಈತನು ಒಂದು ಓದಿ ತೀರಿಸುವಷ್ಟರ ಒಳಗೆ, ಸಮೀಪದಲ್ಲಿರುವ ಬೇರೊಂದು ಪೀಠದ ಹತ್ತಿರ ದಡಬಡದಿಂದ ಮತ್ತೊಬ್ಬರು ಏಳು ಓದಿ ತೀರಿಸಿ ಬಿಟ್ಟರು. ರೋಮಿಯ ಯಾಜಕರು ಅವನಿಗೆ: "ಬೇಗ ಬೇಗ ಸಹೋದರನಾದ ಮರ್ತಿನನೇ; ನಮ್ಮ ಧೊರೆಸಾನಿಯ ಮಗನನ್ನು ತಿರಿಗಿ ಬೇಗ ಮನೆಗೆ ಕಳುಹಿಸು" ಎಂದು ಕೂಗಿ ಹೇಳಿದರು. ಇದಲ್ಲದೆ ಪೋಪನ ಅರಮನೆಯಲ್ಲಿ ಕೆಲವರು ರಾತ್ರಿ ಭೋಜನದ ವಸ್ತುಗಳಿಗೆ "ನೀನು ರೊಟ್ಟಿಯಾಗಿದ್ಧೀ, ರೊಟ್ಟಿಯಾಗಿ ಇರುವಿ" ಮುಂ

ತಾದ್ದು ಹೇಳುತ್ತಾರೆಂಬದನ್ನು ನೆಗಾಡುತ್ತಾ, ಮತ್ತಾತ್ಬರಿಗೆ ತಿಳಿಸುವದನ್ನು ಕೇಳಿದ
ನು. ಲುಥರನು ತಾನು ರೋಮುದಲ್ಲಿದ್ದ ಸಂಗತಿ ವಿಷಯವಾಗಿ ಮಾತಾಡುವಾಗ್ಯೆ,
"ಅದನ್ನು ಆಲೋಚಿಸಿದರೆ ನನಗೆ ಭಯವಾಗುತ್ತದೆ" ಎಂದು ಹೇಳುವನು. ಆದಾ
ಗ್ಯೂ ಇದನ್ನೆಲ್ಲಾ ನೆನಸುವದರಿಂದಲೇ, ಮತ್ತೆ ನಡದ ಕಠಿಣವಾದ ಹೋರಾಟದಲ್ಲಿ
ಧೈರ್ಯ ತಕ್ಕೊಂಡನು. ಆದ್ದರಿಂದ ರೋಮುವನ್ನು ನೋಡುವ ಬದಲಾಗಿ ಸಾವಿರ
ರೂಪಾಯಿ ತಕ್ಕೊಳ್ಳೆನು, ಎಂದು ಹೇಳಿದನು.

ಲುಥರನು ಪುನಸ್ಥಾಪಕನಾಗುವದಕ್ಕೆ ಸನ್ನದ್ಧನಾಗುತ್ತಿರುವಾಗ್ಯೆ ಸ್ಟೌಪಿಚ್ಚನೂ
ಅವನ ಮತದವರೂ ಅವನಿಗೆ ದೇವವಿದ್ಯೆಯ ಪಂಡಿತನಾಗ ಬೇಕೆಂದು ೧೫೧೨ರಲ್ಲಿ
ಅಪೇಕ್ಷೆ ಮಾಡಿದ್ದು ವಿಶೇಷ. ಅದು ದೈವಿಕ ವಿದ್ವಾಂಸತನದಲ್ಲಿ ಪರಮೋನ್ನತವಾದ
ಬಿರಿದಾಗಿತ್ತು. ಲುಥರನು ಅದನ್ನು ಎಂದಿಗೂ ನೆನಸದೆ ಅಪೇಕ್ಷಿಸದೆ ಇದ್ದ ಕಾರಣ,
ದೈನ್ಯಭಾವದಿಂದ ಈ ಘನವು ತನಗೆ ಬೇಡ ಎಂತ ಹೇಳಿದನು. ನಾನು ಬಲಹೀನ
ವಾದ ಅಸ್ವಸ್ಥವಾಗಿರುವ ಸಹೋದರನು, ನಾನು ಬಹುಕಾಲ ಬದುಕಲಾರೆ; ಘಟ್ಟಿ
ಗನೂ ಕ್ಷೇಮವುಳ್ಳವನೂ ಆಗಿರುವ ಬೇರೊಬ್ಬನನ್ನು ಅದಕ್ಕೆ ಆಯ್ದು ಕೊಳ್ಳ ಬೇಕು
ಎಂದು ಹೇಳಿದನು. ಆಗ್ಯೆ ಸ್ಟೌಪಿಚ್ಚನು ಪ್ರತಿಯಾಗಿ ಹೇಳಿದ್ದೇನಂದರೆ: "ದೇವರಿ
ಗೆ ಪರಲೋಕದಲ್ಲಿಯೂ ಭೂಮಿಯಲ್ಲಿಯೂ ಬಹಳ ಕೆಲಸ ಬಿದ್ದೀತೆಂತ ತೋರುತ್ತ
ದೆ; ಆದ್ದರಿಂದ ತನ್ನ ವ್ಯವಹಾರಗಳನ್ನು ತೀರಿಸುವದಕ್ಕೆ, ಆತನಿಗೆ ಯೌವನಸ್ಥರಾದ
ಕಷ್ಟ ಮಾಡುವ ಪಂಡಿತರು ಬೇಕಾದಾರು. ನೀವು ಬದುಕಿದರೂ ಸತ್ತರೂ, ದೇವರಿ
ಗೆ ಆಲೋಚನಾಸಭೆಯಲ್ಲಿ ನೀವು ಅವಶ್ಯವಿದ್ಧೀರಿ. ಆದ್ದರಿಂದ ನಿಮ್ಮ ಮತವು ನಿಮ
ಗೆ ಕೊಡುವ ಅಪ್ಪಣೆಗೆ, ನನಗೂ ಅದಕ್ಕೂ ಕಿವಿ ಕೊಡುತ್ತೇನೆಂತ ಹೇಳಿದ ಹರಿಕೆಯ
ಪ್ರಕಾರ, ಈಗ ವಿಧೇಯವಾಗಿರಿ". ಈ ಮಾತಿಗೆ ಲುಥರನು ವಿಧೇಯವಾಗಿ, ೧೫೧೨ನೆ
ಅಕ್ಟೋಬರ ೧೯ಲ್ಲು ದೇವವಿದ್ಯೆಯ ಪಂಡಿತನೆಂಬ ಪದವಿ ಹೊಂದಿದನು. ಅದಕ್ಕೆ
ಬೇಕಾದ ಖರ್ಚು ಆಯಿಕೆಯ ಅರಸನು ಕೊಟ್ಟನು. ಇದಲ್ಲದೆ ಲುಥರನು ಬೇರೊಬ್ಬ
ರ ಹಾಗೆ, ತತ್ವಜ್ಞಾನ ದೇವವಿದ್ಯೆಯ ಪಂಡಿತನೆಂಬ ಅರ್ಥವುಳ್ಳ, ಡಾಕ್ತರ್ ಥೆಯೊ
ಲೊಗೀಯೆ ಸೆಂತೆನ್ ತಿಯಾರಿಯುಸ್, ಅಂತಲ್ಲಾ, ಡಾಕ್ತರ್ ಬಿಬ್ಲಿಕುಸ್ ಅಂದರೆ
ಪರಿಶುದ್ಧ ಬರಹದ ಪಂಡಿತ ಆದನು.

ನಿಶ್ಚಯವಾಗಿ ಆ ಕಾಲದಲ್ಲಿಯೂ ಬಹುಕಾಲ ಪರ್ಯಂತ ಮುಂಚೆಯೂ ಮ
ತ್ತೆಯೂ ಈ ಪಂಡಿತನಾಮವನ್ನು ಹೊಂದಿದವರಲ್ಲಿ ಅವನಿಗಿಂತ ಅಧಿಕ ಯೋಗ್ಯರು
ಇರಲಿಲ್ಲವೆಂತ ಹೇಳ ಬಹುದು. ಆದಾಗ್ಯೂ ಮಾನುಷ್ಯಮಾನದಲ್ಲಿ ಏನದೆ? ಲುಥ
ರನು ಅದಕ್ಕೋಸ್ಕರ ಒಂದು ಚಿಕ್ಕ ಕಾಸಾದರೂ ಕೊಡುತ್ತಿದ್ದಿಲ್ಲಾ. ಆದರೆ ದೇವರು

ಅದರಿಂದ ಅವನ ತೋಳನ್ನು ಬಲಪಡಿಸಿ, ಅವನ ಹದವಾದ ಕತ್ತಿಗೆ ಒಳ್ಳೇ ಘಟ್ಟಿಯಾದ ಹಿಡಿ ಕೊಟ್ಟನು. ಈ ಬಿರುದನ್ನು ತಕ್ಕೊಳ್ಳಲಿಕ್ಕೆ ಆಗ್ಯೆ ಅವನಿಗೆ ಕರಕರೆ ಆದರೂ, ಮತ್ತೆ ಅದರಿಂದಲೇ ಬಹಳ ಆದರಣೆಯನ್ನೂ ಮಹಾಸಂತೋಷವನ್ನೂ ತಕ್ಕೊಂಡನು. ಹ್ಯಾಗೆಂದರೆ, ಅವನು ಈ ಬಿರುದು ತಕ್ಕೊಳ್ಳುವ ಸಮಯದಲ್ಲಿ, "ಪರಿಶುದ್ಧ ಬರಹವನ್ನು ಜೀವಾಂತ್ಯ ಪರ್ಯಂತ ಕಲಿಯುತ್ತೇನೆ, ಪ್ರಸಂಗಿಸುತ್ತೇನೆ, ಬೋಧಿಸುತ್ತೇನೆ, ಮತ್ತು ಸಮವಾದ ಕ್ರೈಸ್ತವಿಶ್ವಾಸವನ್ನು ತರ್ಕಗಳಿಂದಲೂ ಗ್ರಂಥರಚನೆಯಿಂದಲೂ ಎಲ್ಲಾ ಅಪಬೋಧಕರಿಗೆ ಎದುರಾಗಿ ಸಾಧಿಸುತ್ತೇನೆ, ಇದಕ್ಕೆ ದೇವರು ನನಗೆ ಸಹಾಯ ಮಾಡಲಿ!" ಎಂದು ಪ್ರಮಾಣ ಮಾಡಬೇಕಾಯಿತು. ಆದ್ದರಿಂದ ಒಳಗಿನಿಂದಲೂ ಹೊರಗಿನಿಂದಲೂ, ಏನೇನು ಮಾಡುತ್ತೀ ಎಂದು ಆಗುವ ಪ್ರಶ್ನೆಗೆ ಎದುರಾಗಿ, ದೇವರ ವಾಕ್ಯಕ್ಕೋಸ್ಕರ ನಡಿಯುವ ಮಹಾಹೋರಾಟದಲ್ಲಿ ಅವನು "ನನ್ನನ್ನು ಪರಿಶುದ್ಧ ಬರಹದ ಪಂಡಿತನಾಗ ಮಾಡಿದ್ದಾರೆ: ನಾನು ಅದರ ಮೇಲೆ ಪ್ರಮಾಣ ಮಾಡಿದ್ದೇನೆ, ಮತ್ತು ಅದರಲ್ಲಿ ನಿಲ್ಲಬೇಕು" ಎಂದು ಯಾವಾಗಲೂ ಹೇಳಲಿಕ್ಕೆ ಶಕ್ತನಾದನು. ಅದೇ ಪ್ರಕಾರ ಅವನ ಚಕ್ತಿಯುಳ್ಳ ಶಿಷ್ಯನೂ ಸಹಚೋಜಕನೂ ಆಗಿದ್ದ ಯೋಹಾ. ಮತ್ಥೆಸ್ಯನು ಹೇಳುವದೇನಂದರೆ: "ಕ್ರೈಸ್ತಜನಗಳಲ್ಲಿ ಇಂಥಾ ಕಷ್ಟವನ್ನು ಮಾಡುವದಕ್ಕೆ ನಿನಗೆ ಯಾರು ಅಪ್ಪಣೆ ಕೊಟ್ಟರು, ನೀನು ಹ್ಯಾಗೆ ಜವಾಬು ಕೊಡುವಿ ಎಂದು ಪಿಶಾಚನೂ ಲೋಕವೂ ಅವನಲ್ಲಿ ದುಃಖವನ್ನೂ ಚಯವನ್ನೂ ಹುಟ್ಟಿಸ ನೋಡುವಾಗ್ಯೆ, ಮಹಾ ಸಂಕಟಗಳಲ್ಲಿಯೂ ವ್ಯಥೆಗಳಲ್ಲಿಯೂ ಅವನು ಈ ನ್ಯಾಯ ಪ್ರಕಾರದ ಸರ್ವಪ್ರಸಿದ್ಧವಾದ ಕರಿಯುವಿಕೆಯ ಆಲೋಚನೆಯಿಂದ ತನ್ನನ್ನು ಆದರಿಸಿ ಕೊಂಡನು. ಆಗ್ಯೆ ಅವನು ಈ ನ್ಯಾಯ ಪ್ರಕಾರದ ಪಾಂಡಿತ್ಯವನ್ನೂ, ಸರ್ವಪ್ರಸಿದ್ಧವಾದ ಆಜ್ಞೆಯನ್ನೂ, ಘನವಾದ ಪ್ರಮಾಣವನ್ನೂ ನೆನಪು ಮಾಡಿಕೊಂಡು ಆದರಣೆ ತಕ್ಕೊಂಡನು. ಈ ಪ್ರಕಾರ ತನ್ನ (ನಿಜವಾಗಿ ದೇವರ) ಕಾರ್ಯವನ್ನು ಕ್ರಿಸ್ತನ ಹೆಸರಿನಲ್ಲಿ ಮಾನ ಸಹಿತವಾಗಿಯೂ ಅನೇಕರ ಚಾಗ್ರಕ್ಕಾಗಿಯೂ ನಿರ್ಭಯವಾಗಿ ನಡಿಸಿ, ದೇವರ ಸಹಾಯದಿಂದ ಸಮವಾಗಿ ಪೂರ್ಣ ಮಾಡಿದನು.

ಕಾಲ ಕ್ರಮಿಸುತ್ತಾ, ಲುಥರನನ್ನು ಅವನಿಗೆ ನೇಮಕವಾದ ಮಹಾಕಾರ್ಯಕ್ಕೆ ದೇವರು ಸಂಪೂರ್ಣ ಮಾಡಿ, ಸ್ಥಿರ ಪಡಿಸಿ, ಬಲ ಪಡಿಸಿ, ನೆಲೆಗೊಳಿಸಿದನು ೧ ಪೇತ್ರ ೫, ೧೦. ಪಂಡಿತನು ಸಾಕೆಂದನ್ನದೆ, ಮಹಾ ವಿಚಾರಾಭಿಲಾಷೆಯಿಂದ ತನ್ನ ವಿದ್ಯಾರ್ಥಿಗಳೊಡನೆ ತಾನೇ ಅಭ್ಯಾಸ ಮಾಡಿದನು. ಆ ಸಮಯದಲ್ಲಿ ಕತ್ತಲೆಯಾದ ಮಧ್ಯಕಾಲದಲ್ಲಿ ರಚಿಸಲ್ಪಟ್ಟ ಗ್ರಂಥಗಳಲ್ಲಿ ಸಹಾ ಪೂರ್ಣ ಶುದ್ಧವಾಗಿ ಅಲ್ಲವಾದ

ರೂ ಸಂಪ್ರಾರ್ಣಿಸುವ, ಬಲಗೊಳಿಸುವ, ಧೈರ್ಯ ಪಡಿಸುವ ಸುವಾರ್ತೆಯ ಮುಂಬೆಳಗು ಅವನಿಗೆ ಎದುರಾಯಿತು. ಆಗ್ಯೆ ಅವನು ಎಷ್ಟು ಸಂತೋಷ ಪಟ್ಟನು! ಮುಖ್ಯವಾಗಿ ಹೃತ್ಸಂತೋಷದಿಂದಲೂ ಬಹು ಸಫಲವಾಗಿಯೂ ೧೪ನೆ ವರ್ಷ ಶತದಲ್ಲಿದ್ದ, ದೇವರಲ್ಲಿ ನಿಮಗ್ನನಾದ, ಪ್ರಸಂಗಿಯಾದ ಯೋಹಾನ್ ತೌಲರನ ಗ್ರಂಥಗಳನ್ನೂ, ಅದೇ ಕಾಲದಲ್ಲಿ ಹೆಸರು ತಿಳಿಯದ ಗ್ರಂಥಕರ್ತನು ರಚಿಸಿದ "ಜರ್ಮನಿ ದೇವವಿದ್ಯೆ" ಎಂಬ ಒಂದು ಸಂಣ ಉತ್ತಮ ಪುಸ್ತಕವನ್ನೂ ಓದಿ ಕೊಂಡನು. ತಾನೇ ಅವುಗಳಿಂದ ಬಹಳ ಕಲಿತು ಕೊಂಡನೆಂದು ಹೇಳಿ, ಈ ಕಡೇ ಸಂಣ ಪುಸ್ತಕಕ್ಕೆ ಪೀಠಿಕೆಯನ್ನು ಬರದು, ತಿರಿಗಿ ಪ್ರಚುರ ಮಾಡಿದನು. ಆದಾಗ್ಯೂ, ಮುಖ್ಯವಾಗಿಯೂ ನಿರಂತರವಾಗಿಯೂ, ಪಂಡಿತಪ್ರಮಾಣಕ್ಕೆ ಅನುಸಾರವಾಗಿ, ಹೆಚ್ಚಾದ್ದನ್ನು ಎಲ್ಲಾ ಕಲಿಸುವ ಪುಸ್ತಕವಾದ "ಅತಿಪ್ರಿಯವಾದ ಪರಿಶುದ್ಧ ಬರಹವನ್ನು" ಅಭ್ಯಾಸ ಮಾಡಿದನು. ಇದನ್ನು ಇಷ್ಟು ವರೆಗಿನ ಹಾಗೆ ಅಲ್ಲಲ್ಲಿ ತಪ್ಪಿರುವ ಲತೀನ ಭಾಷಾಂತರದಲ್ಲಿ ಮಾತ್ರವಲ್ಲ, (ಇದು ಮಾತ್ರವೇ ರೋಮಾಯ ಸಭೆಯಲ್ಲಿ ಸಲ್ಲುತ್ತದೆ) ಮೂಲಗ್ರಂಥದಲ್ಲಿ, ಅಂದರೆ, ಹಳೆ ಒಡಂಬಡಿಕೆಯನ್ನು ಹೆಬ್ರೇಯ ಭಾಷೆಯಲ್ಲಿಯೂ, ಹೊಸ ಒಡಂಬಡಿಕೆಯನ್ನು ಗ್ರೇಕ ಭಾಷೆಯಲ್ಲಿಯೂ ಓದಿ ಕೊಂಡನು.

ಹೀಗೆಯೆ ಮೆಲ್ಲ ಮೆಲ್ಲನೆ ಬೆಳಕು ಹೆಚ್ಚೆಚ್ಚು ಪ್ರಬಲವಾಯಿತು. ಕಡೆಯಲ್ಲಿ ಸೂರ್ಯಪ್ರಕಾಶದಲ್ಲಿ ಎಂಬ ಹಾಗೆ ಸಮವಾದ ಸುವಾರ್ತೆಯ ರಕ್ಷಣಾಧಾರವನ್ನು ತಿಳುಕೊಂಡನು. ಇದರಿಂದಲೆ ಬೇರೆ ದೇವವಾಕ್ಯದ ಬೋಧನೆಗಳನ್ನು ಸಹಾ ತಿಳುಕೊಳ್ಳಲಾಗುತ್ತದೆ. ಆ ರಕ್ಷಣಾಧಾರವೇನಂದರೆ "ಬಡ ನ್ಯಾಯಶಿಕ್ಷೆಗೊಳಗಾದ ಪಾಪಿಗಳಾದ ನಾವು, ನಮ್ಮ ಸ್ವಂತ ಕ್ರಿಯೆಯಿಂದಲ್ಲ, ಬೇರೆ ಪಾಪಿ ಮನುಷ್ಯನ ಪುಣ್ಯದಿಂದ ಸಹಾ ಅಲ್ಲ, ನಮ್ಮ ವಿಮೋಚಕನೂ ಸಮಾಧಾನ ರಾಜನೂ ಆಗಿರುವ ಕ್ರಿಸ್ತನಲ್ಲಿರುವ ದೇವರ ಉಚಿತವಾದ ಕೃಪೆಯಲ್ಲಿ ಇಡುವ ವಿಶ್ವಾಸದಿಂದ ಮಾತ್ರವೇ ನೀತಿನಿರ್ಣಯ ಪಡುತ್ತೇವೆ, ಭಾಗ್ಯ ಹೊಂದುತ್ತೇವೆ;" ರೋಮ ೧, ೧೭. "ನೀತಿವಂತನು ವಿಶ್ವಾಸದಿಂದ ಬದುಕುವನು," ಎಂಬ ವಾಕ್ಯವು, ಆಶ್ಚರ್ಯಕರವಾದ ದೈವಬಲದಿಂದಲೂ ದಯಾಮಧುರತ್ವದಿಂದಲೂ ಅವನ ಮನಸ್ಸಿನೊಳಗೆ ಹೊಕ್ಕಿತು, ಮತ್ತು ಬಹು ಕಾಲ ಪರ್ಯಂತ "ನೀತಿವಂತನು ವಿಶ್ವಾಸದಿಂದ ಬದುಕುವನು" ಎಂಬ ಧ್ವನಿಯು ಪರಲೋಕದ ಉತ್ಸವ ಘಂಟಾನಾದದೊಡನೆ ಅವನ ಕಿವಿಯಲ್ಲಿ ಬಿದ್ದ ಹಾಗಾಯಿತು. ಈ ಪ್ರಕಾರ ಭಾರವಾದ ಮಾನಸಾಂತರದ ಕಾಲದ ಮೇಲೆ, ಪರಿಪೂರ್ತಿಯಾದ ಆದರಣೆಯನ್ನು ಪಡ ಕೊಂಡು, ವಿಶ್ವಾಸದಲ್ಲಿ ಆನಂದವಾಗಿದ್ದನು. ಈ

ವಾಕ್ಯವನ್ನು ಚನ್ನಾಗಿ ತಿಳುಕೊಂಡು "ತಾನು ಹೊಸ ಮನುಷ್ಯನಾದೆನು, ಪರದೈಸದ ದ್ವಾರದಿಂದ ಒಳಗೆ ಬಂದೆನು" ಎಂಬದು ಅವನಿಗೆ ಹೃತ್ಪರಿಚಿತವಾಯಿತು.

ಈ ನಿತ್ಯವಾದ ಸುವಾರ್ತೆಯ ಮುಖ್ಯ ಮೂಲ ಸತ್ಯಾರ್ಥದ ಜೀವವುಳ್ಳ ಸಂಪೂರ್ಣ ತಿಳುವಿಕೆಯು ಅವನ ಹೃದಯದಲ್ಲಿ ಸ್ವಚ್ಛವಾಗಿತ್ತೆಂಬದಕ್ಕೆ ಸಾಕ್ಷಿಯಾಗಿ, ಲುಥರನು ೧೫೧೬ರಲ್ಲಿ ಗೆಯಾರ್ಗಸ್ಪೈನ್‌ಲ್ಯಾನ್ ಎಂಬ, ಮೆಮ್ಮಿಂಜಿನಿನಲ್ಲಿದ್ದ ಔಗುಸ್ತೀನ ಬೈರಾಗಿಗೆ ಬರದ ಕಾಗದದ ಅಂತ್ಯದಲ್ಲಿರುವ ಉತ್ತಮವಾದ ಮಾತುಗಳನ್ನು ಕೇಳೋಣಾ. ಅಲ್ಲಿ ಏನು ಹೇಳಿಯದೆ ಅಂದರೆ: "ನನ್ನ ಪ್ರಿಯ ಸಹೋದರನೇ—ಕ್ರೂಜಿಸಲ್ಪಟ್ಟ ಕ್ರಿಸ್ತನನ್ನು ಕಲಿತುಕೋ; ಆತನಿಗೆ ಒಪ್ಪಿ ಕೊಳ್ಳುವದಕ್ಕೂ, ನಿನ್ನಲ್ಲಿ ನಿರಾಶೆ ಆಗುವದಕ್ಕೂ, ಕಲಿ. ಮತ್ತು ಈ ಪ್ರಕಾರ ಹೇಳು: ನೀನು, ಕರ್ತನಾದ ಯೇಸು ಕ್ರಿಸ್ತನೇ, ನೀನು ನನ್ನ ನೀತಿಯಾಗಿದ್ಧಿ, ಆದರೆ ನಾನು ನಿನ್ನ ಪಾಪವಾಗಿದ್ಧೇನೆ; ನನ್ನದನ್ನು ನೀನು ತಕ್ಕೊಂಡಿ—ನಿನ್ನದನ್ನು ನನಗೆ ದಯ ಮಾಡಿದಿ; ನೀನು ಆಗಿರದ್ದನ್ನು ನಿನ್ನ ಮೇಲೆ ತಕ್ಕೊಂಡು, ನಾನು ಆಗಿರದ್ದನ್ನು ನನಗೆ ದಯ ಮಾಡಿದಿ! ಆತನ ಈ ಪ್ರೀತಿಯನ್ನು ಶಕ್ತಿಯಾಗಿ ಧ್ಯಾನಿಸು, ಆಗ್ಯೆ ನಿನಗೆ ಅದರಿಂದ ಶ್ರೀಯಾದ ಆದರಣೆಯು ಬರುವದು. ಯಾಕಂದರೆ ನಮ್ಮ ಸ್ವಂತ ಕಷ್ಟದಿಂದಲೂ ಶ್ರಮದಿಂದಲೂ ನಾವು ಮನಸ್ಸಾಕ್ಷಿಯ ವಿಶ್ರಾಂತಿಯನ್ನು ಹೊಂದ ಬಹುದಾದರೆ, ಆತನು ಸತ್ತದ್ದು ಏತಕ್ಕೆ? ಆದ ಕಾರಣ ನಿನ್ನಲ್ಲಿಯೂ ಬೇರೆ ಕ್ರಿಯೆಗಳಲ್ಲಿಯೂ ಪೂರ್ಣ ನಿರಾಶೆಯಾಗಿ, ಆತನಲ್ಲಿ ಮಾತ್ರವೇ ನೀನು ಸಮಾಧಾನವನ್ನು ಹೊಂದುವಿ."

ಲುಥರನು ಹೆಚ್ಚು ಹೆಚ್ಚು ಖಂಡಿತವಾಗಿಯೂ ಬಲವಾಗಿಯೂ ಸುವಾರ್ತೆಯ ಕಾರ್ಯವನ್ನು ನಡಿಸುತ್ತಾ ಇರಲಾಗಿ, ಅವನು ವಿತ್ತೆನ್‌ಬೆರ್ಗದಲ್ಲಿ ಪರಮ ಮಾನ್ಯನಾದನು, ಜನರೂ ವಿದ್ಯಾರ್ಥಿಗಳೂ ಅವನ ಹೊಸತಾದ (ಆದಾಗ್ಯೂ ನಿಜವಾಗಿ ಆದಿಯಲ್ಲಿದ್ದ) ಬೋಧನೆಯನ್ನು ತೆರದ ಕಿವಿಗಳಿಂದಲೂ ಆತುರವಾದ ಆತ್ಮಗಳಿಂದಲೂ ಸ್ವೀಕರಿಸಿದರು. ಮತ್ತೊಂದು ವಿಶೇಷವೇನಂದರೆ, ಸರ್ವಶಾಲೆಯ ಮಿಕ್ಕಾದ ಶಾಸ್ತ್ರಿಗಳು ಸಹಾ ಬಹಳ ಪ್ರೇರಣೆ ಹೊಂದಿದರು. ಅವರಲ್ಲಿ ಹೆಚ್ಚಾದವರು, ದೇವವಾದಿಗಳೆಲ್ಲರು, ಅವನಿಗೆ ಸಮ್ಮತಿ ಪಟ್ಟರು. ಮತ್ತು ಅವನಿಂದ ದಿವ್ಯ ಪ್ರಕಾಶದ ಕಡೆಗೆ ನಡಿಸಲ್ಪಟ್ಟು, ಹೆಚ್ಚೆಚ್ಚು ಪ್ರಕಾಶೀಕೃತರಾಗಿ, ಸತ್ಯಕ್ಕೋಸ್ಕರ ಹೆಚ್ಚೆಚ್ಚು ಆಸಕ್ತರಾಗಿ, ಅವನಿಗೆ ಸಹಾಯ ಮಾಡದಿರಲಿಕ್ಕೆ ಅವರಿಂದಾಗಲಿಲ್ಲ.

ದೇವರು ಅವನಿಗೆ ಒದಗಿಸಿದ ಈ ಸಹಾಯಕರಲ್ಲಿ, ವಿತ್ತೆನ್‌ಬೆರ್ಗದಲ್ಲಿ ಪುನಸ್ಥಾಪನೆಯ ಆರಂಭದ ಮುಂಚೆ ಎಲ್ಲರೂ ಇರಲಿಲ್ಲವಾದರೂ, ಅವರಲ್ಲಿ ಶ್ರೇಷ್ಠವಾದವರ ಹೆಸರುಗಳೇನಂದರೆ:

ಮಗಿಸ್ತರ್ ಫಿಲಿಪ್ಪ ಮೆಲಂಥಾನ್. ಇವನು ಆರಂಭದಲ್ಲಿ ಪೂರ್ವ ಭಾಷೆಗಳ ಬೋಧಕನು, ೧೫೨೬ರಿಂದ ದೇವವಾದದ ಶಾಸ್ತ್ರಿಯೂ ಆಗಿದ್ದನು: ಮಾನುಷ್ಯ ಶಿಳುವಿಕೆಯ ಲೆಬ್ಬದಲ್ಲಿ ಅವನು ಆ ಕಾಲದಲ್ಲಿದ್ದ ಸಮಸ್ತ ವಿದ್ವಾಂಸರಿಗಿಂತ ಷಟ್ಟಿಗನಾಗಿದ್ದನು. ಅವನಿಗೆ ಜರ್ಮನಿ ದೇಶದ ಬೋಧಕನು ಎಂಬ ಪ್ರತಿನಾಮ ಬಂತು. ಅವನಿಂದ ಕಲಿತು ಕೊಳ್ಳುವದಕ್ಕೆ ವಿದ್ಯಾರ್ಥಿಗಳು ಪರದೇಶಗಳಿಂದ, ದೂರದಲ್ಲಿರುವ ಗ್ರೀಕ ದೇಶದಿಂದ ಸಹಾ ಬಂದರು. ಅವನು ಕಲಿಸಿ ಕೊಡುವ ಕೋಣೆಯಲ್ಲಿ ಕೆಲವು ಸಾರಿ ಎರಡು ಸಾವಿರ ವಿದ್ಯಾರ್ಥಿಗಳಿದ್ದರು. ಲುಥರನ ಹೊರತು ಇವನು ಪುನಸ್ಥಾಪನೆಯ ಕಾರ್ಯದಲ್ಲಿ ಹೆಚ್ಚಾದನ್ನು ಮಾಡಿದವನು. ಆದಾಗ್ಯೂ, ಅವನು ತಾನೆ ಎಂದಿಗೂ ಪುನಸ್ಥಾಪಕನಾಗುತ್ತಿದ್ದಿಲ್ಲಾ; ಯಾಕಂದರೆ ಅವನು "ಅತಿರೇಕ ಶಾಂತನೂ ಭಯಸ್ಥನೂ" ಆಗಿದ್ದನು. ಆದರೆ ಅವನನ್ನೇ ಅತಿ ಬುದ್ಧಿಯುಳ್ಳ ದೇವರು ಲುಥರನಿಗೆ ಸಹಾಯಕನಾಗಿ ಕೊಟ್ಟನು; ಯಾಕಂದರೆ ಅವನು, ಬಲದ ಮನುಷ್ಯನಾದ ಲುಥರನು ಅತಿ ವೇಗದಿಂದಲೂ ಧೈರ್ಯದಿಂದಲೂ ಕೆಲಸ ನಡಿಸಲಿಕ್ಕಿರುವಾಗ್ಯೆ, ಅವನನ್ನು ಅನೇಕ ಸರ್ತಿ ತಡದನು. ಲುಥರನು ತಾನು ಮೆಲೊಂಥಾನನ ವಿಷಯದಲ್ಲಿಯೂ ತನ್ನ ವಿಷಯದಲ್ಲಿಯೂ ಹೇಳುವದೇನಂದರೆ: "ನಾನು ಕಲಹಮುಂಡುಗಳಿಗೂ ಪಿಶಾಚಿಗಳಿಗೂ ಎದುರಾಗಿ ಹೋರಾಡುವದಕ್ಕೆ ಹುಟ್ಟಿದ್ಧೇನೆ, ಆದ್ದರಿಂದ ನನ್ನ ಪುಸ್ತಕಗಳು ಬಿರುಘಾಳಿಯಂತೆಯೂ ಯುದ್ಧಸಾಧಕವಾಗಿಯೂ ಇರುತ್ತವೆ. ನಾನು ಕೊರಡುಗಳನ್ನೂ ಮೊಂಡಗಳನ್ನೂ ಕಿತ್ತಾಕ ಬೇಕು, ಮುಳ್ಳುಗಳನ್ನೂ ಬೇಲಿಗಳನ್ನೂ ಕಡದು ಹಾಕ ಬೇಕು, ನಾನು ಮಾರ್ಗ ಕಡದು ಸಮ ಮಾಡುವ ಮಲೆಕೊಮಟಿಯ ಹಾಗೆ ಇದ್ಧೇನೆ. ಆದರೆ ಮಗಿಸ್ತರ್ ಫಿಲಿಪ್ಪನು ನಿಧಾನವಾಗಿಯೂ ಶಾಂತವಾಗಿಯೂ ನಡದಾಡಿ, ದೇವರು ಅವನಿಗೆ ಕೊಟ್ಟ ಐಶ್ವರ್ಯವಾದ ವರಗಳ ಪ್ರಕಾರ, ಕಟ್ಟುತ್ತಾನೆ, ನೆಡುತ್ತಾನೆ, ಬಿತ್ತುತ್ತಾನೆ, ನೀರು ಹೊಯ್ಯುತ್ತಾನೆ, ಎಲ್ಲಾ ಸಂತೋಷದಿಂದ ಮಾಡುತ್ತಾನೆ."

ಪಂಡಿತ ಯೋಹಾನ ಬೂಗೆನ್‌ಹಾಗೆನ್. ಇವನು ದೇವವಾದದ ಶಾಸ್ತ್ರಿಯೂ ದುರ್ಗದೇವಾಲಯದ ಪ್ರಸಂಗಿಯೂ ಆಗಿದ್ದನು. ಅವನು ಪೊಮ್ಮೆರ್ನದಲ್ಲಿ ಹುಟ್ಟಿದ ಕಾರಣ, ಅವನಿಗೆ ಪೊಮೆರಾನನೆಂತ ಸಹಾ ಹೆಸರಿಟ್ಟರು. ಮಹಾ ವಿದ್ವಾಂಸನಾಗಿಯೂ, ಸಭಾಕಾರ್ಯವನ್ನು ಕ್ರಮಿಸುವದಕ್ಕೆ ಪ್ರತ್ಯೇಕ ವರ ಹೊಂದಿದವನೂ, ಯಥಾರ್ಥ ಮನಸ್ಸಿನ ಭಕ್ತಿಯುಳ್ಳ ಸತ್ಯವಂತ ಮನುಷ್ಯನೂ ಆಗಿದ್ದನು. ಅವನು ಲುಥರನಿಗೆ ಸಹಾ ಪುರೋಹಿತನಂತೆ ಇದ್ದನು.

ಪಂಡಿತ ಯುಸ್ತಯೋನನು. ಇವನು ದೇವವಾದದ ಶಾಸ್ತ್ರಿ. ಉತ್ತಮ ಮನುಷ್ಯ, ಸತ್ಯದ ಪ್ರೀತಿಯಿಂದ ತುಂಬಿದವನು; ವಾಗ್ಜಾಲಿ, ನಿಪುಣ; ಆತ್ಮಿಕ ಕಾರ್ಯಗಳನ್ನು ತಿಳಿದವ ಮಾತ್ರವಲ್ಲ, ಧರ್ಮಶಾಸ್ತ್ರಜ್ಞ ಸಹ ಆಗಿರುವ ಕಾರಣ, ಲೌಕಿಕ ಕಾರ್ಯಗಳನ್ನೂ ನಡಿಸ ಬಲ್ಲವನು.

ಪಂಡಿತ ಅಂದ್ರೆಯ ಕರ್ಲ್‌ಸ್ತತ್ತನು. ದೇವವಾದದ ಶಾಸ್ತ್ರಿ. ಆರಂಭದಲ್ಲಿ ಲುಥರನ ಕಾರ್ಯಕ್ಕೆ ಪೂರ್ಣ ಅನುಗತನು, ಆದರೆ ಸತ್ಯದಲ್ಲಿ ನೆಲೆಯಾಗಿರದೆ, ಭ್ರಾಂತಿವಾದಿಯಾದನು.

ಅಪರೂಪವಾಗಿ ವಿತ್ತೆನ್‌ಬೆರ್ಗದಲ್ಲಿ ಇದ್ದವನಾದರೂ, ಪುನಸ್ಥಾಪನೆಯ ಕಾರ್ಯದಲ್ಲೆಲ್ಲಾ ಪೂರ್ಣ ಪ್ರವೇಶವಾಗಿದ್ದ ಪಂಡಿತ ಗೆಯೋರ್ಗ್‌ಸ್ಪಲತೀನನ ಹೆಸರು ಸನ್ಮಾನಿಸಿ ಹೇಳ ಬೇಕು. ಇವನು ಸಕ್ಸ ದೇಶದ ಆಯಿಕೆಯ ಅರಸನ ಕರಣೀಕನೂ, ರಾಜಧಾನಿ ಪ್ರಸಂಗಿಯೂ, ಲುಥರನ ಅಂತ್ಯ ಪರ್ಯಂತ ನಂಬಿಗಸ್ಥ ಸ್ನೇಹಿತನೂ, ಭರವಸೆ ಯೋಗ್ಯವಾದ ಸಹಾಯಕನೂ ಆಗಿದ್ದನು.

§ ೪.

# ದೇವಕಾರ್ಯದ ಆರಂಭ

ಪುನಸ್ಥಾಪನೆಯಂದರೆ: ತನ್ಮಧ್ಯದಲ್ಲಿ ಕೆಟ್ಟು ಹೋದ ಸಭೆಯನ್ನು ಅದರ ಆದಿ ಶುದ್ಧತ್ವದಲ್ಲಿ ತಿರಿಗಿ ಶೇರಿಸುವದು.

ಪುನಸ್ಥಾಪನೆಯ ಆರಂಭವು ನಿಜವಾಗಿ ೧೫೧೭ರಲ್ಲಿ ಆಯಿತು, ಕಾಲವು ಸಂಪೂರ್ತಿ ಆಗಿತ್ತು, ಅನ್ಯಾಯದ ಪರಿಮಾಣವು ತುಂಬಿತ್ತು; ಅದು ನೂತನವಾದ ಕ್ಷಮಾವಿಧಿಯಿಂದ ಮೇರೆ ಮೀರಿತು. ಹ್ಯಾಗಂದರೆ, ಪೋಪನಾದ ಹತ್ತನೆ ಲೆಯೋ, ಈ ವರುಷದಲ್ಲಿ ಸೀಮೆಗಳ ಹಣವನ್ನು ಎತ್ತುವದಕ್ಕೆ, ಕ್ಷಮಾವಿಧಿಯ ವಿಷಯದಲ್ಲಿ ರಾಯಸ ಬರದನು. ಹಣ, ಬಹಳ ಹಣ, ರೋಮದಲ್ಲಿರುವ ಪರಿಶುದ್ಧ ಪೇತ್ರ ದೇವಾಲಯವನ್ನು ಕಟ್ಟುವದಕ್ಕೆ ಬೇಕೆಂತ ಹೇಳಿದರು; ಆದರೆ ನಿಜವಾಗಿ ಅದು ಮನಸೋಇಚ್ಛೆ ತಿಂದು, ಕುಡಿದು, ವ್ಯಯ ಮಾಡುವದಕ್ಕೆ ಬೇಕಾಗಿತ್ತು.

ಮೈನ್ಸದ ಮಹಾ ಅಧ್ಯಕ್ಷನಾದ ಅಲ್‌ಬ್ರೆಖ್ತನು ಜರ್ಮನಿ ದೇಶದ ಮೇಲ್ ಕಂದಾಯಾಧಿಪತಿಯಾದನು; ಮತ್ತು ಈತನು ತನ್ನ ಕಾರ್ಯಸ್ಥರನ್ನು ಎಲ್ಲಾ ಕಡೆಗೂ ಕಳುಹಿಸಿದನು. ಅಂಥವನೊಬ್ಬನು ದೊಮಿನಿಕೊನರ ಬೈರಾಗಿ ಯೋಹಾನ್ ತೆಚ್ಚಲ್ ಎಂಬವನು ಸಕ್ಸ ದೇಶದ ಎಲ್ಲಾ ಪರ್ಯಟಣೆ ಮಾಡಿ, ವಿತ್ತೆನ್‌ಬೆರ್ಗಕ್ಕೆ ಸಮೀಪದಲ್ಲಿರುವ ಯುತರ್‌ಬೊಕ್, ಚೆರ್ಬಸ್ತ ಮುಂತಾದ, ಊರುಗಳಿಗೆ ಬಂದನು. ಎಲ್ಲಾ ಕಡೆಯಲ್ಲಿಯೂ ವಿಪರೀತವಾದ ನಿರ್ಲಜ್ಜೆಯಿಂದ ಅವನು ಬದುಕುವವರಿಗೋಸ್ಕರವೂ ಸತ್ತವರಿಗೋಸ್ಕರವೂ ಪಾಪವಿನಾಶದ ಉಪಾಯಗಳೆಂದು, ಆ ಚೀಟುಗಳನ್ನು ಕೊಟ್ಟನು. ಆಲೈಸುವ ಜನರಿಗೆ ಅವನು ಹೇಳಿದ್ದೇನಂದರೆ: "ಯಾರಾದರೂ ಕ್ಷಮೆಚೀಟುಗಳನ್ನು ಕ್ರಯಕ್ಕೆ ಕೊಂಡರೆ, ಪಾಪಕ್ಕೋಸ್ಕರ ದುಖ್ಖ ಪಶ್ಚಾತ್ತಾಪ ಪಡುವದೂ ಅವಶ್ಯವಿಲ್ಲಾ" — "ಡಬ್ಬಿಯಲ್ಲಿ ಹಣವು ಸೂರ್ ಆದ ಕೂಡಲೆ, ಪ್ರಾಣವು ಶುಚಿಕಾಗ್ನಿಯಿಂದ ಜೂರ್ ಆಗಿ ಹಾರುವದು." ಅವನು ಹೊಗಳಿಕೊಂಡು, "ಪೇತ್ರನು ಸುವಾರ್ತೆಯಿಂದ ಮಾಡಿದ್ದಕ್ಕಿಂತ ತಾನು ಕ್ಷಮೆಚೀಟುಗಳಿಂದ ಅಧಿಕ ಪ್ರಾಣಿಗಳನ್ನು ಬಿಡುಗಡೆ ಮಾಡಿದೆನು" ಎಂದು ಹೇಳುವನು. ಕುರುಡ ಜನವು ಹಿಂಡು ಹಿಂಡುಗಳಾಗಿ ಅವನ ಬಳಿಗೆ ಬಂದು, ತನಗೋಸ್ಕರವೂ ಸತ್ತವರಿಗೋಸ್ಕರವೂ ಕ್ರಯಕ್ಕೆ ಕೊಂಡರು. ಇದಲ್ಲದೆ ತೆಚ್ಚಲನು ವ್ಯಾಪಾರ ಅಗ್ಗ ಮಾಡಿದನು; ಹ್ಯಾಗಂದರೆ, ಶುಚಿಕಾಗ್ನಿಯಿಂದ ಒಂದು ಪ್ರಾಣವನ್ನು ಬಿಡುಗಡೆ ಮಾಡುವದಕ್ಕೆ ಅರ್ಧ ರಯಾಲು (ಸುಮಾರು ೧ ರೂಪಾಯಿ) ಸಾಕೆಂದು ಹೇಳಿದನು.

ಆದಾಗ್ಯೂ ಕೆಲವರು ಈ ಪ್ರತ್ಯಕ್ಷ ಮೋಸವನ್ನು ತಿಳುಕೊಂಡು, ಆತಂಕ ಪಟ್ಟು, ಕೋಪ ಮಾಡಿದರು. ಆದರೆ ಸಮಸ್ತ ಕ್ರೈಸ್ತಜನದ ಪರಮ ಪರಿಶುದ್ಧ ತಂದೆಯೂ ಪ್ರಭುವೂ ಎಂದನಿಸಿ ಕೊಳ್ಳುವ ಪೋಪನ ಹೆಸರಿನಲ್ಲಿ ನಡಿಯುವ ಕಾರ್ಯಕ್ಕೆ ಎದುರು ನಿಲ್ಲುವವನು ಯಾರು? ಆದರೆ ಇಗೋ, ಒಬ್ಬನಿದ್ದನು. ಅವನಿಗೆ ದೇವರು ಹೃದಯಬಲವನ್ನೂ ಧೈರ್ಯವನ್ನೂ ಕೊಟ್ಟಿದ್ದನು. ಲುಥರನು ತೆಚ್ಚಲನ ದುಷ್ಕರ್ಮವನ್ನು ಬಹು ದುಖ್ಖದಿಂದಲೂ ಪರಿಶುದ್ಧ ಕೋಪದಿಂದಲೂ ನೋಡ ಬೇಕಾಯಿತು. ಅವನು ಯಾಜಕಬೈರಾಗಿಯಾಗಿ, ಪಾಪಗಳ ಅರಿಕೆಯನ್ನು ಕೇಳುವದಕ್ಕೆ ಕೂತಿರುವನು; ಆದರೆ ಆ ಚೀಟುಗಳ ಅನರ್ಥದಂದಿನಿಂದ ಅರಿಕೆ ಮಾಡಲಿಕ್ಕೆ ಬರುವವರು ಕಡಿಮೆ ಕಡಿಮೆಯಾದರು; ಮತ್ತು ಬಂದರೂ, ಮಹಾ ಪಾಪಗಳನ್ನು ಅರಿಕೆ ಮಾಡಿದವರು ಸಹಾ, ಪಶ್ಚಾತ್ತಾಪ ಪಡ ಬೇಕೆಂಬ ಮಾತಿಗೆ ಒಪ್ಪಲಿಲ್ಲಾ. ಅವರು "ಪಶ್ಚಾತ್ತಾಪವು ನಮಗೆ ಅಗತ್ಯವಿಲ್ಲಾ, ನಾವು ಕ್ಷಮೆಚೀಟು ಕೊಂ

ಡಿದ್ದೇವೆ" ಅನ್ನುವರು. ಆಗ್ಯೆ ಲುಥರನು "ನಿಮ್ಮ ಚೀಟುಗಳು, ನಿಮ್ಮ ಪಾಪಗಳು ಹೋಗುವದಕ್ಕೆ, ನಿಷ್ಪ್ರಯೋಜಕ" ಎಂದು ಹೇಳಿ, ಪಾಪಪರಿಹಾರದ ವಚನವನ್ನು ಕಾಡಲಿಲ್ಲ. ಆಗ್ಯೆ ಅವರು ತೆಚ್ಚಲನ ಬಳಿಗೆ ಹೋಗಿ, ನಾವು ಹಣ ಕೊಟ್ಟದ್ದು ನಿರರ್ಥಕವಾಯಿತಲ್ಲಾ ಎಂದು ಹೇಳಿದಾಗ, ತೆಚ್ಚಲನು ಕೋಪದಿಂದ ಬೆಂಕಿಯಂತೆ ಆಗಿ, ಪೋಪನ ಚೀಟುಗಳನ್ನು ತುಚ್ಛೀಕರಿಸುವವನು ಮರಣಪಾತ್ರನಾದ ಪಾಷಂಡಿ ಎಂದು ಬೈದನು.

ಹೀಗಿರಲಾಗಿ, ಲುಥರನು ಈ ಕ್ಷಮೆಚೀಟುಗಳ ವ್ಯಾಪಾರದ ಅನರ್ಥಕ್ಕೆ ವಿರೋಧವಾಗಿ ಪ್ರಸಂಗ ಪೀಠದಿಂದ ಮಾತಾಡ ತೊಡಗಿದನು. ಅವನು ಮೈಂಚದ ಅಲ್ಬ್ರೆಖ್ತ್‌ಗೂ ಬೇರೆ ಕೆಲವು ಅಧ್ಯಕ್ಷರಿಗೂ ಕಾಗದಗಳನ್ನು ಬರದು, ದೇವರ ಹೆಸರು ಅಪಯೋಗವಾಗದ ಹಾಗೆಯೂ, ದೂಷಿಸಲ್ಪಡದ ಹಾಗೆಯೂ, ಬಡಜನವು ಅಘೋರವಾಗಿ ಮಾರ್ಗ ತಪ್ಪದ ಹಾಗೆಯೂ ನೋಡಿ ಕೊಳ್ಳ ಬೇಕೆಂದು ಬೇಡಿ ಕೊಂಡನು. ಅವನು ಬಹು ವಿನಯದಿಂದ ಬರದರೂ, ದೇವರಿಂದ ಕಳುಹಿಸಲ್ಪಟ್ಟ ಮನುಷ್ಯನಂತೆ ಭದ್ರತೆಯಿಂದಲೂ ಅಧಿಕಾರದಿಂದಲೂ ಮಾತಾಡಿದನು. ಆದಾಗ್ಯೂ ಅವನ ಮುಖ್ಯ ಕೃತ್ಯವು ಯಾವದೆಂದರೆ:

೧೫೧೭ನೆ ಅಕ್ಟೋಬರ ೩೧ಲ್ಲು ಅವನು ಕ್ಷಮೆಚೀಟುಗಳಿಗೆ ವಿರೋಧವಾಗಿ, ತೊಂಬತ್ತೈದು ಸಣ್ಣ ವಚನಗಳನ್ನು ಬರದು, ವಿತ್ತೆನ್‌ಬೆರ್ಗದ ಕೋಟೇ ದೇವಾಲಯದ ಗೋಡೆಗೆ ಹಚ್ಚಿದನು. ಸರ್ವಶಾಲೆಗಳ ಪದ್ಧತಿಯ ಪ್ರಕಾರ, ಅವನು ತನ್ನ ಸಂಗಡ ತರ್ಕವಾಡಲಿಕ್ಕೆ ಬರುವವರು ಬರಲಿ ಎಂದು ಪ್ರಕಟ ಮಾಡಿದನು; ಹ್ಯಾಗಂದರೆ ಮುಖಾಮುಖಿಯಾಗಿ ಅಥವಾ ಬರಹ ಮೂಲಕವಾಗಿ ಯಾರಾದರೂ ಪ್ರತಿ ಕಕ್ಷಿಗಳನ್ನು ತಂದರೆ, ತಾನು ಅವುಗಳನ್ನು ಖಂಡಿಸುವೆನು ಎಂಬರ್ಥ. ಲುಥರನ ವಚನಗಳಲ್ಲಿ ಮೊದಲನೆದು ಯಾವದೆಂದರೆ: "ನಮ್ಮ ಯಜಮಾನನೂ ಕರ್ತನೂ ಆಗಿರುವ ಯೇಸು ಕ್ರಿಸ್ತನು ಮಾನಸಾಂತರ ಪಡಿರಿ ಎಂದು ಹೇಳುವದರಿಂದ, ಭೂಮಿಯಲ್ಲಿರುವ ತನ್ನ ವಿಶ್ವಾಸಿಗಳ ಜೀವವೆಲ್ಲಾ ಬಿಡದೆ ನಡಿಯುವ ಮಾನಸಾಂತರ ಆಗಿರ ಬೇಕೆಂದು ಇಚ್ಛೈಸುತ್ತಾನೆ" ಮತ್ತೆ ಅವನು, ಸತ್ಯವಾದ ಮಾನಸಾಂತರದಿಂದ ಪಾಪಗಳ ಪರಿಹಾರವು ದೇವರಿಂದ ಕ್ರಿಸ್ತನಿಗೋಸ್ಕರ ಉಚಿತವಾಗಿ ಶಿಕ್ಕುತ್ತದೆ ಎಂತಲೂ, ಈ ದೇವರ ಕೃಪೆಯು ಅಮೋಲ್ಯವಾಗಿರುವ ಕಾರಣ, ಅದಕ್ಕೆ ಬದಲಾಗಿ ಅದನ್ನು ದುಡಿಯುವದಕ್ಕೆ ಯಾವ ಪ್ರಾಯಶ್ಚಿತ್ತವನ್ನಾದರೂ ಮಾಡ ಕೂಡದೆಂತಲೂ, ಆ ಕಾರಣದಿಂದ ಮಾನಸಾಂತರ ಪಡುವವರಿ




ಲುಥರನು ಕ್ಷಮೆಚೀಟುಗಳಿಗೆ ವಿರೋಧವಾಗಿ ದೇವಾಲಯದ ಬಾಗಲಕ್ಕೆ ಹಚ್ಚಿದ್ದ ೯೫ ಸಣ್ಣ ವಚನಗಳು.

ಗೆ ಕ್ಷಮೆಚೀಟುಗಳು ಅನಾವಶ್ಯವೆಂತಲೂ, ಕ್ಷಮೆಚೀಟುಗಳನ್ನು ಕೊಳ್ಳುವವರು ಮೋಸ ಮಾಡುತ್ತಾರೆ ಮೋಸ ಹೊಂದುತ್ತಾರೆ ಎಂತಲೂ, ಇತ್ಯಾದಿ ಹೇಳುತ್ತಾನೆ.

ಈ ವಚನಗಳು ಹದಿನಾಲ್ಕು ದಿನಗಳೊಳಗೆ ಎಲ್ಲಾ ಜರ್ಮನಿ ದೇಶದಲ್ಲಿಯೂ, ನಾಲ್ಕು ಸಪ್ತಕಗಳ ಒಳಗೆ ಎಲ್ಲಾ ಕ್ರೈಸ್ತ ಜನರಲ್ಲಿಯೂ ಹಬ್ಬಿದವು. “ದೂತರು ತಾವೆ ಅಂಚೆಯವರಾಗಿ ಸಮಸ್ತ ಮನುಷ್ಯರ ಕಣ್ಣುಗಳ ಮುಂದೆ ತಂದಿಟ್ಟ ಹಾಗಾಯಿತು” ಎಂದು, ಮತ್ಥೆಸಿಯನು ಹೇಳುತ್ತಾನೆ. ಅವು ಅಪರಿಮಿತ ಪ್ರತಿಗಳಾಗಿ ಜರ್ಮನ್ ಭಾಷೆಯಲ್ಲಿಯೂ, ಭಾಷಾಂತರವಾಗಿ ಬೇರೆ ಭಾಷೆಗಳಲ್ಲಿಯೂ, ಮಹಾ ವೇಗದಂದ ಪ್ರಕಟವಾದವು.

ಇಲ್ಲಿ ಪುನಸ್ಥಾಪನೆಯ ಕಾರ್ಯಕ್ಕೆ ಪರಮಾಧಾರವಾಗಿರುವ ಒಂದು ಕಾರ್ಯವನ್ನು ಲಕ್ಷಿಸ ಬೇಕು. ಅದೇನಂದರೆ, ದೇವರ ಪ್ರತ್ಯೇಕವಾದ ಘಟಣೆಯಿಂದ ಸ್ವಲ್ಪ ಕಾಲದ ಮುಂಚೆ ಮೊಳೆಛಾಪೆಯು ಕೈಗೂಡಿ ಬಂದಿತ್ತು. ಇದರ ಸಹಾಯದಿಂದ ಒಂದು ಗ್ರಂಥವನ್ನು ಸ್ವಲ್ಪ ಕಾಲದೊಳಗೆ ಸಾವಿರ ಸಾವಿರ ಪ್ರತಿಗಳಾಗಿಯೂ ಅಗ್ಗವಾಗಿಯೂ ಮಾಡುವದಕ್ಕೆ ಉಪಾಯವಾಯಿತು. ಮುಂಚೆ ಬಹು ಪ್ರಯಾಸದಿಂದ ಪ್ರತಿ ತೆಗಿಸ ಬೇಕಾಗಿತ್ತು, ಬಹಳ ಹಣ ಕೊಡ ಬೇಕಾಗಿತ್ತು.

ಮೇಲೆ ಹೇಳಿದ ೯೫ ವಚನಗಳಿಂದ ಎಲ್ಲಾ ಕಡೆಯಲ್ಲಿಯೂ ಆಶ್ಚರ್ಯರೀತಿಯಾಗಿ ಉತ್ಪಾತವಾಯಿತು. ಅನೇಕರು ರೋಮೀಯ ನೊಗ ತಾಳಲಾರದೆ, ಸಂತೋಷದಿಂದ ಧೀರ ಲುಥರನಿಗೆ ಮೆಚ್ಚಿದರು. ಇತರರು ಭಯ ಪಟ್ಟು, ಅವನಿಗೆ ಏನಾಗುತ್ತದೋ ಎಂದು ಸಂದೇಹದಲ್ಲಿದ್ದರು. ರೋಮುಪಕ್ಷದವರು ಕೋಪಾವಿಷ್ಟರಾಗಿ, ಈ ದುಷ್ಟ ಪಾಷಂಡಿಗೆ ಅಯ್ಯೋ ಅಂದರು. ತೆಚ್ಚೆಲನು ಆ ವಚನಗಳನ್ನು ಕಂಡ ಕ್ಷಣ ಬೆಂಕಿಯಲ್ಲಿ ಹಾಕಿ ಸುಟ್ಟನು. ಕೆಲವು ಪೋಪನವರು, ಹಾಗೆ, ಡೊಮೀನಿಕನಾದ ಸಿಲ್‌ವೆಸ್ತರ್ ಪ್ರೀರೇರಿಯ ಮುಂತಾದವಗು ಕಿಡಿಯುರಿಯುವ ಗ್ರಂಥಗಳಿಂದ ಲುಥರನ ಮೇಲೆ ಬಿದ್ದರು. ಎಲ್ಲಾ ಕಡೆಯಲ್ಲಿಯೂ ಅವನ ಪಕ್ಷವಾಗಿಯೂ ಪ್ರತಿಪಕ್ಷವಾಗಿಯೂ ಒದ್ದಾಡಿದರು. ಕಡೆಯಲ್ಲಿ ಬೊಬ್ಬೆಯು ರೋಮಕ್ಕೆ ಮುಟ್ಟಿತು.

ಲುಥರನು ಶಾಂತವಾಗಿದ್ದನು. ಅವನು, ಚಿಂತೆ ಪಡುವ ಸ್ನೇಹಿತರಿಗೆ ಹೇಳಿದ್ದೇನಂದರೆ, “ಈ ಕಾರ್ಯವು ದೇವರ ಹೆಸರಿನಲ್ಲಿ ಆರಂಭಿಸಿ ಇಲ್ಲದಿರುವದಾದರೆ, ಅದು ಬೇಗ ಬಿದ್ದು ಹೋಗುವದು; ಅದರೆ ಅದು ಆತನ ಹೆಸರಿನಲ್ಲಿ ಆರಂಭಿಸಿ ಇದ್ದರೆ, ಆತನನ್ನು ನಡಿಸಗೊಡಿಸಿರಿ!”

ಆದಾಗ್ಯೂ ಸಭೆಯ ಬಾಹುಳ್ಯವಾದ ಪುನಸ್ಥಾಪನೆ ಆಗ ಬೇಕೆಂದು ಅವನು ಅಂದು ಪರ್ಯಂತ ನೆನಸಲಿಲ್ಲಾ. ಅವನು ಒಳಹಾಕ್ಕಿದ ಒಂ

ದು ಅನರ್ಥವನ್ನು ನಿವಾರಿಸಿ, ಅದರಿಂದ ಸಭೆಗೂ ಅದರ ತಲೆಗೂ ಉಪಯೋಗವಾದ ಸೇವೆ ಮಾಡಲಿಕ್ಕೆ ಮಾತ್ರವೆ ಇಚ್ಛೈಸಿದನು. ಈ ಆಲೋಚನೆಯು ಲಗನೆ ವಚನದಿಂದ ಪ್ರತ್ಯಕ್ಷವಾಗುತ್ತದೆ. “ಕ್ಷಮೆಚೀಟುಗಳ ವಿಷಯದಲ್ಲಿ ಮಾಡುವ ದ್ರೋಹಕರವಾದ ನಿರ್ಲಜ್ಜೆಯ ಪ್ರಸಂಗ ಹೊಗಳಿಕೆಗಳ ದೆಶೆಯಿಂದ, ಪೋಪನ ಮಾನವನ್ನೂ ಘನವನ್ನೂ ಸಾಧಿಸುವದು ವಿದ್ವಾಂಸರಿಗೆ ಸಹಾ ದುರ್ಲಭವಾಗುತ್ತದೆ” ಅವನು ಆ ೯೫ ವಚನಗಳನ್ನು ಒಂದು ಕಾಗದದ ಸಹಿತವಾಗಿ ತಾನೇ ಪೋಪನಿಗೆ ಕಳುಹಿಸಿದನು. ಈ ಕಾಗದದಲ್ಲಿ ಕ್ಷಮೆಚೀಟುಗಳ ಅನರ್ಥದಿಂದ ಎಷ್ಟೋ ಆತಂಕ ಬರುತ್ತದೆಂದು ದುಖ್ಖ ಪಟ್ಟು, ಪರಿಶುದ್ಧ ತಂದೆಯ ಚಿತ್ತದಿಂದ ಈ ಪ್ರಕಾರ ನಡಿಯದೆಂದು ಭಾವಿಸುತ್ತೇನೆಂತ ಹೇಳಿ, ಕ್ರೈಸ್ತ ಜನರ ಮೇಲಿರುವ ಪೋಪನಿಗೆ ಬಹು ವಿನಯದಿಂದ ಬಹುಮಾನ ಕೊಟ್ಟು, ಮಾತಾಡುತ್ತಾನೆ. ಯಾತಕಂದರೆ ಪೋಪನ ಮಹತ್ವವನ್ನೂ ಅಧಿಕಾರವನ್ನೂ ವಿರೋಧಿಸುವದಕ್ಕೆ ಅವನ ಕನಸು ಮನಸಿನಲ್ಲಿ ಬರಲಿಲ್ಲಾ. ಆದರೆ ಹ್ಯಾಗೆಂತ ತಿಳಿಯದೆ ಮುಂದೆ ಮುಂದೆ ನಡಿಯ ಬೇಕಾಯಿತು. ಆಗಿನ ಅವಸ್ಥೆಗಳೂ ಅವನ ವಿರೋಧಿಗಳೂ ಅವನನ್ನು ಮುಂದೆ ಮುಂದೆ ನೂಕಿದರು. ಈ ಪ್ರಕಾರ ಪುನಸ್ಥಾಪನೆಯು ದೇವಕಾರ್ಯವೆಂತ ಪ್ರತ್ಯಕ್ಷವಾಯಿತು.

ಹ್ಯಾಗಂದರೆ ಅವನು ದೈನ್ಯಭಾವದಿಂದ ಬರದ ಕಾಗದವು ದಯ ಹೊಂದಲಿಲ್ಲಾ. ಅವನ ಮೇಲೆ ಅಪರಾಧ ಆರೋಪಿಸಿ, ಪರಿಶುದ್ಧ ಆಸನದ ಮುಂದೆ ಬರ ಬೇಕೆಂದು ಅಪ್ಪಣೆಯಾಯಿತು. ಇದಲ್ಲದೆ ಅದೇ ಕಾಲದಲ್ಲಿ ಪೋಪನು ಲುಥರನ ಭೂಪತಿಯಾದ ಆಯಿಕೆಯ ಅರಸನಿಗೆ ಕಾಗದ ಬರದು, ಅವನು ಈ ದುಷ್ಟತನದ ಮಗನನ್ನು ಹಿಡಿಸಿ ರೋಮಕ್ಕೆ ಕಳುಹಿಸ ಬೇಕೆಂದು ಅಪೇಕ್ಷಿಸಿದನು. ಆದರೆ ಅದಕ್ಕೆ ವಿರೋಧವಾಗಿ ಸರ್ವಶಾಲೆಯು ನಮ್ಮ ಭೂಷಣವನ್ನು ಕಳಕೊಳ್ಳಲೊಲ್ಲೆವು ಎಂದು ಹೇಳಿದರು, ಮತ್ತು ಬುದ್ಧಿವಂತನೆಂಬ ಫ್ರೇದರಿಕನು ಸಹಾ ಖಂಡಿತವಾಗಿ ಲುಥರನ ಪಕ್ಷದವನಾಗಿರದಿದ್ದರೂ, ಅವನ ಕಾರ್ಯವು ನ್ಯಾಯವಾದ್ದೆಂದು ತಿಳುಕೊಂಡು, ತಾನು ನೀತಿಭಾವವುಳ್ಳವನಾಗಿ, ಪೋಪನ ಅಪೇಕ್ಷೆಗೆ ಅನುಕೂಲವಾಗದೆ, ಈ ಕಾರ್ಯವನ್ನು ಜರ್ಮನಿಯಲ್ಲಿಯೆ ತೀರ್ಪು ಮಾಡಿಸ ಬೇಕೆಂದು ಪೋಪನ ಹತ್ತರ ಬೇಡಿ ಕೊಂಡನು.

ಹೀಗಾಗಿ ಪೋಪನು ತನ್ನ ರಾಯಭಾರಿಯಾದ ಔಗ್ಸ್‌ಬುರ್ಗದಲ್ಲಿದ್ದ ಅಧ್ಯಕ್ಷ ಮಂತ್ರಿ ಕಯತಾನನಿಗೆ ಸ್ವತಂತ್ರ ಕೊಟ್ಟು, ಈ ದ್ರೋಹಿ ಲುಥರನನ್ನು ತನ್ನ ಮುಂದೆ ಕರಿಸಿ, ಅವನನ್ನು ಸಮ ಮಾಡಲಿಕ್ಕೆ ಆಗುತ್ತದೊ ಎಂದು ನೋಡ ಬೇಕು; ಆಗದಿದ್ದ

ರೆ, ಅವನನ್ನು ಹಿಡಿಸಿ, ಬಾಧಕವಾಗದ ಹಾಗೆ ಮಾಡ ಬೇಕು. ಮತ್ತು ಅವನ ಕಡೆಯವರೆಲ್ಲರನ್ನು ಶಾಪಗ್ರಸ್ತರೆಂದು ಮಾಡ ಬೇಕು ಎಂದು ಅಪ್ಪಣೆ ಕೊಟ್ಟನು.

ಲುಥರನು ಔಗ್ಸ್ಬುರ್ಗ್‌ಕ್ಕೆ ಬರ ಬೇಕೆಂಬ ಅಪ್ಪಣೆ ಹೊಂದಿ, ಎಷ್ಟು ಬೇಡೆಂತ ಮಿತ್ರಾಬ್ಬರು ಹೇಳಿದರೂ, ಅಲ್ಲಿ ಹೋಗಲಿಕ್ಕೆ ನಿಶ್ಚೈಸಿದನು. ಅವನು ಹೇಳಿದ್ದೇನಂದರೆ: "ನಾನೇನು ಕಳಕೊಂಡೇನು? ನನ್ನ ಮನೆಯು ಕ್ರಮವಾಗಿಯದೆ. ಈ ಬಲಹೀನವಾದ ಬಿದ್ದೋಗುವ ಶರೀರ ಮಾತ್ರ ಉಳಿದದೆ. ಅವರು ಇದನ್ನು ತೆಗಿಯುವದಾದರೆ, ನನ್ನನ್ನು ಒಂದೆರಡು ಜೀವತಾಸುಗಳಿಗೆ ಬಡವನಾಗ ಮಾಡ್ಯಾರು, ಆದರೆ ನನ್ನ ಪ್ರಾಣವನ್ನು ಹಿಡುಕೊಳ್ಳಲಾರರು!" ಭೂಮಿಯಲ್ಲಿ ಸಂಚಾರಿಯಾಗಿ ಅವನು ಔಗ್ಸ್ಬುರ್ಗ್‌ಕ್ಕೆ ೫೪ ಹರದಾರಿ ದೂರ ಇರುವ ಪರ್ಯಂತ ಈ ಉದ್ದ ಮಾರ್ಗವನ್ನು ಕಾಲ್ನಡೆಯಾಗಿಯೆ ಹೋದನು, ಆದರೆ ಅಲ್ಲಿ ನಿತ್ರಾಣದ ದೆಶೆಯಿಂದ ಒಂದು ಗಾಡಿ ಮಾಡ ಬೇಕಾಯಿತು. ೭ನೆ ಅಕ್ಟೋಬರ ೧೫೧೮ರಲ್ಲು ಅವನು ಈ ಪೂರ್ವ ಘನವುಳ್ಳ ಪಟ್ಟಣಕ್ಕೆ ಬಂದು ಮುಟ್ಟಿದನು. ಅದು ಪುನಸ್ಥಾಪನೆಯ ಚರಿತ್ರದಲ್ಲಿ ಮತ್ತೆ ಅಧಿಕ ಪ್ರಖ್ಯಾತಿ ಪಟ್ಟಿತು.

ಲುಥರನು ಪೋಪನ ಕಡೆಯ ರಾಯಭಾರಿಯ ಸಂಮುಖಕ್ಕೆ ಬರ ಧೈರ್ಯ ಮಾಡ್ಯಾನೆಂದು ಯಾರೂ ನೆನಸಲಿಲ್ಲಾ; ಆದರೆ ಅಂಜಿಕೆ ಇಲ್ಲದೆಯೂ, ಭರವಸ ಧೈರ್ಯವುಳ್ಳ ಹೃದಯದಿಂದಲೂ, ಮೂರು ಸರ್ತಿ ಅವನ ಸಂದರ್ಶನ ಮಾಡಿದನು. ಕಯತಾನನು, ಅವನು ಪಾಷಂಡದ ವಾಕ್ಯಗಳನ್ನು ಅಬದ್ಧವೆಂದು ಒಪ್ಪಿ ಕೊಳ್ಳ ಬೇಕೆಂಬದಾಗಿ ಅಪ್ಪಣೆ ಕೊಟ್ಟನು. ಆದರೆ ಲುಥರನು ಪರಿಶುದ್ಧ ಬರಹದಿಂದ ಖಂಡಿಸಿ, ನನಗೆ ಬೇರೊಂದು ತೋರಿಸಿ ಕೊಟ್ಟ ಹೊರತು, ಅವುಗಳನ್ನು ಅಬದ್ಧವೆಂದು ಹೇಳಲಾರೆ ಹೇಳಲೊಲ್ಲೆ ಅಂದನು. ಕಯತಾನನು ಸಭೆಯ ಕರ್ತನಾಗಿರುವ ಪೋಪನು ಅದನ್ನು ಇಚ್ಛೈಸುವ ಕಾರಣ, ನೀನು ಅದನ್ನು ಮಾಡದೆ ಕಳಿಯದು; ಹಾಗೆ ಮಾಡದಿದ್ದರೆ, ಬಲಾತ್ಕರಿಸ ಬೇಕಾದೀತು ಅಂದನು. ಲುಥರನು ಅಬದ್ಧ ಕೇಳಿದ ಪೋಪನಿಂದ ಬದ್ಧ ಕೇಳ ತಕ್ಕ ಪೋಪನಿಗೆ ಬಿನ್ನಹ ಮಾಡಿದನು. ಕಯತಾನನು ಎಷ್ಟು ಪೇಚಾಡಿದರೂ, ಅವನ ಮನಸ್ಸು ತಿರುಗಿಸಲಿಕ್ಕೆ ಆಗದೆ ಹೋಗಿ, ಅವನನ್ನು ಕಡೆಯಲ್ಲಿ ಮಹಾ ಕೋಪದಿಂದ ಕಳುಹಿಸಿ ಬಿಟ್ಟನು. ಅವನು ಹೇಳಿದ್ದು "ಈ ಕಾಡು ಮೃಗದ ತಳ್ಳಿ ನನಗೆ ಬೇಡ; ಅವನ ತಲೆಯಲ್ಲಿ ಅಗಾಧ ಕಣ್ಣುಗಳೂ ವಿಪರೀತವಾದ ಆಲೋಚನೆಗಳೂ ಉಂಟು."

ಇತಾಲ್ಯರಾದ ಅವನ ಪ್ರತಿ ಪಕ್ಷದವರು ಲುಥರನ ಮೇಲೆ ಮಹಾ ಕೋಪದಿಂದ ತುಂಬಿದ್ದರೂ, ಅವನನ್ನು ಹ್ಯಾಗಾದರೂ ಸಮ ಮಾಡಿ, ಸಭೆಯಲ್ಲಿ ಉಂಟಾದ ಮಹಾ ಜ್ವಾಲೆಗಳನ್ನು ನಂದಿಸುವದಕ್ಕೆ ಅವನಿಗೆ ಏನೇನು ಆಶೆ ತೋರಿಸಿದರು. ಆದರೆ ಅದು ಸಹಾ ಎಲ್ಲಾ ನಿರರ್ಥಕವಾಯಿತು. "ಈ ಜರ್ಮನ್ ಹುಲಿಯು ಹಣ ನೋಡುವದಿಲ್ಲ, ಭಾರಿ ಉದ್ಯೋಗಗಳನ್ನು ನೋಡುವದಿಲ್ಲ" ಎಂದನ್ನ ಬೇಕಾಯಿತು.

ಆದರೆ ಅವನನ್ನು ಹ್ಯಾಗಾದರೂ ಕೊಲ್ಲ ಬೇಕೆಂದು ಹೊಂಚು ಕೊಂಡಿದ್ದಾರೆಂಬ ಸುದ್ದಿ ಉಂಟಾದ ಕಾರಣ, ಲುಥರನ ಸ್ನೇಹಿತರು ಅವನಿಗೆ ಔಗ್ಸ್‌ಬುರ್ಗದಿಂದ ಬೇಗ ಹೋಗ ಬೇಕೆಂದು ಅಂಕೆ ಮಾಡಿದರು. ರಾತ್ರಿಕಾಲದಲ್ಲಿ ಪಟ್ಟಣದ ಒಂದು ಸಣ್ಣ ಬಾಗಲು ತೆರದರು. ಹೊರಗೆ ಸಿದ್ಧವಾಗಿದ್ದ ಕುದುರೆಯ ಮೇಲೆ ಕೂತು ಕೊಂಡು ಸುಕ್ಷೇಮವಾಗಿ ಮನೆಗೆ ಬಂದನು.

ಔಗ್ಸ್‌ಬುರ್ಗದಲ್ಲಿ ಆದ ಸಂಗತಿಯನ್ನು ಕೇಳಿ, ೧೦ನೆ ಲೆಯೊ ಬಹಳ ಚಿಂತಾಕ್ರಾಂತನಾದನು. ಅವನು ಮರು ವರುಷ, ೧೫೧೯ನೆ ಜನವರಿಯಲ್ಲಿ ತನ್ನ ಆಪ್ತ ಕರಣೀಕನೂ, ಸಕ್ಸ ದೇಶಸ್ಥನೂ, ನಯನುಡಿಯ ಧೊರೆಯೂ ಆಗಿದ್ದ ಮಿಲ್ತಿಚ್ಚದ ಪ್ರಭುವಾಗಿರುವ ಕರ್ಲನನ್ನು ಜರ್ಮನಿ ದೇಶಕ್ಕೆ ಬರುವ ಗಂಡಾಂತರವನ್ನು ಸ್ತಬ್ಧ ಮಾಡುವದಕ್ಕೆ ಕಳುಹಿಸಿ ಕೊಟ್ಟನು. ಮಿಲ್ತಿಚ್ಚನು ಆಯಿಕೆಯ ಅರಸನಾದ ಫ್ರೇದರಿಕನಿಗೋಸ್ಕರ ಪೋಪನ ದಯೆಯ ವಿಶೇಷ ಗುರ್ತಾಗಿರುವ ಪ್ರಸಾದದ ಭಂಗಾರದ ಗುಲಾಬಿನ ಹೂವನ್ನು, ಅರಸನ ಹೃದಯ ಗೆಲ್ಲುವ ಬಗ್ಗೆ, ಸಂಗಡ ತಕ್ಕೊಂಡು ಬಂದನು. ಈ ವಿನಯವುಳ್ಳ ಧೊರೆಯು ಲುಥರನ ಹತ್ತರ ಬಹು ಶಾಂತತ್ವದಿಂದಲೂ ಸ್ನೇಹ ಭಾವದಿಂದಲೂ ಮಾತಾಡಿದನು. ಪಂಡಿತ ಧೊರೆಯು (ಅಂದರೆ ಲುಥರನು) ಯಥಾರ್ಥ ಮನಸ್ಸಿನಿಂದ ಈ ಕಾರ್ಯವನ್ನು ನಡಿಸಿದರೂ, ತಪ್ಪು ಮಾಡುವದು ಮನುಷ್ಯರ ಗುಣ; ಆದ್ದರಿಂದ ಹೇಳ ಕೂಡದ ಅನರ್ಥಕ್ಕೂ ಭೇದಕ್ಕೂ ಕಾರಣವಾಗ ಬಹುದಾದ ಈ ಕಾರ್ಯವನ್ನು ಅವನಿಗೂ ಸಭೆಗೂ ಶುಭವಾಗುವ ಹಾಗೆ ಸ್ನೇಹದಲ್ಲಿ ತೀರಿಸುವದು ಒಳ್ಳೆದೆಂದು ಹೇಳಿದನು. ಮಿಲ್ತಿಚ್ಚನ ಮಾತುಗಳಿಂದ ಲುಥರನು ತಕ್ಕಷ್ಟು ಪ್ರೇರೇಪಣೆಯಾಗಿ, ಪ್ರತಿ ಪಕ್ಷದವರು ಸುಮ್ಮನಿದ್ದರೆ, ತಾನು ಸಹಾ ಸುಮ್ಮನೆ ಇರುತ್ತೇನೆಂದು ಮಾತು ಕೊಟ್ಟನು. ಕಡೆಯಲ್ಲಿ ಸ್ನೇಹದಿಂದ ಒಬ್ಬರಿಗೊಬ್ಬರು ಮುದ್ದು ಕೊಟ್ಟು ಅಪ್ಪಣೆ ತಕ್ಕೊಂಡರು.

ಆದರೆ ಲುಥರನು ಆ ೯೫ ವಚನಗಳಿಂದ ಸಭೆಯ ಪೂರ್ಣವಾದ ಪುನರೂಪೀಕರಣಕ್ಕೆ ಆರಂಭ ಮಾಡುವದು ಅವಶ್ಯವಾಗಿತ್ತು. ಅದು ಪರಲೋಕದಲ್ಲಿರುವ ಕರ್ತನ ಚಿತ್ತವಾಗಿತ್ತು, ಮತ್ತು ಈ ದೈವಸಂಕಲ್ಪವನ್ನು

ಪರಿಪೂರ್ತಿ ಮಾಡುವದಕ್ಕೆ ಶತ್ರುಗಳೇ ಅನುಕೂಲವಾಗ ಬೇಕು. ಹ್ಯಾಗಂದರೆ, ಎಲ್ಲರೂ ಸಮಾಧಾನದಿಂದ ಇರ ಬೇಕೆಂದು ನೆನಸುತ್ತಿರುವಾಗ್ಯೆ, ಅದೇ ೧೫೧೯ನೆ ವರುಷದಲ್ಲಿಯೆ ಒಬ್ಬ ಬಲಾಢ್ಯ ಪ್ರತಿ ಕಕ್ಷಿಯು ಲುಥರನನ್ನು ಎರಡನೆ ಯುದ್ಧಕ್ಕೆ ಕರೆಸಿದನು.

ಇಂಗೊಲ್‌ಸ್ತದ ಸರ್ವಶಾಲೆಯ ಶಾಸ್ತ್ರಿಯೂ ಪ್ರತಿ ಕರಣೀಕನೂ, ಪೋಪನ ಕಡೆಯವರಲ್ಲೆಲ್ಲಾ ಪರಮ ವಿದ್ವಾಂಸನೂ ಆಗಿರುವ, ಪಂಡಿತ ಎಕ್ಕನು ಪಂಡಿತ ಕರ್ಲ್‌ಸ್ತತ್ತನನ್ನೂ ಲುಥರನನ್ನೂ ಪ್ರಕಟವಾದ ತರ್ಕಕ್ಕೆ ಲೈಪ್‌ಜಿಗಕ್ಕೆ ಬರ ಬೇಕೆಂದೂ, ಅಲ್ಲಿ ಮುಖ್ಯವಾಗಿ ಪೋಪನ ಸ್ವತಂತ್ರ್ಯಗಳ ವಿಷಯದಲ್ಲಿ ತರ್ಕ ಮಾಡ ಬೇಕೆಂದೂ ಅಪೇಕ್ಷಿಸಿದನು. ಲುಥರನು ತಿರಿಗಿ ಹೋರಾಡುವದಕ್ಕೂ, ಆ ಹೋರಾಟ ಪರಿಶುದ್ಧ ತಂದೆ ಎಂಬ ಪೋಪನ ವಿಷಯದಲ್ಲಿ ನಡಿಸುವದಕ್ಕೂ, ಅಂಜಿದನು; ಆದಾಗ್ಯೂ ತನ್ನ ಸರ್ವಶಾಲೆಯ ಮಾನದ ದೆಸೆಯಿಂದ ಸಹಾ ಅಂಥಾ ಕಾರ್ಯಕ್ಕೆ ಮೈ ಕಾಡ ದಿರಲಿಕ್ಕೆ ಆಗಲಿಲ್ಲಾ. ಆದರೆ ಇದರಿಂದ ಪೋಪನ ಸ್ವತಂತ್ರಗಳ ಸಂಗತಿಯನ್ನು ಕೂಲಂಕುಶವಾಗಿ ಆಲೋಚಿಸುವದು ಅವಶ್ಯವಾಯಿತು. ಮತ್ತು ಹಾಗೆಯೇ ಆಲೋಚಿಸುತ್ತಾ, ಪರಿಶುದ್ಧ ಬರಹವು ಆ ವಿಷಯದಲ್ಲಿ ಏನು ಹೇಳುತ್ತದೆ ಎಂತ ವಿಚಾರಿಸುತ್ತಾ ಇರಲು, ಪರಿಶುದ್ಧ ಬರಹದಿಂದ ಅದನ್ನು ಪ್ರಮಾಣಿಸಿ ಸ್ಥಿರ ಪಡಿಸುವದಕ್ಕೆ ಆಗುವದಿಲ್ಲವೆಂಬದು ಅವನಿಗೆ ಹೃತ್ಪಚಿತವಾಯಿತು.

ಲೈಪ್‌ಜಿಕದಲ್ಲಿ ಅನೇಕ ವಿದ್ವಾಂಸರೂ ಕೆಲವು ಅರಸುಗಳೂ ಅನೇಕಾನೇಕ ಜನರೂ ನೆರೆ ಕೂಡಿ ಬಂದ ಸಭೆಯಲ್ಲಿ ಈ ತರ್ಕವು ಹದಿನಾಲ್ಕು ದಿನ ಪರಿಯಂತ ನಡಿಯಿತು. ಎಕ್ಕನು ಪೋಪನ ಪೂರ್ಣ ಮಹಿಮೆಯನ್ನು ಸಾಧಿಸ ನೋಡಿ, ಪೋಪನು ಭೂಮಿಯಲ್ಲಿ ಕ್ರಿಸ್ತನ ಪ್ರತಿನಿಧಿಯಾಗಿಯೂ, ಆತನ ಪೂರ್ಣ ಅಧಿಕಾರವನ್ನು ಹೊಂದಿದವನಾಗಿಯೂ, ಇದ್ದಾನೆಂತ ಹೇಳಿದನು. ಲುಥರನು ಅದಕ್ಕೆ ಪ್ರತಿಯಾಗಿ, ಪೋಪನು ಈ ಅಧಿಕಾರವನ್ನು ದೇವರಿಂದಲ್ಲ, ಮನುಷ್ಯರಿಂದ ಹೊಂದಿದ್ದಾನೆಂತಲೂ, ದಿವ್ಯ ವಾಕ್ಯದ ಬೋಧನೆಯಿಂದ ಅದನ್ನು ಸಂಕೋಚ ಮಾಡ ಬೇಕೆಂತಲೂ, ಕ್ರಿಸ್ತನೊಬ್ಬನೆ ಸಭೆಯ ತಲೆಯೆಂದೆಣಿಸ ಬೇಕೆಂತಲೂ ಹೇಳಿದನು. ಇದನ್ನು ಲುಥರನು ದೇವರ ವಾಕ್ಯದಿಂದ ಮಾತ್ರವಲ್ಲ (೧ ಕೊರಿ. ೩, ೧೧. ೧೨. ಗಲ. ೧, ೧೭. ೨, ೬ ೩.), ಸಭಾಪಿತೃಗಳ ಪುಸ್ತಕಗಳಿಂದಲೂ ಸಭಾಚರಿತ್ರದಿಂದಲೂ ಸ್ಥಿರ ಪಡಿಸುವದಕ್ಕೆ ಶಕ್ತನಾಗಿದ್ದನು. ಆ ಕಾಲವನ್ನು ಮತ್ತೆ ಆಲೋಚಿಸುವಾಗ್ಯೆ, ತಾನು ಅಧಿಕ ಖಂಡಿತವಾಗಿ ಮಾತಾಡ ಬೇಕಿತ್ತು, ಪೋಪನ ಆಡಳತೆ ಎಲ್ಲಾ ಬರೇ ಸುಳ್ಳಾಗಿಯೂ ಸೈತಾನವತ್ತಾಗಿರುವ ಮೋಸವಾಗಿಯೂ ಇರುತ್ತದೆಂದು ಹೇಳ

ಬೇಕೆಂತ ಲುಥರನು ಅನ್ನುವನು. ಆದಾಗ್ಯೂ ಆ ಸರ್ತಿ ಸಹಾ ಅವನು ಅನೇಕ ಧೈರ್ಯದ ಒಳ್ಳೇ ಮಾತುಗಳನ್ನು ಹೇಳಿದನು; ಹಾಗೆಯೆ, ಪ್ರತಿಕಕ್ಷಿಯು ಕೆಲವು ಮಾತುಗಳ ಅರ್ಥ ಸಮವಾಗಿ ಮಾಡದೆ (ಉದಾಹ. ಮತ್ತಾ ೧೬, ೧೮.) ತಿಳಿಯದೆ ಮಾತಾಡಿದಾಗ, ಲುಥರನು ಹೇಳಿದ್ದೇನಂದರೆ: “ಯಾರು ಪರಿಶುದ್ಧ ಬರಹವನ್ನು ಪ್ರಯೋಗಿಸುತ್ತೇವೆಂದು ಹೊಗಳಿ ಕೊಂಡರೂ, ಅದನ್ನು ಬರಹದ ಸ್ವಂತ ಅರ್ಥವಲ್ಲಿ ಅಲ್ಲಾ, ಮನುಷ್ಯರ ಆಲೋಚನೆಯ ಪ್ರಕಾರ ಗ್ರಹಿಸಿ, ಬರೇ ಮನುಷ್ಯರ ಹರಟೆಯಾಗಿ ಮಾಡುತ್ತಾರೋ, ಅವರನ್ನು ಹಳಿಯತಕ್ಕದ್ದು. ಈ ವಾದ್ಯಕ್ಕೆ ನಾನು ಕುಣಿಯಲೊಲ್ಲೆ, ಇನ್ನೂ ಮುಂದೆ ಸಹಾ ಕುಣಿಯಲಿಕ್ಕಿಲ್ಲಾ. ನಾನು ಮನುಷ್ಯರ ಆಲೋಚನೆಯ ಆಧಾರದಿಂದ ಪರಿಶುದ್ಧ ಬರಹವನ್ನಲ್ಲ, ಬರಹದ ಆಲೋಚನೆಯ ಆಧಾರದಿಂದ ಸರ್ವ ಮನುಷ್ಯರ ಗ್ರಂಥಗಳನ್ನೂ ಮಾತುಗಳನ್ನೂ ಕ್ರಿಯೆಗಳನ್ನೂ ವಿಚಾರಿಸ ಇಚ್ಛೈಸುತ್ತೇನೆ”

ಬೇರೆ ಕೆಲವು ಸಂಗತಿಗಳ ಪ್ರಶಂಸೆ ಸಹಾ, ಹಾಗೆ ಪಾತಾಳಾಗ್ನಿಯ ಪ್ರಶಂಸೆ ಆಯಿತು. ಆ ಕಾಲದಲ್ಲಿ ಲುಥರನಿಗೆ ಈ ವಿಷಯದಲ್ಲಿ ಸಾಕಷ್ಟು ತಿಳಿವಿಕೆ ಇರದಿದ್ದ ಕಾರಣ, ಸ್ಪಷ್ಟವಾಗಿ ಮಾತಾಡಲಿಕ್ಕೆ ಶಕ್ತನಾಗಿರಲಿಲ್ಲಾ. ಹ್ಯಾಗೆಂದರೆ ಲುಥರನು ಸಹ, ಪೂರ್ಣ ಸತ್ಯ ಬೋಧನೆಯನ್ನು ಒಂದೇ ಸರ್ತಿ ಅಲ್ಲ, ಮೆಲ್ಲ ಮೆಲ್ಲನೆ ಗ್ರಹಿಸಿದನೆಂಬ ಮಾತು ಮರೆಯ ಬಾರದು.

ಆದಾಗ್ಯೂ ಎಕ್ಕನು, ಬಲದಲ್ಲಿ ಕಡಿಮೆ ಆಗಿರುವ ಕರ್ಲ್ಸ್ತತ್ತನ ಸಂಗಡ ಸಹಾ ತರ್ಕಿಸಿದ ಕಾರಣ, ಉಭಯ ಪಕ್ಷದವರು ತಮಗೆ ಜಯವಾಯಿತೆಂತ ನೆನಸಿದರು. ಆದಾಗ್ಯೂ ಲುಥರನ ಪ್ರಬಲತ್ವವು ಪ್ರಧಾನಕಾರ್ಯದಲ್ಲಿ ಚನ್ನಾಗಿ ಪ್ರಕಟವಾಗಿತ್ತು; ಅವನು ವಿದ್ವಾಂಸತನದಿಂದಲೂ ದಿವ್ಯವಾಕ್ಯದಲ್ಲಿ ಸ್ಥಿರವಾಗಿ ಆಧಾರ ತಕ್ಕೊಂಡದರಿಂದಲೂ, ಅಧಿಕರು ಅವನಿಗೆ ಮೆಚ್ಚಿದರು; ಮುಂಚೆ ಚಂಚಲವಾಗಿರುವವರು ಅನೇಕರು ಅವನ ಪಕ್ಷದವರಾದರು, ಅವನ ಶತ್ರುಗಳು ಕೆಲವರು ಸಹಾ ಅವನ ವಿಷಯದಲ್ಲಿ ಅತಿ ಖಂಡಿತವಾಗಿ ತೀರ್ಪು ಮಾಡುವದನ್ನು ಬಿಟ್ಟರು. ಇದಲ್ಲದೆ ಈ ತರ್ಕದಿಂದ ಪುನಸ್ಥಾಪನೆಗುಂಟಾದ ಮುಖ್ಯ ಆಶೀರ್ವಾದವು ಲುಥರನಿಗೆ ಸ್ವಂತ ಪ್ರಾಪ್ತವಾಯಿತು. ಹ್ಯಾಗೆಂದರೆ, ಅವನು ಪೋಪನ ವಿಷಯದಲ್ಲಿ ಮಾಡಿದ ಆಲೋಚನೆಯು ಅವನಲ್ಲಿ ಅಧಿಕ ಸ್ಥಿರವಾಯಿತು, ಭದ್ರವಾಯಿತು. ಹೀಗಾಗಲಾಗಿ, ಅಂದಿನಿಂದ ಅವನು, ಪೋಪನು ಆರೋಪಿಸಿ ಕೊಂಡ ಅಧಿಕಾರವನ್ನೂ, ಮಹತ್ವವನ್ನೂ, ಇವುಗಳ ಸಂಗಡ ರೋಮೀಯ ಸಭೆಯ ಹೃದಯವನ್ನೆ ನಿರ್ಭಯವಾಗಿಯೂ ಅಂಜದೆಯೂ ಸೀಳಿ ಬಿಡುವದಕ್ಕೆ ನೋಡಿದನು. ಇದಲ್ಲದೆ ಅಲ್ಲಿ ಪ್ರಸ್ತಾಪಿಸಿದ ಬೇರೆ ವಿಷಯಗಳಿಂ

ದಲೂ ಕೇಳಿಕಿದವನಾಗಿ, ಅವುಗಳನ್ನೂ ರೋಮಿಾಯ ಸಭೆಯ ಸಮಸ್ತ ಬೋಧನೆಗಳನ್ನೂ ವಿಚಾರಿಸ ತೊಡಗಿದನು. ಆಗ್ಯೆ, ಎಷ್ಟೋ ಅಬದ್ಧ ಬೋಧನೆಯು ಒಳ ಶೇರಿಯದೆಯಂತ ಆಶ್ಚರ್ಯ ಪಟ್ಟನು; ಈ ಪ್ರಕಾರ ದೇವರು ಪೂರ್ತಿ ಮಾಡುವದಕ್ಕೆ ತನಗೆ ಒಪ್ಪಿಸಿದ ಮಹಾ ಕಾರ್ಯವು ಅವನ ಮನೋದೃಷ್ಟಿಗೆ ಮೆಲ್ಲ ಮೆಲ್ಲ ಪ್ರಕಟವಾಯಿತು. ಲೈಪ್ಜಿಕದ ದಿನಗಳ ತರುವಾಯ ಅವನು "ಆಹಾ ನವೀಕರಣಕ್ಕೆ ಮೊದಲನೆ ಆರಂಭ ಮಾತ್ರವೆ ಮಾಡಿಯದೆ ಎಂತ ನಂಬುತ್ತೇನೆ" ಅನ್ನುವನು.

ಎಕ್ಕನು ಮಹಾ ಕೋಪದಿಂದ ರೋಮಕ್ಕೆ ಹೋಗಿ, ಲುಥರನ ಮೇಲೆ ಬಹಳ ದೂರು ಹೇಳಿ, ಮರು ವರುಷ ೧೫೨೦ಲ್ಲು ಲುಥರನ ಮೇಲೆ ಶಾಪರಾಯಸವನ್ನು ತಕ್ಕೊಂಡು ಬಂದು, ಅದನ್ನು ಜರ್ಮನಿಯಲ್ಲೆಲ್ಲಾ ಮಹಾ ಪ್ರಯತ್ನದಿಂದ ಪ್ರಕಟ ಮಾಡಿದನು. ಅದರಲ್ಲಿ ಏನು ಹೇಳಿ ಇತ್ತೆಂದರೆ: ಲುಥರನು ಆರವತ್ತು ದಿನಗಳೊಳಗೆ ತನ್ನ ಬೋಧನೆಯನ್ನು ಹಿಂದೆಳಿಯದಿದ್ದರೆ, ಎಲ್ಲಾ ಸಭಾಲಯಗಳಲ್ಲಿ ಘಂಟಾನಾದದಿಂದ ಬತ್ತಿಗಳನ್ನು ಹಚ್ಚಿ, ಅವುಗಳನ್ನು ತಕ್ಷಣ ನಂದಿಸಿ, ನೆಲಕ್ಕೆ ಬಡದು, ಕಾಲಿನಿಂದ ತುಳಿದು, ಈ ಪ್ರಕಾರ ಲುಥರನು ಪಾಷಂಡಿ ಎಂದೂ, ಅವನು ಸಭೆಯ ಸಂಸರ್ಗದಿಂದ ಹೊರಗೆ ಹಾಕಲ್ಪಟ್ಟವನಾಗಿ, ಉದ್ಯೋಗ, ಆಸ್ತಿ, ಮಾನ, ಜೀವಗಳಿಗೆ ಅಪಾತ್ರನೆಂದೂ, ಶೀಘ್ರವಾಯಿತೆಂಬದಾಗಿ ತಿಳಿಸ ಬೇಕು. ಆದರೆ ಈ ರಾಯಸದಿಂದ ಏನೂ ಫಲ ಬರಲಿಲ್ಲಾ; ಹ್ಯಾಗೆಂದರೆ, ಲುಥರನು ತನ್ನಕೃದಲ್ಲಿ ಸಣ್ಣ ಸಣ್ಣ ಗ್ರಂಥಗಳಿಂದ ಕ್ರೈಸ್ತ ಜನಾಂಗಕ್ಕೆ ಸಾಕಷ್ಟು ಬೋಧನೆ ಕಾಟ್ಟಿದ್ದನು. ಕೆಲವು ಕಡೆಯಲ್ಲಿ ರಾಯಸವನ್ನು ತಕ್ಕೊಳ್ಳಲೇ ಇಲ್ಲಾ, ಕೆಲವು ಕಡೆಯಲ್ಲಿ ಅದನ್ನು ಜನರು ನಿಂದಿಸಿದರು, ಕೆಲವು ಕಡೆಯಲ್ಲಿ ಅಲಕ್ಷ ಮಾಡಿದರು.

ಲುಥರನು ಏನೂ ಭಯ ಪಡದೆ, ಸ್ವಾತಂತ್ರಿಕವಾದ ಕ್ರೈಸ್ತ ಆಲೋಚನಾಸಭೆಗೆ ಈ ಕಾರ್ಯವನ್ನು ಒಪ್ಪಿಸುತ್ತೇನೆ ಅಂದನು. ಹಾಗಂದರೆ, ನ್ಯಾಯವಾದ ಸಭೆಯವರ ಕೂಟವು ಕೂಡಿ ಬಂದು, ಪೋಪನಿಗಾಗಲಿ ಬೇರೆ ಯಾವ ಅಧಿಕಾರಿಗಾಗಲಿ ಅಂಜದೆ, ಕ್ರಿಸ್ತನ ವಾಕ್ಯದಿಂದಲೆ ತನ್ನ ಕಾರ್ಯವನ್ನು ನಿಶ್ಚೈಸ ಬೇಕೆಂದು ಹೇಳಿದನು. ಇದಾದ ಮೇಲೆ, ಲುಥರನು ರಾಯಸಕ್ಕೆ ಎದುರಾಗಿ ಎರಡು ಗ್ರಂಥಗಳನ್ನು ಬರದು, ರಾಯಸದ ತಾತ್ಪರ್ಯವು ಕ್ರೈಸ್ತ ಧರ್ಮಕ್ಕೆ ಪ್ರತಿಕೂಲವಾಗಿರುತ್ತದೆಂತ ತೋರಿಸಿ, ತನ್ನನ್ನು, ಅಂದರೆ, ಲುಥರನನ್ನು ಅಲ್ಲಾ, ದೇವರ ಪರಿಶುದ್ಧನಾದ ಕ್ರಿಸ್ತನನ್ನೆ ಆ ರಾಯಸದಿಂದ ಜರದು ನಿರ್ಣೈಸಿದ ಹಾಗಾಯಿತು ಎಂದು ಕಾಣಿಸಿದನು.

ಅದೇ ೧೫೨೦ನೆ ವರುಷದಲ್ಲಿ ಅವನು ಬೇರೆ ಮೂರು ಮುಖ್ಯ ಗ್ರಂಥಗಳನ್ನು ಪ್ರಕಟ ಮಾಡಿದನು. ಯಾವವೆಂದರೆ:

"ಜರ್ಮನಿ ಜನಾಂಗದ ಶ್ರೀಮಂತರಿಗೆ: ಪಾರಮಾರ್ಥಿಕ ಆಶ್ರಮದ ತಿದ್ದುಪಾಟಿಯ ವಿಷಯ" —

"ಸಭೆಯ ಬಬಿಲೋನಿನ ಬಂಧನದ ವಿಷಯ" —

"ಕ್ರೈಸ್ತ ಮನುಷ್ಯನ ಸ್ವತಂತ್ರದ ವಿಷಯ" —

ಇವುಗಳ ತಾತ್ಪರ್ಯವು ಗ್ರಂಥಸೂಚನೆಯಿಂದಲೆ ಸ್ಪಷ್ಟವಾಗಿ ತಿಳಿಯ ಬರುತ್ತದೆ. ಈ ಪ್ರಕಾರ ಲುಥರನು ಅಧಿಕ ಖಂಡಿತವಾಗಿಯೂ ಧೈರ್ಯವಾಗಿಯೂ ಬಲವಾಗಿಯೂ ಈ ಕಾರ್ಯವನ್ನು ಸಾಧಿಸ ನೋಡಿದನು.

ತನ್ಮಧ್ಯ, ಪೋಪನು ಲುಥರನ ಗ್ರಂಥಗಳನ್ನು ಸಮಸ್ತರ ಮುಂದೆ ಸುಟ್ಟು ಬಿಡ ಬೇಕೆಂದು ಅಪ್ಪಣೆ ಕೊಟ್ಟ ಪ್ರಕಾರ, ಅಲ್ಲಲ್ಲಿರುವ ಯಾಜಕರು ರೋಮದಲ್ಲಿಯೂ, ಲಿಯೋನಿನಲ್ಲಿಯೂ, ಕೆಲ್ನದಲ್ಲಿಯೂ, ವ್ಯೆಂಚದಲ್ಲಿಯೂ, ಬೇರೆ ಪಟ್ಟಣಗಳಲ್ಲಿಯೂ ಮಾಡಿದ್ದರು. ಆಗ್ಯೆ ಲುಥರನು ಸಹಾ ಮಾಡಿದ ಒಂದು ಕಾರ್ಯದಿಂದ "ಪೂರ್ಣವಾಗಿಯೂ ಸರ್ವ ಕಾಲಕ್ಕೂ ಪೋಪನಿಂದ ಇಜ್ಜೋಡಾದನು" ಏನೆಂದರೆ, ಅವನು ೧೫೨೦ನೆ ದಶಂಬರ ೧೦ಲ್ಲು ವಿತ್ತೆನ್‌ಬೆರ್ಗದ ಸರ್ವಶಾಲೆಯವರನ್ನು ಎಲ್ಸ್ತರ್ ಎಂಬ ಹೆಬ್ಬಾಗಲಿಗೆ ಕರಿಸಿದನು. ವಿದ್ಯಾರ್ಥಿಗಳೆಲ್ಲಾ ನೆರೆಕೂಡಿ ಬಂದರು. ಆಗ್ಯೆ ಒಂದು ಕಟ್ಟಿಗೆಯ ಚಿತಿಯನ್ನು ಮಾಡಿ, ಒಬ್ಬನು ಬೆಂಕಿ ಹಚ್ಚಿದನು. ಈ ರಾಶಿಯು ಚನ್ನಾಗಿ ಉರಿಯುವಾಗ್ಯೆ, ಲುಥರನು ಪೋಪನ ಶಾಪರಾಯಸವನ್ನೂ ಸಭಾನಿಯಮನ್ನೂ ತಕ್ಕೊಂಡು, "ನೀನು ದೇವರ ಪರಿಶುದ್ಧನನ್ನು ದುಃಖಿಸಿದ ಕಾರಣ, ನಿತ್ಯಬೆಂಕಿಯು ನಿನ್ನನ್ನು ದುಃಖಿಸಿ, ನುಂಗಿ ಬಿಡಲಿ"! (ಯಹೋಷು. ೭, ೨೫.) ಎಂದು ಹೇಳಿ, ಬೆಂಕಿಯಲ್ಲಿ ಬಿಸಾಡಿದನು; ಆಗ್ಯೆ ಸಮಸ್ತರು ಹರ್ಷದಿಂದ ಆರ್ಭಟಿಸಿದರು.

ರಾಯಸಕ್ಕೂ ಸಭಾನಿಯಮಕ್ಕೂ ಇದಾದ್ದು ನ್ಯಾಯ. ಹ್ಯಾಗೆಂದರೆ ಪೋಪನ ಸಭಾನಿಯಮದಲ್ಲಿ ಕೆಳಗೆ ಬರುವಂಥಾ ವಾಕ್ಯಗಳು ಇದ್ದವು: "ಪೋಪನೂ ಪೋಪನ ಕಡೆಯವರೂ ದೇವರ ಕಟ್ಟಳೆಗಳಿಗೆ ಒಳಗಾಗಿ ವಿಧೇಯವಾಗುವ ಹಂಗಿನಲ್ಲಿರುವದಿಲ್ಲಾ" — "ಪೋಪನು ಅಸಂಖ್ಯಾತವಾದ ಮನುಷ್ಯರನ್ನು ಸಮೂಹ ಸಮೂಹಗಳಾಗಿ ಸೈತಾನನ ಕಡೆಗೆ ನಡಿಸುವಷ್ಟು ಕೆಟ್ಟವನಾಗಿದ್ದರೂ, ಅವನನ್ನು ಯಾರೂ ಶಿಕ್ಷಿಸಲಾಗದು" ಇತ್ಯಾದಿ. — ಆದಾಗ್ಯೂ ಲುಥರನು ಮಾಡಿದ್ದು ಅತಿ ಅಸಾಧಾರಣವಾಗಿತ್ತು. ಮತ್ತು ಅದರ ಬಾಬ್ತೆಯು ಜರ್ಮನಿ, ಇತಲಿ ಮುಂತಾದ ಅನೇಕ ಕ್ರೈಸ್ತ

ದೇಶಗಳಲ್ಲಿ ತುಂಬಿ ಹೋಯಿತು. ಆದರೆ ಒಟ್ಟಾರೆ, ಎಲ್ಲಾ ಕಡೆಯಲ್ಲಿಯೂ ಮುಖ್ಯವಾಗಿ ಅರಮನೆಗಳಲ್ಲಿಯೂ ಈ ಕಾರ್ಯಕ್ಕೆ ಸಮ್ಮತಿ ಪಟ್ಟರು. "ಹ್ಯಾಗೆಂದರೆ, ಇಷ್ಟು ವರೆಗೆ ಮಹಾರಾಜನೂ ಯುದ್ಧ ಸೈನ್ಯಗಳೂ ಅನೇಕ ಕ್ರೈಸ್ತರ ರಕ್ತಪ್ರವಾಹದಿಂದ ಸಹಾ ಸಾಧಿಸಲಿಕ್ಕೆ ಆಗದೆ ಹೋದರೂ, ಇದರಿಂದ ಈಗ ಪೋಪನ ಅಧಿಕಾರಕ್ಕೆ ತಕ್ಕ ಮೇರೆಗಳನ್ನು ಕಟ್ಟುವದಕ್ಕೆ ಆದೀತೆಂಬದನ್ನು ಮೆಲ್ಲ ಮೆಲ್ಲ ಹಾರೈಸ ತೊಡಗಿದರು."

ಲುಥರನು ಶಾಪಗ್ರಸ್ತನೂ ಚಿನ್ನಾಛ್ನರೂಪವಾಗಿ ನಾಂದಿಸಲ್ಪಟ್ಟವನೂ ಆಗಿದ್ದರೂ, ಅವನನ್ನು ದಿನ ಹೋಗುತ್ತಾ ಮಿಗಿಮಿಗಿಲಾಗಿ ಸನ್ಮಾನಿಸುತ್ತಿರುವ ಆಯಿಕೆಯ ಅರಸನ ಆಶ್ರಯದಲ್ಲಿ ವಿತ್ತೆನ್‌ಬೆರ್ಗದಲ್ಲಿ ಸಮಾಧಾನವಾಗಿಯೂ ಸಂತೋಷವಾಗಿಯೂ ಅಧಿಕಾಧಿಕ ಪ್ರಕಾಶಮಾನವಾಗುವ ಬೆಳಕಿನಿಂದ ಬೆಳಗುತ್ತಾ ಬಾಳಿದನು. ಮತ್ತು ಅದೇ ವರುಷಗಳಲ್ಲಿ, (೧೫೧೯—೧೫೨೦) ಅವನ ಕಾರ್ಯವನ್ನು ನಿರ್ಮೂಲ ಮಾಡುವದಕ್ಕೆ ಪೋಪನವರು ಶತ ಪ್ರಯತ್ನ ಮಾಡುತ್ತಿರುವಾಗಲೆ, ಮೊದಲನೆ ಮಕ್ಸಿಮಿಲಿಯಾನನು ಮೃತವಾಗಿ, ಜರ್ಮನಿ ಮಹಾರಾಜಸಿಂಹಾಸನವು ಪತಿರಹಿತವಾಗಲಾಗಿ, ಬುದ್ಧಿವಂತನೆಂಬ ಫ್ರೇದರಿಕನು ಮಹಾರಾಜಪ್ರತಿನಿಧಿಯಾಗಿ ನೇಮಕವಾದ ಕಾರಣ, ಪುನಸ್ಥಾಪನೆಯ ಕಾರ್ಯವು ಎಡತಡೆ ಇಲ್ಲದೆ, ನಿರಾತಂಕವಾಗಿ ಹಬ್ಬಿ, ಪ್ರಬಲವಾಗಲಿಕ್ಕೆ ಉಪಾಯವಾಯಿತು.

§ ೫.

# ಧೀರ ಸಾಕ್ಷಿ

ಆಯಿಕೆಯ ಮತ್ತು ಆಯುತ ಅರಸುಗಳು ಬುದ್ಧಿವಂತನೆಂಬ ಫ್ರೇದರಿಕನಿಗೆ ಪರಮ ಯೋಗ್ಯನೆಂಬದಾಗಿ, ಮಹಾರಾಜಕಿರೀಟವನ್ನೆ ಒಪ್ಪಿಸ ಇಚ್ಛೈಸಿದರು. ಆದರೆ ಅವನು ದೀನಮನಸಿನಿಂದ ಅಂಗೀಕರಿಸದೆ, ಮಹಾ ಭಯಂಕರನಾದ ಜನ್ಮಶತ್ರುವಾದ ತುರ್ಕನ ದೆಸೆಯಿಂದ, ಅಧಿಕ ಬಲವುಳ್ಳ ಮಹಾರಾಜನು ಬೇಕಾಗಿರುತ್ತಾನೆ ಎಂದು ಹೇಳಿದನು. ಈ ಪ್ರಕಾರ ಅವನ ಮನೋಗತಕ್ಕೆ ಅನುಸಾರವಾಗಿ, ಆ ಕಾಲದಲ್ಲಿ ಪರಮ ಬಲಾಢ್ಯ ಭೂಪತಿಯಾದ, ಹಿಸ್ಪನ್ಯ ನೆಯಾಪಲ ಹಾಲ್ಲ

ದೇಶಗಳ ಅರಸನಾದ ಕರ್ಲನನ್ನು ಜರ್ಮನ ಮಹಾರಾಜನಾಗಿ ಆಯ್ದು ಕೊಂಡು, ೧೫೨೦ನೆ ಅಕ್ಟೋಬರ ೨೦ಲ್ಲ ಆಖಿನ್ ಪಟ್ಟಣದಲ್ಲಿ ಅಭಿಷೇಕಿಸಿ, ಕಿರೀಟ ಕೊಟ್ಟರು.

ಕರ್ಲನೆಂಬ ಹೆಸರಿನ ಐದನೆಯವನಾದ ಈ ಮಹಾರಾಜನನ್ನು ಪೋಪನ ನಿಯೋಗಿಗಳು ಬಹಳವಾಗಿ ಬೇಡಿ ಕೊಂಡು, ತಪ್ಪು ಕೂಡದ ರೋಮದ ಪರಿಶುದ್ಧ ಆಸನವು ನ್ಯಾಯ ತೀರಿಸಿದ ಲುಥರನ ಬೋಧನೆಯನ್ನು ಬಲಾತ್ಕಾರದಿಂದ ಒತ್ತಿ ನಿರ್ಮೂಲ ಮಾಡ ಬೇಕೆಂದು ಹೇಳಿದರು. ಆದರೆ ಅವನು ತನ್ನ ಅಧಿಕಾರದ ಆರಂಭದಲ್ಲಿಯೆ ಜರ್ಮನರ ಮನ ನೋಂದಿಸ ಮನಸಿಲ್ಲದವನಾಗಿ, ತಾನು ೧೫೨೧ಲ್ಲ ಒರ್ಮ್ಸ್ ಪಟ್ಟಣದಲ್ಲಿ ನೆರವೇರಿಸಲಿಕ್ಕಿದ್ದ ಮಹಾರಾಜಸಭೆಯಲ್ಲಿ ಆ ಪಾಷಂಡಿಯನ್ನು ಕಿವಿಯಿಂದ ಕೇಳಿ, ಮುಖಾಮುಖಿಯಾಗಿ ವಿಚಾರಿಸುವದಕ್ಕೆ ನಿಶ್ಚೈಸಿದನು. ಈ ಪ್ರಕಾರ ಲುಥರನಿಗೆ ಅಲ್ಲಿಗೆ ಬರುವದಕ್ಕೆ ರಾಯಸ ಬಂತು. ಅವನು, ಸಂತೋಷದಿಂದ ಬರುತ್ತೇನೆಂತಲೂ, ತಾನು ಬರದದ್ದೂ ಬೋಧಿಸಿದ್ದೂ ಮನಸ್ಸಾಕ್ಷಿ ಪುರಸ್ಸರವಾಗಿಯೂ ಪರಿಶುದ್ಧ ಬರಹದ ಪಂಡಿತನಾಗುವದಕ್ಕೆ ಮಾಡಿದ ಪ್ರಮಾಣಕ್ಕೆ ಅನುಸಾರವಾಗಿಯೂ, ದೇವರ ಸ್ತೋತ್ರಕ್ಕೂ ಸಭೆಯ ಕ್ಷೇಮಲಾಭಕ್ಕೂ ಆಸ್ಪದವಾಗುವ ಹಾಗೆ, ಮಾಡಿದ್ದೇನೆಂತ ತೋರಿಸ ಬಹುದೆಂಬ ಹಾರೈಕೆಯಲ್ಲಿ ಇದ್ದೇನೆಂಬದಾಗಿ, ಬಿನ್ನೈಸಿ ಕೊಂಡನು. ಆಯಿಕೆಯ ಅರಸನು ಲುಥರನಿಗೆ ಕಂಟಕವಿಲ್ಲದ ಅಂಗರಕ್ಷಣೆಯ ರೋಣುವೆಯವರನ್ನು ದಯಪಾಲಿಸುವ ಹಾಗೆ ಮಾಡಿಸಿದನು. ಲುಥರನು ಆ ಕಾಲದಲ್ಲಿ ಅಸ್ತಿಜ್ವರದಿಂದ ನಿತ್ರಾಣನಾಗಿದ್ದರೂ ಪ್ರಯಾಣಕ್ಕೆ ಹೊರಟನು. ಅವನ ಒಳ್ಳೇ ಸ್ನೇಹಿತರು ಅವನನ್ನು ಬೆದರಿಸಿ, ಅವನನ್ನು ತಡೆಯ ಪ್ರಯತ್ನ ಮಾಡಿದರು. ನೂರು ವರುಷದ ಹಿಂದೆ ಭದ್ರವಾದ ಅಂಗರಕ್ಷಣೆಯ ಕಾವಲಿ ಇದ್ದರೂ, ಖೊಸ್ತನಿಚ್ಚದಲ್ಲಿ ಸುಟ್ಟು ಬಿಟ್ಟ ಹುಸ್ಸನ ಸಂಗತಿಯನ್ನು ಹೇಳಿದರು. ಆದರೆ ಲುಥರನು, "ನನ್ನ ಶತ್ರುಗಳು ವಿತ್ತೆನ್‌ಬೆರ್ಗಕ್ಕೂ ಒರ್ಮ್ಸಕ್ಕೂ ಮಧ್ಯದಲ್ಲಿ ಭೂಮಿಯಿಂದ ಆಕಾಶ ಪರ್ಯಂತಕ್ಕೆ ಮುಟ್ಟುವ ಬೆಂಕಿಯನ್ನು ಮಾಡಿದರೂ, ನನಗಾಜ್ಞೆಯಾಗಿರುವ ಕಾರಣ, ಕರ್ತನ ಹೆಸರಿನಲ್ಲಿ ಹಾಜರಾಗಿ, ಬೆಹೆಮೋಥನ ಬಾಯೊಳಗೂ ದಾಡೆಯೊಳಗೂ ನುಗ್ಗಿ, ಕ್ರಿಸ್ತನನ್ನು ಅರಿಕೆ ಮಾಡಿ, ಆತನನ್ನೆ ಎಲ್ಲಾ ನಡಿಸ ಗೊಡಿಸುವೆನು," ಎಂದು ಹೇಳಿದನು. ಈ ಮಾತಿನಿಂದ ಲುಥರನು ಬರೇ ಮನುಷ್ಯ ರೀತಿಯಾಗಿ ದುಡುಕಲಿಲ್ಲಾ; ದೇವರಲ್ಲಿಯೂ ಆತನ ಕಾರ್ಯದ ಸತ್ಯದಲ್ಲಿಯೂ ಇಟ್ಟ ಮಹಾ ಭರವಸದಲ್ಲಿ ಪರಿಶುದ್ಧಾತ್ಮದಿಂದ ಉಂಟಾದ ಸಾಕ್ಷಿಯ ಧೈರ್ಯವಾಗಿತ್ತು.

ಅವನು ಮತ್ತೆ ತನ್ನ ಸ್ನೇಹಿತನಾದ ಮೆಲಂಥೋನನಿಂದ ಬೀಳ್ಕೊಂಡಾಗ, ಹೇಳಿದ್ದೇನಂದರೆ: "ನಾನು ತಿರಿಗಿ ಬಾರದಿದ್ದರೆ, ಈಗ ಕಾಣುವ ಪ್ರಕಾರ, ನನ್ನ ಶತ್ರು

ಗಳು ನನ್ನನ್ನು ಕೊಂದು ಹಾಕಿದ್ದಾದರೆ, ಪ್ರಿಯ ಸಹೋದರನೇ, ಬೋಧಿಸುವದನ್ನೂ ಸತ್ಯದಲ್ಲಿ ನೆಲೆಯಾಗಿರುವದನ್ನೂ ಬಿಡ ಬಾರದೆಂದು, ಆಣೆ ಇಟ್ಟು ಬೇಡಿ ಕೊಳ್ಳುತ್ತೇನೆ. ನಾನು ಈಗ ಇಲ್ಲಿ ಇರುವದಕ್ಕೆ ಆಗದಿರುವದರಿಂದ, ನನಗೋಸ್ಕರ ಸಹಾ ತನ್ಮಧ್ಯೆ ಪೇಚಾಡು. ನೀನು ನನಗಿಂತ ಚನ್ನಾಗಿ ಎಲ್ಲಾ ಮಾಡ ಬಲ್ಲೆ. ಆದ ಕಾರಣ ನನ್ನ ದೆಸೆಯಿಂದ ಅಷ್ಟು ನಷ್ಟ ಬಾರದು; ನೀನು ಇದ್ದ ಮೇಲೆ ಮತ್ತೇನು? ನಿನ್ನಲ್ಲಿ ಕರ್ತನಿಗೆ ಅಧಿಕ ವಿದ್ವಾಂಸನಾದ ಜಟ್ಟಿ ಇದ್ದಾನೆ.” ಈ ಪ್ರಕಾರ ಲುಥರನು ದೀನಭಾವದಿಂದ ಮಾತಾಡಿದನು. ಮೆಲಂಥೋನನು ಅಧಿಕ ವಿದ್ವಾಂಸನಾದ ಜಟ್ಟಿ ಆಗಿದ್ದನು ಸರಿ; ಆದರೆ ಲುಥರನಷ್ಟು ದೇವರ ಪ್ರಕಾಶವನ್ನು ಹೊಂದಿದ ಭಟನಾಗಿರಲಿಲ್ಲಾ.

ಸಭೆಯ ಮುಖ್ಯಸ್ಥನಿಂದ ನ್ಯಾಯ ತೀರಿಸಲ್ಪಟ್ಟಿದ್ದರೂ, ಲುಥರನು ನಿರ್ಭಯವಾಗಿ ಓರ್ಮ್‍ಸಕ್ಕೆ ಹೋಗುವದಕ್ಕೆ ಹೊರಟನು. ಮಹಾರಾಜನ ಕಡೆಯ ಮಾನದ ಕಾವಲಿಯಾಗಿರುವ ಕಸ್ಪರ್‌ಸ್ಟುರ್ಮನು ವಿತ್ತೆನ್‌ಬೆರ್ಗ ಪರ್ಯಂತ ಬಂದು, ಅವನನ್ನು ಕರಕೊಂಡು ಹೋದನು. ಪ್ರಯಾಣದಲ್ಲಿ ಆಯಾ ಊರಿನ ಜನರು ಅವನನ್ನು ಎದುರುಗೊಳ್ಳ ಬಂದರು, ಮತ್ತು ಅವರಿಗೆ ತನ್ನ ಕೆಲಸದ ಮೇಲೆ, ಮನ ಒಗ್ಗುತ್ತದೆಂದು ಬಹಳ ಸಂತೋಷ ಪಟ್ಟನು. ಕೆಲವು ಕಡೆಯಲ್ಲಿ ಸಭಾಲಯಗಳಲ್ಲಿ ಅವನು ಪ್ರಸಂಗ ಮಾಡಿದಾಗ, ಜನರ ಸಮೂಹವು ಬಹಳ ದೊಡ್ಡದಾಗಿರುವ ಕಾರಣ, ಮಾಳಿಗೆಗಳು ಕದಲಿದವು, ಕಿಟಕಿ ಬಾಗಲುಗಳನ್ನು ಇಳಿಸ ಬೇಕಾಯಿತು. ರಾಜಸಭೆಯಲ್ಲಿ ಅವನಿಗೆ ಶಿಕ್ಷೆ ನಿರ್ಣಯ ಆಗಿ ತೀರಿತೆಂಬ, ವ್ಯೆಂಚದ ಮಹಾಧ್ಯಕ್ಷನು ಹಬ್ಬಿಸಿದ ಸುದ್ದಿಗಳ ಗುಜುಗುಜು ಅವನಿಗೆ ಕೇಳಿತು ಸರಿ, ಆದರೆ ಅವನು ಅದನ್ನೇನೂ ಲಕ್ಷಿಸಲಿಲ್ಲಾ. ಆದರೆ ಓರ್ಮ್‍ಸಕ್ಕೆ ಅವನು ಸಮೀಪ ಬರುತ್ತಿರುವಾಗ್ಯೆ, ಅವನ ಸ್ನೇಹಿತನಾದ ಸ್ಪಲತೀನನು ಸಹಾ, ನೀನು ಬರ ಬಾರದು; ಬಂದರೆ, ನಿನಗೆ ಮಹಾ ಕಂಟಕ ಪ್ರಾಪ್ತಿಯಾಗುವ ಹಾಗೆ ಅದೆ ಎಂದು ಹೇಳಿ ಕಳುಹಿಸಿದನು. ಆಗ್ಯೆ ಲುಥರನು “ಮಾಡುಗಳಲ್ಲಿರುವ ಹಂಚುಗಳಷ್ಟು ಪಿಶಾಚಿಗಳು ಓರ್ಮ್‍ಸದಲ್ಲಿ ಇದ್ದರೂ, ನಾನು ಅಲ್ಲಿಗೆ ಹೋಗದೆ ಇರೆ” ಅಂದನು.

ಈ ಸಂಗತಿಯನ್ನು ತರುವಾಯ ಅವನು ಮತ್ತೊಬ್ಬರಿಗೆ ತಿಳಿಸುವಾಗ್ಯೆ, “ಯಾಕಂದರೆ ನಾನು ನಿರ್ಭಯವಾಗಿ ಏನೊಂದೂ ಹೆದರಲಿಲ್ಲಾ. ದೇವರು ಒಬ್ಬನನ್ನು ಅಷ್ಟು ಧ್ಯೆರ್ಯವಂತ ಮಾಡ ಬಲ್ಲನು. ಈಗ ಸಹಾ ಅಷ್ಟು ಧ್ಯೆರ್ಯವು ನನ್ನಲ್ಲಿ ಇದ್ದೀತೋ, ನಾನರಿಯೆ” ಎಂದು ಮೇಲಿನ ಮಾತಿಗೆ ಸೇರಿಸಿ, ಹೇಳುವನು. ಆದರೆ ಅವನ ಹೃದಯದಲ್ಲಿ ಅವನು ಮತ್ತೆ ಮಾಡಿದ, ಸುದುರ್ಗ ನಮ್ಮ ದೇವರು ಎಂಬ ಗೀತದ ಮಾತು ಯಾವಾಗಲೂ ಗಾಯನವಾದ ಹಾಗೆ ಇತ್ತು. (ಗೀತ. ೪೨ ಯೆ

ಹೋವನು ತಾತ್ಕಾಲಿಕ ಸಹಾಯವಾಗಿದ್ದಾನೆ.) ಅದೇ ೧೫೨೧ನೆ ಎಪ್ರಿಲ್ ೧೬ರಲ್ಲಿ ಬೆಳಿಗ್ಗೆ ಸುಮಾರು ೧೦ ಘಂಟೆಗೆ ಅವನು ಒಂದು ಬಂಡಿಯಲ್ಲಿ ಬೈರಾಗಿ ವಸ್ತ್ರದಲ್ಲಿ ಒರ್ಮ್ಸಕ್ಕೆ ಮುಟ್ಟಿದನು. ಅವನ ಮುಂದಗಡೆಯಲ್ಲಿ ಮಹಾರಾಜನ ಕಾವಲಿಯ ಸ್ತುತಿಪಾಠಕನು ಉದ್ಯೋಗವಸ್ತ್ರ ದರಿಸಿ, ಸೇವಕನ ಸಹಿತವಾಗಿ ಇದ್ದನು. ಬಂಡಿಯ ಸಂಗಡ ಸುಮಾರು ಎರಡು ಸಾವಿರ ಜನರು ಬಂದರು. ಲುಥರನು ಜರ್ಮನ ಛತ್ರದಲ್ಲಿ ಇಳಿದನು. ಅಲ್ಲಿಯೆ ಇದ್ದ, ಆಯಿಕೆಯ ಅರಸನು ಅವನ ಬರೋಣವನ್ನು ಕಂಡು, ಮನಸಿನಲ್ಲಿ ನೊಂದು ಕೊಂಡನು. ಅವನು ಬಂದ ವರ್ತಮಾನ ಕೇಳಿ, ಪಟ್ಟಣವೆಲ್ಲಾ ಭ್ರಮೆಗೊಂಡರು. ಅದೇ ದಿನದಲ್ಲಿಯೆ ನಡುರಾತ್ರಿ ಪರ್ಯಂತ, ಅನೇಕ ಘನವಂತರು ಅವನನ್ನು ನೋಡಲಿಕ್ಕೆ ಬರುತ್ತಾ ಹೋಗುತ್ತಾ ಇದ್ದರು.

ಮರು ದಿನದಲ್ಲಿಯೆ ರಾಜ್ಯದ ಸೇನಾಪತಿಯಾದ ಪಪ್ಪೆನ್‌ಹೈಮದ ಪ್ರಭುವು ಅವನನ್ನು ರಾಜಸಭೆಗೆ ಕರಕೊಂಡು ಹೋದನು. ಬೀದಿಯಲ್ಲಿ ಹೋಗುತ್ತಿರುವಾಗ್ಯೆ, ಅವನನ್ನು ನೋಡುವ ಬಗ್ಗೆ, ಜನರು ಮಾಡುಗಳ ಮೇಲೆ ಸಹಾ ಏರಿದರು. ಮತ್ತು ಬೀದಿಗಳಲ್ಲಿ ಜನಸಮೂಹವು ವಿಪರೀತವಾಗಲಾಗಿ, ಸೇನಾಪತಿಯು ಅವನನ್ನು ಮನೆಗಳನ್ನೂ ಹಿತ್ತಲುಗಳನ್ನೂ ದಾಟಿಸಿ, ರಾಜಸಭೆಗೆ ತರ ಬೇಕಾಯಿತು. ಒಡ್ಡೋಲಗದ ಬಾಗಲಿನಲ್ಲಿ ಆ ಪ್ರಖ್ಯಾತಿ ಪಟ್ಟ ಶೂರನಾದ ಫ್ರುನ್ಸ್‌ಬೆರ್ಗದ ಗೆಯೊರ್ಗ್ ಪ್ರಭುವು ನಿಂತಿದ್ದನು. ಇವನು ಲುಥರನ ಭುಜ ತಟ್ಟಿ, ಹೇಳಿದ್ದೇನಂದರೆ: “ಹಸು ಬೈರಾಗಿಯೆ, ಹಸು ಬೈರಾಗಿಯೆ, ನಾನಾಗಲಿ ಬೇರೆ ಯಾವ ಸೇನಾಪತಿಯಾಗಲಿ ಕಡು ತೀವ್ರವಾದ ರಣಾಂಗಣದಲ್ಲಿ ಸಹಾ ಎಂದೂ ನೋಡದ ದಾರಿಯಲ್ಲಿ ನೀನು ನಡಿಯುತ್ತೀ. ಆದರೆ ನಿನ್ನ ನಂಬಿಕೆಯು ಸಮವಾಗಿದ್ದರೆ, ನಿನ್ನ ಕಾರ್ಯದಲ್ಲಿ ನಿನಗೆ ದೃಢವಿದ್ದರೆ, ದೇವರ ಹೆಸರಿನಲ್ಲಿ ಮುಂದು ನಡೆ, ಭಯ ಪಡ ಬೇಡಾ, ದೇವರು ನಿನ್ನನ್ನು ಬಿಡಾ” ಇವನ ಹೊರತು, ಬೇರೆ ಕೆಲವರು ಸಹಾ ಅವನಿಗೆ ಧೈರ್ಯದ ಮಾತು ಹೇಳಿದರು. ಕೆಲವರು “ನನ್ನ ನಿಮಿತ್ತವಾಗಿ ಅಧಿಪತಿಗಳ ಮುಂದೆಯೂ ಅರಸುಗಳ ಮುಂದೆಯೂ, ಅವರಿಗೂ ಜನಾಂಗಗಳಿಗೂ ಸಾಕ್ಷಿಯಾಗಿ, ತರಲ್ಪಡುವಿರಿ. ಆದರೆ ಅವರು ನಿಮ್ಮನ್ನು ಒಪ್ಪಿಸುವಾಗ, ಹ್ಯಾಗೆ ಇಲ್ಲವೆ ಏನು ಮಾತಾಡ ಬೇಕೆಂದು, ಚಿಂತೆ ಪಡ ಬೇಡಿರಿ; ಯಾಕಂದರೆ ಮಾತಾಡ ಬೇಕಾದದ್ದು ಆ ಘಳಿಗೆಯಲ್ಲಿಯೆ ನಿಮಗೆ ಕೊಡಲ್ಪಡುವದು. ಯಾಕಂದರೆ ಮಾತಾಡುವವರು ನೀವಲ್ಲ, ನಿಮ್ಮೊಳಗೆ ಮಾತಾಡುವ ನಿಮ್ಮ ತಂದೆಯ ಆತ್ಮವೆ” ಮತ್ತಾ. ೧೦, ೧೮—೨೦. ಎಂಬ ಕರ್ತನ ಮಾತು ಹೇಳಿದರು.

ಆಗ್ಯೆ ಲುಥರನು ಆ ಮಹಾ ಮಹಿಮೆಯುಳ್ಳ ಸಭೆಯ ಮುಂದೆ ನಿಂತನು. ರೋಮಿಯ (ಜರ್ಮನ) ಪೂರ್ಣ ಸ್ವಾಮಿತ್ವದಲ್ಲಿ ಮಹಾರಾಜನೂ, ಮಹಾರಾಜ ಶ್ರೀಮಂತನಾದ ಮತ್ತೆ ಅರಸನಾದ ಅವನ ಸಹೋದರ ಫೆರ್ದಿನಂದನೂ, ೬ ಆಯಿಕೆಯ ಅರಸುಗಳೂ, ೨೮ ರಾಜನಾಯಕರೂ, ೧೧ ಒಳ ಅರಸುಗಳೂ, ಎಲ್ಲರೂ ರಾಜಭೂಷಣಗಳಲ್ಲಿಯೂ, ೪೦ ರಾಜ್ಯದ ದೇಶಾಯಿಗಳೂ, ೩೦ ಅಧ್ಯಕ್ಷರೂ, ಬೇರೆ ಅನೇಕ ಧಾರೆಗಳೂ, ಅನೇಕ ಕೇಳಲಿಕ್ಕೆ ಬಂದವರ ಸಂಗಡ ಒಡ್ಡೋಲಗದಲ್ಲಿಯೂ, ಸುಮಾರು ೫ ಸಾವಿರ ಜನರು ಹೊರಗೂ, ಕೂಡಿ ಬಂದಿದ್ದರು. ಲುಥರನ ಬರೇ ಮರ್ತ್ಯ ಮನುಷ್ಯಧೈರ್ಯವಂತನಲ್ಲಾ, ಹೃದಯದಲ್ಲಿ ಅಲ್ಪ ಬಲವುಳ್ಳವನು. ಹೀಗಾಗಿ ಅವನ ಗುಂಡಿಗೆ ಅದರಿತು, ಅವನ ಎದೆ ಬಡಿಯಿತು.

ತ್ರಿಯರದ ಆಯಿಕೆಯ ಅರಸನ ಕರಣೀಕನು ಎದ್ದು ನಿಂತನು. ಇವನು ಆ ಕೋಣೆಯಲ್ಲಿ ಒಂದು ಕಾಲುಮಣೆಯಲ್ಲಿಟ್ಟ ಪುಸ್ತಕಗಳನ್ನು ತೋರಿಸಿ, ಅವುಗಳನ್ನು ಬರದವನು ನೀನೋ ಎಂದು ಕೇಳಿದನು. ಲುಥರನು ಪುಸ್ತಕಗಳನ್ನು ನೋಡಿದ ಮೇಲೆ, ತಾನು ಬರದದ್ದು ಹೌದೆಂದು ಹೇಳಿದನು. ಕರಣೀಕನು ಅದರಲ್ಲಿ ಬರದದ್ದನ್ನು ಅಸಮವೆಂದು ಹಿಂದೆಗಿಯುವಿಯೋ, ಎಂದು ಕೇಳಿದನು. ಅದಕ್ಕೆ ಲುಥರನು ಈ ಕಾರ್ಯವು ಬಹು ಘನವಾದ್ದು, ನನಗೆ ಆಲೋಚನೆಗೆ ಸಮಯ ಬೇಕು ಅಂದನು. ಆಗ್ಯೆ ಕರಣೀಕನು ಇಷ್ಟರೊಳಗೆ ಸಾಕಷ್ಟು ಸಮಯವಿತ್ತಲ್ಲಾ ಎಂದು ಕುಚೋದ್ಯವಾಗಿ ಉತ್ತರ ಕೊಟ್ಟನು. ಆದಾಗ್ಯೂ ಮರು ದಿವಸದ ವರೆಗೆ ಅವನಿಗೆ ಸಮಯ ಕೊಡಲಾಯಿತು.

ಲುಥರನು ಛತ್ರಕ್ಕೆ ತಿರಿಗಿ ಹೋಗಿ, ಮೊಣಕಾಲೂರಿ, ರಾತ್ರಿ ಎಲ್ಲಾ ದೇವರಿಗೆ ಪ್ರಾರ್ಥನೆ ಮಾಡಿದನು. ಅವನ ಅಂತರ್ಯದಲ್ಲಿ ನಡಿಯುವ ಪ್ರಾರ್ಥನೆಯು ಆಗ್ಯಾಗ್ಯೆ ಬಾಯಿಂದ ಹೊರಟು ಬಂದಲ್ಲಿ, ಅವನ ಸಂಗಡಿಗರು ಅದನ್ನು ಕೇಳಿ, ಬರದಿಟ್ಟರು. ಹಾಗೆ, ಅವನು ಪ್ರಾರ್ಥಿಸಿದ್ದೇನಂದರೆ "ಅಯ್ಯಾ ದೇವರೇ, ಅಯ್ಯಾ ದೇವರೇ, ಓ ನನ್ನ ದೇವರೇ ನನ್ನ ದೇವರೇ, ಎಲ್ಲಾ ಲೋಕದ ಬುದ್ಧಿಗೂ ಜ್ಞಾನಕ್ಕೂ ಎದುರಾಗಿ, ನನಗೆ ಸಹಾಯ ಮಾಡು! ನೀನೇ ಇದನ್ನು ಮಾಡು! ನೀನು ಇದನ್ನು ಮಾಡು! ನೀನೊಬ್ಬನೇ! ಈ ಕಾರ್ಯವು ನನ್ನದಲ್ಲವಲ್ಲಾ! ಅದು ನಿನ್ನದಲ್ಲವೆ! ನನ್ನ ಸ್ವಂತ ವಿಷಯದಲ್ಲಿ ಇಲ್ಲಿ ನನಗೆ ಏನು ಕೆಲಸವದೆ? ಲೋಕದ ಈ ಮಹಾ ಪ್ರಭುಗಳ ಸಂಗಡ ನನಗೇನು ಅದೆ? ನನಗೆ ಸಹಾ ಒಳ್ಳೇ ಸಮಾಧಾನದ ದಿವಸಗಳು ಇದ್ದು, ನಿರಾತಂಕವಾಗಿರುವದು ನನಗೆ ಹಿತವಲ್ಲವೆ? ಆದರೆ ಈ ಕಾರ್ಯ ನಿನ್ನದು,

ಕರ್ತನೇ, ನೀತಿಯೂ ಶಾಶ್ವತವೂ ಆದ ಕಾರ್ಯ! ಓ ನಂಬಿಕೆಯುಳ್ಳ ನಿತ್ಯ ದೇವರೇ, ನನಗೆ ಸಹಾಯ ಮಾಡು; ಮನುಷ್ಯರಲ್ಲಿ ನಾನು ಭರವಸ ಇಡೆ."

ಮರು ದಿನ ಎಪ್ರಿಲ್ ೧೧ಲ್ಲು ಅವನನ್ನು ತಿರಿಗಿ ರಾಜಸಭೆಗೆ ಕರಕೊಂಡು ಬಂದರು. ಕ್ರಿಯರದ ಕರಣೀಕನು, ನೀನು ಬರದ ಗ್ರಂಥಗಳು ಸಮವಲ್ಲವೆಂದು ಅವುಗಳನ್ನು ಹಿಂದೆಗಿಯುತ್ತೀಯೋ, ಎಂದು ತಿರಿಗಿ ಕೇಳಿದನು. ಆದರೆ ಈ ದಿನದಲ್ಲು ಲುಥರನು ಮುಂಚಿನ ಹಾಗೆ ಭಯಸ್ಥನಾಗಿರಲಿಲ್ಲಾ. ಶಾಂತಿಯೂ ಪ್ರತಿಭೆಯೂ ಅವನಲ್ಲಿ ಇತ್ತು. ಅವನು ತನ್ನ ಪುಸ್ತಕಗಳ ತಾತ್ಪರ್ಯವನ್ನು ಕುರಿತು ಬಹಳ ಹೊತ್ತು ಧೈರ್ಯದಿಂದಲೂ ವಿನಯದಿಂದಲೂ ಮಾತಾಡಿ, ತಾನು ಅವುಗಳಿಂದ ದೇವರ ಮಾನವನ್ನೂ ಕ್ರೈಸ್ತರ ಭಾಗ್ಯವನ್ನೂ ಮಾತ್ರವೇ ಚಿಂತಿಸಿದೆನೆಂದು ಮುಂಚೆ ಹೇಳಿ, ತನ್ನ ಗ್ರಂಥಗಳಲ್ಲಿ ಮೂರು ತರಗಳನ್ನು ಮಾಡಿದನು: ಕೆಲವು ಗ್ರಂಥಗಳಲ್ಲಿ ವಿಶ್ವಾಸದ ವಿಷಯದಲ್ಲಿಯೂ ಸತ್ಕ್ರಿಯೆಗಳ ವಿಷಯದಲ್ಲಿಯೂ ಸಮವಾಗಿಯೂ ಕ್ರೈಸ್ತ ಧರ್ಮಕ್ಕನುಸಾರವಾಗಿಯೂ ಬೋಧಿಸಿದ್ದೇನೆ. ಕೆಲವು ಗ್ರಂಥಗಳಲ್ಲಿ ಕ್ರೈಸ್ತ ಜನವನ್ನು ಹಾಳು ಮಾಡಿದ ಪೋಪನಿಂದ ಬಂದ ಅಬದ್ಧ ಬೋಧನೆಯನ್ನು ಖಂಡಿಸಿದ್ದೇನೆ. ರೋಮಿಯ ಬಲಾತ್ಕಾರವನ್ನೂ ದೈವಹೀನ ಬೋಧನೆಯನ್ನೂ ಸಾಧಿಸುವಂಥಾ, ಸಾಧಾರಣ ಜನರಿಗೆ ಎದುರಾಗಿ, ಬೇರೆ ಪುಸ್ತಕಗಳನ್ನು ಬರದಿದ್ದೇನೆ. ಮೊದಲನೆ ತರದವುಗಳನ್ನು ಹಿಂದೆಗಿಯ ಕೂಡದೆಂಬದು ಸಹಜ, ಆದರೆ ಎರಡನೆ ತರದವುಗಳನ್ನೂ ಮೂರನೆ ತರದವುಗಳನ್ನೂ ಸಹಾ ಹಿಂದೆಗಿಯಲಾಗುವದಿಲ್ಲಾ. ಈ ಮೂರನೆ ತರದವುಗಳಲ್ಲಿ ಕೆಲವು ಸರ್ತಿ ಅನಾವಶ್ಯವಾದ ಕಠಿಣ ಮಾತುಗಳು ಬಂದರೂ, ಸತ್ಯದ ಶತ್ರುಗಳನ್ನೂ ಅನರ್ಥದ ಸಾಧಕರನ್ನೂ ಬಲ ಪಡಿಸಿ, ಧೈರ್ಯಗಾಳಿಸದ ಹಾಗೆ, ಅವುಗಳನ್ನು ಸಹಾ ಬಿಡ ಬೇಕಾಗುತ್ತದೆ. ಆದಾಗ್ಯೂ ತಾನು ಬರೇ ಮನುಷ್ಯನಾಗಿರುವ ಕಾರಣ, ತಪ್ಪು ಮಾಡುವದು ಸಹಜವಾಗಿರುವದರಿಂದ, ತಾನು ಯಾವದರಲ್ಲಿ ತಪ್ಪು ಮಾಡಿದ್ದೆಂಬದನ್ನು ದೇವರ ವಾಕ್ಯದಿಂದ ತೋರಿಸಿ ಕೊಟ್ಟರೆ ಆದೀತು. ಇದನ್ನು ಮಾಡಿದರೆ, ಎಲ್ಲಾ ತಪ್ಪುಗಳನ್ನು ಹಿಂದೆಗಿಯುವದಕ್ಕೆ ತಯಾರಾಗಿದ್ದೇನೆ. ಮತ್ತು ಆ ಪುಸ್ತಕಗಳನ್ನು ಬೆಂಕಿಯಲ್ಲಿ ಬಿಸಾಡಲಿಕ್ಕೆ ಮೊದಲನೆಯವನಾಗಿರುವೆನು, ಆದರೆ ಮನುಷ್ಯಬಲದಿಂದಲೂ ಬುದ್ಧಿಯಿಂದಲೂ ಐಕ್ಯವನ್ನು ಉಂಟು ಮಾಡಲಿಕ್ಕೆ ನೋಡುವದು ಉಚಿತವಲ್ಲಾ. ಹಾಗೆ ಮಾಡಿದರೆ, ಅದು ಭಯಂಕರವಾದ ಜಲಪ್ರಳಯದಂತೆ ದಾಟ ಕೂಡದ ಕಂಟಕಸಮುದ್ರವಾಗಿ ಆತ್ಮಶರೀರಗಳಿಗೆ ವಿನಾಶಕಾಲ ಬಂದೀತು ಎಂಬದಾಗಿ ಲುಥರನು ಮಾತಾಡಿದನು. ಅದು ಜರ್ಮನ ಭಾಷೆಯಲ್ಲಿ ಇದ್ದ ಕಾರಣ ಹಿಸ್ಪನ್ಯನಾದ ಮಹಾರಾಜನೂ ಬೇರೆ ಕೆಲವು ಪರದೇಶದ ಪ್ರಭುಗಳೂ ಜರ್ಮನ



ಲುಥರನು ವರ್ಮ್ಸ್ ಎಂಬಲ್ಲಿಯ ರಾಜಸಭೆಯ ಮುಂದೆ ಇದ್ದದ್ದು

ಭಾಷೆಯನ್ನು ಚನ್ನಾಗಿ ತಿಳಿಯದವರಾಗಿದ್ದ ಕಾರಣ, ಲತೀನ ಭಾಷೆಯಲ್ಲಿ ತಿರಿಗಿ ಹೇಳ ಬೇಕೆಂದು ಅಪೇಕ್ಷಿಸಿದಾಗ, ತುಂಬಿ ಹೋದ ಕೋಣೆಯಲ್ಲಿ ಬಹಳ ಸೆಖೆಯಾದರೂ, ಲುಥರನು ತಕ್ಷಣ ಲತೀನ ಭಾಷೆಯಲ್ಲಿ ಸುಲಭವಾಗಿಯೂ, ಸ್ಪಷ್ಟವಾಗಿಯೂ, ರಮ್ಯವಾಗಿಯೂ ಮಾತಾಡಿದನು.

ಲುಥರನು ಜರ್ಮನ ಭಾಷೆಯಲ್ಲಿಯೂ ಲತೀನದಲ್ಲಿಯೂ ಮಾತಾಡಿ ತೀರಿಸಿದ ಮೇಲೆ, ಸಭೆ ಎಲ್ಲಾ ಸ್ವಲ್ಪ ಕಾಲ ಸುಮ್ಮನಿದ್ದ ತರುವಾಯ, ತ್ರಿಯರದ ಕರಣೀಕನು ಶಬ್ದವೆತ್ತಿ: "ನೀವು ಹಿಂದೆಗಿಯುತ್ತೀರೋ ಇಲ್ಲವೋ ಎಂಬದಕ್ಕೆ ಖಂಡಿತವಾಗಿ ನೆಟ್ಟಗೆ ಒಂದೇ ಉತ್ತರ ಕೊಡಿರಿ" ಅಂದನು.

ಆಗ ದೇವರ ಸೇವಕನಾದ ಲುಥರನು ಬಾಯಿ ತೆರದು ಹೇಳಿದ್ದೇನಂದರೆ: "ನನ್ನಿಂದ ಸ್ಪಷ್ಟವಾದ ಖಂಡಿತವಾದ ನಿಶ್ಚಯವಾದ ಉತ್ತರವು ಬೇಕೆಂದು ಹೇಳುವದರಿಂದ, ನಾನು ಸಹಾ ಕೊಂಬುಗಳೂ ಮೊನೆಗಳೂ ಇಲ್ಲದ ಉತ್ತರವನ್ನು ಕೊಡುತ್ತೇನೆ. ನನ್ನ ಮನಸ್ಸಾಕ್ಷಿಯು ದೇವರ ವಾಕ್ಯದಲ್ಲಿ ಸೆರೆಯಾಗಿ ಒಯ್ಯಲ್ಪಡುವ ಹಾಗೆ, ಪರಿಶುದ್ಧ ಬರಹದ ಸಾಕ್ಷಿಗಳಿಂದಲೂ ಸ್ಪಷ್ಟವಾದ ಸ್ವಚ್ಛವಾದ ಶುದ್ಧವಾದ ಪ್ರಮಾಣಗಳಿಂದಲೂ ನನ್ನನ್ನು ಖಂಡಿಸಿ, ಜೈಸುವ ಮಟ್ಟಿಗೂ ನಾನು ಪೋಪನನ್ನಾಗಲೀ ಸರ್ವ ಸಭೆಯ ಸಮಾಗಮಗಳನ್ನಾಗಲೀ ನಂಬುವದಿಲ್ಲಾ. ಯಾಕಂದರೆ ಅವರು ಅನೇಕ ಸರ್ತಿ ತಪ್ಪು ಮಾಡಿ, ಒಂದಕ್ಕೊಂದು ವಿರೋಧವಾಗಿ ಮಾತಾಡಿದ್ದಾರೆ. ಹೀಗಿರಲಾಗಿ ನಾನೇನೂ ಹಿಂದೆಗಿಯ ಕೂಡದು; ಯಾಕಂದರೆ ಮನಸ್ಸಾಕ್ಷಿಗೆ ವಿರೋಧವಾಗಿ ಏನಾದರೂ ಮಾಡುವದು ಒಳ್ಳೇದೂ ಅಲ್ಲಾ, ಉಚಿತವೂ ಅಲ್ಲಾ. ಇಲ್ಲಿ ನಿಂತಿದ್ದೇನೆ, ನಾನು ಅನ್ಯಥಾ ಏನು ಮಾಡಲಾರೆ, ದೇವರು ನನಗೆ ಸಹಾಯ ಮಾಡಲಿ! ಆಮೆನ್"

ಈ ಪ್ರಕಾರ ಲುಥರನು ನಿತ್ಯವಾದ ಪರವಸ್ತುಗಳ ವಿಷಯದಲ್ಲಿ ದಿವ್ಯ ವಾಕ್ಯ ಮಾತ್ರವೆ ಪ್ರಮಾಣವಾಗಿರುತ್ತದೆಂದು ಸಾಕ್ಷಿ ಕೊಟ್ಟನು.

ಅವನ ಘನವಾದ ಭಾಷಣವೂ ಅವನ ಕಡೇ ಬಲವಾದ ವಾಕ್ಯವೂ ಅಲ್ಲಿ ಕೂಡಿ ಬಂದವರ ಮನಸ್ಸಿನಲ್ಲಿ ಚನ್ನಾಗಿ ಅಂಕಿತವಾಯಿತು. ಅನೇಕರ ಹೃದಯಗಳು ಅವನಿಗೆ ಒಲಿದವು. ಮುಖ್ಯವಾಗಿ ಆಯಿಕೆಯ ಅರಸನು ಅವನಲ್ಲಿ ಸಂತೋಷ ಪಟ್ಟನು. ಅವನು ಮತ್ತೆ ಹೇಳಿದ್ದೇನಂದರೆ: "ಪಾದ್ರಿ ಮರ್ತೀನನು ಮಹಾರಾಜ ಸಂಸ್ಥಾನಗಳ ಮುಂದೆ ಎಷ್ಟು ರಮ್ಯವಾಗಿ ಮಾತಾಡಿದನು! ಅವನು ಧೈರ್ಯವಾಗಿ, ಒಂದು ವೇಳೆ ಅತಿ ಧೈರ್ಯವಾಗಿ ಇದ್ದನು."

ಲುಥರನು ಇಳಿದು ಹೋಗಿ, ಸಂಸ್ಥಾನದ ಸಭೆಗೆ ತಿರಿಗಿ ಬರ ಬೇಕಾಗಲಿಲ್ಲಾ. ಆದಾಗ್ಯೂ ಕೆಲವು ಅರಸುಗಳು ಅವನನ್ನು ತನ್ನ ಮಾತು ಹಿಂದೆಗೆಯುವದಕ್ಕೆ ಪ್ರೇರೇಪಿಸುವದಕ್ಕೆ ಪ್ರಯತ್ನ ಮಾಡಿದರು. ಅವನು ಅಧಿಕಾರವನ್ನು ತುಚ್ಛೀಕರಿಸದೆ, ಅದರ ತೀರ್ಪುಗಳಿಗೆ ಒಳಗಾಗ ಬೇಕೆಂತಲೂ, ಖಡ್ಡು ಹೃದಯದಿಂದ ನಡ ಕೊಂಡರೆ, ರಾಜ್ಯದಿಂದ ಮಹಾರಾಜನು ಅವನನ್ನು ಗಡಿಪಾರು ಮಾಡ್ಯಾನೆಂತಲೂ ಹೇಳಿದರು. ಆದರೆ ಲುಥರನು ಅದಕ್ಕೆ ಉತ್ತರ ಕೊಟ್ಟು ಹೇಳಿದ್ದೇನಂದರೆ: “ನಾನು ಅಧಿಕಾರವನ್ನು ಧಿಕ್ಕರಿಸುವದಿಲ್ಲಾ, ಅದರ ಉದ್ಯೋಗ ಎಲ್ಲಿ ಪರ್ಯಂತ ನಡಿಯುತ್ತದಾ, ಅದರಲೆಲ್ಲಾ ಅದಕ್ಕೆ ವಿಧೇಯವಾಗಿದ್ದೇನೆ; ಆದರೆ ನನ್ನ ಬೋಧನೆಯನ್ನು ದೇವರ ಅಚಂಚಲವಾದ ವಾಕ್ಯದಿಂದ ವಿಚಾರಿಸಿ, ನಿಶ್ಚೈಸ ಬೇಕು; ಆದ್ದರಿಂದ ಯಾರಾದರೂ ನಾನು ಮನಸ್ಸಾಕ್ಷಿಗೆ ವಿರೋಧವಾಗಿ ಏನಾದರೂ ಮಾಡುವ ಹಾಗೆ ನನಗೆ ಅಂಕೆ ಮಾಡಲಾಗದು; ನಾನು ಶರೀರವನ್ನೂ ಜೀವವನ್ನೂ ಕೊಟ್ಟೇನಲ್ಲದೆ, ದೇವರ ನಿರ್ಮಲ ಸತ್ಯವಾಕ್ಯವನ್ನು ಬಿಡುವವನಲ್ಲಾ; ಆದ ಕಾರಣ ನನಗೆ ಇನ್ನೂ ಮುಂದೆ ಕರಕರೆ ಕೊಡದೆ, ಸಮಾಧಾನದಲ್ಲಿ ಇರಗೊಡಿಸಿ, ಗಮಲಿಯೇಲನು ಹೇಳಿದ ಮಾತು, ಈ ಆಲೋಚನೆಯೂ ಈ ಕೆಲಸವೂ ಮನುಷ್ಯರದಾಗಿದ್ದರೆ ಲಯವಾಗುವದು, ಆದರೆ ದೇವರದಾಗಿದ್ದರೆ ನಿಲ್ಲುವದು ಎಂಬದನ್ನು ನೆನಪು ಮಾಡಿರಿ.” ಈ ಪ್ರಕಾರ ಲುಥರನು ಹೇಳಿದರೂ ಆ ಧೊರೆಗಳು ಅವನನ್ನು ಬಿಡಲಿಲ್ಲಾ, ಆದರೆ ಲುಥರನು ಸ್ಥಿರವಾಗಿ ನಿಂತನು.

ತರುವಾಯ ಲುಥರನು ಭದ್ರವಾದ ಕಾವಲಿಯವರ ಸಂಗಡ ತಿರಿಗಿ ಊರಿಗೆ ಹೋಗ ಬೇಕು, ಆದರೆ ಪ್ರಯಾಣದಲ್ಲಿ ಎಲ್ಲಿಯೂ ಪ್ರಸಂಗಿಸ ಬಾರದು, ಗ್ರಂಥಗಳಿಂದ ಜನರನ್ನು ಕೆದರಿಸ ಬಾರದು ಎಂದು ಮಹಾರಾಜನ ಹೆಸರಿನಲ್ಲಿ ಅವನಿಗೆ ಅಪ್ಪಣೆ ಆಯಿತು. ಲುಥರನು “ಕರ್ತನಿಗೆ ಸಮ ಕಂಡ ಹಾಗೆ ಎಲ್ಲಾ ಆಯಿತು! ಕರ್ತನ ನಾಮಕ್ಕೆ ಸ್ತೋತ್ರವಾಗಲಿ!” ಎಂದು ಉತ್ತರ ಕೊಟ್ಟನು. ಮತ್ತೆ ಮಹಾರಾಜಸ್ವಾಮಿಗೂ ರಾಜ್ಯದ ಶ್ರೇಷ್ಟರಿಗೂ ಅವರು ತನ್ನನ್ನು ದಯ ಮಾಡಿ ಕೇಳಿದ ಕಾರಣ, ಆಗುವಷ್ಟು ದೈನ್ಯ ಭಾವದಿಂದಲೂ ಅಧೀನತ್ವದಿಂದಲೂ ಕೃತಜ್ಞಾಪಿಸಿ, ಮಹಾರಾಜನಿಗಾಗಿಯೂ ಸಂಸ್ಥಾನಕ್ಕಾಗಿಯೂ ಸಂತೋಷದಿಂದ ಎಲ್ಲಾ ಮಾಡುವದಕ್ಕೂ ತಾಳುವದಕ್ಕೂ ಸಿದ್ಧವಾಗಿದ್ದೇನೆ; ಆದರೆ ಒಂದು ಮಾತ್ರವೆ, ದೇವರ ವಾಕ್ಯವನ್ನು ನಿರ್ಬಂಧವಾಗಿ ಅರಿಕೆ ಮಾಡುವದಕ್ಕೂ ಸಾಕ್ಷಿ ಕೊಡುವದಕ್ಕೂ ಅಪ್ಪಣೆ ಆಗ ಬೇಕು ಎಂದು ಬಿನ್ನೈಸಿ, ಎಲ್ಲರಿಂದ ಬೀಳ್ಕೊಂಡನು.




ಲುಥರನು ತನ್ನ ಊರಿಗೆ ತಿರಿಗಿ ಹೋಗುವಾಗ ದಾರಿಯಲ್ಲಿ ಪ್ರಸಂಗಿಸಿದ್ದು

ಪೋಪನವರು ಪ್ರತ್ಯಕ್ಷವಾದ ಪಾಷಂಡಿಗೆ ಮುಂಚೆ ಕೊಟ್ಟ ವಾಗ್ದತ್ತದ ಪ್ರಕಾರ ಮಾಡುವದು ಅವಶ್ಯವಲ್ಲವೆಂತ ಎಷ್ಟು ಬೋಧನೆ ಕೊಟ್ಟರೂ, ಮಹಾರಾಜನು ಭದ್ರವಾದ ಅಂಗಕಾವಲಿಯನ್ನು ದಯಪಾಲಿಸದೆ ಇರಲಿಲ್ಲಾ. ಈ ವಿಷಯದಲ್ಲಿ ಮಹಾರಾಜನಾದ ಕರ್ಲನು, "ನಂಬಿಕೆಯು ಲೋಕದಿಂದಲೆ ಗಡಿಪಾರು ಆಗುವದಾದರೂ, ರೋಮಿಯ (ಜರ್ಮನ) ಮಹಾರಾಜನಲ್ಲಿ ಸಹಾ ಅದು ಇರದೆ ಹೋಗ ಬಹುದೆ!" ಎಂದು ಹೇಳಿದನು.

ಎಪ್ರಿಲ್ ೨೬ಲಲ್ಲಿ ಲುಥರನು ಒರ್ಮ್ಸದಿಂದ ಹೊರಟು ಹೋದನು. ಅವನ ಸಂಗಡ ತಿರಿಗಿ ಬಂದ ಮಹಾರಾಜನ ಸ್ತುತಿಪಾಠಕನನ್ನು ವಿನಯದಿಂದ ಕೃತಜ್ಞಾಪಿಸಿ, ತಿರಿಗಿ ಕಳುಹಿಸಿದನು. ಪ್ರಯಾಣದಲ್ಲಿ, ಒರ್ಮ್ಸಕ್ಕೆ ಹೋಗುವಾಗ್ಯೆ ಹ್ಯಾಗೋ, ಹಾಗೆಯೇ ತಿರಿಗಿ ಬರುವಾಗ್ಯೆ ಸಹಾ ಪ್ರಸಂಗಿಸಿದನು; ಈ ಸಂಗತಿಯಲ್ಲಿ ಕೈ ಕಟ್ಟಿಸಿ ಕೊಳ್ಳಲಾರೆನೆಂದು ಅವನು ಮಹಾರಾಜನಿಗೆ ಧಿಟವಾಗಿ ಹೇಳಿದ್ದನು.

ಕರ್ಲನು ದಯಾಭಾವದಿಂದಲೆ ಅವನನ್ನು ಕಳುಹಿಸಿ ಇದ್ದರೂ, ಹಿಂದಣಿಂದ ಅವನ ಮೇಲೆ ಆರ್ಚ್ಟ ಮೂಡಿದನು. ಮೇ ೮ಲಲ್ಲಿ ಲುಥರನು ಅನಾಥನಾದನೆಂಬ ರಾಜಾಜ್ಞೆ ಆಯಿತು. ಇದರಲ್ಲಿ ಮಹಾರಾಜನು ಮನುಷ್ಯಾಕೃತಿಯಲ್ಲಿಯೂ ಬೈರಾಗಿ ವೇಷದಲ್ಲಿಯೂ ಕಾಣಿಸಿ ಕೊಳ್ಳುವ ಈ ಪಿಶಾಚಿಯನ್ನು ಅನಾಥನೆಂದು ಮಾಡಿದ್ದೇನೆ. ಈ ಆಜ್ಞೆ ಕಂಡ ಇಪ್ಪತ್ತು ದಿನದ ಮೇಲೆ, ಯಾರಾದರೂ ಅವನಿಗೆ ಆಶ್ರಯ ಕಾಡ ಬಾರದು, ಯಾರಾದರೂ ಅವನನ್ನು ಕಂಡರೆ, ಅವನನ್ನು ಕೈಸೆರೆ ಹಿಡಿದು, ಮಹಾರಾಜನ ನ್ಯಾಯಸ್ಥಾನಕ್ಕೆ ಒಪ್ಪಿಸಿ ಕಾಡ ಬೇಕು. ಹಾಗೆ ಮಾಡದವನ ಮೇಲೆ ಮಹಾರಾಜನಿಗೆ ಮಾಡಿದ ಸ್ವಾಮಿದ್ರೋಹ, ಅಂಥವನ ಆಸ್ತಿ ಎಲ್ಲಾ ಮುದ್ರಾಪಣ್ ಆಗುವದು ಎಂದು ಪ್ರಕಟಿಸಿದನು.

"ಈ ಪ್ರಕಾರ ಲುಥರನನ್ನು ಪೋಪನು ಸಭೆಯಿಂದಲೂ, ಮಹಾರಾಜನು ನಾಗರಿಕರ ಸಂಸರ್ಗದಿಂದಲೂ ಹೊರಗೆ ಹಾಕಿದರು" ಆದರೆ ಕ್ರಿಸ್ತನ ರಾಜ್ಯದಲ್ಲಿ ಅವನು ಮಧ್ಯಸ್ಥಾನದಲ್ಲಿ ಕೂಡಿದ್ದ ಹಾಗಿತ್ತು.

§ ೬.

# ದೀಪದ ಮೇಲೆ ಬೆಳಕು

ಮೇತಿಂಗಳಲ್ಲು (೧೫೨೧) ಲುಥರನು ಒರ್ಮ್ಸದಿಂದ ಊರಿಗೆ ಹೋಗುತ್ತಿರುವಾಗ್ಯೆ, ಥೂರಿಂಗ ವನದಲ್ಲಿ ಗಾಡಿಯಲ್ಲಿ ಹೋಗುವ ಸಮಯದಲ್ಲಿ ವಲ್ತರ್ಸ್ ಸಮೀಪದಲ್ಲಿ ಮೊಕರಂಬ ಇಟ್ಟ ಸವಾರರು ಓಡಿಸಿ ಕೊಂಡು ಬಂದು, ಗಾಡಿಯಿಂದ ಅವನನ್ನು ಎಳದು, ಒಂದು ಕುದುರೆಯಲ್ಲಿ ಎತ್ತಿ ಏರಿಸಿ, ಕೆಲವು ತಾಸು ಪರ್ಯಂತ ಆ ವನದಲ್ಲಿ ಓಡ್ಯಾಡಿಸಿ, ರಾತ್ರಿ ಸುಮಾರು ೧೧ ಘಂಟೆಗೆ ಪರ್ವತದಲ್ಲಿದ್ದ ಭದ್ರವಾದ ಒಂದು ದುರ್ಗಕ್ಕೆ ವೈದರು.

ಎಲ್ಲರೂ ಕಣ್ಣಿಟ್ಟ ಶೂರನು ಕಾಣದೇ ಹೋದನು; ಅವನಿಗೆ ಏನಾಯಿತು ಎಂಬದು ಯಾರಿಗೂ ಗೊತ್ತು ಇರಲಿಲ್ಲಾ, ಸ್ನೇಹಿತರೂ ಶತ್ರುಗಳೂ ಅವನು ಸತ್ತನೆಂದು ಎಣಿಸಿದರು. ಭಕ್ತಿಯುಳ್ಳ ಪ್ರಖ್ಯಾತಿ ಪಟ್ಟ ಚಿತ್ರಗಾರನಾದ ಅಲ್ಬ್ರೆಖ್ತದೂರರನು, ಈ ದೇವಾತ್ಮವುಳ್ಳ ಮನುಷ್ಯನು ರೋಮಿಯ ಮೋಸಕ್ಕೆ ಬಲಿಯಾಗಿ ಬಿದ್ದನಲ್ಲಾ ಎಂದು ಮಹಾ ದುಖ್ಖದಿಂದ ಗೋಳಾಡಿದನು; ಅವನು ರೊತ್ತರ್ದಮದ ಮಹಾ ವಿದ್ವಾಂಸನಾದ ಎರಸ್ಮನನ್ನು ಲುಥರನ ಸ್ಥಳದಲ್ಲಿ ದೇವರ ಕಾರ್ಯವನ್ನು ಮುಂದೆ ನಡಿಸ ಬೇಕೆಂಬದಾಗಿ ಬೇಡಿ ಕೊಂಡನು. "ಓ ಎರಸ್ಮನೇ, ನಿನ್ನ ಕರ್ತನಾದ ಕ್ರಿಸ್ತನಿಗೋಸ್ಕರ ಮುಂದರಿದು ಬಾ" ಎಂದು ಅವನಿಗೆ ಬರದನು. ಆದರೆ ಅವನು ಕೆಪ್ಪನ ಹಾಗೆ ಉಳು ಕೊಂಡನು. ಯಾಕಂದರೆ ಅವನಿಗೆ ಪೋಪತನದ ಅನರ್ಥಗಳು ತಕ್ಕಷ್ಟು ತಿಳಿದಿದ್ದರೂ, ಲುಥರನ ಹಾಗೆ ಅವುಗಳನ್ನು ತಿದ್ದುವದಕ್ಕೆ ಅವನಿಗೆ ಮನಸ್ಸಿರಲಿಲ್ಲಾ. ಇದಲ್ಲದೆ ರೋಮಿಯ ಸಭೆಯ ಅಂತರ್ಯದ ದುರಾವಸ್ಥೆಯನ್ನು ಚನ್ನಾಗಿ ತಿಳಿದವನಾಗಿರಲಿಲ್ಲಾ; ಅವನು ಮನುಷ್ಯನು ಒಳ್ಳೇದನ್ನು ಮಾಡುವದಕ್ಕೆ ಸ್ವಭಾವದಿಂದ ಶಕ್ತನಾಗಿದ್ಧಾನೆಂದು ನಂಬಿ, ಕ್ರಿಯಾನೀತಿಯಲ್ಲಿ ಭರವಸ ಇಟ್ಟನು.

ಆದರೆ ದೇವರು ತಾನೆ ಇಟ್ಟ ಸಮವಾದ ಪುನಸ್ಥಾಪಕನು ಕ್ಷೇಮವಾಗಿದ್ದನು. ಅವನ ಸ್ವಂತ ಆಯಿಕೆಯ ಅರಸನು, ಅವನ ಮೇಲೆ ಬಿದ್ದು, ಶೆರೆಯಾಗಿ ವೈಯುವದಕ್ಕೆ ಅಪ್ಪಣೆ ಕೊಟ್ಟಿದ್ದನು. ಅನಾಥನೆಂದು ಶೀರ್ಪಾಗಿ ಹೋದ ಲುಥರನು ಎಂಥಾ ಮರಣ ಕಂಟಕದಲ್ಲಿದ್ಧಾನೆಂದು ತಿಳಿದು, ಸ್ವಲ್ಪ ಕಾಲಕ್ಕೆ ಅವನನ್ನು ಭದ್ರವಾದ ಸ್ಥಳದಲ್ಲಿ ಮರೆ ಮಾಡಿ, ರಕ್ಷಿಸುವದಕ್ಕೆ ಅಪೇಕ್ಷಿಸಿದನು.

ಆ ಪರ್ವತದುರ್ಗ ಯಾವದೆಂದರೆ, ಐಸನಖದ ಸಮೀಪದಲ್ಲಿರುವ ವರ್ತ್‌ಬುರ್ಗ್. ಇಲ್ಲಿ ಲುಥರನಿಗೆ ಸೌಖ್ಯವಾದ ಕೋಣೆಯನ್ನೂ, ಪುಸ್ತಕ ಮಸಿ ಕಾಗದ ಮುಂತಾದವುಗಳನ್ನೂ ಕೊಟ್ಟು, ಅವನನ್ನು ಉತ್ತಮವಾಗಿ ಪರಾಮರ್ಶಿಸಿದರು. ಅವನಿಗೆ ಯುಂಕರ್ ಗೆಯೊರ್ಗ್, ಅಂದರೆ ಯೌವನದ ಗೆಯೊರ್ಗ್ ಧೊರೆ ಎಂಬ ಹೆಸರಾಯಿತು. ಅವನು ಶೂರ ವಸ್ತ್ರವನ್ನು ಧರಿಸಿ, ಗಡ್ಡ ಬೆಳಿಸಿ ಕೊಂಡನು.

ಈ ಪ್ರಕಾರ ಲೋಕವನ್ನೆಲ್ಲಾ ಕಂಪಾಯಮಾನ ಮಾಡಿದ, ಈ ಮನುಷ್ಯನು, ಉದ್ಯೋಗ, ಸ್ನೇಹಿತರು, ಮನುಷ್ಯರ ಬಳಿಕೆ, ಯೇನೊಂದೂ ಇಲ್ಲದವನೆಂಬ ಹಾಗೆ ಅಲ್ಲಿ ಕಾಲಕ್ಷೇಪ ಮಾಡಿದನು. ವರ್ತಬುರ್ಗಕ್ಕೆ (ಪ್ರಕ. ೧, ೯) ನನ್ನ ಪಾತ್ಮೊಸ್ ಎಂದು ಲುಥರನು ಹೇಳುವನು.

ಇಲ್ಲಿ ಅವನು ತಾನು ಆರಂಭಿಸಿದ ಮಹಾ ಕೆಲಸವನ್ನು ನಿರಾತಂಕವಾಗಿ ಪರ್ಯಾಲೋಚಿಸಿ, ಅದನ್ನು ನಿಧಾನದಿಂದಲೂ ಬಲವಾಗಿಯೂ ಪೂರ್ಣ ಮಾಡುವದಕ್ಕೆ ದೇವರಲ್ಲಿ ನಿಧಾನ ತಕ್ಕೊಂಡು, ಬಲಗೊಳ್ಳಲಿಕ್ಕೆ ಸಮಯ ಶಿಕ್ಕಿತು. ಲೋಕವನ್ನೇ ಮಾರ್ಪಡಿಸುವದೆಂಬಂಥಾ ಈ ಕೆಲಸದ ಮಹತ್ವವು ಅವನ ಮನೋದೃಷ್ಟಿಗೆ ಪ್ರಕಟವಾದಾಗ, ಈ ಹೊರೆಯು ಅವನಿಗೆ ಆಗ್ಯಾಗ್ಯೆ ವಿಪರೀತ ಭಾರವಾಗಿ ಕಂಡದ್ದೂ, ಈ ಕಾರ್ಯದ ಆರಂಭವು ತನ್ನ ಅಧಿಕಾರಕ್ಕೆ ವಿಷವೂ ವ್ಯಾಧಿಯೂ ಎಂದು ಎಣಿಸಿದ ಸೈತಾನನು ಅವನನ್ನು ಅಂಥಾ ಸಮಯಗಳಲ್ಲಿ ಅಗಾಧವಾಗಿ ಶೋಧಿಸಿದ್ದೂ ಆಶ್ಚರ್ಯವಲ್ಲಾ. ನಿಶ್ಚಯವಾಗಿ ಲುಥರನು ವರ್ತ್‌ಬುರ್ಗದಲ್ಲಿ ಬಹು ಭಾರವಾದ ಆತ್ಮಿಕ ಶೋಧನೆಗಳನ್ನು ತಾಳ ಬೇಕಾಯಿತು. ಆದಾಗ್ಯೂ ಒಂದು ಸಾರಿ ದುಷ್ಟ ಶತ್ರುವಾದ ಸೈತಾನನು ತಾನೇ ಅವನಿಗೆ ಪ್ರತ್ಯಕ್ಷವಾಗಲಾಗಿ, ಲುಥರನು ದವತಿ ತೆಗದು ಅವನಿಗೆ ಹೊಡದನೆಂಬದು ಕಟ್ಟು ಕಥೆಯಾಗಿದ್ದರೂ, ಅದರಿಂದ ಸಹ, ಲುಥರನಿಗೆ ಪ್ರಾಪ್ತವಾದ ಮನೋವ್ಯಥೆಗಳನ್ನು ಗ್ರಹಿಸ ಬಹುದು. ಈ ಕಾಲದಲ್ಲಿ ಹ್ಯಾಗೂ ಅವನು ದೇವರ ವಾಕ್ಯವಾಗಿರುವ ಆತ್ಮದ ಖಡ್ಗದಿಂದಲೂ, ಅವನು ಚನ್ನಾಗಿ ಪ್ರಯೋಗಿಸ ತಿಳಿದ ಮತ್ತೊಂದು ಆಯುಧವಾಗಿರುವ ಮನಃಪೂರ್ವಕವಾದ ಪ್ರಾರ್ಥನೆಯಿಂದಲೂ, ನರಕದ ಬಲಗಳಿಗೂ ಎಸುಗೆಗಳಿಗೂ ಎದುರು ನಿಂತು, ಹೋರಾಡಿ; ಪುನಃಪುನಃ ಜೈಸಿದನು. ಈ ಪ್ರಕಾರ ಯುದ್ಧಜಯಗಳಿಂದ ಅವನ ಧೈರ್ಯ ಸಹಾ ಏರೇರುತ್ತಾ ಬಂತು. ಅವನು ವರ್ತ್‌ಬುರ್ಗದಿಂದ ಒಂದು ಸಾರಿ ಬರದು ಕಳುಹಿಸಿದ್ದೇನಂದರೆ: "ಪೋಪನು ನಮ್ಮನ್ನು ಸುಡುವ ಹಾಗೆ ಅಥವಾ ಕೊಲ್ಲುವ ಹಾಗೆ ನಾವು ಯೋಗ್ಯರೆಂದೆಣಿಸುವ ಹಾಗೆ, ನಮ್ಮ ವಿಷಯದಲ್ಲಿ ದೇವರ ಚಿತ್ತವಾದರೆ ಎಷ್ಟೋ ಉತ್ತಮ! ಆಗ್ಯೆ ನಮ್ಮ ರಕ್ತವು ಕೂಗಿ ದೇವರ ನ್ಯಾಯತೀರ್ಪುಗಳನ್ನು

ಕೆಳಗಿಳಿಯ ಮಾಡುವದಾದರೆ, ಪೋಪನ ಅಂತ್ಯವು ಬಂದೀತಲ್ಲಾ! ಆದಾಗ್ಯೂ ರಕ್ತದಿಂದ ಸಾಕ್ಷಿ ಕೊಡುವದಕ್ಕೆ ನಾವು ಯೋಗ್ಯರಲ್ಲವಾದರೆ, ಯೇಸು ಕ್ರಿಸ್ತನೊಬ್ಬನೆ ಕರ್ತನು, ಯುಗಯುಗಾಂತರಕ್ಕೆ ಕೊಂಡಾಡ ತಕ್ಕ ನಮ್ಮ ದೇವರಾದ ಕರ್ತನಾಗಿದ್ದಾನೆಂದು, ನಮ್ಮ ಜೀವದಿಂದಲೂ ಧ್ವನಿಯಿಂದಲೂ ಅರಿಕೆ ಮಾಡುವದಕ್ಕೆ ಶಕ್ತರಾಗುವ ಹಾಗೆ ಆತನಿಗೆ ಮೊರೆ ಇಟ್ಟು, ಆತನ ಕರುಣೆಯನ್ನು ಬೇಡಿ ಕೊಳ್ಳುವಾ. ಆಮೆನ್."

ಲುಥರನು ಹ್ಯಾಗೂ ವರ್ತ್‍ಬುರ್ಗದಲ್ಲಿ ಸಹಾ ನಡತೆಯಿಂದಲೂ ಧ್ವನಿಯಿಂದಲೂ ಕರ್ತನನ್ನು ಅರಿಕೆ ಮಾಡೇ ಮಾಡಿದನು. ಅವನು ದುರ್ಗವಾಸಿಗಳಿಗೆ ಯಾವಾಗಲೂ ಪ್ರಸಂಗಿಸುತ್ತಾ ಇದ್ದನು. ಮತ್ತು ಅವರು ಸಹಾ ಈ ವಿದ್ವಾಂಸನಾದ ಭಕ್ತಿಯುಳ್ಳ ಪೂರ್ಣ ಆತ್ಮಿಕ ಶೂರನಿಗೆ ಅತಿರೇಕ ಮೆಚ್ಚಿದರು. ಆ ಕಾಲದಲ್ಲಿ ಕೆಲವು ಸಣ್ಣ ಸಣ್ಣ ಗ್ರಂಥಗಳನ್ನು ಬರದನು, ಹಾಗೆ, ರೋಮಿಯರ ಕಿವಿಯರಿಕೆಗೆ ವಿರೋಧವಾದ ಮಹಿ ೧, ಮೋಸದ ಅನರ್ಥದ ವಿಷಯ ೧, ಬೈರಾಗಿ ವ್ರತದ ವಿಷಯ ೧. ಅಲ್ಲಿಯೆ ಆದಿತ್ಯವಾರ ಹಬ್ಬಗಳಲ್ಲಿ ಓದ ತಕ್ಕ ಸುವಾರ್ತೆ ಪತ್ರಿಕೆಗಳ ವಾಕ್ಯಗಳ ವಿಷಯ ಪ್ರಸಂಗಗಳನ್ನು ಬರದಿಡುವದಕ್ಕೆ ತೊಡಗಿದನು. ಆದರೂ ಆ ದುರ್ಗದಲ್ಲಿ ಮಾಡಿದ ಸಮಸ್ತ ಕಾರ್ಯಗಳಲ್ಲಿ ಒಂದು ಅತಿ ಘನವಾದ್ದು, ಅದೇನಂದರೆ, ದೇವರ ವಾಕ್ಯದ ಭಾಷಾಂತರ. ಇದನ್ನು ಅವನು ಆರಂಭ ಮಾಡಿ, ಬಹಳ ಬಹಳ ಭಾಷಾಂತರ ಮಾಡಿದನು.

ಈ ಪ್ರಕಾರ ಅವನು ಇಂಥಾ ಏಕಾಂತವಾದ ಮರೆಯಾದ ಸ್ಥಳದಲ್ಲಿ ಇದ್ದು, ವಿಸ್ತಾರವಾದ ದೇಶಗಳಿಗೂ ಮನುಷ್ಯರಿಗೂ ಬೆಳಕು ಕೊಡುವ ಹಾಗೆ, ನಿಜವಾದ ಬೆಳಕನ್ನು ದೀಪದ ಮೇಲೆ ಹಚ್ಚಿಟ್ಟನು.

ಲುಥರನು ವರ್ತ್‍ಬುರ್ಗದಲ್ಲಿ ಇರುವಾಗ್ಯೆ, ಬಳ್ಳದ ಕೆಳಗೆ ಇಟ್ಟವನ ಹಾಗೆ ಇದ್ದನು; ಆದರೆ "ಅವನು ಆ ಬೆಳಕಾಗಿರಲಿಲ್ಲಾ," "ನಾನು ಏನೂ ಅಲ್ಲಾ," ಎಂದು ಅವನು ಹೇಳಿದನು. ಆದರೆ ಆ ಕಾಲದಲ್ಲಿ ನಿಜ ಬೆಳಕಾಗಿರುವ ಕರ್ತನ ನಿತ್ಯವಾಕ್ಯ ಸಹಾ ಬಳ್ಳದ ಕೆಳಗೆ ಇತ್ತು. ಅದು ಮೂಲಭಾಷೆಗಳಾದ ಪರಭಾಷೆಗಳಿಂದ ಅಡಗಿ ಇತ್ತು. ಆದ್ದರಿಂದ ಜನರು ಅದನ್ನು ತಿಳುಕೊಳ್ಳಲಿಕ್ಕೆ ಆಗಲಿಲ್ಲಾ. ಈ ಪ್ರಕಾರ ಇರುವಾಗ್ಯೆ, ಆ ದೇಶದವರ ಜನ್ಮಭಾಷೆಯಾಗಿರುವ ಜರ್ಮನ ಭಾಷೆಯಲ್ಲಿ ದೇವರ ವಾಕ್ಯವನ್ನು ಅಂತರಿಸಿದಾಗ, ಅದು ದೀಪಸ್ತಂಭದ ಹಾಗೆ ಆಗಿ, ಅದರ ಮೇಲೆ ಇಟ್ಟ ನಿತ್ಯವಾಕ್ಯದ ಮಹಿಮೆಯುಳ್ಳ ಬೆಳಕು ಸರ್ವ ಜನಾಂಗಕ್ಕೆ ಬೆಳಗಿತು.

ಪರಿಶುದ್ಧ ಬರಹವನ್ನು ಭಾಷಾಂತರಿಸ ಬೇಕೆಂಬದು ಲುಥರನಲ್ಲಿ ದೇವರಿಂದ ಹುಟ್ಟಿದ ಮಹಾ ಆಲೋಚನೆ ಆಗಿತ್ತು. ಈ ಉತ್ತಮೋತ್ತಮ ಪುಸ್ತಕವು ಕೆಲವು ವಿದ್ವಾಂಸರಿಗೆ ಮಾತ್ರವೆ ಅಷ್ಟು ವರೆಗೆ ಗಮ್ಯವಾಗಿತ್ತಾದರೆ, ಅಂದಿನಿಂದ, ಅದು ಸ

ರ್ವರಿಗೆ ಹಸ್ತಗತವಾಗ ತಕ್ಕ ವಸ್ತುವಾಯಿತು. ಅಂದಿನಿಂದ ಸಮಸ್ತರು, ಹಿರಿಕಿರಿಯರೂ ದೊಡ್ಡವರೂ ಬಡವರೂ ತಾವೇ ತಮ್ಮಷ್ಟಕ್ಕೆ ದಿವ್ಯ ಸತ್ಯದ ವರ್ತ್ರೆಯಿಂದಲೇ ಮೊಗಿಯುವದಕ್ಕೂ, ಪೋಪನ ಅಬದ್ಧ ಬೋಧನೆಗಳ ವಿಷಯದಲ್ಲಿ ಪರಮೋತ್ತಮ ರೀತಿಯಾಗಿ ನಿಶ್ಚಯ ಮಾಡಿ ಕೊಳ್ಳುವದಕ್ಕೂ, ಸಮವಾದ ಪರಮ ಪರಿಶುದ್ಧವಾದ ವಿಶ್ವಾಸದಲ್ಲಿಯೆ ಕಟ್ಟಿ ಕೊಳ್ಳುವದಕ್ಕೂ, ಇನ್ನೂ ಮುಂದೆ ಬರುವ ಅಬದ್ಧ ಬೋಧನೆಗಳಿಗೆ ಎದುರು ನಿಲ್ಲಲಿಕ್ಕೆ ಆಯುಧಸಂಗ್ರಹ ಮಾಡಿ ಕೊಳ್ಳಲಿಕ್ಕೂ ಮಾರ್ಗವಾಯಿತು. ಇದರ ಮುಂಚೆ ಸಹಾ ದೇವರ ವಾಕ್ಯದ ಜರ್ಮನ ಭಾಷಾಂತರಗಳು ಇದ್ದವು ಹೌದು; ಆದರೆ ಶಬ್ದಾರ್ಥದಲ್ಲಿಯೂ ಭಾವಾರ್ಥದಲ್ಲಿಯೂ ಸ್ಪಷ್ಟಾರ್ಥದಲ್ಲಿಯೂ ಅವು ಎಂದಿಗೂ ಲುಥರನ ಭಾಷಾಂತರಕ್ಕೆ ಎಣೆಯಾಗಲಾರವು. ಈ ಕೆಲಸವನ್ನು ಆರಂಭಿಸುವಾಗ, ಲುಥರನ ಹೃದಯಕ್ಕೆ ಎಷ್ಟು ಹರ್ಷವಾಯಿತೆಂಬದನ್ನು ಆ ಕಾಲದಲ್ಲಿ ಒಬ್ಬ ಆಪ್ತ ಸ್ನೇಹಿತನಿಗೆ ಬರದ ಮಾತಿನಿಂದ ತಿಳಿಯ ಬಹುದು. “ಈ ಪುಸ್ತಕ ಮಾತ್ರವೆ ಸಕಲ ಭಾಷೆಗಳಲ್ಲಿ ಅಧ್ಯಾಪನವಾಗುವದಕ್ಕೂ, ಸಕಲ ಮನುಷ್ಯರ ಕೈಗಳಿಗೂ ಕಣ್ಣುಗಳಿಗೂ ಕಿವಿಗಳಿಗೂ ಒದಗುವದಕ್ಕೂ ಯೋಗ್ಯವಾಗಿದೆ”. ಅವನು ವರ್ತ್‌ಬುರ್ಗದಲ್ಲಿ ಪೂರ್ಣ ಹೊಸ ಒಡಂಬಡಿಕೆಯನ್ನೂ ಕೆಲವು ಕೀರ್ತನೆಗಳನ್ನೂ ಭಾಷಾಂತರಿಸಿದನು. ಈ ದೇವವಾಕ್ಯದ ಪುಸ್ತಕದ ಸಂಗತಿಯು ಹ್ಯಾಗಂದರೆ, —

ಲುಥರನು ತಾನು ಭಾಷಾಂತರಿಸಿದ್ದನ್ನು ವರ್ತ್‌ಬುರ್ಗದಿಂದ ವಿತ್ತೆನ್‌ಬೆರ್ಗಕ್ಕೆ ತಂದು, ಅದನ್ನು ವಿದ್ವಾಂಸರಾದ ತನ್ನ ಸ್ನೇಹಿತರೊಡನೆ ಮೂಲಭಾಷೆಗೆ ಸಮ ಇಟ್ಟು ನೋಡಿ, ೧೫೨೨ರಲ್ಲಿ ಪೂರ್ಣ ಹೊಸ ಒಡಂಬಡಿಕೆಯನ್ನು ಛಾಪಿಸಿ ಪ್ರಕಟ ಮಾಡಿದನು. ಇದಾದ ಮೇಲೆ ಹಳೇ ಒಡಂಬಡಿಕೆಯ ಭಾಷಾಂತರವನ್ನು ಆರಂಭಿಸಿ, ಸ್ನೇಹಿತರ ಸಹಾಯದಿಂದ ಕಡೆ ವರೆಗೆ ಮುಗಿಸಿದನು; ಎಷ್ಟೆಷ್ಟು ಭಾಗವು ಮಾಡಿ ತೀರಿತೋ, ಅಷ್ಟಷ್ಟು ಛಾಪಿಸಿದನು. ೧೫೩೪ರಲ್ಲಿ ಪರಿಶುದ್ಧ ಬರಹವೆಲ್ಲಾ ಜರ್ಮನ ಭಾಷೆಯಲ್ಲಿ ಒಂದೇ ಸರ್ತಿ ಪೂರ್ಣವಾಗಿ ಪ್ರಕಟ ಮಾಡಲಾಯಿತು.

ಈ ಕಾರ್ಯಕ್ಕೋಸ್ಕರ ಜರ್ಮನರು ಮಾತ್ರವಲ್ಲ, ಅದು ಪರಭಾಷೆಗಳಲ್ಲಿ ಭಾಷಾಂತರ ಮಾಡುವದಕ್ಕೆ ಕಾರಣವಾದದರಿಂದ, ನಾವು ಸಹಾ ದೇವರಿಗೆ ಎಂದೆಂದಿಗೂ ಕೃತಜ್ಞರಾಗಿರ ತಕ್ಕದ್ದು. ಮೊದಲನೆ ಸರ್ತಿ ಭಾಷಾಂತರ ಮಾಡುವವರಿಗೆ ಬಿದ್ದ ಪ್ರಯಾಸವು ಅಲ್ಪವಲ್ಲಾ. ಒಂದೊಂದು ಸರ್ತಿ ಮೂಲಭಾಷೆಯ ಒಂದು ಶಬ್ದಕ್ಕೆ ಸರಿ ಬೀಳುವ ಜರ್ಮನ ಶಬ್ದವನ್ನು ನಿಶ್ಚೈಸುವದಕ್ಕೆ ೨ — ೩ — ೪ ಸಪ್ತಕಗಳು ಬೇಕಾದಾವು ಎಂದೂ, ಇಯೋಬ್ ಪುಸ್ತಕವನ್ನು ಭಾಷಾಂತರ ಮಾಡುವಾಗ್ಗೆ ಮೆಲಂಥೋನ

ನ ಸಂಗಡಲೂ ಔರಗಲ್ಲನ ಸಂಗಡಲೂ ೩ ಪಂಗ್ತಿಗಳಿಗೆ ನಾಲ್ಕು ದಿನ ಬೇಕಾಯಿ ತೆಂತಲೂ, ಈ ಕಾಲದವರು ಸಸಾರವಾಗಿದೆಂದು ನೆನಸುವಲ್ಲಿ, ಎಡತಡೆಗಳನ್ನೆಲ್ಲಾ ದಾಟುವದಕ್ಕೆ, ತಾನೂ ತನ್ನ ಸ್ನೇಹಿತರೂ ಬೆಗರ್ಚು ಕರಗ ಬೇಕಾಯಿತೆಂತಲೂ ಲುಥ ರನು ಹೇಳುತ್ತಾನೆ. ಆ ಕಷ್ಟಗಳು ಸಹಾ ಸಫಲವಾದವು. ಜರ್ಮನ ಭಾಷಾಂತರವು ಶುದ್ಧವಾಗಿಯೂ, ಸಮವಾಗಿಯೂ, ಸ್ವಚ್ಛವಾಗಿಯೂ, ಸ್ಪಷ್ಟವಾಗಿಯೂ, ಚಿದ್ರವಾ ಗಿಯೂ, ಬಲವಾಗಿಯೂ, ಸುಲಭವಾಗಿಯೂ, ರಮ್ಯವಾಗಿಯೂ ಇರುತ್ತದೆ. ಇದ ರಿಂದ ಲುಥರನು ಜರ್ಮನ ಭಾಷೆಯಲ್ಲಿ ಮಹಾ ಸೂರಿಯಾಗಿದ್ದನೆಂತ ಮಾತ್ರವಲ್ಲ, ಇದಕ್ಕೆ ದೇವರ ವಿಶೇಷವಾದ ಸಹಾಯವನ್ನು ಪಡ ಕೊಂಡಿದ್ದನೆಂತ ಸಹಾ ನಂಬ ಬೇಕು. ಈ ವಿಷಯದಲ್ಲಿ ಮೆಲಂಥಾನನು: "ದೇವರು ಮಾಡಿದ ಪರಮಾದ್ಭುತಗಳ ಲ್ಲಿ ಪಂಡಿತ ಲುಥರನಿಂದ ಲೋಕಾಂತ್ಯದ ಮುಂಚೆಯೆ ಮಾಡಿದ ಈ ಕಾರ್ಯವು ದೊಡ್ಡದಾಗಿರುತ್ತದೆ" ಎಂದು ಹೇಳುತ್ತಾನೆ.

ದೇವರು ಲುಥರನ ಪ್ರಾರ್ಥನೆಯನ್ನೂ ಕಷ್ಟವನ್ನೂ ಅವನ ಉತ್ತಮ ಭಾವವ ನ್ನೂ ಐಶ್ವರ್ಯವಾಗಿ ಸಲಿಸಿದನು. ಲುಥರನು ಈ ವಿಷಯದಲ್ಲಿ ಹೇಳುವದೇನಂದ ರೆ "ನಾನು ಇದರಲ್ಲಿ ಪರಮ ನಂಬಿಕೆಯನ್ನೂ ಸಾಹಸವನ್ನೂ ಇಟ್ಟಿದ್ದೇನೆಂದು ಎಂ ದಾದರೂ ಮಿಥ್ಯಾಲೋಚನೆ ಮಾಡಲಿಲ್ಲವೆಂದು ಒಳ್ಳೇ ಮನಸ್ಸಾಕ್ಷಿಯಿಂದ ಹೇಳ ಬಹುದು. ಹ್ಯಾಗೆಂದರೆ ಅದಕ್ಕೋಸ್ಕರ ಒಂದು ಕಿರಿ ಕಾಸಾದರೂ ತಕ್ಕೊಳ್ಳಲಿಲ್ಲಾ. — ಹಾಗೆಯೇ ಅದರಲ್ಲಿ ನನ್ನ ಮಾನದ ಮೇಲೆ ಕಣ್ಣಿಡಲಿಲ್ಲವೆಂದು ನನ್ನ ಕರ್ತನಾದ ದೇವರು ಬಲ್ಲನು. — ನಾನದನ್ನು ಪ್ರಿಯವಾದ ಕ್ರೈಸ್ತರ ಉಪಕೃತಿಗೂ, ನಾನು ಸಾ ವಿರ ಸರ್ತಿ ಎಷ್ಟು ಸಾಹಸದಿಂದ ಭಾಷಾಂತರಿಸಿದರೂ ಒಂದೇ ಘಳಿಗೆ ಬದುಕುವದಕ್ಕಾ ಗಲಿ ಸ್ವಸ್ಥ ಕಣ್ಣಿನಿಂದ ಇರುವದಕ್ಕಾಗಲಿ ಅಯೋಗ್ಯನೆಂದು ಹೇಳುವಷ್ಟು ಅಮಿತ ವಾದ ದಯೆಯನ್ನು ಘಳಿಗೆ ಘಳಿಗೆ ತೋರಿಸುವ, ಮೇಲೆ ಕೂತಿರುವವನ ಮಾನಕ್ಕೂ ಮಾಡಿದ್ದೇನೆ. ನಾನೂ ನನಗೆ ಇದ್ದದ್ದೂ ಎಲ್ಲಾ ಆತನ ಕೃಪೆಯಿಂದಲೂ ಕರುಣೆ ಯಿಂದಲೂ, ನಿಶ್ಚಯವಾಗಿ ಆತನ ಅಮೋಲ್ಯ ರಕ್ತದಿಂದಲೂ ಬೆವರಿನಿಂದಲೂ ಉಂ ಟಾಯಿತು; ಆದ್ದರಿಂದ ದೇವರ ಚಿತ್ತವಾದರೆ, ಎಲ್ಲಾ ಮನಃಪೂರ್ವಕವಾಗಿಯೂ ಆನಂದದಿಂದಲೂ ಆತನ ಮಾನಕ್ಕೆ ಅನುಕೂಲವಾಗ ಬೇಕು."

ಈ ಪ್ರಕಾರ ಲುಥರನು ಹೇಳಿದನು. ಆದರೆ ನಾವು ಮನುಷ್ಯರೀತಿಯಾಗಿ ಏ ನು ಹೇಳ ಬಹುದೆಂದರೆ: ಲುಥರನು ಅವನ ಜೀವದಲ್ಲೆಲ್ಲಾ ದೇವರ ವಾಕ್ಯದ ಭಾ ಷಾಂತರದ ಹೊರತು ಬೇರೇನೂ ಮಾಡದೇ ಇರುತ್ತಿದ್ದರೂ, ಇದೊಂದೆ ಸಂತಾನ ಪಾರಂಪರೆಯಾಗಿ ಕಾಲಾಂತದ ವರೆಗೆ ಅವನ ಹೆಸರು ಹೇಳಿಸಲಿಕ್ಕೆ ಸಾಕು.

ಈ ಭಾಷಾಂತರವನ್ನು ಲಕ್ಷಾಂತರ ಲಕ್ಷಾಂತರವಾಗಿ ಛಾಪಿಸಿದ್ದಲ್ಲದೆ, ಅದರಿಂದ ಹೊಲ್ಲ, ಅಂಗ್ಲ, ವೆಂದ, ಪೋಲ, ಸ್ವೀದ, ದೇನ ಮುಂತಾದ ಭಾಷೆಗಳಲ್ಲಿ ಅದನ್ನು ಅಂತರಿಸಿದರು. ಈ ಪ್ರಕಾರ ಲುಥರನ ಭಾಷಾಂತರದಿಂದ ದೇವರ ವಾಕ್ಯವೂ ನಮ್ಮ ರಕ್ಷಣೆಯ ವಿಷಯವಾದ ದೇವರ ಸಂಕಲ್ಪವೂ ಎಷ್ಟು ವಿಸ್ತಾರವಾಯಿತೆಂತ ತಿಳುಕೊಳ್ಳ ಬಹುದು. ದೇವರ ವಾಕ್ಯವು ಅಂದಿನಿಂದ ಎಷ್ಟೋ ಕೋಟ್ಯಾನು ಕೋಟಿ ಜನರನ್ನು ಬೆಳಗಿಸಿ, ಆದರಿಸಿ, ಪರಿಶುದ್ಧೀಕರಿಸಿ, ನಿತ್ಯ ಜೀವದೊಳಗೆ ಹೋಗಿಸಿಯದೆ! ಅದರಿಂದ ಅವಾಚ್ಯವಾದ ಪುರುಷಾರ್ಥವೂ ಅಪರಿಮಿತ ಮಂಗಲವೂ ಉಂಟಾಯಿತು. ಆನ್‌ಹಲ್ಟದ ಗೆಯೊರ್ಗನೆಂಬ ಶಕ್ತಿಯುಳ್ಳ ಶ್ರೀಮಂತನು ಈ ವಿಷಯದಲ್ಲಿ ಬಹು ಹರ್ಷ ಪಟ್ಟು, ಪರಿಶುದ್ಧ ದಾವೀದನೂ ಪರಿಶುದ್ಧ ಪ್ರವಾದಿಗಳೂ ನಮ್ಮ ಭಾಷೆಯಲ್ಲಿ ಹುಟ್ಟಿ ಬೆಳದು ಮಾತಾಡಿದ ಹಾಗೆ ಆಯಿತು ಎಂದು ಹೇಳುವ ಪ್ರಕಾರ, ನಮಗೂ ನಮ್ಮ ಕನ್ನಡ ತುಳು ಭಾಷೆಗಳಲ್ಲಿ ಈ ಪರಿಶುದ್ಧ ವಾಕ್ಯವು ಸಿಕ್ಕಿರುವದರಿಂದ, ಆ ಗೆಯೊರ್ಗನ ಸಂಗಡ ನಾವು ಸಹಾ “ಇಂಥಾ ಕೃಪೆಗೋಸ್ಕರ ದೇವರಿಗೆ ಕೃತಜ್ಞಾಪಿಸಿ, ನಮಗಿರುವ ಭಾಷಾಂತರವನ್ನೂ ಪ್ರೀತಿ ಮಾಡಿ, ಅಮೋಲ್ಯವೆಂದೆಣಿಸಿ, ನಮ್ಮ ಸಂತತಿಗೂ ಅದು ಶುದ್ಧವಾಗಿ ಪ್ರಾಪ್ತವಾಗುವ ಹಾಗೆ ನೋಡಿ ಕೊಳ್ಳುವಾ”

ಆದರೆ ಈಗ ನಾವು ತಿರಿಗಿ ವರ್ತ್‌ಬುರ್ಗಕ್ಕೆ ಹೋಗ ಬೇಕು. ಲುಥರನು ಈ ಪ್ರಕಾರ ದೇವರಿಂದ ತನಗೆ ಬಂದ ಕರಿಯುವಿಕೆಯಲ್ಲಿ ದಣಿಯದೆ, ಕರ್ತನ ಕೆಲಸವನ್ನು ಸಾಗಿಸುತ್ತಾ ಇದ್ದನು. ಅವನು ಆ ದುರ್ಗದಲ್ಲಿ ಹತ್ತೇ ತಿಂಗಳು ಇದ್ದರೂ, ಈ ಸ್ವಲ್ಪ ಕಾಲದೊಳಗೆ ಅನೇಕ ಮನಸಿನ ಶೋಧನೆಗಳಲ್ಲಿಯೂ, ಆಗ್ಯಾಗ್ಯೆ ಶರೀರದ ಜಾಡ್ಯದಲ್ಲಿಯೂ ಮಾಡಿದ್ದೂ ಬರದದ್ದೂ ನೋಡಿದರೆ, ಬೆರಗಾಗ ಬೇಕು. ಆದರೂ ಎಷ್ಟು ಕಷ್ಟ ಪಟ್ಟಾಗ್ಯೂ, ಅವನಿಗೆ ಅದು ಸಾಕೆಂದು ಕಾಣಲೇ ಇಲ್ಲಾ.

ಸಭೆಗೋಸ್ಕರ ಅವನು ದುಖ್ಖ ಪಟ್ಟದ್ದೂ ಅತ್ತದ್ದೂ ಹೇಳಿ ತೀರದು. ಅದರ ದುಖ್ಖಕರವಾದ ದುರಾವಸ್ಥೆಯು ಅವನ ಹೃದಯವನ್ನು ಪೀಡಿಸಿತು, ಆದಾಗ್ಯೂ ತಾನು ಎಷ್ಟು ಉದಾಸೀನನಾಗಿದ್ದೇನೆಂದು ಕೋಪಿಸಿ ಕೊಂಡನು. ಅವನು ವರ್ತ್‌ಬುರ್ಗದಿಂದ ಮೆಲಂಥೊನನಿಗೆ ಬರದದ್ದೇನೆಂದರೆ: “ನಾನು ಕೇವಲ ಅಸಂಖ್ಯವಾದ ಪ್ರತಿ ಕ್ರಿಸ್ತವಾದ (ಪೋಪನ) ರಾಜ್ಯದ ದೆಸೆಯಿಂದ ಪೂರ್ಣವಾಗಿ ಅತ್ತು ಕರಗಿ ಹೋಗಿ, ನನ್ನ ಜನಾಂಗದ ಹತವಾದ ಮಕ್ಕಳನ್ನು ಕಣ್ಣೀರು ಹೊಳೆಗಳಿಂದ ಗೋಳಾಡದಿರುವ ನನ್ನ ನಿಷ್ಠುರತ್ವವನ್ನು ಎಷ್ಟು ಶಪಿಸುತ್ತೇನೆ!” ಆದರೂ ಲುಥರನು ಅಲ್ಲಿ ಬಹಳ ಕಣ್ಣೀರು ಬಿಟ್ಟನು, ಮತ್ತು ತನ್ನ ಕಣ್ಣೀರಿನಿಂದಲೂ ದೇವರಿಗೆ ಮಾಡಿದ ತೀವ್ರವಾದ ಪ್ರಾರ್ಥನೆಯಿಂದಲೂ ಈ ಪತ್ಮಾಸದಲ್ಲಿ ಸಭೆಯ ಕಾರ್ಯಕ್ಕೆ ಎಷ್ಟೋ ಸೇವೆ ಮಾಡಿದನು! —

ತನ್ಮಧ್ಯ ವಿತ್ತೆನ್‌ಬೆರ್ಗ್‌ದಲ್ಲಿ ಎಲ್ಲಾ ಸಮವಾಗಿ ನಡಿಯಲಿಲ್ಲಾ. ಇಷ್ಟು ವರೆಗೆ ಲುಥರನ ಪಕ್ಷದಲ್ಲಿದ್ದ ಶಾಸ್ತ್ರಿ ಕರ್ಲ್‌ಸ್ತತ್ತನು ಉನ್ಮಾದಪಿಶಾಚಿ ಹಿಡಿದವನಾಗಿ, ಕೇವಲ ದುಖ್ಖಕರವಾದ ರಂಚಾರೂಢಿ ಮಾಡಿ ಬಿಟ್ಟನು, ಪಂಡಿತ ದಿದುಮನು ಅವನಿಗೆ ಸಹಾಯ ಮಾಡಿದನು. ಅವರ ಪ್ರೇರೇಪಣೆಯಿಂದ ವಿದ್ಯಾರ್ಥಿಗಳು ದೇವಾಲಯಗಳೊಳಗೆ ನುಗ್ಗಿ, ಮೀಸು ಓದುತ್ತಾ ಇದ್ದ ಯಾಜಕರನ್ನು ಪೀಠಗಳಿಂದ ಬಲುಮೆಯಾಗಿ ಓಡಿಸಿ, ಕೇಳಲಿಕ್ಕೆ ಬಂದ ಜನರನ್ನು ಚದರಿಸಿದರು. ಮೀಸು ಓದುವದೂ ಕೇಳುವದೂ ಸಮವಲ್ಲ ಸರಿ; ಆದರೆ ಆ ಅನರ್ಥವನ್ನು ತೆಗಿಯುವದಕ್ಕೆ ಇಂಥಾ ಉಪಾಯವು ಸಮವಲ್ಲಾ. ಮತ್ತೆ ಪರಿಶುದ್ಧರ ಬೊಂಬೆಗಳ ಮೇಲೆ ಬಿದ್ದರು. ಈ ಬೊಂಬೆಗಳು ಸಭೆಯಲ್ಲಿ ವಿಪರೀತ ಅಭಿಮಾನವನ್ನು ಪಡಕೊಂಡಿದ್ದರೂ, ಆ ಬೊಂಬೆಗಳಲ್ಲಿ ತಪ್ಪಿಲ್ಲಾ, ಅವು ಏನು ಮಾಡಿದ್ದಾವೆ? ಲುಥರನು ಹೇಳುವ ಪ್ರಕಾರ, ಅವು ನೆನಪಿಗೂ ಸಾಕ್ಷಿಗೂ ತಕ್ಕ ಬೊಂಬೆಗಳಾಗಿ ದೇವಾಲಯಗಳಲ್ಲಿ ಇರ ಬಹುದು, ಅವುಗಳು ಒಳ್ಳೇ ಕ್ಷೇಮಕರವಾದ ಆಲೋಚನೆಗಳಿಗೆ ಕಾರಣವಾಗ ಬಹುದು, ಅವುಗಳನ್ನು ಆರಾಧಿಸದೆ ಪೂಜಿಸದೆ ಇದ್ದರೆ ಸೈ. ಆದರೆ ಕರ್ಲ್‌ಸ್ತತ್ತನೂ ಅವನ ಸಂಗಡಿಗರೂ ಮಹಾರೌದ್ರದಿಂದ ಅವುಗಳ ಮೇಲೆ ಬಿದ್ದು, ನಿಷ್ಕರುಣೆಯಿಂದ ದೇವಾಲಯದ ಹೊರಗೆ ಬಿಸಾಡಿ ಬಿಟ್ಟರು. ಅದರಿಂದ ಕಲಹವೂ ಮಹಾ ಬೊಬ್ಬೆಯೂ ಉಂಟಾಯಿತು, ಪುನಃಸ್ಥಾಪನೆಯ ಪರಿಶುದ್ಧ ಕಾರ್ಯಕ್ಕೆ ಅತಿರೇಕ ನಷ್ಟಕರವಾಗ ಬಹುದಾಗಿತ್ತು.

ಲುಥರನು ಎಲ್ಲಿ ಇದ್ದಾನೆಂತ ಮೆಲಂಥಾನನೂ ಯೋನನೂ ಮಾತ್ರವೆ ತಿಳಿದಿದ್ದರು. ಇವರು ಹೃದಯಸಂಕಟದಲ್ಲಿ ಈ ಅನರ್ಥಗಳ ವರ್ತಮಾನವನ್ನು ಅವನಿಗೆ ತಿಳಿಸಿದರು. ಆಗ್ಯೆ ಲುಥರನು ತಾನೆ ಅಲ್ಲಿಗೆ ಹೋಗಿ, ಕ್ರಮ ಮಾಡುವದೂ ಸಮ ಮಾಡುವದೂ ಒಳ್ಳೆದೆಂದು ನಿಶ್ಚಯ ಮಾಡಿ ಕೊಂಡನು. ಈ ಆಲೋಚನೆಯನ್ನು ಕೂಡಲೆ ಆಯಿಕೆಯ ಅರಸನಿಗೆ ತಿಳಿಸಿ, ತನ್ನ ಸ್ನೇಹಿತರನ್ನು ಆದರಿಸುವ ಬಗ್ಯೆ: "ಈ ಎರಡು ಹೊಗೆಯುವ ಕೊಳ್ಳಿಗಳನ್ನು, ಕತ್ತಿಗಿತ್ತಿ ಇಲ್ಲದೆ, ರಕ್ತಪ್ರವಾಹವಾಗದೆ, ನಿಧಾನವಾಗಿ ನೊಂದಿಸ ಬಹುದೆಂದು ನಿಃಸಂಶಯವಾಗಿ ನಂಬುತ್ತೇನೆ" ಎಂದು ಕಾಗದ ಬರದನು.

ಈ ಪ್ರಕಾರ ಈ ಶ್ರೀಮಂತ ರಾಹುತನು ತನ್ನ ದುರ್ಗವನ್ನು ಬೀಳ್ಕೊಟ್ಟನು, "ಯಾಕಂದರೆ ಕಾರ್ಯದ ಅವಸರವು ಆ ತರದ್ದಾಗಿತ್ತು." ಈ ಮಾತಿನಿಂದ, ಶಾಪಗ್ರಸ್ತನೂ ಅನಾಥನೂ ಎಂದಾದ ಅವನು ಹೆದರದ ಶಾಸನದ ದೆಸೆಯಿಂದ ಬರುವ ಮರಣಕಂಟಕಕ್ಕಾಸ್ಕರವಲ್ಲಾ, ದುರ್ಗವನ್ನು ಬಿಡ ಬಾರದೆಂದು ಆಯಿಕೆಯ ಅರಸನು

ಕೊಟ್ಟು ಅಪ್ಪಣೆಗೋಸ್ಕರ, ತನ್ನ ಮನಸನ್ನು ಸಂತೈಸಿ ಕೊಂಡನು. ಅರಸನಿಗೆ ಅವನು
ಪ್ರಯಾಣದಲ್ಲಿರುವಾಗ್ಯೆ ಒಂದು ಕಾಗದ ಬರದು ಕ್ಷಮೆ ಕೇಳಿ ಕೊಂಡು, ತಾನು ಬ
ರುವದು ಈ ಕಾರ್ಯದಲ್ಲಿ ಎಷ್ಟೋ ಅವಶ್ಯವೆಂದು ತಿಳಿಸಿ, “ತಾನು ಆಯಿಕೆಯ ಅ
ರಸನ ಆಶ್ರಯ ಇನ್ನು ಮುಂದೆ ಬೇಕಾದವನಲ್ಲಾ, ಹ್ಯಾಗಂದರೆ ನನಗೆ ಅಧಿಕವಾದ
ಆಶ್ರಯವು ಶಿಕ್ಕಿ ಅದೆ; ಇದಲ್ಲದೆ ಅರಸನು ನನ್ನನ್ನು ಕಾಪಾಡುವದಕ್ಕಿಂತ, ನಾನು ಅ
ಧಿಕ ವಿಶ್ವಾಸಿಸುವದರಿಂದ ಅಧಿಕವಾಗಿ ಅರಸನನ್ನೇ ಕಾಪಾಡ ಬಹುದು;” ಎಂದು
ಬರದನು.

೧೫೨೨ನೆ ಮಾರ್ಚಿ ೭ಲ್ಲು ಅವನು ವಿತ್ತೆನ್‌ಬೆರ್ಗಕ್ಕೆ ಅಕಸ್ಮಾತ್ತಾಗಿ ಬರಲಾಗಿ,
ಸರ್ವಶಾಲೆಗೂ ಪಟ್ಟಣಕ್ಕೂ ಬಣ್ಣಿಸ ಕೂಡದಷ್ಟು ಹರ್ಷವಾಯಿತು. ಏಳು ದಿನ
ಪರ್ಯಂತ ಅವನು ಬಹು ಬಲವಾಗಿಯೂ ರಮ್ಯವಾಗಿಯೂ ಶಾಂತಕರವಾಗಿಯೂ
ಈ ಅನರ್ಥಕ್ಕೆ ಎದುರಾಗಿ ಪ್ರಸಂಗಿಸಿದನು. ಅವನು ಮಹಾ ವಿವೇಕದಿಂದಲೂ ಸರ್ವ
ರನ್ನು ಸಮ್ಮತಿ ಪಡಿಸುವ ಬಲದಿಂದಲೂ ಮಾತಾಡಿ, ವಿಶ್ವಾಸವು ದೇವರ ವಾಕ್ಯಕ್ಕೆ
ಹತ್ತಿ ಕೊಂಡದ್ದಾಗಿ, ಬಾಯಿಯಿಂದಲೂ ಅದನ್ನು ಅರಿಕೆ ಮಾಡುತ್ತಾ ಇದ್ದರೂ,
ಯಾರನ್ನಾದರೂ ಯಾವದಕ್ಕಾದರೂ ಬಲಾತ್ಕಾರದಿಂದ ಒತ್ತದೆ, ಎಲ್ಲಾ ದೇವರಿಗೆ
ಒಪ್ಪಿಸಿ ಕೊಡುತ್ತದೆಂತಲೂ; ಬಲಹೀನರು ವಿಶ್ವಾಸದಲ್ಲಿ ಬಲವಾಗುವ ಪರ್ಯಂತ
ಅವರನ್ನು ತಾಳಿ ಕೊಳ್ಳ ಬೇಕಲ್ಲದೆ, ಅವರಲ್ಲಿರುವ ತಪ್ಪಾದ ಆಲೋಚನೆಗಳನ್ನು ಹೊ
ರಗೆ ಹಾಕುವದಕ್ಕೆಂದು ಕೈ ನಡಿಸದಿರುವದು ಪ್ರೀತಿಯ ಧರ್ಮವಾಗಿರುತ್ತದೆಂತಲೂ,
ದೇವರ ವಾಕ್ಯದಿಂದ ಪ್ರಮಾಣಿಸಿದನು. ಯಾಕಂದರೆ “ದೇವರ ವಾಕ್ಯವು ಹೃದಯ
ವನ್ನು ಒಂದು ಸಾರಿ ಹಿಡುಕೊಂಡ ಮೇಲೆ, ಮತ್ತೆ ಸಕಲ ಕಾಕುದೈವಭಾವವೂ ಅದೈ
ವಿಕಭಾವವೂ, ಬಲಾತ್ಕಾರ ಲೂಟಿ ಏನೂ ಇಲ್ಲದೆ, ತನ್ನಷ್ಟಕ್ಕೆ ಕರಗಿ ಹೋಗು
ತ್ತದೆ”.

ಈ ಪ್ರಕಾರ ಆತ್ಮದ ಬಲದಿಂದಲೇ ಲುಥರನು ಸ್ವಲ್ಪ ಕಾಲದೊಳಗೆ ಎಲ್ಲಾ ಸ
ಮಾಧಾನ ಮಾಡಿದನು, ಕ್ರಮ ಮಾಡಿದನು. ದಿದುಮನು ಕರ್ತನ ಕಡೆಗೆ ತಿರುಗಿ
ಕೊಂಡನು, ಕರ್ಲಸ್ತ್ರತ್ತನು ತಾನೆ ಸದ್ಯಕ್ಕೆ ಸುಮ್ಮನಿದ್ದನು. ಆಯಿಕೆಯ ಅರಸನು ಲು
ಥರನ ಭೀತಿ ಇಲ್ಲದ ಕಾಗದವನ್ನೂ ಸ್ವೈರದ ನಡತೆಯನ್ನೂ ನೋಡಿ, ಕೋಪಿಸದೆ,
ಅವನ ವಿಶ್ವಾಸಬಲದಿಂದ ಧೈರ್ಯ ತಕ್ಕೊಂಡನು. ಈ ಪ್ರಕಾರ ಲುಥರನು ತಕ್ಕ ಸ್ಥ
ಳದಲ್ಲಿ ಪೂರ್ಣ ಪ್ರವೃತ್ತಿಯಲ್ಲಿ ಇರುವ ಹಾಗಾಯಿತು. ಮತ್ತು ದೇವರ ವಾಕ್ಯ
ವು ಬೆಳದು ಅಭಿವೃದ್ಧಿಯಾಗುತ್ತಾ ಬಂತು.

ಅದರ ಮೇಲಿನ ಎರಡು ವರುಷಗಳಲ್ಲಿ ಲುಥರನು ಮಾಡಿದ ಎರಡು ಆಶ್ಚರ್ಯಕರವಾದ ಕಾರ್ಯಗಳು ನಡದವು; ಎಲ್ಲಾ ಅಕ್ರಮವಾದ ಪ್ರತಿಜ್ಞೆಗಳಿಗೆ ಶತ್ರುವಿನಂತಿದ್ದವನು, ಸಮಸ್ತ ಡಂಭದ ಪರಿಶುದ್ಧತ್ವವನ್ನೂ ಪೂರ್ಣವಾಗಿಯೂ ಬೇಕೆಂದೂ ತ್ಯಜಿಸಿದನು. ೧೫೨೪ರಲ್ಲು ಅವನು ಮಠಸಂಗವನ್ನು ಬಿಟ್ಟನು. ಇಷ್ಟು ವರೆಗೆ ಸರ್ವಶಾಲೆಯ ಶಾಸ್ತ್ರಿಯಾಗಿದ್ದರೂ, ಔಗುಸ್ತೀನರ ಬೈರಾಗಿಯೂ ಆಗಿದ್ದನು. ಆದರೆ ಮಠವು ತನ್ನಷ್ಟು ಖಾಲಿಯಾಗಿ ಹೋಯಿತು; ಒಂದೆರಡು ವರುಷದ ಮುಂಚೆಯೆ ಮಠದ ಅಗ್ರಸ್ಥನೂ ಲುಥರನೂ ಹೊರತಾಗಿ, ಬೈರಾಗಿಗಳೆಲ್ಲಾ ಅದನ್ನು, ನಿಶ್ಚಯವಾಗಿ ದೇವರ ಚಿತ್ತಕ್ಕನುಸಾರವಾಗಿ, ಬಿಟ್ಟಿದ್ದರು. ಮಠಗಳೆಂಬದು ಆರಂಭದಲ್ಲಿ ಪರೋಪಕಾರಾರ್ಥವಾದ ಒಳ್ಳೇ ಕಾರ್ಖಾನೆಯಾಗಿದ್ದವು, ಅಲ್ಲಿಂದ ಕ್ರೈಸ್ತಧರ್ಮವು ಅನೇಕ ಕಡೆಗೆ, ವಿಲಾಯಿತಿಯ ಜನಾಂಗಗಳಿರುವ ದೇಶಗಳಿಗೆ ಹೊರಟು ಬಂತು. ಅವು ಮಾನುಷಕ್ರಮದಿಂದ ಉಂಟಾಗಿ, ದೇವರ ವಾಕ್ಯದಲ್ಲಿ ಈ ವಿಷಯ ಏನೊಂದೂ ಹೇಳಿರುವದಿಲ್ಲಾ ಸರಿ, ಆದಾಗ್ಯೂ ದೇವರ ವಾಕ್ಯಕ್ಕೆ ವಿರೋಧವಾಗಿರದೆ, ಹೊಗಳತಕ್ಕ ಮಂಗಳಕರ ಕಾರ್ಯವಾಗಿತ್ತು. ಮನುಷ್ಯಕೃತಕ್ರಮವಾಗಿರುವದರಿಂದ, ದೇವರ ಚಿತ್ತಕ್ಕನುಸಾರವಾಗಿ ಸರ್ವ ಕಾಲಕ್ಕೆ ಅಲ್ಲಾ, ಸ್ವಲ್ಪ ಕಾಲಕ್ಕೆ ಇರತಕ್ಕದ್ದು; ಲುಥರನ ಕಾಲದಲ್ಲಿ ಮಠಗಳ ಪ್ರಯೋಜನವು ಕಳದು ಹೋಗಿತ್ತು. ಅವು ಮೂಲಗುಣ ಬಿಟ್ಟು, ಸೋಮಾರಿತನ, ಹೊಟ್ಟೆಬಾಕತನ, ಖಂಡು, ಲಂಪಟತನಗಳ ವಸ್ತಿಯಾಗಿ ಹೋದವು; ಮತ್ತು ಅನೇಕ ಸರ್ತಿ ಎಳೆ ಯೌವನದಲ್ಲಿಯೆ ಬಲಾತ್ಕಾರಕ್ಕೋಸ್ಕರ ಅನೇಕರು ಹರಿಕೆ ಹೇಳಿಕೊಳ್ಳ ಬೇಕಾದ್ದರಿಂದಲೂ, ಮಠಗಳಲ್ಲಿ ಜೀವಿಸುವದು ಬೇರೆ ಕಡೆಯಲ್ಲಿ ಜೀವಿಸುವದಕ್ಕಿಂತ ಪರಿಶುದ್ಧವೆಂದೂ, ಪಾಪಹರವೆಂದೂ, ಭಾಗ್ಯಪ್ರದಾಯಕವೆಂದೂ ಬೋಧಿಸುವದರಿಂದಲೂ ನಂಬುವದರಿಂದಲೂ, ಅನೇಕರಿಗೆ ಇಡುರುವದಕ್ಕೆ ಕಾರಣವಾಯಿತು. ಹೀಗಿರುವದರಿಂದ ಲುಥರನು ಅಕ್ಟೋಬರ ೯ಲ್ಲು ಬೈರಾಗಿವೇಷವನ್ನು ತೆಗದಿಟ್ಟು, ಈಗಿನ ಪರ್ಯಂತಕ್ಕೂ ಸುವಾರ್ತಾ ಪಕ್ಷದರವಲ್ಲಿ ವಾಡಿಕೆಯಾಗಿರುವ ಪ್ರಸಂಗದ ಅಂಗಿಯನ್ನು ಧರಿಸಿ, ದೇವಾಲಯಕ್ಕೆ ಬಂದದ್ದು ಸುವಾರ್ತೆಯ ಸತ್ಯಕ್ಕೆ ದೈವಹಿತವಾಗಿಯೂ ದೈವಾಜ್ಞಾಪಿತವಾಗಿಯೂ ಇರುವ ಸಾಕ್ಷಿ ಆಗಿತ್ತು.

ಲುಥರನು ಇದಕ್ಕಿಂತ ಅಧಿಕ ಘನವಾಗಿಯೂ ಆಶ್ಚರ್ಯಕರವಾಗಿಯೂ ಇರುವ ಬೇರೊಂದು ಕೃತ್ಯವನ್ನು ಮರುವರುಷ ನಡಿಸಿದನು; ಅವನು ವಿವಾಹ ಮಾಡಿ ಕೊಂಡನು. ಬಹು ಕಾಲದ ಮುಂಚೆಯೇ ಮದಿವೆ ಮಾಡ ಬಾರದೆಂಬ ಸನ್ಯಾಸದ ವ್ರತವು ಅನ್ಯಾಯವೆಂದು ತೋರಿಸಿ ಇದ್ದನು; ಆದರೂ ಈ ಮಾತಿಗಾಗಿ ಸಮಸ್ತ ಬೋಧಕರು ವಿವಾಹ ಮಾಡಿ ಕೊಳ್ಳುವದು ಅವಶ್ಯವೆಂದು ಹೇಳ ಕೆಲಸವಿಲ್ಲಾ. ಲು

ಥರನು ಮದಿವೆಯಾಗದೆ ಇರುವದಕ್ಕೆ ಸಾಮರ್ಥ್ಯ ಉಳ್ಳವನಾಗಿದ್ದನು; ಆ ಪ್ರಕಾರ ಇರುವದಕ್ಕೆ ಅವನಿಗೆ ಮನಸು ಸಹಾ ಇತ್ತು. ಆದರೂ ತಾನೇ ಮದಿವೆ ಮಾಡಿ ಕೊಂಡು, ಗೃಹಸ್ಥಾಶ್ರಮವು ದೈವಸಮ್ಮತವೆಂದು ತೋರಿಸ ಬೇಕೆಂತಲೂ, ಪಾರಮಾರ್ಥಿಕರು ಸಹಾ ವಿವಾಹ ಮಾಡಿ ಕೊಳ್ಳಲಿಕ್ಕೆ ಸ್ವತಂತ್ರಿಗಳಾಗಿದ್ದಾರೆಂಬ ಬೋಧನೆಯನ್ನು ಅನೇಕರ ಬಲಹೀನ ಹೃದಯಗಳನ್ನು ಧೈರ್ಯ ಪಡಿಸುವದಕ್ಕೆ ಕಾರ್ಯದಿಂದ ಸಾಧಿಸ ಬೇಕೆಂತಲೂ, ಅನೇಕರು ಬಹಳವಾಗಿ ಬೇಡಿ ಕೊಂಡರು. ಇದಲ್ಲದೆ ಅವನ ತಂದೆಯು ಅವನಿಂದ ತನಗೆ ಸಂತತಿಯಾಗ ಬೇಕೆಂದು ಅಪೇಕ್ಷಿಸಲಾಗಿ, ಅದು ಲುಥರನು ಮದಿವೆ ಮಾಡಿ ಕೊಳ್ಳುವ ಹಾಗೆ ಆಗುವದಕ್ಕೆ ಮುಖ್ಯ ಕಾರಣವಾಯಿತು. ಹ್ಯಾಗೆಂದರೆ ಮುಂಚೆ ಅವಿಧೇಯತ್ವದಿಂದ ಎರ್ಫುರ್ತದಲ್ಲಿ ತಾನು ಬಹಳವಾಗಿ ದುಖ್ಖ ಪಡಿಸಿದ ಪ್ರಿಯ ತಂದೆಯನ್ನು ಈಗ ಅದಕ್ಕೆ ಪ್ರತಿಯಾಗಿ ವಿಧೇಯತ್ವದಿಂದ ಆನಂದ ಪಡಿಸುವದಕ್ಕೆ ಅಪೇಕ್ಷಿಸಿದನು.

ಆದ್ದರಿಂದ ಅವನು ಮಠಯುವತಿಯಾದ ಬೋರದ ಥಾರೆಯ ಮಗಳು ಕಥರಿನಳನ್ನು ಮದಿವೆ ಮಾಡಿ ಕೊಳ್ಳಲಿಕ್ಕೆ ನಿಶ್ಚೈಸಿದನು. ಇವಳು ಇತ್ತಲಾಗಿ ಬಡವಾಗಿ ಹೋದ ಪೂರ್ವಶ್ರೀಮಂತರ ಸಂತಾನದವಳಾಗಿದ್ದಳು. ಮಠವನ್ನು ಬಿಟ್ಟಂದಿನಿಂದ ಅವಳು ಲುಥರನ ಸ್ನೇಹಿತನೊಬ್ಬನ ಮನೆಯಲ್ಲಿ ನಿಯತಿನಲ್ಲಿಯೂ ಸಮಾಧಾನದಲ್ಲಿಯೂ ಕಾಲಕ್ಷೇಪ ಮಾಡಿ ಕೊಂಡು ಇದ್ದಳು. ಅವಳಿಗೆ ಅವನು ಪರಿಶುದ್ಧ ತ್ರಿಯೇಕ ದೇವರ ಹೆಸರಿನಲ್ಲಿ ಯಥಾರ್ಥ ಹೃದಯದಿಂದ ಕ್ರೈಸ್ತರಿಗೆ ಯೋಗ್ಯವಾದ ಮದಿವೆಗೆ ಮಾತು ಕೊಟ್ಟು, ೧೫೨೫ನೆ ಜೂನ್ ೧೩ಲ್ಲು ಅವಳ ಸಂಗಡ ವಿವಾಹದ ಗಂಟು ಕಟ್ಟಿಸಿ ಕೊಂಡನು. ಇದರಲ್ಲಿಯೂ ಲುಥರನು ತನ್ನ ಗುಣಕ್ಕೆ ಅನುಸಾರವಾಗಿ ನಡಕೊಂಡನು. ಮುಂಚೆಯೆ ಸುಮ್ಮನೆ ಗೌಜಿ ಬೊಬ್ಬೆ ಆಗದ ಹಾಗೆ, ತನ್ನ ಆಪ್ತ ಸ್ನೇಹಿತರು ಸಹಾ ತಿಳಿಯದಂತೆ, ಮದಿವೆ ಮಾಡಿ ಕೊಂಡನು.

ಎಂಥಾ ಮನಸ್ಸಿನಿಂದ ಗೃಹಸ್ಥಾಶ್ರಮದಲ್ಲಿ ಸೇರಿದನೆಂಬದನ್ನು, ಅವನು ಒಬ್ಬ ಸ್ನೇಹಿತನಿಗೆ ಬರದ ಮಾತುಗಳಿಂದ ತಿಳಿಯ ಬಹುದು: ದೇವರು ನನಗೆ ಈ ನವಜೀವನಮಾರ್ಗವನ್ನು ಆಶೀರ್ವದಿಸಿ, ಪರಿಶುದ್ಧ ಮಾಡ ಬೇಕೆಂದು ಪ್ರಾರ್ಥನೆ ಮಾಡು ಎಂದು ಬರದನು.

ಅವನು ತನ್ನ ಹೆಂಡತಿಯ ಸಂಗಡ ಪರಿಶುದ್ಧವಾಗಿ ನಡಕೊಳ್ಳಲಾಗಿ, ಅವರು ದೇವರ ಆಶೀರ್ವಾದದಲ್ಲಿಯೂ ಮಹಾ ಸಂತೋಷದಲ್ಲಿಯೂ ಬದುಕಿದರು. ಲುಥರನು ತನ್ನ ಹೆಂಡತಿಗೆ ಯೋಗ್ಯ ಗಂಡನೂ ಸತ್ಯ ಸ್ನೇಹಿತನೂ ಬುದ್ಧಿಯುಳ್ಳ ಯಜಮಾನನೂ ಸ್ಥಿರವಾದ ಆಧಾರವೂ ಆಗಿದ್ದನು. ಕಥರೀನಳ ವಿಷಯದಲ್ಲಿ ಅವನು

ಹೇಳುವದೇನಂದರೆ: "ಅವಳು ಅಧೀನವಾಗಿಯೂ ಎಲ್ಲಾದರಲ್ಲಿ ವಿಧೇಯವಾಗಿಯೂ ಯೋಗ್ಯವಾಗಿಯೂ ಇದ್ದಾಳೆ. ನಾನು ನಿರೀಕ್ಷಿಸಿದ್ದಕ್ಕಿಂತ ನನಗೆ ಅಧಿಕ ಪ್ರಾಪ್ತವಾಯಿತು". ಅವಳು ಭಕ್ತಿಯುಳ್ಳ ಪ್ರೀತಿಭಾವದ, ದೇವಭೀತಿಯ, ಗೃಹಕೃತ್ಯದಲ್ಲಿ ಪ್ರೌಢಳಾದ ಹೆಂಡತಿ. ಅವಳ ಸಂಗಡ ಸಮಾಧಾನದಲ್ಲಿಯೇ ಇರುತ್ತೇನೆ. ಅವಳಿಗೆ ಆಸ್ತಿ ಸೊತ್ತು ಮನೆಮಾರು ಬದುಕುಬಾಳು ಎಲ್ಲಾ ಒಪ್ಪಿಸಿ ಕೊಡಲಿಕ್ಕೆ ಅಡ್ಡಿ ಇಲ್ಲಾ ಎಂಬ ಮಾತುಗಳಿಂದ ಅವಳನ್ನು ಹೊಗಳಿದನು. ಮರಣಪತ್ರದಲ್ಲಿ "ಅವಳು ಭಕ್ತಿ, ನಂಬಿಕೆ, ನಿಯತಿ ಇರುವ ಹೆಂಡತಿಯಾಗಿ, ನನ್ನನ್ನು ಸಾರ್ವದಾ ಪ್ರೀತಿ ಮಾಡಿ, ಸನ್ಮಾನಿಸಿ, ಸುಖವಾಗಿ ಇಟ್ಟಳು ಎಂದೂ ಬರದನು. ಅವನು ಕಥರೀನಳನ್ನು ಬಹಳವಾಗಿ ಪ್ರೀತಿ ಮಾಡಿ, ತನಗೆ ಫ್ರೆಂಚ ರಾಜ್ಯವನ್ನಾಗಲಿ, ವೆನೇದಿಗದ ಐಶ್ವರ್ಯವನ್ನಾಗಲಿ ಕೊಟ್ಟರೂ, ಅವಳನ್ನು ಪ್ರತಿಯಾಗಿ ಕೊಡೆ ಎಂದು ಹೇಳಿದನು.

ಅವರಿಗೆ ದೇವರು ಆರು ಮಕ್ಕಳನ್ನು, ಮೂರು ಗಂಡು ಮೂರು ಹೆಣ್ಣು, ಕೊಟ್ಟನು. ಇವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಚಿಕ್ಕತನದಲ್ಲಿಯೆ ತೀರಿ ಹೋದರು, ಉಳಿದವರು ಹೆತ್ತವರ ಮಾನಕ್ಕೂ ಆನಂದಕ್ಕೂ ಬೆಳೆದರು. ಈ ಮಕ್ಕಳು ಲೂಥರನಿಗೆ ಮಹಾ ಆನಂದಕ್ಕೆ ಕಾರಣವಾದವು. ಈ ಗಂಭೀರ ಬಲಾಢ್ಯ ಮನುಷ್ಯನಿಗೆ ಮಗುವಿನಂಥಾ ಮನೋಗುಣವಿತ್ತು; ಅವನು ಮಕ್ಕಳ ಸಂಗಡ ಬಹು ರಮ್ಯವಾಗಿ ಆಡುತ್ತಾ ಪಾಡುತ್ತಾ ಇರುವನು. ಅವನು ಭಾರವಾದ ಚಿಂತೆ ಕಷ್ಟ ಹೋರಾಟಗಳಿಂದ ಮನೆಗೆ ಬಂದರೆ, ಹೆಂಡತಿ ಮಕ್ಕಳ ಸಂಗಡ ಗೆಲವಾಗಿ ವಿಶ್ರಮಿಸಿ ಕೊಂಡು, ಮಕ್ಕಳ ಕೋಣೆಯಿಂದ ಕೆಲಸದ ಕೋಣೆಗೂ ಬೇರೆ ಪ್ರವೃತ್ತಿಗೂ ಹೋಗುವದಕ್ಕೆ ಧೈರ್ಯವನ್ನೂ ಆಸಕ್ತಿಯನ್ನೂ ಸಂಗ್ರಹಿಸಿ ಕೊಂಡನು.

§ ೭.

# ಕುಹಕಪ್ರಕಾಶಗಳು

ಶಾಸ್ತ್ರಿ ಕರ್ಲಸ್ತತ್ತನೂ ಉಪಾಧ್ಯಾಯ ಧಿದುಮನೂ ಮಾಡಿದ ರಂಭಾರೂಢಿಯ ಸಂಗತಿಯನ್ನು ಮುಂಚಿನ ಪರಿಚ್ಛೇದದಲ್ಲಿ ಹೇಳಿದೆವು. ಗಿಟಬೆಟಿಲ್ಲು ಬೇರೆ ಉತ್ಪಾತಗಳು ಉಂಟಾದವು, ಹ್ಯಾಗೆಂದರೆ,

ಶ್ರಮ ಪಡ ಬೇಕಾಗಿರುವಾಗ್ಯೆ ಸಹಾ, ಇಹಜೀವದ ಸಮಸ್ತ ಕಾರ್ಯಗಳಲ್ಲಿ ಅಧೀನವಾಗಿರ ತಕ್ಕ ದೇವರಿಂದ ನೇಮಿಸಲ್ಪಟ್ಟ ಅಧಿಕಾರಕ್ಕೆ ಎದುರಾಗಿ, ಅನೇಕ ಮಾರ್ಮಲವರು ಎದ್ದರು.

ಪುನಸ್ಥಾಪನೆಯ ಮುಂಚೆ ಒಕ್ಕಲಿಗರು ಅಲ್ಲಿ ಇಲ್ಲಿ ಕಾಟಕಾಯಿ ಮಾಡಿದ್ದುಂಟು. ಆ ಕಾಲದಲ್ಲಿ ಅವರು ಕಷ್ಟಾವಸ್ಥೆಯಲ್ಲಿ ಇದ್ದರು, ಅರಸುಗಳೂ ಶ್ರೀಮಂತರೂ ಪಾರಮಾರ್ಥಿಕರೂ ಅವರ ಮೇಲೆ ಬಹು ವಿಧವಾದ ಒತ್ತಾಯ ನಡಿಸಿದರು. ನೀತಿ ದಯೆ ಮುಂತಾದ್ದು ತಿಳಿಯದಂಥಾ ಧೊರೆಗಳು ಲುಥರನ ಕಾಲದಲ್ಲಿ ಸಹಾ ಇದ್ದರು; ಹಾಗೆ ಅರ್ಥ ವ್ರಯ ಮಾಡುವ, ಕೋಪಭ್ರಷ್ಟನಾದ ವಿರ್ತೆಮ್ಬೆರ್ಗದ ರಾಜನಾಯಕ ಉಲ್ರಿಖನು ತನ್ನ ಪ್ರಜೆಯನ್ನು ಬಹಳ ಪೀಡಿಸಿದನು. ಆಗ್ಯೆ ಅಸಂತುಷ್ಟತೆಯೂ ವಿರುದ್ಧವೂ ತಿರಿಗಿ ಕೆದರಿತು.

ಆಗ್ಯೆ ವಿಪರೀತ ಕುಹಕಪ್ರಕಾಶಗಳು ಮೇಲೆ ಬಂದು, ಈ ಸೈತಾನಶಾಲೆಯ ದುಷ್ಟ ಬೋಧಕರು ಜನರಿಗೆ ಸುವಾರ್ತಾಸ್ವತಂತ್ರದ ವಿಷಯದಲ್ಲಿ ಸುಳ್ಳುಗ್ರಹಿಕೆಯನ್ನು ಕೊಟ್ಟು, ಕಲಹಗಾರರಿಗೆ ಈ ಪ್ರಕಾರ ಒಳ್ಳೆ ಸಹಾಯಕರಾದರು. ಲುಥರನು ಬೋಧಿಸಿದ ಸತ್ಯವಾದ ಸುವಾರ್ತಾನಿರ್ಬಂಧವು ಧರ್ಮಕಾರ್ಯಗಳಲ್ಲಿ ಮಾತ್ರವೆ ಮನುಷ್ಯಕಟ್ಟಳೆಗಳಿಗೆ ನಿರ್ಬಂಧವಾಗಿರುವದೂ, ದೇವರ ವಿಷಯದಲ್ಲಿ ಮನಸ್ಸಾಕ್ಷಿಯ ಸ್ವತಂತ್ರವೂ ಆಗಿತ್ತು; ಆದರೆ ಆ ಸುಳ್ಳು ಅಪೊಸ್ತಲರು, ಲೌಕಿಕ ಅಧಿಕಾರಿಗಳಿಗೂ ಅವರ ನಿಯಮಗಳಿಗೂ ಕಟ್ಟಳೆಗಳಿಗೂ ನಿರ್ಬಂಧವಾಗಿರುವದೆ ಆ ಸ್ವತಂತ್ರ ಎಂದು ಕಲಿಸಿ ಕೊಟ್ಟರು. ಅದಕ್ಕೆ ಜನರು ಎಷ್ಟು ಕಿವಿ ಕೊಟ್ಟು ಕೇಳಿದರು! ಅಂಥಾ ಮಾತು ಜನರ ಕೆಟ್ಟ ಕೋಪ ಹೃದಯದ ಅಭಿಲಾಷೆಗಳಿಗೆ ಅನುಸಾರವಾಗಿತ್ತಲ್ಲವೆ!

೧೫೨೪ರಲ್ಲಿ ಶ್ವಾಬ ಒಕ್ಕಲಿಗರು ಪುಂಡುಪುಂಡುಗಳಾಗಿ ಮಾರ್ಮಲಿತರು. ಇವರು, ಮುಖ್ಯವಾಗಿ ರಾಜನಾಯಕ ಉಲ್ರಿಖನನ್ನು ದೇಶದಿಂದ ಓಡಿಸಿದ ಮೇಲೆ, ಮಹಾರಾಜನ ಅಧಿಕಾರಕ್ಕೊಳಗಾದ ವ್ಯುರ್ತೆಂಬೆರ್ಗದಲ್ಲಿ ಕೆಳಗೆ ಹಾಕಿದ ಧರ್ಮನಿರ್ಬಂಧಿಕೆಯನ್ನು ಮಾತ್ರವಲ್ಲಾ, ಎಲ್ಲಾ ಕಂದಾಯವನ್ನೂ, ತೆರಿಗೆಯನ್ನೂ, ಸಮಸ್ತ ಬಿಟ್ಟಿಯನ್ನೂ, ಮನಸಿಗೆ ಬಂದಲ್ಲಿ ಮೀನು ಹಿಡಿಯುವದಕ್ಕೂ, ಬೇಟೆಯಾಡುವದಕ್ಕೂ, ಮರ ಕಡಿಯುವದಕ್ಕೂ ಬೇಕಾದ ಸ್ವತಂತ್ರವನ್ನೂ, ಎಲ್ಲಾ ಕೊಡ ಬೇಕೆಂದು ತಮ್ಮ ತಮ್ಮ ಅಧಿಕಾರಿಗಳಿಂದ ಅಪೇಕ್ಷಿಸಿದರು. ಅವರ ಅಪೇಕ್ಷೆಯ ಪ್ರಕಾರ ಸರ್ಕಾರದವರು ನಡಿಸಲಿಲ್ಲವೆಂದು ಯಾರೂ ಗ್ರಹಿಸ ಬಹುದು. ಆಗ್ಯೆ, ಅವರು ಕೂಟ ಕಟ್ಟಿ, ಪುಂಡುಪುಂಡುಗಳಾಗಿ, ಕೊಯತ ಕತ್ತಿ ಡೊಣ್ಣೆ ಕೋವಿ ಮುಂತಾದ್ದನ್ನು ತಕ್ಕೊಂ

ಡು, ಊರು ಊರು ಸುತ್ತಿ, ಕೋಟೆಗಳನ್ನೂ, ಧರ್ಮಶಾಲೆಗಳನ್ನೂ ಲೂಟಿ ಮಾಡು ತ್ತಾ, ನಿವಾಸಿಗಳನ್ನು ಕೊಲ್ಲುತ್ತಾ ಹೋದರು.

ಲುಥರನು ಸ್ನೇಹಭಾವದಿಂದ ಸಮಾಧಾನದ ಪತ್ರಿಕೆಯನ್ನು ಬರದು, ಅದರ ಲ್ಲಿ ಈ ಕಾಟಕಾಯಿಯವರಿಗೆ ದೇವರ ವಾಕ್ಯದಿಂದ ಸತ್ಯ ಬೋಧನೆ ಹೇಳಿ, ಈ ದ್ರೋ ಹಕರವಾದ ಅನರ್ಥವನ್ನು ಬಿಡ ಬೇಕೆಂದು ಬೇಡಿ ಕೊಂಡನು; ಅತ್ತ ಕಡೆಯಲ್ಲಿ ಅ ರಸು ಮುಂತಾದ ಪ್ರಭುಗಳಿಗೂ ಅವರು ಜನರ ಮೇಲೆ ಅನೇಕ ಸರ್ತಿ ನಡಿಸುವ ಅ ನ್ಯಾಯವನ್ನು ತೋರಿಸಿ ಕೊಟ್ಟು, ನೀತಿಯಿಂದಲೂ ನಿಧಾನತ್ವದಿಂದಲೂ ವರ್ತಿಸ ತಕ್ಕದ್ದೆಂದು ಬಹು ಆಸಕ್ತಿಯಿಂದ ತಿಳಿಸಿದನು. ಆದರೆ ಜನರ ಸ್ನೇಹಿತನಾದ ಲುಥರ ನನ್ನು ಈ ಸರ್ತಿ ಜನರೇ ಕೇಳಲಿಲ್ಲಾ. ಕಲಹವು ದಿನದಿನ ಹೆಚ್ಚಾಯಿತು, ಗುಡ್ಡೆಗೆ ಬೇರಿ ಹತ್ತಿದ ಹಾಗೆ ಏರಿತು. ಫ್ರಂಕದಲ್ಲಿ, ಪ್ಯೆಂಚದಲ್ಲಿ, ಎಲ್‌ಸಾಸದಲ್ಲಿ, ಹೆಸ್ಸೆನ ದಲ್ಲಿ, ಜರ್ಮನಿಯ ಸಮಸ್ತ ಕಡೆಯಲ್ಲಿಯೂ ಅದು ಹಬ್ಬಿತು. ಸೂರೆಯ ಅಭಿಲಾ ಷೆಯಿಂದಲೂ ರಕ್ತ ಸುರಿಯುವ ಸೊಕ್ಕಿನಿಂದಲೂ ತುಂಬಿದ ಈ ತುಂಟರು ದೇಶದೇ ಶ ಸುಳಿಯುತ್ತಾ, ದುರ್ಗ, ಮಠ ಮುಂತಾದ್ದನ್ನು ಸುಟ್ಟು, ನೆಲಸಮ ಮಾಡುತ್ತಾ ಹೋದರು.

ಈ ಸ್ವತಂತ್ರ ಜಟ್ಟಿಗಳ ವಿಷಯದಲ್ಲಿ ಒಂದು ಕಥೆಯನ್ನು ಸ್ವಲ್ಪ ಕೇಳುವಾ. ಅವರಲ್ಲಿ ಅನೇಕರು ಬಾಯ್ಯಲ್ಲಿ ಇಟ್ಟು ಕೊಂಡ ಸುವಾರ್ತೆಗೆ ಅವರ ಕರ್ಮದಿಂದ ಎಂಥಾ ಅವಮಾನ ಬಂತೆಂತಾ ಸ್ವಲ್ಪ ನೋಡುವಾ. ಶ್ವಾಬ ಒಕ್ಕಲಿಗರು ವೈನ್ಸ್ ಬೆರ್ಗ ಎಂಬ ಮುತ್ತಿಗೆ ಹಾಕಿದ ಪಟ್ಟಣವನ್ನು ಕೈವಶ ಮಾಡಿ ಕೊಂಡಾಗ, ಅಲ್ಲಿ ಎ ಪ್ಪತ್ತು ಶ್ರೀಮಂತ ರಾಹುತರನ್ನೂ ಹೆಲ್‌ಫೆನ್‌ಸ್ತೈನದ ಶ್ರೀಮಂತನನ್ನೂ ಹಿಡಿದರು. ಅವರನ್ನು ಅವರು ಮುಂಚೆ ಒಳ ಕಡೆಗೆ ಮೊನೆ ಮಾಡಿದ ಚಲ್ಲೆಗಳ ಮಂಡಲದಲ್ಲಿ ನಿಲ್ಲಿಸಿ, ಮತ್ತೆ ದೊಡ್ಡ ಬೊಬ್ಬೆ ಹಾಕಿ, ಸಾವಿರಾರು ಈಟಿಗಳಿಂದ ತಿವಿದು ಕೊಂದರು. ಆ ಶ್ರೀಮಂತನ ಪತ್ನಿಯು ಓಡಿ ಬಂದು, ಅವರ ಕಾಲಿಗೆ ಬಿದ್ದು, ತನ್ನ ಎರಡು ವರು ಷದ ಎಳೆ ಮುದ್ದು ಮಗುವನ್ನು ಎತ್ತಿ ಹಿಡಿದು, ಅಳುತ್ತಾ ಕೂಗುತ್ತಾ, ತನ್ನ ಗಂ ಡನನ್ನು ಕರುಣಿಸ ಬೇಕೆಂದು ಬಹಳ ಬಹಳ ಬೇಡಿ ಕೊಂಡಳು. ಆದರೆ ಅವರು ಅ ವಳನ್ನು ಕಾಲಿನಿಂದ ಒದ್ದು ಆಚೆಗೆ ಮಾಡಿ, ಬೊಬ್ಬೆ ಹಾಕಿ, ಅವಳ ಕಣ್ಣೆದುರಿನಲ್ಲಿ ಗಂಡನನ್ನು ಕೊಂದರು.

ಇಂಥಾ ಅನರ್ಥಗಳನ್ನೂ ದುಷ್ಟತ್ವವನ್ನೂ ನೋಡಿದಾಗ, ಕ್ರಿಸ್ತ ಭಾವದ ಹೃ ದಯ, ಸಾಧಾರಣ ಮಾನುಷಹೃದಯವಾದರೂ ಇರುವವರೆಲ್ಲರಲ್ಲಿ ಮಹಾ ಸಂ ತಾಪ ಉಂಟಾಯಿತು. ಲುಥರನು ಆಗ್ಯೆ ಮತ್ತೊಂದು ಪುಸ್ತಕ ಬರದನು. ಅದರ

ಹೆಸರು: "ಸುಲಿಗೆಗಾರರೂ ಕಾಲೆಗಾರರೂ ಆಗಿರುವ ಒಕ್ಕಲಿಗರಿಗೆ ವಿರೋಧವಾಗಿ" ಎಂದಿತ್ತು. ಅದರಲ್ಲಿ ಒಂದು ಕಡೆಯಲ್ಲಿ: "ಹುಚ್ಚು ಹಿಡಿದ ಒಕ್ಕಲಿಗರನ್ನು ಹುಚ್ಚು ಹಿಡಿದ ನಾಯಿಗಳ ಹಾಗೆಯೆ ಕೊಲ್ಲ ಬೇಕು," ಎಂದು ಹೇಳುತ್ತಾನೆ. ಮತ್ತು ಆ ಪ್ರಕಾರವೆ ಆಯಿತು; ಈ ಹೇಳ ಕೂಡದ ದ್ರೋಹವನ್ನು ನಿಲ್ಲಿಸಿದರು. ಪಟ್ಟಣಗಳೂ ಶ್ರೀಮಂತರೂ ಒಂದಾಗಿರುವ ಶ್ವಾಬ ಒಪ್ಪಂದದವರು ಯುದ್ಧಕ್ಕೆ ಸೈನ್ಯವನ್ನು ಕೂಡಿಸಿದರು; ಮತ್ತು ಅತಿ ಪರಾಕ್ರಮಶಾಲಿಯಾದ ವಲ್ಡಬುರ್ಗದ ಗೆಯಾರ್ಗ್ ತ್ರುಖ್‌ಸೆಸ್ ಎಂಬವನು ಸೇನಾಪತಿಯಾಗಿ, ಸ್ವಲ್ಪ ಕಾಲದೊಳಗೆ ಈ ತುಂಟರ ಉಪರಾಳಿಯನ್ನು ಶ್ವಾಬದಲ್ಲೆಲ್ಲಾ ನಿಲ್ಲಿಸಿ ಬಿಟ್ಟು, ಫಲ್ಟದ ಆಯಿಕೆಯ ಅರಸನ ಸೈನ್ಯಕ್ಕೆ ಕೂಡಿ, ಅವರಿಬ್ಬರು ಫ್ರಂಕ ದೇಶದಲ್ಲೆಲ್ಲಾ ಮಾರ್ಮಲವರನ್ನು ಓಡಿ ಓಡಿಸಿ, ಬೇಗ ಅವರ ಹೆಮ್ಮು ಮುರಿದು ಬಿಟ್ಟರು. ಈ ಪ್ರಕಾರ ದೇವರು ತಾನು ನೇಮಿಸಿದ ಅಧಿಕಾರಿಗಳಿಗೆ ಎಲ್ಲಾ ಕಡೆಯಲ್ಲಿಯೂ ಮಹಿಮೆಯಾದ ಜಯವನ್ನು ದಯ ಪಾಲಿಸಿದನು. ಅಂದಿನಿಂದ ಆ ಹುಚ್ಚು ಒಕ್ಕಲಿಗರು ಎರಡಷ್ಟು ಒತ್ತಾಯ ತಾಳ ಬೇಕಾಯಿತು.

ಆದರೆ ಮೇಲಿನದರ ಹೊರತು ಅದೇ ೧೫೨೫ರಲ್ಲು ಥೂರಿಂಗದಲ್ಲಿ ಆದ ಕಲಹದ ಸಂಗತಿಯನ್ನೂ ಸ್ವಲ್ಪ ವಿಚಾರಿಸ ಬೇಕು. ಇದಕ್ಕೆ ಧರ್ಮವಿಷಯವಾದ ಸುಳ್ಳುಗ್ರಹಿಕೆಯ ಆಧಾರ ಸಿಕ್ಕಿತು ಮಾತ್ರವಲ್ಲಾ, ಆ ಸುಳ್ಳುಗ್ರಹಿಕೆಯೆ ಅದಕ್ಕೆ ಮೂಲ ಕಾರಣವಾಯಿತು. ಈ ವೃತ್ತಾಂತವನ್ನು ಮೆಲಂಥೊನನು ಒಂದು ಪುಸ್ತಕದಲ್ಲಿ ವಿವರಿಸಿದ್ದಾನೆ; ಅದರಿಂದ ಕ್ಲುಪ್ತವಾಗಿ ಮುಖ್ಯ ಸಂಗತಿಗಳು ಈ ಕೆಳಗೆ ಬರುತ್ತವೆ. ಈ ಜನರಿಗೆ ಒಬ್ಬ ಕುಹಕಪ್ರಕಾಶನು ನಾಯಕನಾಗಿದ್ದನು.

ಥೂರಿಂಗ ದೇಶದ ಅಲ್‌ಸ್ತಾತ್ ಎಂಬ ಸುಂದರವಾದ ಪಟ್ಟಣದಲ್ಲಿ ಥೋಮ ಮ್ಯುಂಚರ್ ಎಂಬ ಒಬ್ಬ ಸಭಾಬೋಧಕನಿದ್ದನು. ಅವನು ದೇವರ ವಾಕ್ಯದಲ್ಲಿ ಒಳ್ಳೆ ಪರಿಶ್ರಮ ಮಾಡಿದವನೂ, ವಾಗ್ಜಾಲಿಯೂ ಆಗಿದ್ದನು. ಆದರೆ ಸೈತಾನನು ಅವನನ್ನು ಮೋಸಗೊಳಿಸಲಾಗಿ, ಅವನು ಪರಿಶುದ್ಧ ಬರಹವನ್ನು ಬಿಟ್ಟು, ಸ್ವಂತ ಹೃದಯದ ಚಿಂತನೆಗಳಲ್ಲಿ ಬಿದ್ದು, ಅದೆಲ್ಲಾ ದೇವರ ವಿಶೇಷವಾದ ಪ್ರಕಟಣೆಗಳೆಂದೆಣಿಸಿದನು. ಈ ಪ್ರವಾದಿಯು ಪೋಪನನ್ನೂ ಲುಥರನನ್ನೂ ಒಟ್ಟು ಬೆರಸಿ, ಇಬ್ಬರಿಗೂ ವಿರೋಧವಾಗಿ ಬೋಧಿಸಿದನು. ಲುಥರನು ಬರೇ ಅಕ್ಷರ ವಿದ್ವಾಂಸನು, ಅವನಿಗೆ "ಆತ್ಮವು" ಇಲ್ಲಾ ಅಂದನು. ಲುಥರನು ಸಮಸ್ತ ಬಲಾತ್ಕಾರಕ್ಕೆ ಎದುರ್ನಿಂತ ಕಾರಣ, ಅವನು "ಆತ್ಮವಿರಹಿತ ನಿಧಾನಜೀವಿಯಾದ ವಿತ್ತೆನ್‌ಬೆರ್ಗದ ಮಾಂಸವೆಂದು" ಲುಥರನಿಗೆ ಹೆಸರಿಟ್ಟನು. ಲುಥರನು ಕ್ರೈಸ್ತರಿಗೆ ಅಧಿಕ ಸ್ವತಂತ್ರ ಉಂಟೆಂದು ಹೇಳದ ಕಾರಣ, ಮ್ಯುಂಚರನಿಗೆ ಸಮ ಬೀಳಲಿಲ್ಲಾ. "ಎಲ್ಲಾ ಭೂಮಿಯು ವಿಶ್ವಾಸಿಗಳದು,

ದೈವರಾಜ್ಯದ ಸಮಸ್ತ ಅಂಗಗಳು ತಮ್ಮೊಳಗೆ ಸಮಾನರಾಗಿರ ಬೇಕು; ಆದ್ದರಿಂದ ಇನ್ನೂ ಮುಂದೆ ಯಜಮಾನರೂ ಸೇವಕರೂ ಎಂಬದೂ, ದೊಡ್ಡವರೂ ಬಡವರೂ ಎಂಬದೂ ಇರ ಬಾರದು" ಎಂದು ಬೋಧಿಸಿದನು. ಅರಸುಗಳನ್ನು ಅವನು ನಿಂದಿಸಿ, "ಅವರು ಬಡ ಜನರನ್ನು ಒತ್ತಿ, ಅಣಗಿಸಿ, ಸುಲಿದು ನಾಶ ಮಾಡಿ, ತಾವು ಗರ್ವ ಮಾಡುತ್ತಾರೆ, ದುಂದುಗಾರತನದಲ್ಲಿಯೂ ಹೊಟ್ಟೆಬಾಕತನದಲ್ಲಿಯೂ ಬಿದ್ದಿರುತ್ತಾರೆ. ಅಂಥವರಿಗೆ ಇನ್ನು ಮುಂದೆ ಅಧೀನವಾಗಿರ ಕೆಲಸವಿಲ್ಲಾ. ಈ ಭೂಮಿಯಲ್ಲಿ ಕ್ರೈಸ್ತ ಭಾವದ ಅಧಿಕಾರವನ್ನು ನಡಿಸುವದಕ್ಕೆ ದೇವರು ನನ್ನನ್ನು ಕಳುಹಿಸಿದ್ದಾನೆ" ಎಂದಿತ್ಯಾದಿ ಹೇಳಿದನು.

ಈ ಗರ್ವಾತ್ಮನನ್ನು ಅಲ್‌ಸ್ತತ್ತದಿಂದ ೧೫೨೪ರಲ್ಲಿ ಓಡಿಸಿದರು; ಅವನು ನ್ಯುರ್ನಬೆರ್ಗಕ್ಕೆ ಹೋದಾಗ, ಅಲ್ಲಿಂದಲೂ ಅವನನ್ನು ಹೊರಗೆ ಹಾಕಿದರು. ಊರು ಊರು ಅಲೆದಾಡಿ, ಕಡೆಗೆ ತಿರಿಗಿ ಥೂರಿಂಗ ಸೀಮೆಯ ಮ್ಯೂಲ್‌ಹೌಸನಕ್ಕೆ ಬಂದನು. ಅಲ್ಲಿಯವರು ಅವನಲ್ಲಿ ನಂಬಿದರು. ಸಭೆಯವರು ಅವನನ್ನು ಪುರೋಹಿತನಾಗಿ ತಕ್ಕೊಂಡರು, ಪಟ್ಟಣದ ಅಧಿಕಾರಿ ಪಂಚಾಯತರು ಅವನಿಗೆ ಎದುರ್ನಿಂತರು. ಆಗ್ಯೆ ಥೋಮನು ಪಟ್ಟಣಿಕರ ಸಹಾಯದಿಂದ ಅವರ ಉದ್ಯೋಗವನ್ನೆ ತೆಗದು ಬಿಟ್ಟನು. ಅಂದಿನಿಂದ ಅವನೆ ನ್ಯಾಯತೀರ್ಪು ಮಾಡುತ್ತಾ, "ತನಗೆ ದೇವರು ಪ್ರಕಟಿಸುವ ಮೇರೆಗೆಂದು" ಅಧಿಕಾರ ನಡಿಸುತ್ತಾ, ಆಳುತ್ತಾ ಬಾಳುತ್ತಾ ಇದ್ದನು. ದೇವಾಲಯ ಮುಂತಾದ ಆತ್ಮಿಕ ಕಾರ್ಯಗಳಿಗೆ ಬಿಟ್ಟ ಉಂಬಳಿಗಳನ್ನು ಸರ್ವರ ಉಪಯೋಗಕ್ಕೆಂದು ಅಪಹರಿಸಿ ಕೊಂಡನು. ಒಬ್ಬೊಬ್ಬನಿಗೆಂದು ಯಾರಿಗೂ ಆಸ್ತಿ ಇರ ಬಾರದು, ಎಲ್ಲಾ ಒಟ್ಟಿಗೆ ಹುದುವಾಗಿರ ಬೇಕು ಅಂದನು. ಬಡವರು ಧನವಂತರ ಮನೆಗಳಿಗೆ ಹೋಗಿ, ಬೇಡದೆ, ದಮ್ಮಯ್ಯ ಅನ್ನದೆ, ಮನಸಿಗೆ ಬಂದಷ್ಟು ತಕ್ಕೊಂಡು ಹೋದರು. ಪುಂಡುಜನರು ಅಧಿಕಾಧಿಕ ಅಮಸೋಣಿ ಮಾಡಿ, ಇನ್ನು ಮುಂದೆ ಕಷ್ಟ ಮಾಡಲೊಲ್ಲೆವು ಅಂದರು. ಮ್ಯುಂಚರನ ಕೀರ್ತಿಯೂ ಪರಿವಾರವೂ ದಿನ ಹೋಗುತ್ತಾ ಬೆಳಿಯಿತು. ಹೀಗೆಯೆ ಆ ಪಟ್ಟಣದಲ್ಲಿ ಒಂದು ವರುಷ ದಿನ ಇರಲಿರಲು, ಶ್ವಾಬ ಫ್ರಂಕ ಸೀಮೆಗಳ ಒಕ್ಕಲಿಗರು ಮಾಡಿದ ಸುದ್ದಿ ಬಂತು. ಆಗ್ಯೆ, ಎಲೆ, ನಾವು ಸಹಾ ನೋಡಿ ಬಿಡುವಾ ಎಂತಾ ಮ್ಯುಂಚರನಿಗೆ ಆಯಿತು. ಅವನು ಪ್ರಸಂಗಿಸಿ, ಲೋಕವೆಲ್ಲಾ ದೇವರ ಮಕ್ಕಳ ಮಹಿಮೆಯುಳ್ಳ ಬಿಡುಗಡೆಯನ್ನು ಹೊಂದುವ ಕಾಲ ಬಂತು ಎಂದು ಹೇಳಿದನು. ಅವನು ನಾಲ್ಕು ದಿಕ್ಕಿಗೂ ಕಾಗದಗಳನ್ನು ಬರದು, "ಗಿದಿಯೋನನ ಕತ್ತಿಯನ್ನು ಹಿಡಿದ, ದೇವರ ದಾಸನಾದ ಥೋಮ ಮ್ಯುಂಚರನಾದ ನಾನು ಎಲ್ಲಾ ಒಳ್ಳೆ ಕ್ರೈಸ್ತರಿಗೆ ಒದರಿ ಹೇಳುತ್ತೇನೆ. ಎಲ್ಲರೂ ನನ್ನ ಸಂಗಡ

ಕೂಡಿ ಕೊಂಡು, ಸುತ್ತಿಗೆ ಸಂಮಟಿಗೆಯಲ್ಲಿ ಬಡಿಯುವ ಹಾಗೆ, ಅರಸುಗಳ ಮೇಲೆ ಟಣ್ ಟಣ್ ಬಡಿಯಿರಿ, ಅವರ ರಕ್ತವನ್ನು ನಿಮ್ಮ ಖಡ್ಗದಲ್ಲಿ ತಂಣಗಾಗ ಬಿಡ ಬೇಡಿರಿ” ಎಂಬಂಥಾ ಮಾತುಗಳಿಂದ ಜನರನ್ನು ಕೆದರಿಸಿದನು. ಕ್ಷಿಪ್ರವೆ ಗೊಂಡ ಜನರು ಸಹಾ ನಾಲ್ಕು ಕಡೆಯಿಂದಲೂ ಅವನ ಬಳಿಗೆ ಓಡಿ ಬಂದು, ಎಲ್ಲರೂ ಬಿಡುಗಡೆಯಾಗಿ, ಭಾಗ್ಯವಾಗಿ, ಮಹಿಮೆಯಾಗಿ ಇರ ಇಚ್ಛೈಸಿದರು. ಆಗ್ಯೆ ಅವನು ಯುದ್ಧಕ್ಕೆ ತೊಡಗಿದನು. ಫ್ರಂಕೆನ್ ಹೌಸಿನದ ಹತ್ತಿರ ಇರುವ ಒಂದು ಗುಡ್ಡದಲ್ಲಿ ಅವನು ಇಂಥಾ ಅನೇಕ ಸಹಸ್ರ ಭಟರ ದಂಡು ಇಳಿಸಿದನು.

ಸಕ್ಸ, ಹೆಸ್ಸ, ಬ್ರೌನಶ್ವೈಗ ದೇಶಗಳ ಅರಸುಗಳು ೧೫೦೦ ರಾಹುತರನ್ನೂ ಕೆಲವು ಪಾಯದಳವನ್ನೂ ತಕ್ಕೊಂಡು, ಅವರಿಗೆ ಎದುರಾಗಿ ಬಂದರು. ಆ ಅರಸುಗಳು ಈ ಬಡ ಜನರನ್ನು ಕಂಡು, ಕರುಣೆ ಪಟ್ಟು, ದೂತರನ್ನು ಕಳುಹಿಸಿ, ಅವರಿಗೆ, ನೀವು ನಾಯಕರನ್ನು ಒಪ್ಪಿಸಿ ಕೊಟ್ಟು, ನಿಮ್ಮ ನಿಮ್ಮ ಮನೆಗೆ ಹೋಗಿರಿ ಎಂದು ಹೇಳಿ ಕಳುಹಿಸಿದರು. ಆದರೆ ಆ ಕಾಲೆಗಾರ ಪ್ರವಾದಿ ಮ್ಯುಂಚರನು ಈ ದುರುಳ ಅರಸುಗಳನ್ನು ಹಿಮ್ಮೆಟ್ಟಿಸ ಬೇಕೆಂದು ಜನರ ಕೋಪವೆಬ್ಬಿಸ ನೋಡಿದನು. “ಹಾರಿ ಬರುವ ಅವರ ಗುಂಡುಗಳನ್ನೆಲ್ಲಾ ನನ್ನ ಅಂಗಿಯಲ್ಲಿ ಹಿಡಿಯುವೆನು. ನೋಡಿ, ನೋಡಿ! ದೇವರು ನಮ್ಮ ಕಡೆಯಲ್ಲಿದ್ಧಾನೆಂದು ನಮಗೊಂದು ಗುರ್ತು ಕೊಟ್ಟಿದ್ಧಾನೆ. ಆ ಮಳೆಬಿಲ್ಲು ನೋಡಿರಿ, ಅದು ನಮಗೆ ಜಯವನ್ನು ಸಾರುತ್ತದೆ,” ಅಂದನು. ಈ ಮಾರ್ಮುಲವರು ತಮ್ಮ ಧ್ವಜಕ್ಕೆ ಮಳೆಬಿಲ್ಲಿನ ಆಕೃತಿ ಮಾಡಿ ಇಟ್ಟಿದ್ದರು; ಮತ್ತು ಆ ಸಮಯದಲ್ಲಿಯೆ ಒಂದು ಮಳೆಬಿಲ್ಲು ಆಕಾಶದಲ್ಲಿ ಕಂಡಿತಾದ್ದರಿಂದ, ಅವನ ಮಾತು ಹೌದೆಂತ ನೆನಸಿದರು. ಅವರು ಅರಸುಗಳ ದೂತರನ್ನು ಅವಮಾನ ಪಡಿಸಿದರು, ಒಬ್ಬ ಯೌವನದ ಶ್ರೀಮಂತನನ್ನು ತಿವಿದು ಕೊಂದರು. ಆಗ್ಯೆ ಅರಸುಗಳು ಅವರ ಮೇಲೆ ಬಿದ್ದರು, ಅವರ ಶಿಪಾಯರು ಮಹಾ ಕೋಪದಿಂದ ಆ ದ್ರೋಹಿಗಳನ್ನು ಹೊಡದರು.

ಥೋಮನು ಅದ್ಭುತ ಮಾಡಲಿಲ್ಲಾ, ಆಕಾಶದಿಂದಲೂ ಅದ್ಭುತ ಬರಲಿಲ್ಲಾ; ಹೀಗಿರಲಾಗಿ ಅವನ ಜನರಿಗೆ ಎದೆಗುಂದಿತು. ಸ್ವಲ್ಪ ಮಂದಿ ಮಾತ್ರವೆ ಲಡಾಯಿಗೆ ನಿಂತರು; ಹೆಚ್ಚಾದವರು ಒಂದು ಆತ್ಮಿಕ ಗೀತವನ್ನು ಹಾಡುತ್ತಾ ಇದ್ದರು. ಅಷ್ಟರೊಳಗೆ ಅರಸುಗಳು ಅವರಿಗೆ ಒಳ್ಳೆ ಪೆಟ್ಟು ಕೊಟ್ಟರು; ಸುಮಾರು ೫೦೦೦ ಮಂದಿ ಮಾರ್ಮುಲವರು ರಣಾಂಗಣದಲ್ಲಿ ಬಿದ್ದರು; ೩೦೦ ಮಂದಿಯನ್ನು ಅರಸುಗಳು ಫ್ರಂಕನ್ ಹೌಸಿನದಲ್ಲಿ ಹಿಡಿದು, ತಲೆ ಹೊಯ್ಸಿದರು; ಮಿಕ್ಕಾದವರು ಪಲಾಯನ ಮಾಡಿದರು.

ಆದರೆ ಆ ಬಾಯಿಬಡಿಕ ಮ್ಯುಂಚರನು ಎಲ್ಲಿ ಇದ್ದಾನೆಂತ ನೆನಸುತ್ತೀರಿ; ಅ
ವನು ಹೋಗಿ, ಫ್ರಂಕನ್ ಹೌಸಿನದ ಒಂದು ಮನೆಯ ಕೆಳಗಿನ ಕೋಣೆಯ ನೆಲದ
ಲ್ಲಿ ಇಟ್ಟ ಮಂಚದಲ್ಲಿ ಬಿದ್ದಿದ್ದನು. ಅವನನ್ನು ಅವನ ಮಹಿಮೆಯ ಸ್ಥಳವಾದ
ಮ್ಯೂಲ್ ಹೌಸಿನಕ್ಕೆ ಕೊಂಡು ಹೋಗಿ, ಮುಂಚೆ ಬಾಧಿಸಿ, ಮತ್ತೆ ತಲೆ ಹ್ಯಾ
ಸಿದರು.

ಈ ವೃತ್ತಾಂತವನ್ನು ಬರದ ಮೆಲಂಥೊನನು ಈ ಚರಿತ್ರದ ಅಂತ್ಯದಲ್ಲಿ ಅನು
ಭವಗೋಷ್ಟಿಯಾಗಿ ಹೇಳುವದೇನಂದರೆ: ೧) ಯಾರಾದರೂ ಪರಿಶುದ್ಧ ಬರಹಕ್ಕೆ ವಿ
ರೋಧವಾದ ಪ್ರಕಟಣೆಗಳು ತನಗಾದವು ಎಂದು ಹೇಳಿದರೆ ನಂಬ ಬಾರದು. ೨)
ಅಧಿಕಾರಕ್ಕೆ ವಿರೋಧವಾಗಿರುವ ಅವಿಧೇಯತ್ವವನ್ನೂ ಕಲಹವನ್ನೂ ಎಷ್ಟು ಕಠಿಣವಾ
ಗಿ ದೇವರು ಶಿಕ್ಷಿಸುತ್ತಾನೆಂತ ಇದರಿಂದ ಕಲಿಯ ತಕ್ಕದ್ದು.

ಆದರೆ ಪುನಸ್ಥಾಪನೆ ಎಂಬ ವೃಕ್ಷದ ಎಡೆಯಲ್ಲಿ ಇಂಥಾ ವಿಷಸಸಿಗಳು ಹು
ಟ್ಟಿದ್ದು ನೋಡಿ, ಲುಥರನಿಗೂ ಸಮಸ್ತ ಸತ್ಯ ಸುವಾರ್ತಾ ಪ್ರಿಯರಿಗೂ ಎಷ್ಟು ದು
ಖ್ಖವಾಯಿತೆಂತ ನಾವು ತಿಳಿಯ ಬಹುದು. ಅವರು ಈ ಬಡ ಜನರಿಗೋಸ್ಕರ
ಮಾತ್ರವಲ್ಲಾ, ಪರಿಶುದ್ಧವಾದ ತಮ್ಮ ಕಾರ್ಯಕ್ಕೋಸ್ಕರ ಸಹಾ ನೊಂದು ಕೊಳ್ಳ
ಬೇಕಾಯಿತು. ಯಾಕಂದರೆ, ಈ ವಿಷಸಸಿಗಳು ಆ ವೃಕ್ಷದಿಂದ ಬರಲಿಲ್ಲವೆಂಬದು
ಎಷ್ಟು ಸ್ಪಷ್ಟವಾಗಿದ್ದರೂ, ಬುದ್ಧಿ ಇಲ್ಲದವರೂ ದುಷ್ಟರೂ, ಅದೆಲ್ಲಾ ಆ ಸುವಾರ್ತೆ
ಯಿಂದಲೆ ಬಂತೆಂತ ದೂರಿದರು. ಹಾಗೆ ಒಬ್ಬ ಪಂಡಿತ ಮೆಸ್ಸಿಂಗನು ಗಾಸ್‌ಲಾರಿ
ಗೆ ಬರದದ್ದೇನಂದರೆ: ಲುಥರನ ಬೋಧನೆಯು ಲೋಕದಲ್ಲಿರುವ ಮಟ್ಟಿಗೂ, ನಿಮ
ಗೆ ಕಲಹವು ಕಡಿಮೆಯಾಗದು. ಆದ್ದರಿಂದ ನಿಮ್ಮಿಂದ ಆಗುವಷ್ಟು ಹೊಡಿಯಿರಿ, ತೂ
ಗ ಹಾಕಿರಿ, ಸಂಹರಿಸಿರಿ. ಇಷ್ಟೆಲ್ಲಾ ಅಪವಾದಗಳು ದೇವರ ಕಾರ್ಯದ ಮೇಲೆ ಮು
ತ್ತಿ ಕೊಂಡರೂ, ಅದು ಅಭ್ಯುದಯ ಆಗಿಯೆ ಆಯಿತು; ಅದು ನಿಜವಾಗಿ ದೇವರ ಕಾ
ರ್ಯವೆಂಬದಕ್ಕೆ ಇದು ಸಹಾ ಸಾಕ್ಷಿ.

§ ೮.

# ಪರಿಶುದ್ಧ ಮರಣಸಾಕ್ಷಿಗಳು

ಹಿಂಚಿನ ಪರಿಚ್ಛೇದದಲ್ಲಿ ನಾವು ಕೇಳಿದ ಬುದ್ಧಿಭ್ರಷ್ಟ ಜನರ ಅನರ್ಥಗಳಿಂದ ದುಃಖ ಪ್ರಾಪ್ತವಾಯಿತಾದರೆ, ಅದಕ್ಕೆ ಪೂರ್ಣ ಪ್ರತೀಕಾರವಾಗಿ ಶುದ್ಧ ವಿಶ್ವಾಸವನ್ನು ತಿಳುಕೊಂಡು, ಹೃದಯದಲ್ಲಿ ಅದನ್ನು ಪರಿಶುದ್ಧ ವಸ್ತುವೆಂದು ಧರಿಸಿ, ಎಲ್ಲಾ ಶತ್ರುಗಳ ಮುಂದೆ ಧೈರ್ಯದಿಂದ ಅದನ್ನು ಅರಿಕೆ ಮಾಡಿ, ಕಡೆಯಲ್ಲಿ ಸಂತೋಷವಾಗಿ ಮರಣದಿಂದ ಮುದ್ರೆ ಹಾಕಿದ ಸತ್ಯವಾಗಿ ಬಿಡುಗಡೆಯಾದ ನಿಜ ಮಹಾತ್ಮರಾದ ಕ್ರೈಸ್ತರ ಪೂರ್ವೋತ್ತರಗಳನ್ನು ವಿಚಾರಿಸುವಾ.

ವಿತ್ತೆನ್ ಬೆರ್ಗದಿಂದ ಉದಯವಾಗಿ ಬಂದ ದಿವ್ಯ ಪ್ರಕಾಶವು ಆರಂಭದಲ್ಲಿಯೆ ಪೂರ್ಣ ಜನಾಂಗಗಳನ್ನು ಚನ್ನಾಗಿ ಬೆಳಗಿಸ ಆಗಲಿಲ್ಲಾ; ಆದರೆ ಬೇಗನೆ ಜರ್ಮನ ದೇಶದಲ್ಲಿಯೂ ಬೇರೆ ದೇಶಗಳಲ್ಲಿಯೂ ಅನೇಕ ಪ್ರಾಣಗಳನ್ನು ಪರಿವ್ಯಾಪಿಸಿ, ಹೊಸ ಮನುಷ್ಯರಾಗ ಮಾಡಿತು. ಆದರೆ ಎಲ್ಲಾ ಕಡೆಯಲ್ಲಿಯೂ ಲೋಕದ ವಿರುದ್ಧವು ಕೆದರಿ, ಬಾಬೆಲಿನ ಕ್ರೋಧವೂ ಲೌಕಿಕ ಬಲವೂ, ಹಸ್ತಗತವಾಗಿದ್ದಲ್ಲಿ, ಉರಿದ ಕಾರಣ, ಪುನಸ್ಥಾಪನೆಗೆ ಆರಂಭವಾದ ಕೂಡಲೆ, ಅನೇಕ ಕಡೆಯಲ್ಲಿ ಸುವಾರ್ತೆಯನ್ನು ಅರಿಕೆ ಮಾಡುವವರ ಮೇಲೆ ಕಠಿಣವಾದ ಹಿಂಸೆಗಳು ಉಂಟಾಗಿ, ಅವರನ್ನು ಅನೇಕ ಸರ್ತಿ ಮರಣಕ್ಕೆ ಎಳಕೊಂಡು ಹೋದರು. ಇಲ್ಲಿ ಕೆಲವರ ವರ್ತಮಾನ ಮಾತ್ರವೆ ಹೇಳುವಾ; ಅವರ ಹೆಸರುಗಳನ್ನು ಕೇಳುವ ಹಾಗೆ ಅವರು ಯೋಗ್ಯರಾಗಿದ್ದರು.

೧೫೨೩ಲ್ಲು ಬೆಲ್ಗಿಯ ದೇಶದ ಬ್ರುಸ್ಸೆಲದಲ್ಲಿ ಲುಥರನಂಥಾ ಭಾವವುಳ್ಳ ಹೈನ್ರಿಕ ಒಸ್ ಮತ್ತು ಯೋಹಾನ್ ಫಾನ್ ಎಶ್ ಎಂಬ ಇಬ್ಬರು ಔಗುಸ್ತೀನ ಬೈರಾಗಿಗಳನ್ನು ಪೋಪನ ಕಡೆಯವರು ಸುಟ್ಟು ಬಿಟ್ಟರು; ಲುಥರನು ಇವರ ಮರಣದ ವಿಷಯದಲ್ಲಿ ಮಹಾ ರಮ್ಯವಾದ ಒಂದು ಗೀತವನ್ನು ಮಾಡಿದನು. — ಅದೇ ವರ್ಷದಲ್ಲಿ ಯೋಹಾನ್ ಕ್ಲೇರಿಕನೆಂಬವನು ಫ್ರೆಂಚ ದೇಶದಲ್ಲಿ ಅದೇ ಮರಣ ತಾಳ ಬೇಕಾಯಿತು.

೧೫೨೪ಲ್ಲು ದಿಥ್ಮರದಲ್ಲಿ ಹೈನ್ರಿಕ ಫಾನ್ ಚುತ್‌ಫೆನ್, ವಿಯನ್ನದಲ್ಲಿ ಕಸ್‌ಪರ್ ಥೌಬರ್ ಪರಿಶುದ್ಧ ವಿಶ್ವಾಸಕೋಸ್ಕರ ಸಾಯ ಬೇಕಾಯಿತು.

೧೫೨೫ಲ್ಲಿ ಫ್ರೆಂಚ ದೇಶದಲ್ಲಿ ಯಾಕೋಬ ಪವನನು, ಹೊಲ್ಲ ದೇಶದಲ್ಲಿ ಯೋಹಾನ್ ಪಿಸ್ತೋರಿಯನೂ ಕ್ರಿಸ್ತನಿಗೋಸ್ಕರ ಅಗ್ನಿಮರಣವನ್ನು ಅನುಭವಿಸಿದರು.

೧೫೨೬ಲ್ಲಿ ಪೋಲ ದೇಶದ ದಂಚಿಗದಲ್ಲಿ ಯೋಹಾನ ಸಲಿಕೆತನಿಗೆ ಬೇರೆ ಹದಿಮೂರು ಲುಥರನ ಪಕ್ಷದವರ ಸಂಗಡ ಸುವಾರ್ತೆಗಾಗಿ ತಲೆ ಹೊಯ್ಸಿದರು.

೧೫೨೭ಲ್ಲಿ ಬವರಿಯ ದೇಶದಲ್ಲಿ ಲೆಯೋನ್‌ಹರ್ದ್ ಕೈಸರನು ಕರ್ತನನ್ನು ಕೀರ್ತಿಸ ತಕ್ಕ ಸಾಕ್ಷಿಮರಣದಿಂದ ಹೊಗಳಿದನು.

೧೫೨೮ಲ್ಲಿ ರಾಜವಂಶದವನಾದ ಸ್ಕೋತ ದೇಶದ ಪತ್ರಿಕ ಹಮಿಲ್ತೋನನೆಂಬವನು ವಿತ್ತೆನ್‌ಬೆರ್ಗದಲ್ಲಿ ವಿದ್ಯಾಭ್ಯಾಸ ಮಾಡಿ, ಹೃದಯವನ್ನು ದೇವರ ಕೃಪೆಯಿಂದ ತುಂಬಿಸಿ ಕೊಂಡವನಾಗಿ, ಅಗ್ನಿಜ್ವಾಲೆಗಳಲ್ಲಿ ಭಸ್ಮವಾದನು.

೧೫೨೯ಲ್ಲಿ ಆದೊಲ್‌ಫ ಕ್ಲರೆನ್‌ಬಖನೂ ಪೇತರ್ ಫ್ಲುಸ್‌ತೆದನೂ ಕ್ಲೊಲ್ನದಿಂದ ಅಗ್ನಿರಥದಲ್ಲಿ ದಿವಕ್ಕೇರಿದ ಹಾಗಾಯಿತು. ಫ್ಲುಸ್‌ತೆದನು ಚಿತಿಯ ಬಳಿಗೆ ಹೋಗುತ್ತಿರುವಾಗ್ಯೆ ಹೇಳಿದ್ದೇನಂದರೆ: "ನನ್ನ ಹೃದಯವು ಬಹುಳ ಹರ್ಷವಾಗಿರುವದರಿಂದ, ಲೋಕದ ಯಾವ ಆನಂದವಾದರೂ ಈ ಆನಂದಕ್ಕೆ ಸರಿ ಬಾರದೆಂದು ನಂಬುತ್ತೇನೆ."

ಇಲ್ಲಿ ಮರಣದ ವರೆಗೆ ತಮ್ಮ ಜೀವವನ್ನು ಪ್ರಿಯವೆಂದೆಣಿಸದಂಥಾ, ತನ್ನ ಬಲಿಮರಣದಿಂದ ಅವರಿಗೆ ನಿತ್ಯ ಜೀವವನ್ನು ದುಡಿದವನಿಗೋಸ್ಕರ ಆನಂದದಿಂದಲೂ ಕೊಂಡಾಟದಿಂದಲೂ ಅನಿತ್ಯವಾದ್ದನ್ನು ತಿರಿಗಿ ಬಲಿಯಾಗಿ ಅರ್ಪಿಸಿದ ಕೆಲವು ಕರ್ತನ ಶಿಷ್ಯರ ವಿಶೇಷವಾದ ಹೆಸರುಗಳು ಹೇಳಿಯವೆ. ಬೇರೊಬ್ಬರ ಹೆಸರುಗಳನ್ನೂ ಹೇಳಬಹುದಾದರೂ, ಅದರ ಬದಲಾಗಿ ೧೫೨೭ಲ್ಲಿ ಮರಣಸ್ಥನಾದ ಲೆಯೋನ್‌ಹರ್ದ್ ಕೈಸರನ ವರ್ತಮಾನವನ್ನು ಸ್ವಲ್ಪ ಹೆಚ್ಚಿಗೆ ಕೇಳುವಾ. ಮೆಲಂಥೋನನು ಆ ಭಯಂಕರ ಕುಹಕಪ್ರಕಾಶ ಮ್ಯುಂಚರನ ಕಥೆಯನ್ನು ಹ್ಯಾಗೋ, ಹಾಗೆಯೆ ಲುಥರನು ಕರ್ತನ ಮಹಿಮೆಯಲ್ಲಿ ಪ್ರಕಾಶಿಸುವ ಈ ಪರಿಶುದ್ಧ ಮರಣಸಾಕ್ಷಿಯ ಕಥೆಯನ್ನು ವರ್ಣಿಸಿದನು. ಲುಥರನು ಅದನ್ನು ಬಾಹುಲ್ಯವಾಗಿ ಬರದಿದ್ದರೂ, ನಾವು ಇಲ್ಲಿ ಒಂದೆರಡು ಮಾತು ಮಾತ್ರವೇ ಸಾಕೆಂದನ್ನ ಬೇಕು.

ಲೆಯೋನ್‌ಹರ್ದ್ ಕೈಸರನು ಹಳೆ ಬವರಿಯದ ವತ್ಸನ್‌ಕಿರ್ಖೆನದಲ್ಲಿ ಪುರೋಹಿತನಾಗಿದ್ದನು. ಅವನಿಗೂ ಲುಥರನ ಗ್ರಂಥಗಳು ಬಂದು ಮುಟ್ಟಿದವು; ಅವುಗಳ ಸತ್ಯತ್ವವನ್ನು ಪೃತ್ಯಚಿತ ಮಾಡಿ ಕೊಂಡ ಮೇಲೆ, ಸುವಾರ್ತೆಯ ಬೋಧನೆಯನ್ನು ತನ್ನ ಸಭೆಯಲ್ಲಿ ನಿರ್ಭಯವಾಗಿ ಪ್ರಸಂಗಿಸಿದನು. ಪಸ್ಸವದ ಅಧ್ಯಕ್ಷನು ಆ ವರ್ತ

ಮಾನವನ್ನು ಕೇಳಿದಾಗ, ಮುಂಚೆ ಅವನನ್ನು ಬಂಧನದಲ್ಲಿ ಇಟ್ಟು, ಕಡೆಯಲ್ಲಿ ಅವ
ನಿಂದ ಲುಥರನ ಬೋಧನೆಯನ್ನು ಇನ್ನು ಮುಂದೆ ಸಾರುವದಿಲ್ಲವೆಂಬ ವಾಗ್ದತ್ತ
ವನ್ನು ತಕ್ಕೊಂಡು, ತಿರಿಗಿ ಹೋಗ ಬಿಟ್ಟನು. ಆದರೆ ಅನ್ಯಥಾ ಬೋಧಿಸುವದಕ್ಕೆ ಲೆ
ಯಾನ್‌ಹರ್ದನಿಗೆ ಆಗಲಿಲ್ಲಾ; ಆದ್ದರಿಂದ ಎಷ್ಟು ಕರಕರೆ ಪಟ್ಟರೂ, ಮನಸ್ಸಾಕ್ಷಿ
ವ್ಯಥೆಯನ್ನು ತಾಳಲಾರದೆ, ಆ ಉದ್ಯೋಗವನ್ನೆ ಬಿಟ್ಟನು. ದೇವರ ವಾಕ್ಯದಲ್ಲಿ ಚೆ
ನ್ನಾಗಿ ಸ್ಥಿರವಾಗ ಬೇಕೆಂಬ ಮಹಾ ಅಭಿಲಾಷೆಯಿಂದ ಅಧ್ಯಕ್ಷನ ಕೋಪಕ್ಕೆ ಹೆದರ
ದೆ, ವಿತ್ತೆನ್‌ಬೆರ್ಗ್‌ಕ್ಕೆ ಹೋಗಿ, ಲುಥರನ ಪಾದಗಳ ಬಳಿಯ ಕೂತು, ಬೋಧನೆ ತಕ್ಕೊಂ
ಡನು. ಈತನು ಸಹಾ ಈ ಯಥಾರ್ಥವಾದ, ಸತ್ಯಕ್ಕೋಸ್ಕರ ಮಮತೆಯಿಂದ ಉರಿ
ಯುವ ಭಕ್ತನನ್ನು ಬಹಳ ಪ್ರೀತಿ ಮಾಡಿದನು.

ಅಲ್ಲಿದ್ದ ಎರಡು ವರುಷದ ಮೇಲೆ, ತನ್ನ ತಂದೆಯು ಮರಣಸಂಕಟದಲ್ಲಿ ಬಿದ್ದಿ
ದ್ದಾನೆಂದೂ ಸಾಯುವ ಮುಂಚೆ ಮಗನನ್ನು ನೋಡಲಿಕ್ಕೆ ಅಪೇಕ್ಷಿಸುತ್ತಾನೆಂದೂ
ವರ್ತಮಾನ ಬಂತು. ಆದ್ದರಿಂದ ರಾಬ್ ಎಂಬ ಹಳೇ ಬವರಿಯದಲ್ಲಿರುವ, ಹು
ಟ್ಟಿದ ಊರಿಗೆ ತಕ್ಷಣದಲ್ಲಿ ಹೊರಟು ಹೋದನು. ಆದರೆ ಅಲ್ಲಿ ಅವನು ಬಂದ ಸಂ
ಗತಿಯನ್ನು ಯಾರೋ ಹೇಳಲಾಗಿ, ಅವನನ್ನು ತಕ್ಷಣ ಹಿಡಿದು ಪಸ್ಸವಿಗೆ ಎಳಕೊಂ
ಡು ಹೋಗಿ, ಬಂಧನದಲ್ಲಿ ಇಟ್ಟರು. ಬಹುಕಾಲ ಪರ್ಯಂತ ಅಲ್ಲಿ ಬಂಧನದಲ್ಲಿ
ದ್ದು, ಅವನ ಆರೋಗ್ಯವೆಲ್ಲಾ ಹೋಯಿತು. ಅಲ್ಲಿಯ ಮಹಾ ದೇವಾಲಯದ ಅ
ಧಿಕಾರಿಗಳು ಅವನ ಪಾಷಂಡಿ ವಿಶ್ವಾಸದ ಮುಖ್ಯ ತಾತ್ಪರ್ಯವನ್ನು ವಿಚಾರಿಸಿದರು.
ಅವನು ಉತ್ತರ ಕೊಟ್ಟು, ದೇವರ ಮುಂದೆ ನೀತಿ ನಿರ್ಣಯ ಪಡಿಸುವದು ವಿಶ್ವಾಸ
ಮಾತ್ರವೇ; ಕ್ರಿಯೆಗಳು ವಿಶ್ವಾಸದ ಗುರ್ತುಗಳಾಗಿ ನೆರೆಯವನ ಸೇವೆಗೋಸ್ಕರ ಇರು
ತ್ತವೆ. ತನ್ನ ವಿಷಯದಲ್ಲಿಯೂ ದೇವರ ವಿಷಯದಲ್ಲಿಯೂ ಅವು ಕೆಲಸಕ್ಕೆ ಬರುವ
ದಿಲ್ಲಾ, ದೇವರ ಸಂಗಡ ಅವುಗಳಿಂದ ವ್ಯವಹರಿಸ ಕೂಡದು, ಕ್ರಿಸ್ತನು ತನ್ನ ರಕ್ತದಿಂ
ದ ನಮ್ಮನ್ನು ಕ್ರಯಕ್ಕೆ ಕೊಂಡು, ತನ್ನ ಸಮಸ್ತ ಅರ್ಥಗಳಲ್ಲಿ ನಮಗೆ ಪಾಲು ಕೊಡು
ತ್ತಾನೆಂದು, ಆತಗೆ ಮಾತ್ರವೆ ಮಾನ ಕೊಡ ಬೇಕೆಂದು ಸಾಧನೆ ಮಾಡಿದನು. ಅ
ದೇ ಪ್ರಕಾರ ಬೇರೆ ವಿಷಯಗಳಲ್ಲಿಯೂ ಸ್ವಚ್ಛವಾದ ಉತ್ತಮವಾದ ಸತ್ಯದ ಅರಿಕೆ
ಯನ್ನು ಮಾಡಿ, ಅದನ್ನು ಗ್ರಂಥದಲ್ಲಿ ಬರದಿಟ್ಟನು.

ಕತ್ತಲೆಯ ಬಂದಿಖಾನೆಯಿಂದ ಅವನು ಗುರ್ತದವರಿಗೆ ಅನೇಕ ರಮ್ಯವಾದ ಹೃ
ದಯಕ್ಕೆ ತಾಗುವ ಆನಂದಕರವಾದ ಮಾತುಗಳನ್ನು ಬರದನು; ಹಾಗೆ ತನಗೂ ಲು
ಥರನಿಗೂ ಸ್ನೇಹಿತನಾಗಿದ್ದ ಪ್ರಸಂಗಿ ಮಿಖಯೆಲ್ ಸ್ತೀಫೆಲನಿಗೆ ಎಸ್ಲಿಂಗನಕ್ಕೆ ಬರದ
ಕಾಗದದಲ್ಲಿ ಹೇಳುವದೇನಂದರೆ: "ಕ್ರಿಸ್ತನಲ್ಲಿ ನನ್ನ ಪರಮ ಪ್ರಿಯ ಸಹೋದರನೇ,

ನಿತ್ಯ ಸರ್ವತ್ರಾಣಿಯಾದ ದೇವರು, ಕರುಣೆಯ ತಂದೆಯು, ಸರ್ವ ಆದರಣೆಯ ದೇವರು, ನಂನಂಥಾ ಬಣಗು ಸೇವಕನಾದ ಮಹಾ ಪಾಪಿಯನ್ನು, ಲೋಕದ ಮುಂದೆ ಆತನ ಪರಿಶುದ್ಧ, ಶೀಂಯಾದ ಮಂಗಲನಾಮವನ್ನು ಅರಿಕೆ ಮಾಡುವ ಆನಂದಕರವಾದ ಕರಿಯುವಿಕೆಗೆ ಯೋಗ್ಯನೆಂದೆಣಿಸಿದ ಕಾರಣ, ನನ್ನ ಸಂಗಡ ಆನಂದ ಪಡಿರಿ. ಆತನಿಗೆ ನಿತ್ಯ ಸ್ತೋತ್ರವಾಗಲಿ. ಆಮೆನ್! ನನ್ನಲ್ಲಿ ಈ ಕೆಲಸವನ್ನು ಆರಂಭಿಸಿದ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರೆ ಅದನ್ನು ಪೂರ್ತಿ ಮಾಡಲಿ; ಆತನು ನನ್ನ ಹೃದಯವನ್ನೂ ನನ್ನ ಸಮಸ್ತ ಇಂದ್ರಿಯಗಳನ್ನೂ ನನ್ನ ಸಮಸ್ತ ಇಷ್ಟವನ್ನೂ ಬಲ ಪಡಿಸಿ, ಭಾಗ್ಯದ ಮಾರ್ಗದ ಕಡೆಗೆ ಹೂಡಿ, ನನ್ನ ತುಟಿಗಳನ್ನೂ ಬಾಯ್ಯನ್ನೂ ನಾಲಿಗೆಯನ್ನೂ ತಂದೆಯಾದ ತನ್ನ ಚಿತ್ತದ ಸುಯೋಜನೆಯ ಪ್ರಕಾರ ಆಳಿಕೊಂಡು, ಅವುಗಳನ್ನು ಅಲ್ಲಾಡಿಸಲಾಗುವ ಪರ್ಯಂತ ಆತನ ಸ್ತೋತ್ರವನ್ನು ಉಚ್ಚರಿಸುವ ಹಾಗೆಯೂ, ಆತನ ಬಲಹೀನ ಅಯೋಗ್ಯ ಪಾತ್ರವಾದ ನನ್ನಿಂದ, ನಾನು ಬಹಳ ಕಾಲದಿಂದಲೂ ಬಹಳ ಸರ್ತಿಯೂ ಕೇಳಿದ ಆತನ ಪರಿಶುದ್ಧ ಸ್ವಚ್ಛವಾದ ನಿರ್ಮಲ ಸುವಾರ್ತೆಯು ನಿಂದಿಸಲ್ಪಡದ ಹಾಗೆಯೂ ಮಾಡಲಿ. ನಾನು ಅದನ್ನು ಕೇಳಿದ್ದು ಭಯ ಭೀತಿಯಿಂದಲೂ ಆತನ ಪರಿಶುದ್ಧ ನಾಮದ ಮಾನಕ್ಕೂ ಸ್ತೋತ್ರಕ್ಕೂ ಕೇಳಿಪ್ಪೆಂದು ಮಾಡ ಬೇಕು". '

ಸಾಕ್ಷಿಮರಣವೇ ತನ್ನ ಗತಿ ಆಗುವದೆಂದು ತಿಳಿದು, ಬಹಳ ಗೆಲವಿನಲ್ಲಿದ್ದರೂ, ಈ ವಿಶ್ವಾಸಧೈರ್ಯದ ಸಂಗಡ ಯೋಗ್ಯವಾದ ದೈನ್ಯಭಾವದಲ್ಲಿಯೂ ಪರಿಶುದ್ಧ ಭೀತಿಯಲ್ಲಿಯೂ ನಡ ಕೊಂಡನು. ಮತ್ತೊಬ್ಬ ಸ್ನೇಹಿತನಿಗೆ ಅವನು ಬರದದ್ದೇನಂದರೆ: "ಪೌಲನು ರೋಮಾಯರ ಪತ್ರಿಕೆಯಲ್ಲಿ ಸ. ಲ ಹೇಳುವ ಪ್ರಕಾರ, ಮರಣವಾದರೂ ಜೀವವಾದರೂ ಯಾವ ಬಲವಾದರೂ, ದೇವರ ಪ್ರೀತಿಗೂ ಆತನ ಪರಿಶುದ್ಧ ವಾಕ್ಯಕ್ಕೂ ಅಗಲಿಸಲಾರದೆಂದು ನನ್ನಲ್ಲಿ ನಿಶ್ಚೈಸಿ ಕೊಂಡಿದ್ದೇನೆ. ಆದರೆ ಇಚ್ಛೈಸುವವನಿಂದಲ್ಲ ಓಡುವವನಿಂದಲ್ಲ, ಕರುಣಿಸುವ ದೇವರಿಂದಲೆ ರೋಮ. ೯. ಎಲ್ಲಾ ಆಗ ಬೇಕು. ಆದ್ದರಿಂದ ನಾನು ಸ್ಥಿರವಾಗಿ ನಿಂತರೆ, ಅದೆಲ್ಲಾ ಬರೇ ಕೃಪೆ ಹೊರತು, ನನ್ನ ಕೃತ್ಯವಲ್ಲಾ," ಈ ಪ್ರಕಾರ ಅವನು ನಿರಂತರವಾಗಿ ಮೇಲಿನಿಂದ ತನಗೆ ಬಲ ಬರ ಬೇಕೆಂದು ಮೊರೆ ಇಡುತ್ತಾ ಇದ್ದನು, ಅದನ್ನು ತನಗೋಸ್ಕರ ಪ್ರಾರ್ಥಿಸ ಬೇಕೆಂದು ತನ್ನ ಸ್ನೇಹಿತರನ್ನೂ ಬೇಡಿ ಕೊಂಡನು.

ಅವನ ಸ್ನೇಹಿತರು ಅವನ ಜೀವವನ್ನು ಉಳಿಸುವದಕ್ಕೆ ಬಹಾಳ ಬಹಾಳ ಪ್ರಯತ್ನ ಮಾಡಿದರು. ಅವನಿಗೋಸ್ಕರ ಒಂದು ಮಾತು ಹೇಳ ಬೇಕೆಂದು ಸುವಾರ್ತಾ ಪಕ್ಷದ ಅರಸುಗಳಿಗೆ ಬಿನ್ನೈಸಿದರು. ಸಕ್ಸದ ಆಯಿಕೆಯ ಅರಸನೂ, ಅನ್ಸ್ಬಖ ದೇಶಾ

ಯಿಯೂ ಬೇರೆ ದೊಡ್ಡ ದೊಡ್ಡ ಪ್ರಭುಗಳೂ ಅವನಿಗೋಸ್ಕರ ಬಹಳ ಬೇಡಿ ಕೊಂಡಾಗ್ಯೂ, ಸಾರ್ಥಕವಾಗಲಿಲ್ಲಾ. ಪಸ್ಸವದ ಅಧ್ಯಕ್ಷನು ದೇವಪ್ರಕಾಶೀಕೃತನಾದ ದೇವಪ್ರಿಯನಾದ ಲೆಯೊನ್‌ಹರ್ದ್ ಕೈಸರನನ್ನು ಮೂರ್ಖ ಪಾಷಂಡಿ ಎಂದು ಮಹೋತ್ಸವದಿಂದ ಅಗ್ನಿಮರಣಕ್ಕೆ ನಿರ್ಣೈಸಿದನು. ಆ ಮೇಲೆ ಅವನ ಉದ್ಯೋಗಾಧಿಕಾರವನ್ನು ವಿಸರ್ಜನೆ ಮಾಡಿ, ತಲೆ ಬೋಳಿಸಿ, ಸಾಧಾರಣ ಅಂಗಿಯನ್ನು ತೊಡಿಸಿ, ಲೌಕಿಕ ಮನುಷ್ಯನಂತೆ ಲೌಕಿಕ ಅಧಿಕಾರಿಗಳಿಗೆ ಒಪ್ಪಿಸಿ ಕೊಟ್ಟನು.

ಕೆಲವು ದಿವಸದ ಮೇಲೆ ಅವನನ್ನು ಸಂಕೋಲೆಗಳಿಂದ ಕುದುರೆಯ ಬೆನ್ನಿಗೆ ಕಟ್ಟಿ, ಅವನ ಜನ್ಮಭೂಮಿ ಇರುವ ಜಿಲ್ಲೆಯ ಪಟ್ಟಣವಾದ ಸೆರ್ದಿಂಗಕ್ಕೆ ಪಸೌ ಪಟ್ಟಣದ ಮಾರ್ಗವಾಗಿ ತಕ್ಕೊಂಡು ಹೋದರು. ಆದರೆ ಅವನು ಸಮಾಧಾನವಾಗಿಯೂ ನಿರ್ಭಯವಾಗಿಯೂ ಇದ್ದು, ದಾರಿಯಲ್ಲಿ ಸಮಸ್ತರನ್ನು ನಮಿಸಿದನು.

೧೫೨೭ನೆ ಅಗೋಸ್ತು ೧೬ನೆ ತಾರೀಕು ನಿತ್ಯ ಜೀವದೊಳಗೆ ಹೊಗಿಸುವ ಪ್ರಕಾಶಮಯವಾದ ಜನ್ಮದ ದಿನವಾಯಿತು. ಮಾರೆಕಾರರು ಅವನನ್ನು ಕಟ್ಟುವಾಗ್ಯೆ, ಹಗ್ಗಗಳು ಒಂದರೊಳಗೊಂದು ಶಿಕ್ಕಿ ಕೊಂಡಾಗ, ಅವರ ಇಡುವದಕ್ಕೂ ಶಪಿಸುವದಕ್ಕೂ ತೊಡಗಿದರು. ಲೆಯೊನ್‌ಹರ್ದನು ಅವರಿಗೆ: “ಶಪಿಸ ಬೇಡಿರಿ, ಪ್ರಿಯ ಸಹೋದರರೇ, ನಾನು ನಿಮ್ಮ ಕೈಯಿಂದ ಓಡುವದಿಲ್ಲಾ. ನನ್ನ ಕರ್ತನಾದ ಕ್ರಿಸ್ತನ ಇಚ್ಛೆ ಇಲ್ಲದೆ ನೀವು ನನಗೇನು ಮಾಡಲಾರಿರಿ; ನೀವು ದೇವರು ನೇಮಿಸಿದ ಬರೇ ಕರಣಗಳು ಮಾತ್ರವೆ ಆಗಿದ್ಧೀರಿ” ಎಂದು ಹೇಳಿದನು. ಅವನು ಹೇಳ ಕೂಡದ ತಾಳ್ಮೆಯಿಂದಲೂ ಮಾಧುರ್ಯದಿಂದಲೂ ಹೃದಯಾಶಕ್ತಿಯ ಪ್ರಾರ್ಥನೆಯಿಂದಲೂ ಸಮಸ್ತ ಪೀಡೆಗಳನ್ನು ಸಹಿಸಿದನು. ನೆರೆಕೂಡಿ ಬಂದ ಮಹಾ ಸಮೂಹವನ್ನು ಕಂಡು, “ಇಲ್ಲಿ ದೊಡ್ಡ ಬೆಳೆ ಅದೆ; ಇಲ್ಲಿ ಅನೇಕ ಕೊಯ್ಯುವವರು ಇರ ತಕ್ಕದ್ದು” ಎಂದು ಹೇಳಿ, ಬೆಳೆಯ ಯಜಮಾನನನ್ನು, ಕೊಯ್ಯುವವರನ್ನು ಕಳುಹಿಸ ಬೇಕೆಂದು ಬೇಡಿ ಕೊಂಡನು. ತನ್ನನ್ನು ಇಲ್ಲಿ ತಂದವರೆಲ್ಲರಿಗೆ ಹೃದಯಪೂರ್ವಕವಾಗಿ ಕ್ಷಮಿಸುತ್ತೇನೆಂದೂ, ದೇವರು ಸಹಾ ಅವರಿಗೆ ಕ್ಷಮಿಸುವ ಹಾಗೆ ಪ್ರಾರ್ಥಿಸುತ್ತೇನೆಂದೂ, ಮುತ್ತಿಗೆ ಹಾಕಿದ ಜನರಿಗೆ ಹೇಳಿದನು. ತನ್ನ ಎದುರೋಳಿಗೋಸ್ಕರವೂ, ತಾನು ದೃಢವಾದ ಕ್ರೈಸ್ತವಿಶ್ವಾಸದಲ್ಲಿ ಸಾಯುವ ಹಾಗೆ, ತನಗೋಸ್ಕರವೂ ತನ್ನ ಸಂಗಡಲೂ ಪ್ರಾರ್ಥನೆ ಮಾಡ ಬೇಕೆಂದು ಜನರಿಗೆ ಹೇಳಿದನು. ಬೆಂಕಿಯು ಚನ್ನಾಗಿ ಉರಿಯ ತೊಡಗಿದಾಗ, “ಯೇಸುವೆ, ನಾನು ನಿನ್ನವನು, ನನ್ನನ್ನು ರಕ್ಷಿಸು” ಎಂದು ಘಟ್ಟಿಯಾಗಿ ಕೂಗಿದನು. ಇದು ಅವನ ಕಡೇ ಮಾತು. ಅದು ಹೇಳಿದ ಕ್ಷಣದಲ್ಲಿ, ಅವನ ಪ್ರಾಣವು ರಕ್ಷಕನ ಬಳಿಗೆ ಹಾರಿತು.

ಲುಥೆರನು ಮಿಖಯೆಲ್ ಸ್ತೀಫೆಲನಿಗೆ ಬರದ ಕಾಗದದಲ್ಲಿ ಹೇಳುವದೇನೆಂದರೆ: "ಓ ಬಡಗು ಮನುಷ್ಯ ನಾನು, ಪ್ರಿಯ ಲೆಯೊನ್‌ಹರ್ದ್ ಕೈಸರ ಧಾರೆಗೆ ನಾನು ಎಷ್ಟಾದರೂ ಇದಿರೇ! ನಾನು ವಾಕ್ಯವನ್ನು ಬೋಧಿಸುತ್ತೇನೆ, ಪ್ರಸಂಗಿಸುತ್ತೇನೆ, ಬಹಳ ಮಾತುಗಳಿಂದ ಅದರ ವಿಷಯ ಮಾತಾಡುತ್ತೇನೆ, ಮತ್ತು ಬರಿಯುತ್ತೇನೆ, ಅಷ್ಟೆ; ಆದರೆ ಅವನು ಈ ವಾಕ್ಯವನ್ನು ಚನ್ನಾಗಿ ಕೈಕೊಳ್ಳುವವನಾಗಿ, ಪರೀಕ್ಷಿತನಾದನು. ಈ ಲೆಯೊನ್‌ಹರ್ದನ ಆತ್ಮವು ಇಮ್ಮಡಿಯಾಗಿ ಬೇಡ, ಅರ್ಧದಷ್ಟು ಮಾತ್ರವೆ, ಸೈತಾನನನ್ನು ಜೈಸುವದಕ್ಕೆ, ನನ್ನಲ್ಲಿರುವ ಹಾಗೆ ದೇವರು ನನ್ನನ್ನು ಯೋಗ್ಯನೆಂದೆಣಿಸಿದರೆ, ಪೂರ್ಣ ಮನಸಿನಿಂದಲೂ ಅತಿಯಿಂದಲೂ ಈ ಜೀವವನ್ನು ಬಿಡುತ್ತಿದ್ದೆನು. ದೇವರು ಅನೇಕ ಘೋರ ಕರ್ಮಿಗಳಲ್ಲಿ ಒಂದು ಸಾರಿ ಇಂಥಾ ಪರಿಶುದ್ಧ ಪುರುಷನ ಪರಿಮುಖವಾಗಿ ಪರಿಶುದ್ಧ ದರ್ಶನವನ್ನೂ ತನ್ನ ಕೃಪೆಯ ಕಾಂತಿಯನ್ನೂ ನಂಮಂಥಾ ಅಯೋಗ್ಯರಿಗೆ ಕಾಣಿಸಿದ್ದಕ್ಕೆ ನಿತ್ಯ ಸ್ತೋತ್ರವಾಗಲಿ; ಆತನು ಸರ್ವಥಾ ನಮ್ಮನ್ನು ಬಿಡಲಿಲ್ಲವೆಂಬದಕ್ಕೆ ಇದೊಂದು ಗುರುತು."

§ ೯.

## ಸಭೆಗಳ ತಿದ್ದುಪಾಟಿ

ಮರಣಸಾಕ್ಷಿಗಳ ಗಾಬ್ಬರದಿಂದ ಫಲಿತವಾಗಿ, ಸತ್ಯದ ಬಲದಿಂದ ಎಲ್ಲಾ ಸುಳ್ಳು ಅಪವಾದಗಳನ್ನು ಖಂಡಿಸುತ್ತಾ, ಪುನಸ್ಥಾಪನೆಯು ದಿನದಿನ ಎಲ್ಲಾ ಎಡತಡೆಗಳನ್ನು ದಾಟಿ, ವೃದ್ಧಿಯಾಗುತ್ತಾ ಹೋಯಿತು. ೧೫೨೭ನೆ ವರುಷದೊಳಗೆ ಸಮಸ್ತ ಜರ್ಮನ ದೇಶದಲ್ಲಿಯೂ ಬೇರೆ ಸೀಮೆಗಳಲ್ಲಿಯೂ ಅದಕ್ಕೆ ಅನೇಕಾನೇಕ ಸ್ನೇಹಿತರೂ ಆಶ್ರಿತರೂ ಉಂಟಾಗಿದ್ದರು; ಅನೇಕ ಪ್ರದೇಶಗಳಲ್ಲಿಯೂ ಸಾವಿರಾರು ಸ್ಥಳಗಳಲ್ಲಿಯೂ ಬೆಳಕಿಗೂ ಕತ್ತಲೆಗೂ ಮಹಾ ಹೋರಾಟ ಉಂಟಾಯಿತು; ದೊಡ್ಡ ದೊಡ್ಡ ಮಂಡಲಗಳಲ್ಲಿ ಸುವಾರ್ತಾಕಾರ್ಯವು ಪ್ರಬಲವಾಯಿತು. ಆ ಪ್ರಕಾರ ಸಕ್ಸ ಆಯಿಕೆಯ ಅರಸ್ಸನದಲ್ಲಿಯೂ, ಹೆಸ್ಸ ದೇಶದಲ್ಲಿಯೂ, ಅನ್ಸಬಖ ಬೈರೈತ ಅರಸು ಸೀಮೆಯಲ್ಲಿಯೂ, ಅನ್‌ಹಲ್ಟ್, ಬ್ರೌನ್‌ಶ್ವೈಗ ಲೂನೆ—

ಬುರ್ಗ್ ಸೀಮೆಗಳಲ್ಲಿಯೂ, ನೂರ್ನ್‌ಬೆರ್ಗ್‌ರೈಶ್ಲಿಜೆನ ಮುಂತಾದ ಸ್ವಾತಂತ್ರಿಕ ರಾಜ ಪಟ್ಟಣಗಳಲ್ಲಿಯೂ ಪುನಸ್ಸ್ಥಾಪನೆಯು ಏರೇರುತ್ತಾ ಬಂತು.

ಇಲ್ಲೆಲ್ಲಾ ಯಾಜಕ, ಮಿಸಾಸು, ಕಿವಿಯರಿಕೆ, ಮುಂತಾದ ದೇವವಾಕ್ಯ ವಿರುದ್ಧ ವಾದ ಮರ್ಯಾದೆಗಳನ್ನು ಕ್ರಮವಾಗಿಯೂ ನಿಧಾನವಾಗಿಯೂ ತೆಗದರು; ಮಠಗ ಳನ್ನೂ ಸನ್ಯಾಸವನ್ನೂ ವರ್ಜಿಸಿದರು; ರಾತ್ರಿಭೋಜನವನ್ನು ಉಭಯ ಗುರುತುಗಳಾ ದ ರೊಟ್ಟಿಯಲ್ಲಿಯೂ ದ್ರಾಕ್ಷೆರಸದಲ್ಲಿಯೂ ಕೊಟ್ಟರು, ಸಭೆಯಲ್ಲಿ ಲತೀನ ಭಾಷೆಗೆ ಬದಲಾಗಿ, ಜನಕ್ಕೆ ತಿಳಿಯುವ ಸ್ವಭಾಷೆಯನ್ನು ಪ್ರಯೋಗಿಸಿದರು; ಮತ್ತು ದೇವರ ವಾಕ್ಯವನ್ನು ಎಲ್ಲಾ ಕಡೆಯಲ್ಲಿಯೂ, ಮಾನುಷಮಿಶ್ರಗಳೇನೂ ಇಲ್ಲದೆ, ಶುದ್ಧ ವಾಗಿಯೂ ಸ್ಪಷ್ಟವಾಗಿಯೂ ಪ್ರಸಂಗಿಸ ಆಜ್ಞಾಪಿಸಿದರು.

ಆದರೆ ಅನಾಚಾರಗಳನ್ನು ತೆಗದು, ಒಳ್ಳೇ ಕ್ರಮಗಳನ್ನು ಮಾಡಿ, ಸತ್ಯಬೋಧ ನೆಯನ್ನು ಆಜ್ಞಾಪಿಸಿದರೆ ಸಾಲದು; ಇದಲ್ಲದೆ, ವಿತ್ತೆನ್‌ಬೆರ್ಗದಲ್ಲಿಯೂ ತೋರ್ಗಾ ವಿನಲ್ಲಿಯೂ ಚನ್ನಾಗಿ ನಡದ ಹಾಗೆ, ಸೀಮೆಯಲ್ಲಿ ಎಲ್ಲಾ ಕಡೆಯಲ್ಲಿಯೂ ಚ ನ್ನಾಗಿ ನಡಿಯಲಿಲ್ಲಾ. ಸುವಾರ್ತೆಯ ಕೆಲಸವು ಆಯಿಕೆಯ ಸಕ್ಸ ದೇಶದಲ್ಲಿ ಪೂ ರ್ಣ ಅಧಿಕಾರವನ್ನು ಹೊಂದಿತು; ಆದರೂ ಯಾಜಕರು ಪೋಪನಿಗೆ ವಶವಾಗಿ, ತ ಮ್ಮ ಉದ್ಯೋಗವನ್ನು ರೋಮಿಾಯ ರೀತಿಯಾಗಿ ನಡಿಸುವ ಸಭೆಗಳಿದ್ದವು; ಅನೇಕ ಯಾಜಕರು ಸುವಾರ್ತೆಗೆ ಪ್ರತೀಕಾರವಾಗಿ ನಿಲ್ಲುವವರಲ್ಲವಾದರೂ, ಅದನ್ನು ಸಮ ವಾಗಿ ತಿಳಿಯಲಿಲ್ಲಾ; ದೇಶದಲ್ಲಿ ಎಲ್ಲಾ ಕಡೆಯಲ್ಲಿಯೂ ಬೋಧನೆ ಆಚಾರಗಳ ವಿಷಯದಲ್ಲಿ ಬಹಳ ಗಲಿಬಿಲಿ ಇತ್ತು. ಅದ್ದರಿಂದ ಪ್ರತಿಸಭೆಯನ್ನು ಪರಾಮರಿಸಿ, ಎಲ್ಲಾ ಕಡೆಯಲ್ಲಿಯೂ ಸತ್ಯಸುವಾರ್ತಾಭಾವವನ್ನು ಹುಟ್ಟಿಸಿ, ಅನೇಕ ಸಭೆಗಳೂ ಪ್ರಾಣಿಗಳೂ ಇರುವ ಸರ್ವ ಸಭೆಯು ತಿದ್ದಪಾಟಿ ಆಗುವ ಹಾಗೆ ಮಾಡುವದು ಅವಶ್ಯವಾಯಿತು. ಆಗ್ಯೆ ಕೀರ್ತಿಗೊಂಡ ಮಹಾ ಸಕ್ಸ ಸಭಾಪರೀಕ್ಷೆಯಂಬದು ಉಂ ಟಾಯಿತು; ಅದನ್ನು ನೋಡಿ, ಬೇರೆ ಸುವಾರ್ತಾಸೀಮೆಗಳಲ್ಲಿ ಹಾಗೆಯೇ ಮಾ ಡಿದರು.

ತನ್ಮಧ್ಯ ೧೫೨೫ನೆ ಮೇ ೫ಲ್ಲು ಬುದ್ಧಿವಂತನೆಂಬ ಫ್ರೇದರಿಕನು ಲೊಖೌ ಎಂ ಬ ದುರ್ಗದಲ್ಲಿ ತೀರಿ ಹೋದನು. ಅವನ ಸಹೋದರನೂ ಉತ್ತರಾಧಿಕಾರಿಯೂ ಆ ಗಿದ್ದ ಸ್ಥಿರನೆಂಬ ಯೋಹಾನನು ಅಧಿಕ ಖಂಡಿತತ್ವದಿಂದಲೂ ಆಸಕ್ತಿಯಿಂದಲೂ ಪು ನಸ್ಸ್ಥಾಪನೆಯ ಕಾರ್ಯವನ್ನು ಆಥರಿಸಿದನು. ಈತನು ಲುಥರನ ಆಲೋಚನೆಗೆ ಅನು ಸಾರವಾಗಿ, ತನ್ನ ಸೀಮೆಯಲ್ಲೆಲ್ಲಾ ಸಭಾಪರೀಕ್ಷೆಯನ್ನು ಆಜ್ಞಾಪಿಸಿದನು, ಇದು ೧೫೨೭ನೆ ೨ಲನೆಯಲ್ಲಿ ನಡಿಯಿತು. ಪರೀಕ್ಷಕರಿಗೆ ಕೊಟ್ಟ ಆಜ್ಞಾಪತ್ರದ ಪ್ರಕಾರ

ಅವರು, “ಬೋಧಕರಲ್ಲಿಯೂ ಕೇಳುವವರಲ್ಲಿಯೂ ಸುವಾರ್ತೆಯ ಸತ್ಯಾರ್ಥಗಳ ಬೋಧನೆಯೂ ತಿಳುವಿಕೆಯೂ ಹ್ಯಾಗುಂಟೆಂಬದನ್ನೂ, ಅವರ ಜೀವವೂ ನಡತೆಯೂ ಹ್ಯಾಗಿರುತ್ತದೆಂಬದನ್ನೂ, ದೇವರು ಈ ದೇಶದ ಮೇಲೆ ಸುವಾರ್ತೆಯ ಬೆಳಕನ್ನು ಉದಯಿಸ ಮಾಡಿ, ತೋರಿಸಿದ ಮಹಾ ಉಪಕಾರವನ್ನು ದೀನ ಯೋಗ್ಯ ಕೃತಜ್ಞತೆಯಿಂದ ಇಷ್ಟು ವರೆಗೆ ತಿಳುಕೊಂಡಿದ್ಧಾರೋ ಎಂಬದನ್ನೂ” ವಿಚಾರಿಸ ಬೇಕಾಗಿತ್ತು.

ಆಗ್ಯೆ ಒಂದು ಕಡೆಗೆ ಲುಥರ ಬೂಗೆನಹಾಗೆನ ಯೋನ ಮುಂತಾದವರೂ, ಮತ್ತೊಂದು ಕಡೆಗೆ ಮೆಲಂಥೊನ ಮುಕೊನ್ಯ ಮುಂತಾದವರೂ, ಇನ್ನೊಂದು ಕಡೆಗೆ ಸ್ಪಲತೀನ ಮುಂತಾದವರೂ, ಪರ್ಯಟಣ ಮಾಡಿ, ಪಟ್ಟಣ ಪಟ್ಟಣಕ್ಕೂ, ಊರು ಊರಿಗೂ ಹೋಗಿ, ಪರೀಕ್ಷಿಸಿದರು. ಆದರೆ ಆಗ್ಯೆ ಕಾಣ ಬಂದ ಸ್ಥಿತಿಯ ವಿಷಯ ಏನು ಹೇಳಲಿ! ಅವರು ಸಾಧಾರಣ ಜನರಲ್ಲಿ ಮಾತ್ರವಲ್ಲ, ಬೋಧಕರಲ್ಲಿ ಸಹಾ, ಎಂದೂ ನಿರೀಕ್ಷಿಸದ ಅಜ್ಞಾನವನ್ನೂ ಕುರುಡತನವನ್ನೂ ವಿಶ್ವಾಸಚಾರ್‍ಯಗಳ ವಿಷಯದಲ್ಲಿ ಕಂಡರು. ಮೆಲಂಥೊನನು ಈ ವಿಷಯದಲ್ಲಿ ಹೇಳುವದೇನೆಂದರೆ: “ಇಷ್ಟು ವರೆಗೆ ಇಂಥಾ ಅಜ್ಞಾನದಲ್ಲಿಯೂ ಮೂರ್ಖತ್ವದಲ್ಲಿಯೂ ಜನರನ್ನು ಇರಗೊಡಿಸಿದ್ದಕ್ಕೆ ಯಾರು ಜವಾಬು ಕೊಟ್ಟಾರು? ಈ ದುಃಖವನ್ನು ನೋಡುವಾಗ್ಯೆ, ನನ್ನ ಹೃದಯವು ಮಹಾ ವ್ಯಥೆ ಪಡುತ್ತದೆ. ಒಂದು ಊರಿನ ಪರೀಕ್ಷೆಯು ತೀರಿದ ಮೇಲೆ, ನಾನು ಅತ್ತಕಡೆಗೆ ಹೋಗಿ, ನನ್ನ ದುಃಖವನ್ನು ಅತ್ತು ಪರಿಹರಿಸಿ ಕೊಳ್ಳ ಬೇಕಾಗುತ್ತದೆ. ಮನುಷ್ಯನ ಸಹಜ ಸಾಮರ್ಥ್ಯಗಳನ್ನು ಪ್ರಯೋಗಿಸದೆ, ಎಷ್ಟೋ ಕಲಿಯಲಿಕ್ಕೂ ಗ್ರಹಿಸಲಿಕ್ಕೂ ಶಕ್ತವಾದ ಆತ್ಮವು ತನ್ನ ನಿರ್ಮಾಣಿಕನಾದ ಕರ್ತನ ವಿಷಯದಲ್ಲಿ ಏನೊಂದೂ ತಿಳಿಯದೆ ಇರುವದನ್ನು ಕಂಡರೆ, ಯಾರು ಗೋಳಾಡದೆ ಇದ್ದಾನು!” ಲುಥರನು ಅವನಿಗೆ ನಿಜವಾದ ಚುರುಕಾದ ಮಾತುಗಳಿಂದ ಹೇಳುವದೇನೆಂದರೆ: “ಅಯ್ಯೋ, ದೇವರೆ, ನೀನೇ ರಕ್ಷಿಸ ಬೇಕು! ನಾನು ಎಷ್ಟೋ ದುಃಖವನ್ನು ಕಂಡೆ; ಸಾಧಾರಣ ಮನುಷ್ಯರು, ಮುಖ್ಯವಾಗಿ ಹಳ್ಳಿಗಳಲ್ಲಿ, ಕ್ರೈಸ್ತ ಬೋಧನೆಯ ವಿಷಯದಲ್ಲಿ ಏನು ತಿಳಿಯದೆ ಇದ್ಧಾರಲ್ಲಾ! ಇದಲ್ಲದೆ ಅನೇಕ ಬೋಧಕರು ಸಹಾ ಬೋಧಿಸುವದಕ್ಕೆ ಅಯೋಗ್ಯರು, ಘಟ್ಟಿಗರಲ್ಲವಲ್ಲಾ; ಆದರೂ ಎಲ್ಲರೂ ಕ್ರೈಸ್ತರು, ಸ್ನಾನ ಹೊಂದಿದವರು, ಪರಿಶುದ್ಧ ಪ್ರಸಾದಗಳನ್ನು ತಕ್ಕೊಳ್ಳುವವರು; ಅವರಿಗೆ ಕರ್ತನ ಪ್ರಾರ್ಥನೆಯಾಗಲಿ ವಿಶ್ವಾಸಪ್ರಮಾಣವಾಗಲಿ ಹತ್ತು ಕಟ್ಟಳೆಗಳಾಗಲಿ ಬರುವದಿಲ್ಲಾ. ಅವರು ಬಾಯಿಲ್ಲದ ಪಶುಗಳ ಹಾಗೆಯೂ, ಬುದ್ಧಿ ಇಲ್ಲದ ಶೂಕರಗಳ ಹಾಗೆಯೂ ಬದುಕುತ್ತಾರಲ್ಲಾ; ಮತ್ತು ಸುವಾರ್ತೆಯು ಈಗ ಬಂದ ಮೇಲೆ, ಎಲ್ಲಾ ಸ್ವತಂತ್ರವನ್ನು ಬಹು ಬುದ್ಧಿಶಾಲಿಗಳಾಗಿ ಅಪಯೋಗಿಸುವದಕ್ಕೆ ಚನ್ನಾಗಿ ಕಲಿ

ತರಪ್ಪಾ! ಹೋ ಅಧ್ಯಕ್ಷರೇ, ನೀವು ಜನರನ್ನು ಹೀಗೆ ದಾರಿ ತಪ್ಪಿ ಹೋಗಗೊಡಿಸಿ, ನಿಮ್ಮ ಉದ್ಯೋಗವನ್ನು ಒಂದು ಕ್ಷಣವಾದರೂ ನಡಿಸದೆ ಇದ್ದದ್ದಕ್ಕೆ, ಕ್ರಿಸ್ತನಿಗೆ ಏನೆಂತ ಜವಾಬು ಕೊಟ್ಟಿರೋ?"

ಈ ಪರೀಕ್ಷಕರು ಇಂಥಾ ದುಃಖಸ್ಥಿತಿಗಳನ್ನು ತಿದ್ದುವದಕ್ಕೆ ತಮ್ಮಿಂದಾಗುವಷ್ಟು ಮಾಡಿ, ಬೋಧಿಸಿದರು, ಕ್ರಮ ಹೇಳಿ ಕೊಟ್ಟರು, ಬುದ್ಧಿ ಹೇಳಿದರು, ಬೆದರಿಸಿದರು, ಇಡುರಾಗುವದನ್ನು ತೆಗದರು, ಸಮವಾದ್ಯನ್ನು ಉಪಕ್ರಮಿಸಿದರು: ಈ ಪ್ರಕಾರ ಈ ಪರೀಕ್ಷೆಯು ಒಳ್ಳೇ ಫಲವಿಲ್ಲದೆ ಹೋಗಲಿಲ್ಲಾ.

ಲುಥರನು ಮೇಲೆ ಹೇಳಿದ ಮಾತುಗಳನ್ನು, ತಾನು ಬರದ ಬಾಲಬೋಧನೆಯಲ್ಲಿ ಹೇಳುತ್ತಾನೆ. ಪರೀಕ್ಷಿಸುವಾಗ್ಯೆ ಇಂಥಾ ದುರವಸ್ಥೆಯನ್ನು ಕಂಡು, ಅವನು ಎರಡು ಬೋಧಪುಸ್ತಕಗಳನ್ನು ಬರದು, ಪರಿಶುದ್ಧ ವಾಕ್ಯದ ಸಾರಾಂಶವನ್ನು ಸಂಕ್ಷೇಪವಾಗಿ ತಿಳಿಸಿದನು. ಜನರು ತಕ್ಕ ಬೋಧನೆಯನ್ನು ಹೊಂದುವ ಹಾಗೆಯೂ, ಕ್ರೈಸ್ತವಿಶ್ವಾಸ ಜೀವಗಳ ಮುಖ್ಯ ಬೋಧನೆಗಳನ್ನು ಕಲಿಯುವ ಹಾಗೆಯೂ, ಈ ಪುಸ್ತಕಗಳನ್ನು ಮಾಡಿದನು. ಬಾಲಬೋಧನೆ ಎಂಬ ಒಂದು ಸಣ್ಣ ಪುಸ್ತಕವು, ನಮ್ಮ ಮಕ್ಕಳಿಗೆ ಕಲಿಸಿ ಕೊಡುವದಕ್ಕೆ, ಕರ್ನಾಟಕದಲ್ಲಿ ಭಾಷಾಂತರ ಮಾಡಿಯದೆ. ಈ ಪ್ರಕಾರ ಜನರನ್ನು ಪ್ರಸಂಗದಿಂದಲೂ ಪ್ರಶ್ನೋತ್ತರಗಳಾದ ಬೋಧನೆಯಿಂದಲೂ ಮಂಗಲಕರವಾದ ಸಫಲವಾಗುವ ತಿಳುವಿಕೆಯೊಳಗೆ ಶೇರಿಸ ಬೇಕೆಂಬ ಪರೀಕ್ಷೆಯ ಮುಖ್ಯ ಆಜ್ಞೆಗೆ ಅನುಸಾರವಾಗಿ, ತಕ್ಕದ್ದನ್ನು ಇದರಿಂದ ಮಾಡಿದ ಹಾಗಾಯಿತು. ಬೋಧಕರಿಗೆ ಒಳ್ಳೇ ಛಂದವಾದ ಸೂತ್ರವೂ, ಕಲಿಯುವವರಿಗೆ ಒಳ್ಳೇ ಸ್ಥಿರವಾದ ಆಧಾರವೂ, ಶಿಕ್ಕಿದ ಹಾಗಾಯಿತು; ಬೋಧಕರು ಕಲಿಸುವದಕ್ಕೂ, ಜನರು ತಿಳಿಯುವದಕ್ಕೂ ಗ್ರಹಿಸುವದಕ್ಕೂ ಶಕ್ತರಾದರು.

೧೫೨೯ಲ್ಲಿ ಲುಥರನ ಎರಡು ಬಾಲಬೋಧನೆಯ ಪುಸ್ತಕಗಳು ಪ್ರಕಟ ಮಾಡಲಾದವು. ಅವುಗಳಿಂದ ಪುನಸ್ಥಾಪನೆಯ ಕಾರ್ಯವು ಅಭ್ಯುದಯವಾಗಿ, ಕಾಲಾನುಕಾಲ ಪರ್ಯಂತ ಮಹಾ ಆಶೀರ್ವಾದವು ಅವುಗಳಿಂದ ಬಂದಿರುವ ಕಾರಣ, ಅವು ದೇವರ ಶ್ಲಾಘ್ಯವಾದ ಕೃಪಾದಾನವೆಂದೆಣಿಸ ತಕ್ಕದ್ದು. ಕರ್ನಾಟಕದಲ್ಲಿ ಭಾಷಾಂತರ ಮಾಡಿದ ಬಾಲಬೋಧನೆಯು ಅತ್ಯುತ್ತಮವಾದ ಪುಸ್ತಕ. ಕ್ರೈಸ್ತನು ದೇವರ ವಾಕ್ಯದ ಪ್ರಕಾರ ಏನು ನಂಬ ಬೇಕೋ, ಏನು ಮಾಡ ಬೇಕೋ, ಅದೆಲ್ಲಾ ಆಶ್ಚರ್ಯಕರವಾಗಿ ಸಂಕ್ಷೇಪವಾಗಿಯೂ ಭೋಳೆ ಮಾತುಗಳಿಂದಲೂ ಹೇಳಿಯದೆ; ಆದಾಗ್ಯೂ ಅದು ಘನವಾದ ಚುರುಕಾದ ಬುದ್ಧಿ ಪ್ರಸಿದ್ಧವಾದ ವಾಕ್ಯಗಳುಳ್ಳದ್ದಾಗಿರುತ್ತದೆ; ಅದು ಬರೇ ಒಣ ಬೋಧನೆ ಅಲ್ಲಾ, ಎಲ್ಲಾ ಸಜೀವವಾಗಿರುತ್ತದೆ. ಅದು

ಬೋಧನೆಯ ಪುಸ್ತಕವೂ ಪ್ರಾರ್ಥನೆಯ ಪುಸ್ತಕವೂ ಎಂದು ಹೇಳ ಬಹುದು, ಆದ್ದರಿಂದ ಹಿರಿಯರಿಗೂ ಕಿರಿಯರಿಗೂ, ವಿದ್ಯಾವಂತರಿಗೂ ವಿದ್ಯಾಶೂನ್ಯರಿಗೂ ತಕ್ಕದ್ದು. ಲುಥರನು ತಾನೆ ತನ್ನ ಕಟ್ಟುವಿಕೆಗೋಸ್ಕರ ದಿನ ದಿನ ಒಂದು ಮುಖ್ಯ ಪರಿಚ್ಛೇದವನ್ನು ಪ್ರಾರ್ಥಿಸುವನು.

ಈ ಸಂಣ ಬಾಲಬೋಧನೆಯು ಸಮಸ್ತ ಸುವಾರ್ತಾಪಕ್ಷದ ಕ್ರೈಸ್ತ ಜನಾಂಗಗಳಲ್ಲಿ, ಸಮಸ್ತ ಶಾಲೆಗಳಲ್ಲಿಯೂ ಮನೆಗಳಲ್ಲಿಯೂ, ಹಬ್ಬಿತು. ೧೬ನೆ ವರ್ಷಶತದಲ್ಲಿಯೇ ೧೪ ಭಾಷೆಗಳಲ್ಲಿ ಅದು ಅಂತರಿಸಲಾಯಿತು, ಈಗ ನಮ್ಮ ಕಾಲದಲ್ಲಿ ಅದನ್ನು ೩೦ಕ್ಕಿಂತ ಹೆಚ್ಚು ಭಾಷೆಗಳಲ್ಲಿ ಓದ ಬಹುದು. ದೇವರ ವಾಕ್ಯದ ಹೊರತಾಗಿ ಈ ಸಣ್ಣ ಪುಸ್ತಕದ ಹಾಗೆ ಯಾವದಾದರೂ ಅಷ್ಟು ಮಂಗಲವನ್ನು ಉಂಟು ಮಾಡಿದ್ದಿಲ್ಲಾ. ಎಷ್ಟೋ ಮಂದಿ ಅದರ ಪರಿಮುಖವಾಗಿ ದಿವ್ಯ ಸತ್ಯಾರ್ಥಗಳ ತಿಳಿವಿಕೆಗೂ ಕ್ರಿಸ್ತ ಯೇಸುವಿನಲ್ಲಿರುವ ಸತ್ಯವಾದ ಜೀವಕ್ಕೂ ಬಂದಿದ್ದಾರೆ! ಅದರಿಂದಲೆ ಪರಿಶುದ್ಧ ಬರಹದಾಳಗೆ ಶೇರಿ, ದೇವರಿಂದ ಬರುವ ಜೀವವನ್ನು ಹೊಂದಿದ್ದಾರೆ. ಯುಸ್ತಯೋನನು ಹೇಳುತ್ತಾನೆ: “ಲುಥರನ ಬಾಲಬೋಧನೆಯು ೬ ತಾರಕ್ಕೆ ಶಿಕ್ಕುವ ಸಣ್ಣ ಪುಸ್ತಕ; ಆದರೆ ಅದರ ಕ್ರಯ ಕೊಡಲಿಕ್ಕೆ ೬೦೦೦ ಲೋಕಗಳು ಸಾಲದು”. ಆನ್ಹಲ್ತದ ಅರಸ ಗೆಯೋರ್ಗನು ತನ್ನ ಪ್ರತಿಯಲ್ಲಿ ಬರದಿಟ್ಟದ್ದೇನೆಂದರೆ: “ದೇವರ ವಾಕ್ಯದ ಹೊರತು, ಇದೇ ನನಗಿರುವ ಪರಮೋತ್ತಮ ಪುಸ್ತಕ.”

ನೀವು ಸಹಾ, ಪ್ರಿಯರೆ, ಒಳ್ಳೇ ಆಸಕ್ತಿಯಿಂದ ಕಲಿತು, ಪ್ರಾರ್ಥಿಸಿರಿ. ಸುವಾರ್ತೆ ತಿಳಿದ ಮನೆಯಜಮಾನರೇ, ನೀವು ನಿಮ್ಮ ಮನೆಯವರ ಸಂಗಡ ಓದಿ, ಅದರ ಗ್ರಂಥಕರ್ತನ ಮಾತನ್ನು ಮನಸಿಗೆ ತಕ್ಕೊಳ್ಳಿರಿ.

ಲುಥರನು ಹೇಳುವದೇನಂದರೆ: “ಒಬ್ಬೊಬ್ಬ ಮನೆಯಜಮಾನನು ಸಪ್ತಕಕ್ಕೆ ಒಂದು ಸರ್ತಿ ಆದರೂ, ಮಕ್ಕಳನ್ನೂ ಮನೆಯವರನ್ನೂ ಕರದು, ಅದರಲ್ಲಿ ಅವರಿಗೆ ಎಷ್ಟು ತಿಳಿದದೆ ಏನು ಕಲಿಶಿದ್ದಾರೆ ಎಂಬದನ್ನು ವಿಚಾರಿಸಿ, ಅವರಿಗೆ ಬಾರದೆ ಇರುವದನ್ನು ಅವರು ಕಲಿಯುವ ಹಾಗೆ ಖಂಡಿತವಾಗಿ ಅಪ್ಪಣೆ ಕೊಡುವದು ಅತ್ಯವಶ್ಯ.”

§ ೧೦.

# ಪ್ರತಿಕಕ್ಷಿಕರು

ಪುನಸ್ಥಾಪನೆಗೆ ಮತ್ತೊಂದು ಸಂಗತಿಯಿಂದ ಗುಣ ಬಂತು; ಹ್ಯಾಗಂಗಂದರೆ, ವಿರೋಧಿಗಳಲ್ಲಿ ಅತಿ ಬಾಲಾಢ್ಯನೂ ಬಹು ಶಾಂತನಲ್ಲದವನೂ ಆಗಿರುವ ಮಹಾರಾಜ ಐದನೆ ಕರ್ಲನು, ಒರ್ಮ್ಸಿನ ರಾಜ್ಯಸಮಾಗಮದಂದಿನಿಂದ (೧೫೨೧) ಜರ್ಮನಿ ದೇಶದಲ್ಲಿ ಇರದೆ, ತನ್ನ ಬಾಧ್ಯತೆಯ ಸಂಸ್ಥಾನಗಳಿಗೆ ಹೋಗಿ ಗೃಹಕೃತ್ಯದಲ್ಲಿಯೂ ಬೇರೆ ಕಾರ್ಯಗಳಲ್ಲಿಯೂ ಬಹಳ ತೊಂದರೆ ಇರುವದರಿಂದ, ಜರ್ಮನಿಯಲ್ಲಿ ಭಕ್ತಿಕಾರ್ಯವನ್ನು ವಿಶೇಷವಾಗಿ ಚಿಂತಿಸ ಶಕ್ತನಾಗಲಿಲ್ಲಾ. ಕೆಲವು ಜರ್ಮನಿ ಧೊರೆಗಳು ಆತನ ಸಹೋದರನಾದ ಫರ್ಡಿನಂದನನ್ನು ಅಗ್ರಸ್ಥನಾಗಿ ನೇಮಿಸಿದ ರಾಜ್ಯಾಧಿಕಾರವನ್ನು ಕರ್ಲನ ಹೆಸರಿನಲ್ಲಿ ಆಳಿದರು. ಆಗೈ ಆಳಿದವರು ನಿಜವಾಗಿ ಜರ್ಮನಿ ಧೊರೆಗಳು ತಾವೆ ಎಂತ ಹೇಳ ಬಹುದು. ಮತ್ತು ಇವರು ತಮ್ಮ ಯಜಮಾನನ ಹಾಗೆ ಒಟ್ಟೊರೆ ಹ್ಯಾಗೂ ಸುವಾರ್ತಾಕಾರ್ಯಕ್ಕೆ ಅಷ್ಟು ಎದುರುನಿಲ್ಲಲಿಲ್ಲಾ.

ಹೀಗಿರಲಾಗಿ, ಅವರು ೧೫೨೬ಲ್ಲು, ಸ್ಪೈಯರಿನಲ್ಲಿ ರಾಜಸಭೆಯಾಗಿ ನೆರವೇರಿದಾಗ, ಮುಂಚೆ ಪುನಸ್ಥಾಪಕನ ಸಂಗಡ ಎಲ್ಲಾ ಸುವಾರ್ತಾಪಕ್ಷದವರನ್ನು ದ್ರೋಹಿಗಳೆಂದೆಣಿಸಿದ ಒರ್ಮ್ಸಿನ ರಾಯಸವನ್ನು ಲಕ್ಷಿಸದೆ, ಜರ್ಮನಿಯಲ್ಲಿ ಸ್ವಲ್ಪ ಕಾಲದೊಳಗೆ ನಿರ್ಬಂಧವಾದ ಕ್ರೈಸ್ತ ಸಮಾಗಮವನ್ನು ನೆರೆಕರಿಸಿ, ಭಕ್ತಿತರ್ಕವನ್ನು ತೀರಿಸ ಬೇಕೆಂದೂ, ತನ್ಮಧ್ಯ ಸಮಸ್ತರು ದೇವರ ವಿಚಾರಣೆಯಲ್ಲಿಯೂ ಮಹಾರಾಜನು ಕೇಳುವಾಗಲೂ ಮಾತಿಗೆ ಮೂತು ಕೊಡುವದಕ್ಕೆ ಶಕ್ತಿ ಇರುವ ಹಾಗೆ ನಡಕೊಳ್ಳತಕ್ಕದ್ದು ಎಂದೂ” ನಿಶ್ಚಯ ಮಾಡಿದರು. ಈ ಪ್ರಕಾರ ಪುನಸ್ಥಾಪನೆಯ ಕಾರ್ಯವು ದೇವರ ಮಹಿಮೆಗೆ ನಿರಾತಂಕವಾಗಿ ಬೆಳಬೆಳದು ವರ್ಧಮಾನವಾಯಿತು.

ಆದರೆ ಮೂರು ವರುಷ ಕಳದ ಮೇಲೆ, ೧೫೨೯ಲ್ಲು ವಿದ್ಯಮಾನಗಳೆಲ್ಲಾ ಒಂಮೆಯೆ ಬೇರೆಯಾದವು, ಬಹಳ ಭಯ ಹುಟ್ಟಿತು, ಇಷ್ಟು ವರೆಗೆ ಶುಭವಾಗಿ ವೃದ್ಧಿಯಾಗುತ್ತಾ ಬಂದ ಕಾರ್ಯಕ್ಕೆ ಘಾತವಾಗುತ್ತದೋ ಏನೊ ಎಂದು ತೋರಿತು. ಆ ವರುಷದಲ್ಲಿಯೂ ಸ್ಪೈಯರಿನಲ್ಲಿ ತಿರಿಗಿ ರಾಜ್ಯಸಭೆಯು ನೆರೆಕೂಡಿ ಬಂತು. ಮಹಾರಾಜನು ಇಲ್ಲಿಗೂ ತಾನೇ ಬಾರದಿದ್ದರೂ, ತನ್ನ ಸಹೋದರನಾದ ಫರ್ಡಿನಂದ

ನಿಗೂ ರಾಜ್ಯಾಧಿಕಾರಿಗಳಿಗೂ ಖಂಡಿತವಾದ ನಿರೂಪವನ್ನು ಕಳುಹಿಸಿ, ಈ ಸಭೆಯಲ್ಲಿ ಮುಖ್ಯವಾಗಿ ಭಕ್ತಿಕಾರ್ಯವನ್ನು ವಿಚಾರಿಸಿ, ನವೀಕರಣಗಳನ್ನು ಬಲವಾಗಿ ಎದುರಿಸಿ, ಈ ವಿದ್ಯಮಾನವನ್ನು ತಕ್ಕಷ್ಟು ಸಮ ಮಾಡ ಬೇಕೆಂದೂ ಸ್ವಯಂ ತಾನೇ ಜರ್ಮನಿಗೆ ಬೇಗ ಬಂದಲ್ಲಿ, ಎಲ್ಲಾ ತೀರ್ಪು ಮಾಡುವ ಹಾಗೆ ಆಗ ಬೇಕೆಂದೂ, ಅಪ್ಪಣೆ ಕೊಟ್ಟನು. ಹಾಗಂದರೆ, ಮುಂಚಿನ ಅನರ್ಥವನ್ನು ತಿರಿಗಿ ಪೂರ್ಣವಾಗಿ ಸ್ಥಾಪಿಸ ಬೇಕೆಂಬ ಅರ್ಥ. ಇದಲ್ಲದೆ ಪೋಪನಿಂದ ನಿಯೋಗಿಗಳಿಗೂ ಆತನಿಗೆ ವಿಧೇಯರಾದ ಸಭಾಬೋಧಕರಿಗೂ, ಈ ಪಾಷಂಡದ ಭೂತವನ್ನು ಪೂರ್ಣ ಬಲದಿಂದ ಎದುರಿಸಿ, ಒದ್ದು, ತುಳಿದು, ಕಿತ್ತು ಹಾಕ ಬೇಕೆಂದು, ಅತ್ಯಗತ್ಯವಾದ ಅಪ್ಪಣೆಗಳು ಬಂದವು. ಅಧ್ಯಕ್ಷರು ರಾಜ್ಯಸಭೆಯ ಆಸದರಾಗಿ ಇದ್ದು, ಪೋಪನಂತೆಯೆ ಮನಸ್ಸಾಕ್ಷಿಗಳ ಮೇಲೆ ತಮಗೆ ಮುಂಚಿದ್ದ ಅಧಿಕಾರವನ್ನೂ ಅದರಿಂದ ಬರುವ ಪ್ರಪಂಚದ ಲಾಭಗಳನ್ನೂ ತಿರಿಗಿ ಪಡಕೊಂಡು ಘಟ್ಟಿ ಮಾಡಿ ಕೊಳ್ಳುವದಕ್ಕೆ ಇಚ್ಛೈಸುವವರಾಗಿದ್ದದರಿಂದ, ಅವರ ತಂಡವು ಮನಃಪೂರ್ವಕವಾಗಿ ಈ ಅಪ್ಪಣೆಗಳಿಗೆ ಕಿವಿ ಕೊಟ್ಟರೆಂಬದನ್ನು ಹೇಳುವದು ಅವಶ್ಯವಲ್ಲಾ.

ಈ ಪ್ರಕಾರ ಪೋಪನ ನಿಯೋಗಿಗಳೂ ಅವರ ಮಾತಿಗೆ ಒಪ್ಪಿದ ಅಧ್ಯಕ್ಷರೂ ಮಾಡಿದ ಮಹಾ ಪ್ರಯತ್ನಗಳಿಂದಲೂ, ಮಹಾರಾಜನ ಖಂಡಿತವಾದ ಚಿತ್ತದ ತಿಳುವಿಕೆಯಿಂದಲೂ, ಸ್ಪೈಯರಿನ ಈ ಎರಡನೆ ರಾಜ್ಯ ಸಮಾಗಮದಲ್ಲಿ ಮುಂಚಿನ ತೀರ್ಪು ಅಲ್ಲ ಮಾಡಿ, ಮತ್ತೊಂದು ಸ್ಥಿರ ಮಾಡಿದರು. ಈ ತೀರ್ಪಿನ ತಾತ್ಪರ್ಯವೇನಂದರೆ: ಇನ್ನೂ ಮುಂದೆ ಯಾರಾದರೂ ಕಥೋಲಿಕ, (ಅಂದರೆ ಪೋಪ ಪಕ್ಷದ) ವಿಶ್ವಾಸವನ್ನು ಮಾರ್ಪಡಿಸ ಬಾರದು ಮಾತ್ರವಲ್ಲಾ, ಪುನಸ್ಥಾಪನೆಯು ಸ್ಥಿರವಾಗಿ ನಿಲ್ಲುವಲ್ಲಿ ಸಹಾ, ಪೋಪನ ರೋಮಾಯ ಮಾಸು ತಿರಿಗಿ ಆಚರಿಸಿ, ಸುವಾರ್ತೆಯನ್ನು ರೋಮಾಯ ಗ್ರಂಥಗಳ ವ್ಯಾಖ್ಯಾನದ ಪ್ರಕಾರ ಮಾತ್ರವೇ ಪ್ರಸಂಗಿಸ ಬೇಕು ಎಂದು ನಿಶ್ಚಯವಾಯಿತು. ಇದರಿಂದ ಸುವಾರ್ತಾಕಾರ್ಯವು ನಿಜವಾಗಿ ಪೂರ್ಣ ನಿರ್ಮೂಲವಾದ ಹಾಗೆ ಆಗುತ್ತಿತ್ತು.

ಆದರೆ ಈ ತೀರ್ಪಿಗೆದುರಾಗಿ ರಾಜಸಭೆಯಲ್ಲಿ ಸುವಾರ್ತಾಪಕ್ಷದವರು, ಸಕ್ಸದ ಆಯಿಕೆಯ ಅರಸನೂ ಹೆಸ್ಸದ ದೇಶಾಯಿ ಫಿಲಿಪ್ಪನೂ ಸಹಿತವಾಗಿ, ತಮ್ಮ ಅಸಮ್ಮತವನ್ನು ಪ್ರಕಟವಾಗಿ ತಿಳಿಸಿದರು. ಅವರು ಬಿಂನವತ್ತಳೆ ಬರದು, ಆ ತೀರ್ಪಿಗೆ ಕಿವಿ ಕೊಡಲಾರೆವೆಂದು ಹೇಳಿ, ದೇವರ ಮಾನಕ್ಕೂ ಪ್ರಾಣರಕ್ಷಣೆಗೂ ಸಂಬಂಧವಾಗಿರುವ ಕಾರ್ಯಗಳಲ್ಲಿ ಪರಮೋನ್ನತ ಅರಸನನ್ನು ಸನ್ಮಾನಿಸ ಬೇಕಲ್ಲದೆ, ಮನುಷ್ಯರ ತೀರ್ಪಿಗೆ ಒಳಬೀಳ ಕೂಡದು, ತಾವು ಇಷ್ಟು ವರೆಗೆ ಕ್ರಿಸ್ತ ಬೋಧನೆ ಎಂದು ಎಣಿಸಿ,

ಈಗಲೂ ಎಣಿಸುತ್ತಾ ಬರುವದನ್ನು ತಾವಾಗಿ ಅನ್ಯಾಯವೆಂದು ತೀರಿಸ ಕೂಡದು, ಸಂಪ್ರದಾಯಗಳಲ್ಲಿಯೂ ಮನುಷ್ಯರ ಕಟ್ಟು ಕಟ್ಟಳೆಗಳಲ್ಲಿಯೂ ಆಧಾರ ತಕ್ಕೊಳ್ಳಲಾರೆವು, ಹಳೆ ಹೊಸ ಒಡಂಬಡಿಕೆಗಳ ಸತ್ಯವೇದದ ದೇವವಾಕ್ಯವನ್ನು ನಿರ್ಮಲವಾಗಿಯೂ ಶುದ್ಧವಾಗಿಯೂ ಪ್ರಸಂಗಿಸ ತಕ್ಕದ್ದಲ್ಲದೆ, ಅದಕ್ಕೆ ಎದುರಾದ್ದು ಏನೂ ನಿಲ್ಲಲಾರದು; ಯಾಕಂದರೆ ಅದು ಒಂದೇ ಸತ್ಯವಾಗಿರುವದರಿಂದಲೂ, ಸಮಸ್ತ ಕ್ರೈಸ್ತ ನಡೆನುಡಿಗಳಿಗೆ ಸಮವಾದ ಸೂತ್ರವಾಗಿರುವದರಿಂದಲೂ, ಅದರಲ್ಲಿ ಯಾರಾದರೂ ತಪ್ಪಿ ಕೆಡ ಕೂಡದು, ಅದರ ಮೇಲೆ ಕಟ್ಟಿ ನಿಲ್ಲುವವನು ನರಕದ ಸಮಸ್ತ ದ್ವಾರಗಳಿಗೆ ಎದುರಾಗಿ ಬಾಳುತ್ತಿರಲು, ಎಲ್ಲಾ ಮನುಷ್ಯರ ಉಪಬೋಧನೆಗಳೂ ನಯನುಡಿಗಳೂ ಬಿದ್ದು ಹೋಗ ಬೇಕಲ್ಲದೆ, ದೇವರ ಮುಂದೆ ನಿಲ್ಲಲಾರವು ಎಂದು, ಅರಿಕೆ ಮಾಡಿದರು. ಅದರ ಅಂತ್ಯದಲ್ಲಿ ಅವರು ಹೇಳುವದೇನಂದರೆ: “ಇದರಿಂದ ನಮ್ಮ ಒಬ್ಬನೆ ನಿರ್ಮಾಣಿಕನೂ ವಿಮೋಚಕನೂ ರಕ್ಷಕನೂ ಆಗಿರುವ ದೇವರ ಮುಂದೆಯೂ, ಸರ್ವ ಮನುಷ್ಯರ ಮುಂದೆಯೂ, ಸೃಷ್ಟಿಗಳ ಮುಂದೆಯೂ, ನಮಗೋಸ್ಕರವಾಗಿಯೂ ನಮ್ಮವರಿಗೋಸ್ಕರವಾಗಿಯೂ ಸರ್ವ ಜನರಿಗೋಸ್ಕರವಾಗಿಯೂ ಹೇಳುವದೇನೆಂದರೆ: ದೇವರಿಗೂ, ಆತನ ಪರಿಶುದ್ಧವಾಕ್ಯಕ್ಕೂ, ನಮ್ಮ ಸರ್ವರ ಪ್ರಾಣರಕ್ಷಣೆಗೂ, ಒಳ್ಳೇ ಮನಸ್ಸಾಕ್ಷಿಗೂ, ಮುಂಚಿನ ರಾಜ್ಯತೀರ್ಪಿಗೂ ವಿರುದ್ಧವಾಗಿ, ಸಾಗಿಸಿದ್ದೂ ತೀರಿಸಿದ್ದೂ ನಿಶ್ಚಯಿಸಿದ್ದೂ ಏನು ಉಂಟೋ, ಅದಕ್ಕೆ ನಾವು ಸಮ್ಮತವಲ್ಲವೆಂದೂ, ಅದು ನಿರರ್ಥಕ ನಿರ್ಬಾಧಕವೆಂದೂ ಹೇಳಿ ಸಾಕ್ಷಿ ಕೊಟ್ಟು ಪ್ರತಿಕಕ್ಷಿ ಮಾಡುತ್ತೇವೆ.” ಈ ಪ್ರಕಾರ ಮಹಾ ಬಲದಿಂದ ನಮ್ಮ ವಿಶ್ವಾಸಪೂರ್ವಜರು ಪ್ರತಿಕಕ್ಷಿಸಿದರು.

ಈ ಕಾರಣದಿಂದಲೇ ಪ್ರತಿಕಕ್ಷಿಗಳೆಂಬ ಅರ್ಥವುಳ್ಳ ಪ್ರೊತೆಸ್ತಂತರೆಂಬ ಹೆಸರು ಅವರಿಗೂ ಅವರಿಂದ ನಮಗೂ ಬಂತು. ಅವರ ಎದುರಾಳಿಗಳು ನಿಂದಕ ಮುಖದಿಂದ ಅವರಿಗೆ ಆ ಹೆಸರನ್ನಿಟ್ಟರು ಸರಿ, ಆದರೆ ಅವರು ಅದಕ್ಕೆ ನಾಚಿಕೆ ಪಡಲಿಲ್ಲ; ಮತ್ತು ಪ್ರಿಯ ಸಹವಿಶ್ವಾಸಿಗಳೇ, ನಾವು ಸಹಾ ಅದೊಂದು ನಿಂದೆ ಎಂದೆಣಿಸುವದಿಲ್ಲಾ, ಸಮಾಧಾನದಲ್ಲಿ ಬದುಕುವ ಗೃಹಸ್ಥನು, ಮೇಲೆ ಬಂದು ಬೀಳುವ ಶತ್ರುಗಳನ್ನು ಹಿಂದೋಡಿಸುವದಕ್ಕೆ ಪ್ರಯೋಗಿಸುವ ಆಯುಧಕ್ಕಾಗಿ ಹ್ಯಾಗೆ ನಾಚಿಕೆ ಪಡನೊ, ಹಾಗೆಯೇ ನಾವೂ ನಾಚಿಕೆ ಪಡ ಕೆಲಸವಿಲ್ಲಾ. ನಾವು ಸತ್ಯದ ರಾಜ್ಯದಲ್ಲಿ ಗೃಹಸ್ಥರಾಗಿರುವದರಿಂದ, ರಾಣುವೆಯವರು ಸಹಾ ಆಗಿರಲಾಗಿ, ದಿವ್ಯ ವಾಕ್ಯದ ಹದವಾದ ಖಡ್ಗದಿಂದ ಮಿಥ್ಯ, ಸುಳ್ಳು, ಮೋಸ, ಕತ್ತಲೆಗಳ ಪೆಟ್ಟುಗಳಿಗೆ ಎದುರು ನಿಂತು ಹೋರಾಡ ಬೇಕಾಗುತ್ತದೆ. ನಾವು ಸಹಾ ಸಕಲ ಮನಸ್ಸಾಕ್ಷಿಯ ಒತ್ತಾಯಕ್ಕೂ, ಚಿಕ್ತಿಕಾರ್ಯದಲ್ಲಿ ಸಕಲ ಮಾನುಷನಿಬಂಧನೆಗಳಿಗೂ, ನಮ್ಮ ಪರಮೋತ್ತಮವಾದ

ಜಾಗೃದ ನಿತ್ಯ ಉಳಿಯುವ ಆತ್ಮರಕ್ಷಣೆಯ ಕಾರ್ಯದಲ್ಲಿ ಸಕಲ ಮನುಷ್ಯಲೋಕಕ್ಕೂ ಎದುರಾಗಿ ಎಡೆಬಿಡದೆ ಪ್ರತಿಕಕ್ಷಿಸುತ್ತಾ ಇರುತ್ತೇವೆ.

ಆದರೂ ಪ್ರತಿಕಕ್ಷಿತ್ವದ ಅಸಹ್ಯಕರವಾದ ಬೇರೊಂದಾಕೃತಿ ಸಹಾ ಇರುತ್ತದೆಂಬದನ್ನು ಮರೆಯದಿರುವಾ. ನಮ್ಮ ದಿನಗಳಲ್ಲಿ ಅನೇಕರು ಸಮಸ್ತ ಸ್ಥಿತಿಗಳಿಗೆ, ಲೋಕದಲ್ಲಿರುವ ಸಿಂಹಾಸನಗಳಿಗೂ ಅಧಿಕಾರಗಳಿಗೂ ಪರಿಶುದ್ಧವಾದ ಸುವೇದವಿಶ್ವಾಸಕ್ಕೂ ಎದುರಾಗಿ ಪ್ರತಿಕಕ್ಷಿಸುವದೇ ನಿಜ ಪ್ರತಿಕಕ್ಷಿತ್ವವೆಂದು ಭಾವಿಸುತ್ತಾರೆ. ಆದರೆ ಅದು ಸುಳ್ಳು ಪ್ರತಿಕಕ್ಷಿತ್ವ, ಸತ್ಯವಾದ್ದಕ್ಕೆ ಕೇವಲ ನಿರ್ಲಜ್ಜೆಯಾದ ದೂಷಣೆಯಾಗಿದೆ. ನಿಶ್ಚಯವಾಗಿ ಅದು ಆ ತರದ್ದಲ್ಲಾ, ಅದು ಬರಹಗಳಿಗನುಕೂಲವಾಗಿ (ರೋಮಾ ೧೩) ಸಮಸ್ತ ಲೌಕಿಕ ಕಾರ್ಯಗಳಲ್ಲಿ ಅಧಿಕಾರದ ಕಡೆಗೆ ನಂಬಿಕೆಯುಳ್ಳ ವಿಧೇಯತ್ವವನ್ನು ಬೋಧಿಸುತ್ತಾ ಕೈಕೊಳ್ಳುತ್ತಾ, ಬರಹದ ಪ್ರಕಟಣೆಯ ದೈವಿಕ ಸತ್ಯವನ್ನು ಬಿಮ್ಮಗೆ ಹಿಡಿದು ಕೊಂಡು ಎಲ್ಲಾ ಶತ್ರುಗಳಿಗೆದುರಾಗಿ, ಅವರೆಷ್ಟು ಬಲಾಢ್ಯರೂ ಕಂಟಕಕರರೂ ಆಗಿದ್ದಾಗ್ಯೂ ಹೆದರದೆ ಧೈರ್ಯದಿಂದ ಸಾಕ್ಷಿ ಕೊಡುತ್ತದೆ.

§ ೧೧.

# ಮಹಾ ರಾಜನ ಮುಂದೆಯೂ ರಾಜ್ಯ ಸಭೆಯ ಮುಂದೆಯೂ

### ನಮ್ಮ ವಿಶ್ವಾಸಪೂರ್ವಜರು ಮಾಡಿದ ಮಹಿಮೆಯುಳ್ಳ ಅರಿಕೆ

ಸುವಾರ್ತಾಪಕ್ಷದವರು ಛಾಪಿಸಿ, ಪ್ರಕಟ ಮಾಡಿ ಸಹಾ ಇದ್ದ ಪ್ರತಿಕಕ್ಷೆಗೆ ಮಹಾರಾಜನು ಬಹಳ ಮುನಿದನು. ಆ ಸಮಯದಲ್ಲಿ ಅವನು ಇತಲಿಯಲ್ಲಿದ್ದನು. ಸುವಾರ್ತಾಪಕ್ಷದವರು ನಿಯೋಗಿಗಳನ್ನು ಅಲ್ಲಿಗೆ ಕಳುಹಿಸಿ, ಸ್ಪಯರಿನ ತೀರ್ಪು ತಿದ್ದಬೇಕೆಂದು ಬೇಡಿ ಕೊಂಡಲ್ಲಿ, ಆ ನಿಯೋಗಿಗಳನ್ನು ಮಾರ್ಮಲವರಂತೆ ಮನ ನೊಂದಿಸಿ ನಡಿಸಿದನು. ಬಹಳ ಅದಯಾಭಾವದಿಂದ ಅವರ ಸಂಗಡ ಮಾತಾಡಿ, ತಾನು ಬೇಗ ಔಗ್ಸ್‌ಬುರ್ಗಿನಲ್ಲಿ ರಾಜ್ಯಸಭೆಯನ್ನು ಕರಿಸಲು, ಅವರ

ಕಾರ್ಯವು ಅಲ್ಲಿ ಶೀಘ್ರವಾಗ ಬೇಕು ಎಂದು ಹೇಳಿ, ಹಿಂದಕ್ಕೆ ಕಳುಹಿಸಿ ಬಿಟ್ಟನು. ಪೋಪನ ಕಡೆಗೆ ಮಹಾ ಸ್ನೇಹಭಾವವನ್ನೇ ಇಟ್ಟು, ಅವನು ಹಿಂಜಾರುವವರನ್ನು ಅವಶ್ಯವಿದ್ದರೆ ಯುದ್ಧ ಬಲದಿಂದಲಾದರೂ ಹಳೇ ಭಕ್ತಿ ಮಾರ್ಗಕ್ಕೆ ತಿರಿಗಿ ತರುತ್ತೇನೆಂದು ಮಾತು ಕೊಟ್ಟು ಮಾಡಿದ ಒಡಂಬಡಿಕೆಯು ಆ ಕಾಲದಲ್ಲಿ ಪ್ರಕಟವಾಯಿತು. ಹೀಗಿರಲಾಗಿ, ಸುವಾರ್ತಾಪಕ್ಷದವರು ಮಹಾ ಕಷ್ಟಕಾಲ ಬರುವ ಹಾಗೆ ಉಂಟೆಂದು ನೆನಸ ಬೇಕಾಯಿತು.

ಮಹಾರಾಜನು ಔಗ್ಸ್‌ಬುರ್ಗಿನಲ್ಲಿ ರಾಜ್ಯಸಭೆಯು ನೆರದು ಬರಬೇಕೆಂದು ರಾಯಸ ಬರಿಸಿ, ಮರುವರುಷ ೧೫೩೦ ವಸಂತಕಾಲವನ್ನೆ ನೇಮಿಸಿ, ಅಪ್ಪಣೆ ಕೊಟ್ಟನು. ಆದರೂ ಆ ರಾಯಸದಲ್ಲಿ ಸುವಾರ್ತಾಪಕ್ಷದವರ ಮೇಲೆ ಅಪಕರಣದ ಹಾಲುವೆಯಾದರೂ ತೋರದಿರಲಾಗಿ, ಅದು ಕೇವಲ ದಯಾಭಾವದ್ದಾಗಿರುತ್ತದೆಂದು ನೋಡಿ, ಆಶ್ಚರ್ಯ ಪಟ್ಟರು. ಅದರಲ್ಲಿ ಹೇಳಿರುವದೇನಂದರೆ: “ಈ ಸಭೆಯಲ್ಲಿ ಪರಸ್ಪರ ವಿರೋಧವನ್ನೆಲ್ಲಾ ಬಿಟ್ಟು, ಒಂದೊಂದು ಪಕ್ಷದವರ ಮನೋಗತವೇನೆಂದು ಪ್ರೀತಿಯಿಂದಲೂ ದಯಾಭಾವದಿಂದಲೂ ಕೇಳಿ, ಎಲ್ಲಾ ಸುಳ್ಳನ್ನು ಉಭಯಪಕ್ಷದಿಂದಲೂ ನಿವಾರಿಸಿ, ಒಂದೇ ಸತ್ಯವಾದ ಭಕ್ತಿಮಾರ್ಗದಲ್ಲಿ ಒಬ್ಬನೇ ಕ್ರಿಸ್ತನ ಕೈಕೆಳಗೆ ಅಣ್ಣ ತಮ್ಮಂದಿರಂತೆ ಏಕೀಕರವಾಗಿರ ತಕ್ಕದ್ದು” ಈ ಪ್ರಕಾರ ಹೇಳಿ ಇತ್ತು.

ಸುವಾರ್ತಾಪಕ್ಷದವರು ನಂಬಲಿಲ್ಲ ಸರಿ, ನಂಬಲಿಕ್ಕೆ ಆಧಾರವೂ ಇರಲಿಲ್ಲಾ. ಆದಾಗ್ಯೂ ಅವರಿಗೆ ರಾಜ್ಯಸಭೆಗೆ ಬಾರದಿರಲಿಕ್ಕೆ ಮನಸ್ಸಿರಲಿಲ್ಲಾ. ಯಾಕಂದರೆ “ದೇವರಲ್ಲಿ ನಂಬಿಕೆ ಇಟ್ಟಿದ್ದೇನೆ, ಭಯ ಪಡೆನು, ಮನುಷ್ಯರು ನನಗೇನು ಮಾಡ್ಯಾರು” ಎಂಬ ದಾವೀದನ ವಾಕ್ಯವನ್ನು ಅವರು ಸಹಾ ಹೇಳಲಿಕ್ಕೆ ಶಕ್ತರಾಗಿದ್ದರು. ಸಕ್ಸದ ಆಯಿಕೆಯ ಅರಸನಾದ ಯೋಹಾನನು ರಾಜ್ಯಸಭೆಯ ವಿಷಯವಾಗಿ ತನ್ನ ದೇವವಿದ್ಯಾಪಂಡಿತರ ಸಂಗಡ ಮಾತಾಡಿದಾಗ, ಇವರು, ಅರಸನಿಗೆ ಏನೊಂದೂ ಕಂಟಕ ಪ್ರಾಪ್ತಿ ಆಗದ ಹಾಗೆ, ತಾವು ಮಾತ್ರವೇ ಔಗ್ಸ್‌ಬುರ್ಗಿಗೆ ಹೋಗಿ, ತಮ್ಮ ಬೋಧನೆಯ ವಿಷಯದಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದಲ್ಲಿ, ಆ ಭಕ್ತಿಯುಳ್ಳ ಪ್ರಭುವು ಮಹಾ ಆಸಕ್ತಿಯಿಂದ “ನಾನು ನಿಮ್ಮ ಮಧ್ಯದಿಂದ ಹೊರಗಾಗದ ಹಾಗೆ ದೇವರು ಕಾಪಾಡಲಿ, ನಾನು ಸಹಾ ನನ್ನ ಕರ್ತನಾದ ಕ್ರಿಸ್ತನನ್ನು ಅರಿಕೆ ಮಾಡುವೆನು” ಎಂದು ಹೇಳಿದನು. ಪಯಣವಾಗಿ ಹೊರಡುವ ಮುಂಚೆ, ಮತ್ತಾ. ೧೦, ೩೨, ಮನುಷ್ಯರ ಮುಂದೆ ನನ್ನನ್ನು ಅರಿಕೆ ಮಾಡುವವನ್ಯಾವನೋ ಅವನನ್ನು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನಾನೂ ಅರಿಕೆ ಮಾಡುವೆನು; ಆದರೆ ಮನುಷ್ಯರ ಮುಂದೆ ನನ್ನನ್ನು ಬೊಂಕುವವನ್ಯಾವನೋ ಅವನನ್ನು ಪರಲೋಕದಲ್ಲಿರುವ

ನನ್ನ ತಂದೆಯ ಮುಂದೆ ನಾನೂ ಬೊಂಕುವೆನು, ಎಂಬ ವಾಕ್ಯವನ್ನು ಲುಥರನಿಂದ ಒಂದು ಪ್ರಸಂಗದಲ್ಲಿ ವಿವರ ಮಾಡಿಸಿ ಕೊಂಡು, ಈ ಪ್ರಕಾರ ಧೈರ್ಯವಾಗಿ ಪ್ರಯಾಣಕ್ಕೆ ಎದ್ದನು.

ಯೋಹಾನನು ರಾಜ್ಯದ ಸಮಸ್ತ ಧೊರೆಗಳ ಮುಂಚೆ ಎಪ್ರೇಲಿನಲ್ಲಿಯೇ ಔಗ್ಸ್ಬುರ್ಗಿಗೆ ಬಂದೊದಗಿದ ಕಾರಣ, ಅನೇಕರು ಆಶ್ಚರ್ಯ ಪಟ್ಟರು. ಅವನ ಹಿಂದೆ ಆಸಕ್ತಿಯುಳ್ಳ ಹೆಸ್ಸದ ದೇಶಾಯಿ ಸಹಾ ಬಂದನು. ಮಿಕ್ಕಾದ ಸಹವಿಶ್ವಾಸಿಗಳು ಧೈರ್ಯವಾಗಿ ಅಲ್ಲಿಗೆ ಕೂಡಿ ಕೊಂಡರು. ಪಾರಮಾರ್ಥಿಕರೂ ಲೌಕಿಕರೂ ಆಗಿರುವ ರೋಮಿಯ ಧೊರೆಗಳು ಸಹಾ ಶೇರಿದರು. ಎರಡು ಪಕ್ಷದಲ್ಲಿಯೂ ಮಹಾ ಘಟ್ಟಿಗರಾದ ದೇವವಿದ್ಯಾಪಂಡಿತರು ಸಂಗಡ ಬಂದಿದ್ದರು. ರೋಮಿಯರಲ್ಲಿ ಎಕ್ಕ, ಕೊಕ್ಲೆಯ, ಫಾಬರ, ವಿಂಪೀನ, ಮೆನ್ಸಿಂಗ ಮುಂತಾದವರು; ಸುವಾರ್ತಾಕಡೆಯಲ್ಲಿ ಮೆಲಂಥೊನ, ಯೋನ, ಸ್ಪಲತೀನ ಇವರ ಹೊರ್ತು ವಿರ್ತೆಂಬೆರ್ಗಿನ ಬ್ರೆನ್ತ್ಸ, ಹೆಸ್ಸದ ಶ್ನೆಫ್ಫ ಮುಂತಾದವರು ಇದ್ದರು.

ಲುಥರನು ಔಗ್ಸ್ಬುರ್ಗಿಗೆ ಹೋಗುವ ಮಾರ್ಗದಲ್ಲಿ ಇರುವ ಸಕ್ಸದ ಕಡೇ ಪ್ರಾಂತ್ಯ ಪಟ್ಟಣವಾದ ಕೋಬುರ್ಗಿನಲ್ಲಿ ಹಿಂದುಳಿಯ ಬೇಕಾಯಿತು. “ಎಲ್ಲಾ ಕೇಡಿನ ಮೂಲ ಕಾರಣನೂ” “ಮಾನುಷ್ಯರೂಪದಲ್ಲಿ ಅಡಗಿ ಕೊಂಡ ಪಿಶಾಚಿಯೂ” ಎಂದು ಎದುರಾಳಿಗಳು ಹೇಳಿದ ಶಾಪಗ್ರಸ್ಥನೂ ರಾಜ್ಯದಂಡಪಾತ್ರನೂ ಆಗಿದ್ದಂಥವನನ್ನು, ಮಹಾರಾಜನಿಗೆ ದುಡುಕಿದಂತೆ ಮಾಡಿ, ಸಂಗಡ ತರುವದು ಸುವಾರ್ತಾಪಕ್ಷದ ಪ್ರಭುಗಳಿಗೆ ಉಚಿತ ತೋರಲಿಲ್ಲಾ. ಆದರೂ ಶೋಧಿತವಾದ ಕ್ರೈಸ್ತಬೋಧನೆಯೂ ಸಭೆಯೂ ಲುಥರನ ಮೇಲೆ ಅಲ್ಲಾ, ಒಬ್ಬನೇ ಬಂಡೆಯಾಗಿರುವ ಯೇಸು ಕ್ರಿಸ್ತನ ಮೇಲೆ ಸ್ಥಾಪಿತವಾಗಿರುತ್ತದೆಂದು ಎಲ್ಲರಿಗೆ ಸ್ಪಷ್ಟವಾಗಿ ಕಾಣ ಬರುವ ಹಾಗೆ, ಲುಥರನು ಆ ರಾಜ್ಯಸಭೆಗೆ ಬಾರದಂತೆ ದೇವರು ತಾನೇ ಮಾಡಿದನೆಂಬದಾಗಿ, ಆ ಸಮಯದಲ್ಲಿಯೇ ಅನೇಕರು ಹೇಳಿದ ಮಾತು ನ್ಯಾಯವಾಗಿತ್ತು. ಹ್ಯಾಗೂ ಕೋಬುರ್ಗಿನಿಂದ ಸಹಾ ಅವನು ಔಗ್ಸ್ಬುರ್ಗಿನಲ್ಲಿರುವ ಸಹವಿಶ್ವಾಸಿಗಳ ಸಂಗಡ ಕಾಗದ ಪತ್ರಗಳಿಂದ ಬಿಡದೆ ಸಂಸರ್ಗದಲ್ಲಿ ಇದ್ದನು. ಅಲ್ಲಿದ್ದವರು, ಅವನ ಆಲೋಚನೆ ಕೇಳಿ ಕೊಳ್ಳದೆ ವಿಶೇಷವಾದ್ದೇನೊಂದೂ ಮಾಡಲಿಲ್ಲಾ, ಮತ್ತು ಅವನು ಬಹಳ ಬುದ್ಧಿವಂತಿಕೆಯಿಂದ ಆಲೋಚನೆ ಕೊಟ್ಟು, ಅವರಿಗೆ ಬಂದ ಸಮಸ್ತ ಶೋಧನೆಗಳಲ್ಲಿ ನಿರಂತರವಾಗಿ ಆದರಿಸುತ್ತಾ, ಈ ಒಳ್ಳೇ ಹೋರಾಟಕ್ಕೆ ಅವರನ್ನು ಗೆಲವಿನಿಂದ ತುಂಬಿಸುತ್ತಾ, ಪರಿಶುದ್ಧಾತ್ಮದ ಪ್ರತ್ಯೇಕವಾದ ಕೃಪೆಯಿಂದ ತನಗೆ ನಿರ್ಭಯವಾದ ಧೈರ್ಯವೂ ಕರ್ತನ ಸಹಾಯದಲ್ಲಿ ಚುರುಕಾದ ಭರವಸವೂ ಉಂಟಾಗಿರುತ್ತದೆ ಎಂ

ಬಂಥಾ ಮಾತುಗಳಿಂದ ಅವರನ್ನು ಸ್ಥಿರ ಮಾಡುತ್ತಾ ಇದ್ದನು. ಇದಲ್ಲದೆ "ನನ್ನ ಪ್ರಾರ್ಥನೆಯು ಸಫಲವಾಗುವ ವರೆಗೆ ಸುಮ್ಮನಿರದೆ, ಬೇಡುತ್ತಾ, ಒದರುತ್ತಾ ಇರುವೆನು" ಎಂದು ಮೆಲಂಥೊನನಿಗೆ ಕಾಗದ ಬರದ ಪ್ರಕಾರ, ಕೋಬುರ್ಗಿನಲ್ಲಿ ಮಾಡುತ್ತಾ ಇದ್ದನು.

ಮಹಾರಾಜ ಕರ್ಲನು ಬರುವದಕ್ಕೆ ಬಹಳ ತಡ ಮಾಡಿದನು. ವಸಂತಕಾಲ ದಾಟಿತು. ಮೇ ತಿಂಗಳು ಕಳೆಯಿತು. ಅರ್ಧ ಜೂನು ಸಹಾ ತೀರಿತು. ಆದರೂ ಅವನು ಬರಲಿಲ್ಲಾ. ಹ್ಯಾಗೂ ತನ್ಮಧ್ಯ ಸುವಾರ್ತಾಪಕ್ಷದವರಿಗೆ ತಮ್ಮ ವಿಶ್ವಾಸ ಪ್ರಮಾಣವನ್ನು ಶುದ್ಧ ಪ್ರತಿಯಾಗಿ ಬರಿಯಲಿಕ್ಕೆ ಸಮಯ ಶಿಕ್ಕಿತು.

ಅವರು ಏನು ನಂಬುತ್ತಾರೆಂದೂ, ರೋಮಿಯ ಸಭೆಯಲ್ಲಿ ಯಾವದಕ್ಕೆ ಮೆಚ್ಚುವದಿಲ್ಲವೆಂದೂ, ಬೇಗ ತಿಳಿದು ಬರುವ ಹಾಗೆ, ತಮ್ಮ ವಿಶ್ವಾಸವನ್ನು ಬರಹ ಮೂಲಕವಾಗಿ ರಚಿಸ ಬೇಕೆಂದು, ಮಹಾರಾಜನ ರಾಯಸದಲ್ಲಿ ಅಪ್ಪಣೆ ಕೊಟ್ಟಿತ್ತು. ಇದು ಸುವಾರ್ತಾಪಕ್ಷದವರಿಗೆ ಅಪೇಕ್ಷೆಯ ಪ್ರಕಾರವೇ ಇತ್ತು, ಅವರ ಹೃದಯದಿಂದಲೇ ಬಂದ ಹಾಗೆ ಇತ್ತು. ಲುಥರನು ಆ ಕ್ಷಣದಲ್ಲಿ ವಿತ್ತೆನ್‌ಬೆರ್ಗಿನ ಸಹಾಯಕರೊಡನೆ ೧೭ ಸೂತ್ರಗಳನ್ನು ರಚಿಸಿ, ಆಯಿಕೆಯ ಅರಸನು ತೊರ್ಗಾವಿಗೆ ಹೊರಟು ಹೋಗುವ ಮುಂಚೆ ಒಪ್ಪಿಸಿದ್ದನು. ಆ ಕಾರಣದಿಂದ ಅವುಗಳಿಗೆ ತೊರ್ಗಾವಿನ ಸೂತ್ರಗಳೆಂಬ ಹೆಸರು ಬಂತು. ಈ ಸೂತ್ರಗಳನ್ನು ನಾಮಾಂಕಿತವಾಗಿಯೂ ರಾಜ್ಯಸಭೆಗೆ ಯೋಗ್ಯವಾಗಿಯೂ ಇರ ತಕ್ಕ ವಿಶ್ವಾಸಪ್ರಮಾಣವಾಗಿ ಕಲ್ಪಿಸ ಬೇಕೆಂದು, ಔಗ್ಸ್‌ಬುರ್ಗಿನಲ್ಲಿ ಮೆಲಂಥೊನನಿಗೆ ಕೊಟ್ಟಿದ್ದರು. ಅವನು ತನ್ನ ಸ್ನೇಹಿತರ ಸಹಾಯದಿಂದ ಆಗುವಷ್ಟು ಮರೆಯಾಗಿಯೂ ನಿಧಾನ ಜಾಹವಾಗಿಯೂ ಮಾಡಿದನು.

ವಿಶ್ವಾಸಪ್ರಮಾಣವನ್ನು ಬರದಾದ ಮೇಲೆ, ಕೋಬುರ್ಗಿಗೆ ಲುಥರನ ಬಳಿಗೆ ಓದಿ ತಿದ್ದುವದಕ್ಕೆಂದು ಕಳುಹಿಸಿ ಕೊಟ್ಟರು. ಅವನು ಅದನ್ನು ಓದಿ ಪ್ರತ್ಯುತ್ತರವಾಗಿ ಬರದದ್ದೇನಂದರೆ: "ಈ ಗ್ರಂಥಕ್ಕೆ ನಾನು ಬಹಳ ಮೆಚ್ಚಿದೆ, ಇದರಲ್ಲಿ ಏನಾದರೂ ತಿದ್ದುವದಕ್ಕಾಗಲೀ ಮಾರ್ಪಡಿಸುವದಕ್ಕಾಗಲೀ ನಾನು ಅರಿಯೆ, ಇದಲ್ಲದೆ ನಾನು ಈ ಪ್ರಕಾರ ನಿಧಾನವಾಗಿಯೂ ಶಾಂತವಾಗಿಯೂ ನಡದಾಡಲಾರದ ಮನುಷ್ಯನಾಗಿರುವದರಿಂದ, ಅದು ನನಗೆ ಒಪ್ಪಲಿಕ್ಕೂ ಇಲ್ಲಾ, ನಾವು ನಿರೀಕ್ಷಿಸಿ ಬೇಡಿ ಕೊಳ್ಳುವ ಪ್ರಕಾರ, ಅದಕ್ಕೆ ಬಹಳ ಘನವಾದ ಫಲಗಳುಂಟಾಗುವ ಹಾಗೆ, ನಮ್ಮ ಕರ್ತನಾದ ಕ್ರಿಸ್ತನು ಸಹಾಯ ಮಾಡಲಿ. ಆಮೆನ್!" ಇದಾದ ಮೇಲೆ ಸುವಾರ್ತಾಪಕ್ಷದ ರಾಜ್ಯಸಭಾಸದರು ಔಗ್ಸ್‌ಬುರ್ಗಿನಲ್ಲಿ ಅದನ್ನು ತಮ್ಮ ವಿಶ್ವಾಸಪ್ರಮಾ

ಣವೆಂದು ಸ್ವೀಕರಿಸಿ, ತಮ್ಮ ಜನಾಂಗಗಳ ಮತ್ತು ಸಹನಾಗರಿಕರ ಹೆಸರಿನಲ್ಲಿ ಅದಕ್ಕೆ ಗುರ್ತು ಹಾಕಿದರು.

ಮೆಲ್ಲಮೆಲ್ಲನೆ ಮಹಾರಾಜನು ಪಟ್ಟಣಕ್ಕೆ ಹತ್ರ ಹತ್ರ ಬಂದನು. ನೆರವೇರಿದ ರಾಜ್ಯದವರು ಮಾನಶ್ರದ್ಧರಾಗಿಯೂ ಆತುರಾಪೇಕ್ಷಿತರಾಗಿಯೂ ಕಾದು ಕೊಂಡಿದ್ದರು. ಕಡೆಯಲ್ಲಿ ಜೂನು ೧೫ಲ್ಲು ಅವನು ತನ್ನ ಸಹೋದರನಾದ ಫರ್ದಿನಂದನನ್ನೂ ಈ ಲೋಕದ ಅನೇಕ ದೊಡ್ಡವರನ್ನೂ ಒಡಗೂಡಿ, ಬಂದು ಮುಟ್ಟಿದನು. ಪೋಪನ ಕಡೆಯವರು ಬರುವವನನ್ನು ಸಂತೋಷದ ಗೆಲವಿನಿಂದ ಎದುರುಗೊಂಡು, "ಸಲ್ವಾತಾರ್ ವೇನಿತ್," ಹಾಗಂದರೆ, ರಕ್ಷಕನು ಬರುತ್ತಾನೆ ಎಂದು ಒದರಿದರು.

ಸುವಾರ್ತಾಪಕ್ಷದವರ ಭಯ ಚಿಂತೆಗಳು ಎಷ್ಟು ಸತ್ಯವಾಗಿದ್ದವೆಂಬದು ಮಹಾರಾಜನ ಬರೋಣದ ಸಾಯಂಕಾಲದಲ್ಲಿಯೇ ಪ್ರತ್ಯಕ್ಷವಾಯಿತು. ಅದರ ಮರುದಿನವು ಪರಿಶುದ್ಧ ಶವದಿನವಾಗಿತ್ತು. ಮಹಾರಾಜನು ಆ ಮರುದಿನದ ಹಬ್ಬಕ್ಕೆ ಅವರೆಲ್ಲರೂ ಬರ ಬೇಕೆಂಬದಾಗಿ ಕಠಿಣ ಹೃದಯದಿಂದ ಹೇಳಿದನು. ಆದರೆ ಅವರು ಈ ಪ್ರಕಾರ ಮಾಡಿದರೆ, ತಮ್ಮ ಬೋಧನೆಯನ್ನು ನಡತೆಯಿಂದ ಅಲ್ಲಗಳದ ಹಾಗೆ ಆಗಿ ಹೋಗುತ್ತಿತ್ತಲ್ಲವೇ! ಹೀಗಿರಲಾಗಿ ಅವರು ಅದಕ್ಕೆ ಒಪ್ಪೆವೆಂದು ಖಂಡಿತವಾಗಿ ಹೇಳಿ, ಆ ಮಾತಿಗೆ ಭದ್ರವಾಗಿ ನಿಂತರು. ಅನ್ಸ್‌ಬಖಿನ ಅನುದೇಶಾಯಿಯಾದ ಗೆಯೊರ್ಗನು ಚಂದವಾದ ಉತ್ತರ ಕೊಟ್ಟು, "ದೇವರನ್ನೂ ಆತನ ಸುವಾರ್ತೆಯನ್ನೂ ಅಲ್ಲಗಳೆಯುವದಕ್ಕಿಂತ, ಮಹಾರಾಜಸ್ವಾಮಿಯ ಸನ್ನಿಧಿಯಲ್ಲಿ ಮೊಣಕಾಲೂರಿ ತಲೆ ಕಡಿಸಿ ಕೊಳ್ಳಲಿಕ್ಕೆ ಸಹಾ ಸಿದ್ಧನಾಗಿದ್ದೇನೆ" ಎಂದು ಹೇಳಿದನು. ಅದಕ್ಕೆ ಕರ್ಲನು "ಪ್ರಿಯ ಶ್ರೀಮಂತನೇ, ತಲೆ ಕಡಿಯುವದಲ್ಲ ತಲೆ ಕಡಿಯುವದಲ್ಲ" ಎಂದು ನಮ್ರವಾಗಿ ಮಾತಾಡಿದನು. ಸುವಾರ್ತಾಪಕ್ಷದವರಲ್ಲಿ ಪರಿಶುದ್ಧ ಶವೋತ್ಸವಕ್ಕೆ ಯಾರೂ ಬರಲಿಲ್ಲಾ.

ಇದಲ್ಲದೆ ಕರ್ಲನು ಸುವಾರ್ತಾಪಕ್ಷದವರ ಕಡೆಯಲ್ಲಿ ಪ್ರಸಂಗಿಸುವದನ್ನು ನಿಲ್ಲಿಸ ಬೇಕೆಂದು ಅಪ್ಪಣೆ ಕೊಟ್ಟದ್ದು ಕಠಿಣ ಕಂಡಿತು. ಆಯಿಕೆಯ ಅರಸನಾದ ಯೋಹಾನನು ಅನುದಿನದ ಅನ್ನವನ್ನು ಬಿಡಲಾರದಂತೆ, ಸುವಾರ್ತೆಯ ಪ್ರಸಂಗವನ್ನು ಸಹಾ ಬಿಡಲಾರನೆಂದು ಹೇಳಿದರೂ, ಆ ಮಾತು ಪ್ರಯೋಜನಕ್ಕೆ ಬರಲಿಲ್ಲಾ. ಮಹಾರಾಜನು ಇಬ್ಬರಿಗೂ ಬೇಡೆಂತ ಹೇಳಿ, ರೋಮಿಯ ಕಡೆಯಲ್ಲಿ ಸಹಾ ಪ್ರಸಂಗಿಸುವದನ್ನು ನಿಲ್ಲಿಸಿ ಬಿಟ್ಟನು. ಆಗ್ಯೆ ಸುವಾರ್ತಾಪಕ್ಷದವರು ಸುಮ್ಮಗಾದರು.

ರಾಜ್ಯಸಭೆಯು ಆರಂಭವಾಗುವದಕ್ಕೆ ಮುಂಚೆ, ಮಹಾ ದೇವಾಲಯದಲ್ಲಿ ದೇವಾರಾಧನೆ ಆಗುವ ಪದ್ಧತಿ ಇತ್ತು. ವಾಡಿಕೆಯ ಪ್ರಕಾರ ಅದಕ್ಕೆ ಸಕ್ಸದ ಆಯಿಕೆಯ

ಅರಸನು ರಾಜ್ಯದ ಮಹಾನಾಯಕನೆಂದು ರಾಜಖಡ್ಗವನ್ನು ಧರಿಸಿ ಮುಂದೆ ನಡಿಯ ಬೇಕೆಂದು ಮಹಾರಾಜನು ಅಪ್ಪಣೆ ಕೊಟ್ಟನು. ಯೊಹಾನನು ದೇವವಿದ್ಯಾಪಂಡಿತರ ಸಂಗಡ ಇದನ್ನು ಮಾಡ ಬಹುದೋ ಎಂದು ಆಲೋಚಿಸಿದ ಮೇಲೆ, ಅದು ತನ್ನ ಉದ್ಯೋಗಕ್ಕೆ ಸೇರಿದ್ದಾಗಿರುವದರಿಂದ, ಅದನ್ನು ಮಾಡಲಿಕ್ಕೆ ಸಿದ್ಧವಾಗಿದ್ದೇನೆಂದು ಹೇಳಿದನು. ಆದರೂ ಉದ್ಯೋಗವನ್ನು ನಡಿಸಿದನಲ್ಲದೆ, ಬೇರೇನೂ ಮಾಡಲಿಲ್ಲಾ. ಹ್ಯಾಗಂದರೆ, ಮಹಾ ದೇವಾಲಯದಲ್ಲಿ ಮೀಸು ಆಗುವಾಗ್ಯೆ ಬಲಿರೊಟ್ಟಿಯನ್ನು ಎತ್ತಿದ ಸಮಯದಲ್ಲಿ, ಎಲ್ಲರೂ, ಮಹಾರಾಜ ಸಹಾ, ಮೊಣಕಾಲೂರಿ ಆರಾಧಿಸಿದ್ದಲ್ಲಿ, ಯೊಹಾನನು ಖಂಬದಂತೆ ನಿಂತಲ್ಲಿ ನಿಂತನು, ಅವನ ಪರಿವಾರದವರು ಸಹಾ ಅದೇ ಪ್ರಕಾರ ಮಾಡಿದರು.

ರಾಜ್ಯಸಭೆಯಲ್ಲಿ ಮೊದಲಾಗಿ ಭಕ್ತಿಕಾರ್ಯವನ್ನು ವಿಚಾರಿಸ ಬೇಕೆಂದು ಸುವಾರ್ತಾಪಕ್ಷದವರು ಅಪೇಕ್ಷಿಸಿದರು. ರಾಜ್ಯಸಭೆಯು ಅದೇ ಕಾರಣದಿಂದ ನೆರವೇರಿತ್ತು. ಆದರೆ ಮಹಾರಾಜನು ಮುಂಚೆ ಲೌಕಿಕ ಸಂಗತಿಗಳನ್ನು ತಕ್ಕೊಳ್ಳ ಬೇಕೆಂದಿದ್ದನು. ಆದರೂ ಅವರು ಬಹಳವಾಗಿ ಬೇಡಿ ಕೊಂಡದರಿಂದ, ಭಕ್ತಿಕಾರ್ಯಕ್ಕೆ ಮುಂಚೆ ಎಡೆ ಬಿಟ್ಟನು.

ಆದರೆ ತಮ್ಮ ವಿಶ್ವಾಸಪ್ರಮಾಣವನ್ನು ಸರ್ವರ ಮುಂದೆ ಓದಿ ತಿಳಿಸುವದಕ್ಕೆ ಅಪ್ಪಣೆ ಪಡ ಕೊಳ್ಳುವದು ಸಹಾ ಕಷ್ಟವಾಯಿತು. ಮಹಾರಾಜನು ಅದನ್ನು ಬರಹದಲ್ಲಿ ತಕ್ಕೊಂಡು, ಯಾರೂ ಅದನ್ನು ತಿಳಿಯದ ಹಾಗೆ ಮಾಡಿ, ಪೋಪನ ಕಡೆಯ ದೇವವಿದ್ಯಾಪಂಡಿತರಿಗೆ ಕೊಟ್ಟು, ಅವರಿಂದ ಅದನ್ನು ಖಂಡಿಸ ಬೇಕೆಂದಿದ್ದನು. ಆದರೆ ಸುವಾರ್ತಾಪಕ್ಷದವರು ದೇವರ ಹೆಸರಿನಲ್ಲಿ ಬೇಡಿ ಕೊಂಡು, ತಮ್ಮ ಭಕ್ತಿಮಾರ್ಗಕ್ಕಾಗಿ ಎಲ್ಲರೂ ತಮ್ಮ ಮೇಲೆ ಅಪರಾಧ ಆರೋಪಿಸುವದರಿಂದ, ಸಮಸ್ತರೂ ತಮ್ಮ ನಿರಪರಾಧಿತ್ವವನ್ನು ತಿಳುಕೊಳ್ಳುವ ಹಾಗೆ, ಓದಿ ತಿಳಿಸುವದಕ್ಕೆ ಅಪ್ಪಣೆ ಕೊಡ ಬೇಕೆಂದು ಬಿನ್ನೈಸಲಾಗಿ, ಮಹಾರಾಜನು ಆ ಮಾತಿಗೆ ಒಪ್ಪಿ ಕೊಂಡರೂ, ಸುವಾರ್ತಾಪಕ್ಷದವರ ವಿಶ್ವಾಸಪ್ರಮಾಣವನ್ನು ರಾಜ್ಯಸಭೆಯ ಶಾಲೆಯಲ್ಲಿ ಅಲ್ಲಾ, ತಾನಿದ್ದ ಅಧ್ಯಕ್ಷನ ಮನೆಯ ಒಂದು ಕೋಣೆಯಲ್ಲಿ ಓದಲಿಕ್ಕೆ ಅನುಜ್ಞೆ ಕೊಟ್ಟನು.

೧೫೩೦ನೆ ಜೂನು ೨೫ನೆ ಮಧ್ಯಾನ್ಹದ ಮೇಲೆ ಅದನ್ನು ಓದಿದರು. ರಾಜ್ಯಸಭೆಯವರು ಅಧ್ಯಕ್ಷನ ಮನೆಯ ಮತಶಾಲೆ ಎಂಬಲ್ಲಿ ಕೂಡಿ ಬಂದಿದ್ದರು. ಈ ಕೋಣೆಯಲ್ಲಿ ಸುಮಾರು ೨೦೦ ಜನರಿಗೆ ಸ್ಥಳವಿತ್ತು. ಆದರೆ ಹೊರಗೆ ಅಂಗಳದಲ್ಲಿ, ಕಿಟಕಿಗಳ ಮುಂದೆ, ದೊಡ್ಡ ಸಮೂಹವು ಕೂಡಿ ಇತ್ತು. ಸುವಾರ್ತಾಪಕ್ಷದವರು ವಿಶ್ವಾಸಪ್ರಮಾಣದ ಅರಿಕೆಯನ್ನು ಓದುವದಕ್ಕೆ ಎದ್ದು ನಿಂತಿರೆ, ಮಹಾರಾಜನು ಕುಳ್ಳಿ

ರ ಬೇಕೆಂದು ಸನ್ನೆ ಮಾಡಲಾಗಿ, ಎಲ್ಲರೂ ಕೂತು ಕೊಂಡ ಮೇಲೆ, ಸಕ್ಸದ ಆಯಿಕೆಯ ಅರಸನ ಕರಣೀಕರಾದ ಪಂಡಿತ ಬ್ರಿಕ್ಕನೂ ಪಂಡಿತ ಬಾಯರನೂ, ಒಬ್ಬನು ಕೈಯಲ್ಲಿ ವಿಶ್ವಾಸಪ್ರಮಾಣವನ್ನು ಲತೀನ ಭಾಷೆಯಲ್ಲಿಯೂ, ಒಬ್ಬನು ಜರ್ಮನಿ ಭಾಷೆಯಲ್ಲಿಯೂ ಹಿಡುಕೊಂಡು, ನಡುವೆ ಬಂದು ನಿಂತರು. ಮಹಾರಾಜನು ಲತೀನ ಭಾಷೆಯದನ್ನು ಓದ ಬೇಕೆಂದು ಇಚ್ಛೈಸಿದನು. ಆದರೆ ಆಯಿಕೆಯ ಅರಸನಾದ ಯೋಹಾನನು, ನಾವು ಜರ್ಮನಿ ರಾಜ್ಯದಲ್ಲಿಯೂ ಸೀಮೆಯಲ್ಲಿಯೂ ಇದ್ದೇವೆ, ಆದ್ದರಿಂದ ಅದನ್ನು ಜರ್ಮನಿ ಭಾಷೆಯಲ್ಲಿಯೇ ಓದಲಿಕ್ಕೆ ಮಹಾರಾಜಸ್ವಾಮಿಯು ಅಪ್ಪಣೆ ಕೊಡ ಬೇಕೆಂದು ಹೇಳಲಾಗಿ, ಅಪ್ಪಣೆ ಆಯಿತು. ಈ ಪ್ರಕಾರ ಮಹಾರಾಜನು ಸುವಾರ್ತಾಪಕ್ಷದ ದೇವವಿದ್ಯಾಪಂಡಿತರಿಗೆ ಪ್ರಸಂಗಿಸುವದಕ್ಕೆ ಬಿಡದೆ ಇದ್ದ ಮೇಲೆ, ಸಮಸ್ತ ಜರ್ಮನಿ ದೇಶವನ್ನೂ ಸಮಸ್ತ ಕ್ರೈಸ್ತಸ್ಥಾನವನ್ನೂ ತನ್ನ ಶಬ್ದದಿಂದ ತುಂಬಿಸಿದಂಥಾ ಪ್ರಸಂಗವನ್ನು ಮಾಡಲಿಕ್ಕೆ ಸುವಾರ್ತಾಪಕ್ಷದ ಅರಸುಗಳಿಗೆ ಅನುಜ್ಞೆ ಕೊಟ್ಟ ಹಾಗೆ ಆಯಿತು.

ಕರಣೀಕ ಬ್ರಿಕ್ಕನು ಸುವಾರ್ತಾಪಕ್ಷದ ಆಸದರ ಹೆಸರಿನಲ್ಲಿ ಕೂಡಿ ಬಂದ ಸಭೆಗೆ ಸಂಕ್ಷೇಪವಾದ ಪ್ರಸಂಗ ಮಾಡಿದ ಮೇಲೆ, ಬಾಯರನು ವಿಶ್ವಾಸಪ್ರಮಾಣವನ್ನೆ ಓದಿದನು. ಓದುವದಕ್ಕೆ ಸುಮಾರು ಎರಡು ತಾಸು ತಾಗಿತು. ಆದರೂ ಎಲ್ಲರೂ ಬಹುಮೌನವಾಗಿ ಲಕ್ಷ್ಯ ಇಟ್ಟು ಕೇಳಿದರು. ಬಾಯರನು ಘಟ್ಟಿಯಾಗಿ ಓದಿದರಿಂದ, ಅಂಗಳದಲ್ಲಿದ್ದ ಜನರ ಸಮೂಹ ಸಹಾ ಸಮಸ್ತ ಮಾತುಗಳನ್ನು ಕೇಳಿತು.

ಈ ವಿಶ್ವಾಸಪ್ರಮಾಣದಲ್ಲಿ ೨೮ ಸೂತ್ರಗಳವೆ. ಮೊದಲನೆ ೨೧ ಸೂತ್ರಗಳಲ್ಲಿ ಸಮವಾದ ಕ್ರೈಸ್ತಬೋಧನೆಯು ಸಾರಾಂಶವಾಗಿ ಹೇಳಿಯದೆ. ಮೊದಲನೆ ಸೂತ್ರದಲ್ಲಿ, ನಾವು, ತ್ರಿಯೇಕನಾದ ದೇವರಲ್ಲಿ ಕ್ರೈಸ್ತ ಸಭೆಯು ಆರಂಭದಿಂದ ನಂಬಿದಂತೆ ನಂಬುತ್ತೇವೆಂತ ಹೇಳಿಯದೆ. ೨ನೆ ಸೂತ್ರದಲ್ಲಿ ಆದಾಮನ ಪಾಪಪತನದಂದಿನಿಂದ ಮನುಷ್ಯನು ಪೂರ್ಣವಾಗಿ ಕೆಟ್ಟು ಹೋಗಿ, ಕಂಗಾಲನಾಗಿ, ನ್ಯಾಯಶಿಕ್ಷೆಗೆ ಒಳಗಾದನೆಂಬದು ಕಾಣಿಸಿಯದೆ. ೩ನೆ ಸೂತ್ರವು ದೇವಮನುಷ್ಯನಾಗಿದ್ದು ನಮ್ಮ ಸರ್ವರ ಪಾಪಗಳಿಗೋಸ್ಕರ ವಿಮೋಚನಾಬಲಿಯಾದ ಕರ್ತನಾದ ಕ್ರಿಸ್ತನನ್ನು ಹಾಗಳುತ್ತದೆ. ಮತ್ತೆ ಬರುವ ೩ ಸೂತ್ರಗಳಲ್ಲಿ ನಮ್ಮ ಸ್ವಂತ ಪುಣ್ಯದಿಂದಲ್ಲ, ಕ್ರೂಜಿಸಲ್ಪಟ್ಟವನಲ್ಲಿ ಇಡುವ ವಿಶ್ವಾಸದಿಂದ ಮಾತ್ರವೆ ಪಾಪಪರಿಹಾರವನ್ನೂ, ನೀತಿಯನ್ನೂ, ನಿತ್ಯ ಜೀವವನ್ನೂ ಹೊಂದುತ್ತೇವೆಂದೂ, ಈ ವಿಶ್ವಾಸವು ಪರಿಶುದ್ಧಾತ್ಮದ ಕೃತ್ಯವಾಗಿರುತ್ತದೆ ಎಂದೂ, ಈ ವಿಶ್ವಾಸವು ದೇವರು ಕೊಟ್ಟಂಥಾ ಕೃಪಾಕರಣಗಳಾಗಿರುವ ಸುವಾರ್ತೆಯಿಂದಲೂ ಪ್ರಸಾದಗಳಿಂದಲೂ ಬರುತ್ತದೆಂದೂ, ದೇವರು ಆಜ್ಞಾ

ಶಿಸಿದಂಥಾ ಸತ್ಕರ್ಮಗಳನ್ನು ಈ ವಿಶ್ವಾಸವು ಉಂಟು ಮಾಡುವದು ಅವಶ್ಯವಾಗಿದ್ದರೂ, ಅಂಥಾ ಸತ್ಕ್ರಿಯೆಗಳಲ್ಲಿ ಭರವಸವಿಡದೆ, ನಮ್ಮ ಒಂದೇ ಆದರಣೆಯು ಕ್ರಿಸ್ತನು ತಾನೇ ಆಗಿರ ಬೇಕೆಂದೂ ಬೋಧಿಸಿಯದೆ. ತರುವಾಯ ಸಭೆಯ ವಿಷಯದಲ್ಲಿ, ಸುವಾರ್ತೆಯನ್ನು ಶುದ್ಧವಾಗಿ ಪ್ರಸಂಗಿಸಿ, ಪ್ರಸಾದಗಳನ್ನು ಬರಹಕ್ಕನುಸಾರವಾಗಿ ಹಂಚಿ ಕೊಡುವಂಥಾ ಸಮಸ್ತ ವಿಶ್ವಾಸಿಗಳ ಸಮಾಗಮ ಆಗಿದೆ ಎಂತ ಹೇಳಿಯದೆ. ಮತ್ತೆ ಸ್ನಾನ, ರಾತ್ರಿಭೋಜನ, ಪಾಪಗಳ ಅರಿಕೆ, ಮಾನಸಾಂತರ, ಸಭೆಯ ಉದ್ಯೋಗ, ಸಭೆಯ ಕ್ರಮ, ಸಂಸ್ಥಾನ, ಲೌಕಿಕ ಅಧಿಕಾರ, ಕಡೇ ನ್ಯಾಯತೀರಿಕೆಯ ದಿನ, ಲೋಕಾಂತ್ಯ ಮುಂತಾದ ಸಂಗತಿಗಳು ಬರುತ್ತವೆ. ಕಡೇ ೭ ಸೂತ್ರಗಳಲ್ಲಿ, ತನ್ಮಧ್ಯ ಕ್ರೈಸ್ತ ಸಭೆಯಲ್ಲಿ ಉಂಟಾದ ಅಪಬೋಧನೆಗಳ ವಿಷಯದಲ್ಲಿಯೂ, ದುರಾಚಾರಗಳ ವಿಷಯದಲ್ಲಿಯೂ, ಪ್ರಶಂಸೆ ಮಾಡಿ, ಅವುಗಳ ಮೋಸವನ್ನೂ ಕೇಡನ್ನೂ ಕೂಲಂಕುಶವಾಗಿ ವಿವರಿಸಿ, ಪೂರ್ಣವಾಗಿ ಖಂಡಿಸಿಯದೆ.

ಅನೇಕ ಸೂತ್ರಗಳಿದ್ದರೂ, ವಿಶ್ವಾಸಪ್ರಮಾಣದ ಮುಖ್ಯ ಸಾರವು ಒಂದೇ. ಕ್ರಿಸ್ತನು, ಕ್ರಿಸ್ತನೊಬ್ಬನೇ, ನಮ್ಮ ನೀತಿಯಾಗಿದ್ದಾನೆ. ಹ್ಯಾಗೆಂದರೆ "ಮನಸ್ಸಾಕ್ಷಿಯು ಕ್ರಿಯೆಗಳಿಂದ ವಿಶ್ರಾಂತಿಯನ್ನೂ ಸಮಾಧಾನವನ್ನೂ ಪಡಲಾರದು. ಕ್ರಿಸ್ತನಿಗೋಸ್ಕರ ತನಗೆ ದೇವರು ಕೃಪೆಯಾಗಿದ್ದಾನೆಂದು ನಿಶ್ಚಯವಾಗಿ ನಂಬುವ ವಿಶ್ವಾಸದಿಂದ ಮಾತ್ರವೆ ಆಗಬೇಕು" ಕ್ರಿಸ್ತನೊಬ್ಬನೆ ದೇವರ ಬಳಿಯಲ್ಲಿ ನಿತ್ಯ ಮಧ್ಯಸ್ಥನೂ, ಕೃಪಾಸನವೂ, ಕಾರ್ಯಕರ್ತನೂ ಆಗಿ, ಎಲ್ಲಾ ಕಡೆಯಲ್ಲಿಯೂ ಮೆರೆಯುತ್ತಾನೆ. ಈ ವಿಶ್ವಾಸಪ್ರಮಾಣವು ತಂದೆಯಾದ ದೇವರ ಮಹಿಮೆಗೆ, ಕ್ರಿಸ್ತನ ಘನಕೀರ್ತನ ಎಂದು ಹೇಳ ಬಹುದು. ವಿಮೋಚಕನೂ ಕ್ರೂಜಿಸಲ್ಪಟ್ಟವನೂ ಆದ ಕ್ರಿಸ್ತನು ಮಾತ್ರವಲ್ಲಾ, ಮರಣಸ್ಥರಿಂದೆದ್ದು ನಿತ್ಯ ಬದುಕುವಂಥಾ ಅರಸನೂ, ಆತನ ವಾಕ್ಯಕ್ಕೆ ಮಾನಸಾಂತರದಿಂದಲೂ ವಿಶ್ವಾಸದಿಂದಲೂ ತಮ್ಮ ಹೃದಯಗಳನ್ನು ತೆರೆಯುವ ಸಕಲ ಪ್ರಾಣಿಗಳಲ್ಲಿ ಜೀವಿಸಿ, ಆಳಿ, ಅವರಲ್ಲಿ ಸತ್ಯ ಭಕ್ತಿಯೂ ಪರಿಶುದ್ಧತ್ವವೂ ಇರುವ ನಡತೆಯನ್ನು ಉಂಟು ಮಾಡುವಂಥಾ, ಕ್ರಿಸ್ತನು ಕೀರ್ತಿಗೊಳ್ಳುತ್ತಾನೆ. ಯಾಕಂದರೆ ಕ್ರಿಸ್ತನ ಹೊರ್ತಾಗಿ ಮನುಷ್ಯಸ್ವಭಾವವು, ದೇವರನ್ನು ಹೊಗಳುವದೂ ನೆರೆಯವನನ್ನು ಪ್ರೀತಿ ಮಾಡುವದೂ ಮುಂತಾದ ನ್ಯಾಯವಾದ ನಿಜವಾದ ಒಳ್ಳೇ ಕ್ರಿಯೆಗಳನ್ನು ಮಾಡುವದಕ್ಕೆ ಬಲಹೀನವಾಗಿದೆ. ಬಹಳವಾದರೆ, ಬಹಿರಂಗದ ಭಕ್ತಿಯನ್ನೂ ಸದ್ಗುಣವನ್ನೂ ಅದು ಪಡ ಕೊಂಡೀತು. ಆದರೆ "ಸುವಾರ್ತೆಯು ಬಹಿರಂಗದ ತಾತ್ಕಾಲಿಕ ಭಾವವನ್ನಲ್ಲಾ, ಅಂತರಂಗದ ನಿತ್ಯ ಭಾವವನ್ನೂ ಹೃದಯದ ನೀತಿಯನ್ನೂ ಕಲಿಸುತ್ತದೆ". ಮತ್ತು ವಿಶ್ವಾಸಿಸುವವನು ಕೃಪೆ ಪ್ರಕಟಣೆಗಳ ದೇವರ ಕಡೆಗೆ ಉಂಟಾಗುವ

ಕೃತಜ್ಞತೆಯುಳ್ಳ ಪ್ರತಿಪ್ರೀತಿಯಿಂದ ನಡಿಸಿ ಕೊಂಡು, ಪರಿಶುದ್ಧ ಮಾಡಲ್ಪಟ್ಟ ಹೃದಯವೆಂಬ ಭೂಮಿಯಿಂದ ನಿಜವಾಗಿ ಒಳ್ಳೇ ದೇವಪ್ರಿಯವಾದ ಫಲಗಳನ್ನು ತರುತ್ತಾನೆ. (ಮುಖ್ಯವಾಗಿ ೨೦ನೆ ಸೂತ್ರ ನೋಡ ತಕ್ಕದ್ದು.)

ಈ ವಿಶ್ವಾಸಪ್ರಮಾಣವು ಬಹು ಅಮೋಲ್ಯವಾದ ಗ್ರಂಥ! ಬಹು ಖಂಡಿತವಾಗಿದ್ದರೂ ನಮ್ರವಾಗಿದೆ, ಬಹು ಅಗಾಧವಾಗಿದ್ದರೂ ಅತಿ ಸ್ವಚ್ಛವಾಗಿರುತ್ತದೆ. ಅದು ಸದ್ಬೋಧನೆಗಳಿಂದಲೂ ಜೀವದ ಆತ್ಮವಚನಗಳಿಂದಲೂ ತುಂಬಿಯದೆ. ಆರಂಭದಿಂದ ಕಡೆ ವರೆಗೂ ದೇವರ ವಾಕ್ಯವನ್ನು ಆಧರಿಸಿ ಕೊಂಡು, ಅದರಿಂದಲೆ ಸ್ಥಿರ ಪಡಿಸಿ, ಅವರು ಹೇಳುವದೇನಂದರೆ: “ದೇವರ ಹೆಸರನ್ನೂ ವಾಕ್ಯವನ್ನೂ ಅಪಯೋಗಿಸಿ, ನಮ್ಮ ಪ್ರಾಣ ಮನಸ್ಸಾಕ್ಷಿಗಳನ್ನು ಮಹಾ ಕಂಟಕದಲ್ಲಿ ಹಾಕುವದಕ್ಕಾಗಲಿ, ಶುದ್ಧ ದಿವ್ಯ ವಾಕ್ಯಕ್ಕೂ ಕ್ರೈಸ್ತ ಸತ್ಯಕ್ಕೂ ಅನುಕೂಲವಾಗದಂಥಾ ಬೋಧನೆಯನ್ನು ನಮ್ಮ ಮಕ್ಕಳಿಗೆ ಬಾಧ್ಯತೆಯಾಗಿ ಕೂಡಿಸಿ ಇಡುವದಕ್ಕಾಗಲಿ, ನಮಗೆ ಮನಸ್ಸಿಲ್ಲಾ. ಇದೇ ಕಾರಣದಿಂದ ದೇವರ ವಾಕ್ಯವು ನಿತ್ಯ ಉಳಿಯುವದರಿಂದ, ಅದು ಸಹಾ ನಿಲ್ಲುವದು.” ಆ ಕಾಲದಲ್ಲಿಯೆ ಕಮರಾರ್‍ಯನೆಂಬವನು ಮಹಾ ಸಂತೋಷದಿಂದ ಹೇಳಿದ್ದೇನಂದರೆ: “ಕ್ರೈಸ್ತಸಭೆಯು ಭೂಮಿಯಲ್ಲಿ ಕೂಡಿ ಬರುವ ಮಟ್ಟಿಗೆ, ಈ ಬರಹದ ದಿವ್ಯ ಕಾರ್ಯ ಸಹಾ ನಿಶ್ಚಯವಾಗಿ ನಿಲ್ಲುವದು, ಮತ್ತು ಲೋಕಾಂತ್ಯದ ವರೆಗೆ ಅದು ಸ್ಥಿರವಾಗಿ ನಿಲ್ಲುವದೆಂಬದು ಭಕ್ತರಿಗೆ ನಿಶ್ಚಯವಾಗಿದೆ.”

ವಿಶ್ವಾಸಪ್ರಮಾಣವನ್ನು ಓದಿ ಆದ ಮೇಲೆ, ಮಹಾ ರಾಜನು ಈ ವಿಶೇಷವಾದ ಕಾರ್ಯವನ್ನು ಚಂನಾಗಿ ವಿಚಾರಿಸಿ, ತೀರ್ಪು ಕೊಡುತ್ತೇನೆಂದು ಅಪ್ಪಣೆ ಕೊಟ್ಟನು. ಸುವಾರ್ತಾಪಕ್ಷದವರು, ದಯಾಭಾವದಿಂದ ಕೇಳಿದ್ದಕ್ಕೆ, ಮಹಾರಾಜನಿಗೂ ರಾಜ್ಯಸಭೆಗೂ ಕೃತಜ್ಞಾಪಿಸಿದರು. ಕರಣೀಕ ಬ್ರಿಕ್ಕನು ವಿಶ್ವಾಸಪ್ರಮಾಣದ ಎರಡೂ ಪ್ರತಿಗಳನ್ನು ಮಹಾರಾಜನ ಪ್ರಧಾನಿಗೆ ಒಪ್ಪಿಸಲಿಕ್ಕೆ ಇದ್ದಾಗ, ಮಹಾರಾಜಸ್ವಾಮಿ ತಾನೆ ಕೈಯಾಡ್ಡಿ, ಎರಡೂ ತಕ್ಕೊಂಡು, ಲತೀನ ಭಾಷೆಯಲ್ಲಿರುವ ಪ್ರತಿಯನ್ನು ತಾನೇ ಇಟ್ಟು ಕೊಂಡು, ಜರ್ಮನಿ ಭಾಷೆಯದನ್ನು ರಾಜ್ಯದ ಪ್ರಧಾನಿಯ ಕೈಗೆ ಒಪ್ಪಿಸಿದನು. ಆಗ್ಯೆ ಸಭೆಯು ಎದ್ದು ಹೋಯಿತು.

ಈ ಪ್ರಕಾರ ೧೫೩೦ನೆ ಜೂನು ೨೫ಲ್ಲು ಔಗ್ಸ್‌ಬುರ್ಗಿನ ಮಠದ ಕೋಣೆಯಲ್ಲಿ ನಮ್ಮ ವಿಶ್ವಾಸ ಪೂರ್ವಜರು “ನಿನ್ನ ಸಾಕ್ಷಿಗಳನ್ನು ಕುರಿತು ಅರಸರ ಮುಂದೆ ಮಾತಾಡಿ ನಾಚಿಕೆ ಪಡೆನು” ಕೀರ್ತ ೧೧೯. ೪೬. ಎಂಬ ವಾಕ್ಯವನ್ನು ಘನವಾದ ಅರ್ಥದಲ್ಲಿ ಪೂರ್ತಿ ಮಾಡಿದರು. ನಿಶ್ಚಯವಾಗಿ ಅಪೊಸ್ತಲರ ಕಾಲದಂದಿನಿಂದ ಇಂದಿನ ವರೆಗೂ, ಲೋಕಾರಂಭದಿಂದ ಇಂದಿನ ವರೆಗೂ, ಈ ಭೂಮಿಯ ಮಹಾಂತರ ಪ್ರ

ಖ್ಯಾತಿ ಪಟ್ಟ ಸಭೆಯಲ್ಲಿ ಇದಕ್ಕಿಂತ ಅಧಿಕ ಮಹಿಮೆಯುಳ್ಳ ಅರಿಕೆಯನ್ನು ಮಾಡಿದ್ದು ಇಲ್ಲಾ. ಅರಸರ ಅರಸನು ಅದೃಶ್ಯನಾಗಿ ಅಲ್ಲಿದ್ದು, ದಿವ್ಯ ಒಲವಿನಿಂದ ತನ್ನ ನಾಮವನ್ನರಿಕೆ ಮಾಡುವವರನ್ನು ದೃಷ್ಟಿಸಿ, ಮನುಷ್ಯರ ಮುಂದೆ ನನ್ನನ್ನು ಅರಿಕೆ ಮಾಡುವವರನ್ನು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನಾನು ಸಹಾ ಅರಿಕೆ ಮಾಡುವೆನೆಂದು ಹೇಳಿದ ಮಾತನ್ನು ಪೂರ್ತಿ ಮಾಡುವದಕ್ಕೆ ಆಗುತ್ತದೆಂದು ನೋಡಿ, ಸಂತೋಷ ಪಟ್ಟನು. ಅವರು ಸಹಾ ಭೂಮಿಯಲ್ಲಿಯೇ ಒಳ್ಳೇ ಪ್ರತಿಫಲವನ್ನು ಹೊಂದಿದರು.

ಅಂಥಾ ಸಭೆಯ ಮುಂದೆ ಅಚಂಚಲವಾದ ದೇವರ ಸತ್ಯವನ್ನು ಒಟ್ಟಿಗೆ ಅರಿಕೆ ಮಾಡಿದ್ದರಿಂದ, ಅವರಿಗೆ ಆತ್ಮದಲ್ಲಿ ಬಲವೂ ಭಾಗ್ಯವೂ ಬಂತು. ರೋಮಾ. ೧೦, ೧೦. ಇದರ ಹೊರ್ತು ಈ ವಿಶ್ವಾಸಪ್ರಮಾಣದಿಂದ ಮನುಷ್ಯರ ಕಣ್ಣಿಗೆ ಸಹಾ ಸುವಾರ್ತಾಪಕ್ಷದವರು ಕೆಟ್ಟ ಜನರಲ್ಲವೆಂದೂ ಭಕ್ತಿಯುಳ್ಳವರೆಂದೂ ಪ್ರತ್ಯಕ್ಷವಾಯಿತು.

ಎದುರಾಳಿಗಳಿಗೆ ಇದರಿಂದ ಒಳ್ಳೇ ಪೆಟ್ಟಾಯಿತು. ಕೆಲವರಿಗೆ ಅದರಿಂದ ಶುಭವಾಯಿತು. ಅನೇಕರು ಸುವಾರ್ತಾಪಕ್ಷದವರ ವಿಷಯದಲ್ಲಿ ಏನೇನು ಆಲೋಚನೆ ಮಾಡಿ ಕೊಂಡು, ಅವಿಶ್ವಾಸಿಗಳೆಂದೂ ದುಷ್ಟ ನಾಸ್ತಿಕರೆಂದೂ, ಭಯಂಕರ ಜನರೆಂದೂ, ಸಮಸ್ತ ಒಳ್ಳೇ ಮರ್ಯಾದೆಗಳನ್ನೂ ಕ್ರಮಗಳನ್ನೂ ಮೇಲೆ ಕೆಳಗೆ ಮಾಡಿ, ಕ್ರೈಸ್ತ ಸ್ವತಂತ್ರವೆಂಬ ಹೆಸರಿನ ಆಶ್ರಯದಿಂದ ಕಾಡುಮೃಗಗಳಂತೆ ಬದುಕಿ, ವಿಷವನ್ನು ಕಾರಿ, ಕ್ರೈಸ್ತಧರ್ಮವನ್ನೆ ಪೂರ್ಣ ನಿರ್ಮೂಲ ಮಾಡುವದಕ್ಕೆ ಕಾರಣವಾಗುವವರೆಂದೂ, ಎಣಿಸಿ ಕೊಂಡು ಬಂದಿದ್ದರು. ಆದರೆ ಮುಂಚೆ ಅವರು ನೆನಸಿದ್ದೇನು, ಈಗ ಇಲ್ಲಿ ಕೇಳಿದ್ದೇನು? ಅನೇಕರು ಬೆರಗಾದರು, ಕೆಲವು ರೋಮಾಯ ಅರಸುಗಳು ತಮ್ಮ ವಿದ್ವಾಂಸರನ್ನು ಗದರಿಸಿ, ಲುಥರನ ಕಡೆಯವರ ವಿಷಯದಲ್ಲಿ ನಮಗ್ಯಾಕೆ ಇಂಥಾ ಸುಳ್ಳುವರ್ತಮಾನ ಹೇಳಿದರೆಂತ ಕೋಪಿಸಿದರು. ಬಯರದ ರಾಜನಾಯಕ ವಿಲ್ಹೆಲ್ಮನು ಪಂಡಿತ ಎಕ್ಕನನ್ನು ಕಣ್ಣೂರಿ ನೋಡಿ, ಈ ವಿಶ್ವಾಸಪ್ರಮಾಣವನ್ನು ಖಂಡಿಸ ಶಕ್ತರಾಗಿದ್ದೀರಾ ಎಂದು ಕೇಳಿದನು. ಆಗ್ಯೆ ಎದುರಾಳಿಗಳಲ್ಲಿ ಪ್ರಮುಖನಾದ ಎಕ್ಕನು ನಾಚಿಕೆ ಪಟ್ಟು ಹೇಳಿದ್ದೇನಂದರೆ: “ಸಭಾಪಿತೃಗಳ ಬರಹಗಳಿಂದ ಖಂಡಿಸೇನು, ಆದರೆ ಪರಿಶುದ್ಧ ಬರಹದಿಂದ ಖಂಡಿಸಲಾರೆ.” ಈ ಮಾತಿಗೆ ರಾಜನಾಯಕನು ದುಃಖದಿಂದ, ಹಾಗಾದರೆ ನನ್ನ ಕಿವಿ ಕೇಳುವದೇನು? ಲುಥರನ ಕಡೆಯವರು ದೇವರ ವಾಕ್ಯದೊಳಗೆ ಕೂತಿದ್ದಾರೆ, ನಾವು ಅದರ ಹೊರಗೆ ಕೂತಿದ್ದೇವೆ, ಹಾಗಲ್ಲವೊ? ಅಂದನು. ಔಗ್ಸ್ಬುರ್ಗಿನ ಅಧ್ಯಕ್ಷನು, ಓದಿದ್ದೆಲ್ಲಾ ನಿರ್ಮಲವಾದ ಅತರ್ಕ್ಯವಾದ ಸತ್ಯವಾಗಿದೆ ಎಂದು, ಸಾರಿದನು.

ವಿಶ್ವಾಸಪ್ರಮಾಣವು ಕಟ್ಟಣದ ಕಡೇ ಕಲ್ಲಾಗಿತ್ತು. ಅದರಿಂದ ಪುನಸ್ಥಾಪನೆಯು ಅಂತರಂಗದಲ್ಲಿ ಪೂರ್ಣವಾಯಿತು, ಕಾರ್ಯದಿಂದ ಸ್ಥಿರವಾಯಿತು. ಈ ಪ್ರಕಾರ ಒಟ್ಟಿಗೆ ಮಾಡಿದ ವಿಶ್ವಾಸಪ್ರಮಾಣದ ಅರಿಕೆಯಿಂದ ಒಂದು ಹೊಸ ವಿಶ್ವಾಸಸಂಸರ್ಗ, ಒಂದು ಹೊಸ ಸಭೆ ಉಂಟಾಯಿತು. ಇಷ್ಟುವರೆಗಿದ್ದ ಸಭೆಗೆ ಅದು ಎದುರಾಗಿದ್ದರೂ, ಈ ಹೊಸ ಸಭೆಯು ಆರಂಭದಲ್ಲಿದ್ದ ಕ್ರಿಸ್ತನ ಮೂಲಸಭೆಯೆ ಹೊರ್ತು ಬೇರೊಂದಲ್ಲಾ.

ಈ ವಿಶ್ವಾಸಪ್ರಮಾಣವು ಈ ವರೆಗೂ ಬಹು ವಿಶೇಷವಾಗಿದೆ. ದೇವರ ವಾಕ್ಯದ ಆಧಾರದಿಂದ ಇರ ತಕ್ಕ ಸಭೆಯು ಒಳಗೂ ಹೊರಗೂ ಹ್ಯಾಗೆ ಇರುತ್ತದೆಂಬದಕ್ಕೆ ಅದು ಒಂದು ಸಾಕ್ಷಿ ಆಯಿತು. ಆ ಕಾಲದಲ್ಲಿ ಹ್ಯಾಗೋ, ಹಾಗೆಯೆ ಈಗ ಸಹಾ, ಈ ತರದ ವಿಶ್ವಾಸಪ್ರಮಾಣವು ಸಭೆಗೆ ಅವಶ್ಯವಾಗ ಬಹುದು. ಅನೇಕ ಸರ್ತಿ ಅಪವಿಶ್ವಾಸಿಗಳಾದ ಕ್ರೈಸ್ತರು, ರೋಮ ಸಭೆಯೊಡನೆ, ತಮ್ಮ ಬೋಧನೆಗಳನ್ನು ದೇವರ ವಾಕ್ಯದಿಂದಲೇ ಬೋಧಿಸುತ್ತೇವೆ ಎಂತ ಹೇಳುವದರಿಂದ, ಸುವಾರ್ತಾಪಕ್ಷದ ಸಭೆಗಳಿಗೆ ಯಾವದಾದರೂ ಒಂದು ವಿಶ್ವಾಸಪ್ರಮಾಣವು ಪ್ರಯೋಜನವಾಗಿರ ಬಹುದು. ಆದರೂ ಸಭೆಯ ವಿಶ್ವಾಸಪ್ರಮಾಣವು ವಿಶ್ವಾಸದ ವರ್ತೆ ಅಲ್ಲಾ, ದೇವರ ವಾಕ್ಯ ಮಾತ್ರವೆ ನಿತ್ಯವಾದ ಬುಗ್ಗೆಯಾಗಿರ ಬೇಕು.

ಇಂಥಾ ಸ್ಪಷ್ಟವಾದ, ನಿರ್ಮಲವಾದ, ಖಂಡಿಸ ಕೂಡದ ಸತ್ಯ ಬೋಧನೆಯನ್ನು ಕೇಳಿದರೂ, ಎದುರಾಳಿಗಳಲ್ಲಿ ಬಹು ಸ್ವಲ್ಪ ಮಂದಿ ಮಾತ್ರವೆ ದೀನ ಭಾವದಿಂದ ಅದಕ್ಕೊಪ್ಪಿ ಕೊಂಡರು. ಮಹಾರಾಜನ ಹೃದಯದ ಗುಂಡಿಯಲ್ಲಿ ಏನು ನಡಿಯಿತೋ ಯಾರು ಬಲ್ಲರು? ಈ ಮಹಾರಾಜ ಕರ್ಲನು ಸುವಾರ್ತೆಯ ನಿಜ ವಿಶ್ವಾಸದಲ್ಲಿ ತೀರಿ ಹೋದನೆಂತ ಹೇಳುತ್ತಾರೆ. ಆದರೆ ವಿಶ್ವಾಸಪ್ರಮಾಣವನ್ನು ಕೇಳಿದವರಲ್ಲಿ ಮನ ಕಠಿಣ ಮಾಡಿ ಕೊಂಡವರ ಕಡೆಯವನಾಗಿದ್ದನೆಂತ ಆ ಕಾಲದಲ್ಲಿ ಕಂಡಿತು. ಹ್ಯಾಗೆಂದರೆ ಹೆಚ್ಚಿಗೆ ಏನೂ ವಿಚಾರಿಸದೆ, ರೋಮಿಯ ದೇವವಿದ್ಯಾಪಂಡಿತರಿಗೆ ಅದರ ಖಂಡಣೆಯನ್ನು ಬರಿಯ ಬೇಕೆಂದು ಅಪ್ಪಣೆ ಕೊಟ್ಟು, ತೀರಿಸಿ ಬಿಟ್ಟನು. ಅವರು ಬರದ ಖಂಡಣೆಯು ಆರಂಭದಲ್ಲಿ ಬಹು ತಬ್ಬಿಯಾಗಿ ಇದ್ದದರಿಂದ, ರೋಮಪಕ್ಷದವರು ತಾವೆ ಅದಕ್ಕೊಪ್ಪದೆ ಇರಲಾಗಿ, ಮಹಾರಾಜನ ಅಪ್ಪಣೆಯಿಂದ ಅದನ್ನು ತಿದ್ದಿದ ಮೇಲೆ, ಅದೇ ವರುಷದ ಅಗೋಸ್ತು ೩ಲ್ಲು ಅದೇ ಮಠದ ಕೋಣೆಯಲ್ಲಿ ಓದಿದರು. ಮೆಲಂಥೋನನು ಈ ಖಂಡಣೆಗೆ ವಿರೋಧವಾಗಿ ವಿಶ್ವಾಸಪ್ರಮಾಣವನ್ನು ಪ್ರತಿಪಾದಿಸುವ ಅನುನಯವೆಂಬದನ್ನು ಬರದನು. ಆದರೆ ಮಹಾರಾಜನು ಅದನ್ನು ಸರ್ವರ ಮುಂದೆ ಓದಲಿಕ್ಕೂ ಬಿಡಲಿಲ್ಲಾ, ತಾನೂ ಸ್ವೀಕರಿಸಲಿಲ್ಲಾ. ಸಭಾಸದರ

ಲ್ಲಿ ಹೆಚ್ಚಿಗೆಯವರ ಸಂಗಡ ಮಹಾರಾಜನು ಏಕಮತ್ಯವಾಗಿ, ಖಂಡನ ಗ್ರಂಥವೆ ಸತ್ಯವಾದ ಕ್ರೈಸ್ತಬೋಧನೆಯಾಗಿದೆ ಎಂದೂ, ಪ್ರತಿ ಕಕ್ಷಿಕರು ಸಹಾ ಅದಕ್ಕೆ ಒಪ್ಪಿಕೊಳ್ಳಬೇಕೆಂಬದೆ ಅಲ್ಲಾಡಲಾಗದ ಸ್ಥಿರವಾದ ತೀರ್ಪು ಆಗಿದೆ ಎಂದೂ, ಅಪ್ಪಣೆ ಕೊಟ್ಟನು. ಆದಾಗ್ಯೂ ಈ ಪ್ರಕಾರ ತರ್ಕಗಳು ನಡಿಯುತ್ತಿರುವಾಗ್ಯೆ, ಇತ್ತಟ್ಟಿನವರಿಂದ ಕೆಲವರನ್ನು ನೇಮಿಸಿ, ಸಂದಾನವಾಗುವ ಮಾರ್ಗವನ್ನು ಸಾಧಿಸಲಿಕ್ಕೆ ಪೇಚಾಡಿದರು. ಆ ರಾಜ್ಯಸಭೆಯಲ್ಲಿ ಮಾಡಿದ ತೀರ್ಪು ಏನಂದರೆ: ಪ್ರತಿ ಕಕ್ಷಿಕರನ್ನು ಅರ್ಧ ವರುಷದ ವರೆಗೆ ಸಮಾಧಾನದಲ್ಲಿ ಇರ ಗೊಡಿಸ ಬೇಕು. ಅಷ್ಟರೊಳಗೆ ಅವರು ಸರಳ ವಿಶ್ವಾಸವುಳ್ಳ ಸಭೆಯೊಳಗೆ ತಿರಿಗಿ ಬರ ಬೇಕು. ಆ ಪ್ರಕಾರ ಬಾರದೆ ಇದ್ದ ಪಕ್ಷದಲ್ಲಿ, ಅವರನ್ನು ಆಯುಧದ ಬಲ್ಮೆಯಿಂದ ಎಳದು ತರ ತಕ್ಕದ್ದು.

ಆಗ್ಯೆ ಸುವಾರ್ತಾಪಕ್ಷದವರು ಬರಹಮೂಲಕವಾಗಿ ತಿಳಿಸಿದ್ದೇನಂದರೆ: ದೇವರ ವಾಕ್ಯದಿಂದ ನಮ್ಮ ಬೋಧನೆಯನ್ನು ಸಾಂಗೋಪಾಂಗವಾಗಿ ಖಂಡಿಸದೆ ಇರಲಾಗಿ, ಪ್ರವಾದಿ ಅಪೊಸ್ತಲರುಗಳ ಸ್ಪಷ್ಟವಾದ ಬರಹಗಳನ್ನು ಬಿಟ್ಟು ಹೋಗಲಾರೆವು. ಈ ವಿಷಯದಲ್ಲಿ ದೇವರ ಕೃಪೆಯುಳ್ಳ ಚಿತ್ತವು ಹ್ಯಾಗುಂಟೋ ಹಾಗಾಗಲಿ, ಈ ಕಾರ್ಯವನ್ನು ಜರ್ಮನಿ ದೇಶದ ಸ್ವಾತಂತ್ರವಾದ ಕ್ರೈಸ್ತ ರಾಜ್ಯಸಮಾಗಮಕ್ಕೆ ಇನ್ನೊಮ್ಮೆ ಒಪ್ಪಿಸಿ ಕೊಟ್ಟು, ದೇವರ ಕೈಯಲ್ಲಿ ಇಟ್ಟಿದ್ದೇವೆ. ಈ ಪ್ರಕಾರ ಬರದು ಕೊಟ್ಟರು.

ಅಲ್ಲಿ ಕೂಡಿ ಬಂದ ಸುವಾರ್ತಾಪಕ್ಷದ ಪೂರ್ವಜರು, ಮುಂದಿನ ಕಾಲವು ದುಖ್ಖಕಾಲವಾಗುವದೆಂದು ಕಂಡು, ರಾಜ್ಯಸಭೆಯು ತೀರಿದ ಮೇಲೆ ದುಃಖದಿಂದ ತಮ್ಮ ತಮ್ಮ ದೇಶಗಳಿಗೆ ಹೋದರು. ಆದರೆ ಅವರ ಪರಿಶುದ್ಧ ವಿಶ್ವಾಸವು ಕದಲಲಿಲ್ಲಾ. ಭೂಮಿಯ ಕಂಟಕಗಳಿಂದ ಪರಲೋಕದಲ್ಲಿರುವ ತಮ್ಮ ಆಶ್ರಯಕ್ಕೆ ಕಣ್ಣೆತ್ತಿ, ಇಗೋ ಆತನೆ ನಮ್ಮ ದೇವರು, ಆತನಲ್ಲಿ ನಂಬಿದ್ದೇವೆ, ಆತನು ನಮಗೆ ಸಹಾಯ ಮಾಡ್ಯಾನು, ಎಂದು ಕರ್ತನನ್ನು ಹೊಗಳಿದರು. ಮತ್ತು ಆತನು, ನಾನು ನಿಮ್ಮ ಆದರಿಕನು, ಸಾಯುವ ಮನುಷ್ಯರಿಗೂ ಹುಲ್ಲಿನಂತೆ ಸುಟ್ಟು ಹೋಗುವ ಮನುಷ್ಯಪುತ್ರರಿಗೂ ಯಾಕೆ ಹೆದರುತ್ತೀರಿ, ಎಂಬ ಉತ್ತರವನ್ನು ಅವರಿಗೆ ಕೊಟ್ಟನು.

§ ೧೨.

# ದೇವರು ಶತ್ರುಗಳನ್ನು ಬಿಗಿ ಹಿಡಿಯುತ್ತಾನೆ

ಈ ಪ್ರಕಾರ ಸುವಾರ್ತಾಪಕ್ಷದವರು ದೇವರಲ್ಲಿ ಭರವಸ ಇಡುತ್ತಾ, ಮನುಷ್ಯರೀತಿಯಾಗಿಯೂ ಮುಂದಿನ ಕಾಲದ ಮೇಲೆ ಕಂಣಿಟ್ಟು ನಡಕೊಂಡದ್ದು ಸಹಜವೇ ಸರಿ. ಅವರು ಅದೇ ವರ್ಷದಲ್ಲಿ ತಮ್ಮ ವಿದ್ಯಮಾನಗಳಲ್ಲಿ ಏನು ಮಾಡ ಬೇಕೆಂಬ ಸಂಗತಿಯನ್ನು ಆಲೋಚಿಸಿ, ಮರು ವರ್ಷ ೧೫೩೧ನೆ ಮಾರ್ಚ ತಿಂಗಳಲ್ಲಿ ಥುರಿಂಗ ದೇಶದ ಶ್ಮಲ್ಕಲ್ಡ ಎಂಬ ಪಟ್ಟಣದಲ್ಲಿ ಕೂಡಿ ಬಂದು, ಶ್ಮಲ್ಕಲ್ಡದ ಒಪ್ಪಂದವನ್ನು ಸ್ಥಿರ ಮಾಡಿ, ಕ್ರೈಸ್ತ ಸತ್ಯಾರ್ಥವನ್ನು ಕಾಪಾಡುವ ಬಗ್ಗೆ ಏಕಮನಸ್ಸಾಗಿ, ಏಕತ್ವದ ಬಲದಿಂದ, ತಮ್ಮ ವಿಶ್ವಾಸಕ್ಕೆ ಎದುರ್ನಿಂತು ಕಾದುವವರನ್ನು ಹಿಮ್ಮೆಟ್ಟಿಸುತ್ತೇವೆಂಬದಾಗಿ ಒಬ್ಬರಿಗೊಬ್ಬರು ಮಾತು ಕೊಟ್ಟರು.

ಆದರೂ ಮಹಾರಾಜನ ಮೇಲೆ ಕತ್ತಿ ತೆಗಿಯುವದು ಸಮವೋ, ಸಮವಲ್ಲವೋ ಎಂಬ ವಿಷಯದಲ್ಲಿ ಅವರ ಮನಸ್ಸಾಕ್ಷಿ ಕದಲಿತು. ತಾವು ಆತನ ಆಜ್ಞಾಧಾರಕರಾಗಿರಲಾಗಿ, ದೇವರ ವಾಕ್ಯದ ಪ್ರಕಾರ ಹ್ಯಾಗೆ ನೋಡಿದರೂ, ಎದುರ್ನಿಲ್ಲುವದು ಸಮ ತೋರಲಿಲ್ಲಾ. ಆದಾಗ್ಯೂ ನ್ಯಾಯಜ್ಞರಾದ ಪಂಡಿತರು ಈ ಕಾರ್ಯವನ್ನು ಚಂನಾಗಿ ವಿಚಾರಿಸಿ, ಮಹಾರಾಜನು ಸರ್ವರ ಪ್ರಧಾನನಾಗಿರುವದರಿಂದ, ಪ್ರಜಾಧರ್ಮದ ಪ್ರಕಾರ ಆತನಿಗೆ ಆಜ್ಞಾಧೀನರಾಗಿದ್ದರೂ, ಜರ್ಮನಿಯ ಅರಸುಗಳು ಮಹಾರಾಜನ ಉದ್ಯೋಗಸ್ಥರಾಗಿರದೆ, ಸ್ವತಂತ್ರ ಪ್ರಭುಗಳಾಗಿ, ತಮ್ಮ ರಾಜ್ಯಗಳನ್ನು ಆಳುತ್ತಿರುವಲ್ಲಿ, ಅವರ ಪ್ರಜೆಯವರನ್ನು ಸತ್ಯವಿಶ್ವಾಸ ಅಗಲಿಸಿ ಒಡಕೊಂಡು ಹೋಗುವಂಥವರ ಕೈಯಿಂದ ಪರಿಪಾಲನೆ ಮಾಡುವದು ಅವಶ್ಯವೆಂದು ತಿಳಿಸಿದರು. ಈ ಪ್ರಕಾರ ಸಾಧನ ಮಾಡುತ್ತಾ ಇದ್ದರೂ, ಅವರ ಸಂಶಯ ಪೂರ್ಣವಾಗಿ ಪರಿಹಾರವಾಗಲಿಲ್ಲಾ. ಹೀಗಿರುವದರಿಂದ, ತಮ್ಮ ಒಪ್ಪಂದವು ಮಹಾರಾಜನಿಗಾಗಲಿ, ಬೇರೆ ಯಾವ ರಾಜ್ಯಾಧಿಕಾರಸ್ಥರಿಗಾಗಲಿ ಎದುರಾಗಿ ಮಾಡಿದ್ದಲ್ಲಾ, ನಿತ್ಯ ಪುರುಷಾರ್ಥದ ವಿಷಯದಲ್ಲಿ ಮಾತ್ರವೆ ಯಾರಾದರೂ ಒತ್ತಾಯ ಮಾಡುವದಾದರೆ ಅದ

ನ್ನು ಎದುರಿಸಿ ನಿವಾರಿಸುವ ಬಗ್ಗೆ ಮಾತ್ರವೆ ಮಾಡಿದ್ದಾಗಿರುತ್ತದೆಂದು ಸ್ಪಷ್ಟವಾಗಿ ಹೇಳಿದರು.

ಆದರೆ ಭೂಭಾವದ ಕತ್ತಿ ಎಳದು ಹೋರಾಡುವದು ಸರ್ವಥಾ ಆಗದೆಂದು ಖಂಡಿತವಾಗಿ ಹೇಳಿದವನ್ಯಾರೆಂದು ನೆನಸುತ್ತೀರಿ? ಎದುರಾಳಿಗಳು ಕೇವಲ ಅನ್ಯಾಯಗಾರನೆಂದು ಹೇಳಿದ, ಆ ಭಕ್ತಿಯುಳ್ಳ ದೇವಚಾಕರನಾದ ಲುಥರನಲ್ಲದೆ ಮತ್ಯಾರು? ಆತನು ಮಹಾ ಆಸಕ್ತಿಯಿಂದ ತನ್ನ ಬೋಧನೆಗೆ ಮನುಷ್ಯರ ದುರಾಶ್ರಯವು ಬೇಡವೆಂದು, ಅಂಥಾ ಆಲೋಚನೆ ಬಿಸಾಡಿ ಬಿಟ್ಟನು. ಸತ್ಯ ಧರ್ಮವನ್ನು ಮನಃಪೂರ್ವಕವಾದ ಪ್ರಾರ್ಥನೆಯಿಂದಲೂ, ದೇವರ ವಾಕ್ಯದ ಪ್ರಮಾಣಗಳಿಂದಲೂ, ಕ್ರೈಸ್ತರಿಗೊಪ್ಪುವ ತಾಳ್ಮೆಯಿಂದಲೂ, ಮುಖ್ಯವಾಗಿ ದೇವರಲ್ಲಿಡುವ ಮಹಾ ಭರವಸದಿಂದಲೂ ಕಾಯ ಬೇಕು ಅಂದನು. ಸುವಾರ್ತಾಪಕ್ಷದವರು ಲುಥರನ ಶೋಧಿತವಾದ ಶಬ್ದಕ್ಕೆ ಪೂರ್ಣವಾಗಿಯೂ ಯಾವಾಗಲೂ ಕಿವಿ ಕೊಡುತ್ತಿದ್ದರೆ, ಒಳ್ಳೆದಾಗಿರುತ್ತಿತ್ತು. ಆದರೆ ಅವರು ಹಾಗೆ ಮಾಡಲಿಲ್ಲಾ. ಮತ್ತೆ ಅದಕ್ಕೆ ದುಃಖ ಪಡ ಬೇಕಾಯಿತು. ಹ್ಯಾಗೂ ಈ ಮಹಾಭಟನು ಆತ್ಮದ ಖಡ್ಗವನ್ನು ಹಿಡಿದು ಕೊಂಡು, ಉಕ್ಕಿನ ಖಡ್ಗದ ಪ್ರಯೋಗಕ್ಕೆ ಖಂಡಿತವಾಗಿ ಯಾವಾಗಲೂ ಎದುರ್ನಿಂತ ಕಾರಣ, ಆತನ ಕಣ್ಣುಗಳು ಯುದ್ಧದ ಆಕಾಂತವನ್ನು ನೋಡುವದು ಅವಶ್ಯವಾಗಲಿಲ್ಲಾ; ಲುಥರನು ಮಣ್ಣಿನ ಶರೀರದಲ್ಲಿ ಬಾಳುತ್ತಿರುವ ಮಟ್ಟಿಗೆ, ದೇವರು ಯುದ್ಧ ಆರಂಭ ಆಗುವದಕ್ಕೆ ಬಿಡಲಿಲ್ಲ.

ಔಗ್ಸ್‌ಬುರ್ಗಿನ ರಾಜ್ಯಸಭೆಯ ತೀರ್ಪಿನಲ್ಲಿ ಬೆದರಿಸಿದ ಪ್ರಕಾರ ಮಾಡುವದಕ್ಕೆ ಶತ್ರುಗಳಿಗೆ ಆಗದ ಹಾಗೆ, ದೇವರು ಅವರ ಕೈ ಹ್ಯಾಗೆ ಹಿಡಿದನೆಂದು ಈಗ ಕೇಳಿರಿ. ಸುವಾರ್ತಾಪಕ್ಷದವರ ಮಹಾ ಧೈರ್ಯವನ್ನು ಅವರು ಎಣಿಸಲಿಲ್ಲಾ, ಒಟ್ಟು ಕೂಡಿ ಕೊಂಡು, ಏಕಮನಸ್ಸಿಂದ ಎದುರ್ನಿಂತಾರೆಂದು ಅವರು ಮುಂಚೆ ನೆನಸಲಿಲ್ಲಾ. ಈ ವಿದ್ಯಮಾನದಿಂದಲೆ ಅವರ ಹೆಚ್ಚಳ್ಮೆ ಸ್ವಲ್ಪ ಕಡಿಮೆ ಆಯಿತು ಸರಿ, ಆದರೆ ಅಷ್ಟೆ ಸಾಲದೆ ಹೋಗುತ್ತಿತ್ತು. ಹ್ಯಾಗಂದರೆ, ರಾಜ್ಯದ ಲೆಖ್ಖದಲ್ಲಿ ಎದುರಾಳಿಗಳ ಬಲ ಮಿಗಿಲಾಗಿ ಇದ್ದದರಿಂದ, ಮನಃಪೂರ್ವಕವಾಗಿ ಮುಂಚೆ ಬೆದರಿಸಿದ ಪ್ರಕಾರ ಮಾಡದೆ, ಹಿಂಜರಿಯುತ್ತಿದ್ದಿಲ್ಲವೆಂದು ನೆನಸಲೆ ತಕ್ಕದ್ದು. ಆದರೆ ಮತ್ತೊಂದು ಕಾರ್ಯ ಸಂಭವಿಸಿತು. ಪುನಸ್ಥಾಪನೆಯ ಕಾರ್ಯವು ದೇವರಿಂದಲೆ ಬಂತೆಂಬದಕ್ಕೆ ಆ ಸಮಯದ ದೈವಘಟಣವು ಸಾಕಾದ ಸಾಕ್ಷಿ ಎಂದು ಹೇಳ ಬಹುದು.

ಮುಂಚೆ ಸಂದು ಹೋದ ಕೆಲವು ವರ್ಷಗಳಲ್ಲಿಯೆ ಮಹಾರಾಜನಿಗೆ ಸುವಾರ್ತಾಪಕ್ಷದವರ ಮೇಲೆ ಇದ್ದ ಕೋಪವೂ ಭಾರವೂ, ಪೋಪನ ಸಂಗಡ ಉಂಟಾದ

ಕೆಡು ಜಗಳದಿಂದಲೂ ಫ್ರೆಂಚ ದೇಶದ ಅರಸನ ಸಂಗಡ ಉಂಟಾದ ಘೋರ ಯುದ್ಧದಿಂದಲೂ, ಔಸ್ತ್ರಿಯ ದೇಶದಲ್ಲಿದ್ದ ಮಹಾರಾಜನ ಸಹೋದರನಾದ ಫರ್ದಿನಂದನ ರಾಜ್ಯದಲ್ಲಿ ತುರ್ಕರು ಬಂದು ಬಿದ್ದು ಮಾಡಿದ ಸುಲಿಗೆಗಳಿಂದಲೂ, ಬೇರೆ ಕಡೆಗೆ ಇಳಿದದ್ದಲ್ಲದೆ, ಈ ಸರ್ತಿ ಸಹಾ ಮಹಾ ರಾಜನೂ ರೋಮಿಯ ಪಕ್ಷದವರೂ ನಮ್ಮ ಸಹವಿಶ್ವಾಸಿಗಳ ಮೇಲೆ ಕೈ ನಡಿಸದ ಹಾಗೆ ತುರ್ಕರು ಇಂನೊಮ್ಮೆ ಕೈಕಟ್ಟಿದರು. ಇದು ಹ್ಯಾಗಾಯಿತಂದರೆ:

ಘನವಂತನೆಂಬ ಪ್ರತಿನಾಮ ಹೊಂದಿದ ಸುಲ್ತಾನ ಸುಲೇಮಾನನು ಮುಂಚೆ ೧೫೨೯ಲ್ಲಿ ವಿಯನ್ನದ ಹೆಬ್ಬಾಗಲುಗಳಲ್ಲಿ ದಂಡಿಳಿಸಿದವನಾಗಿ, ಈಗ ತಿರಿಗಿ ಮಹಾ ಸೈನ್ಯವನ್ನು ತಕ್ಕೊಂಡು, ಉಂಗಾರ ದೇಶದಲ್ಲಿ ಬಿದ್ದು, ಔಸ್ತ್ರಿಯಕ್ಕೆ ಜಯ ತೋರಿಸಿದನು. ಹೀಗಿರಲಾಗಿ, ರೋಮುವೆಯವರನ್ನು ಪಾಷಂಡಿಗಳಿಗೆ ಎದುರಾಗಿ ಕಳುಹಿಸಲಿಕ್ಕಾಗಲಿಲ್ಲಾ. ಕ್ರೈಸ್ತಸ್ಥಾನದ ಜನ್ಮಶತ್ರುವಾದ ತುರ್ಕನ ಬಗ್ಗೆ ಬೇಕಾದರು. ರಾಜ್ಯವನ್ನು, ಮುಖ್ಯವಾಗಿ ಔಸ್ತ್ರಿಯ ದೇಶವನ್ನು, ಸುಲಿಗೆ ರಕ್ತಗಳಿಂದ ಸೊಕ್ಕಿದ ಈ ಚಾಂಡಾಲರಿಗೆ ಎದುರ್ನಿಲ್ಲುವದಕ್ಕೆ, ಪಾಷಂಡಿಗಳೆಂಬ ಸುವಾರ್ತಾಪಕ್ಷದವರ ಸೈನ್ಯ ಸಹಾ ಅವಶ್ಯವಾಯಿತು. ಹೀಗಿರಲಾಗಿ, ಅವರ ಸಂಗಡ ನಮ್ರಭಾವದಲ್ಲಿ ಒಡಂಬಡಿಕೆ ಮಾಡಿ ಕೊಂಡು, ತೋರಿಕಾದರೂ, ಅಣ್ಣ ತಮ್ಮಂದಿರಂತೆ ನಡಕೊಳ್ಳುವದು ಲೇಸು ಎಂದು ನೆನಸಿದರು.

ಮುಂಚೆ ಔಗ್ಸ್‌ಬುರ್ಗಿನಲ್ಲಿ ಅವರು: "ಸುವಾರ್ತಾಪಕ್ಷದವರ ಸಂಗಡ ಸುಂಮನೆ ಮಾತಾಡಿ, ಒಣಹರಟೆಗೆ ಯಾಕೆ ದಾರಿ ಬಿಡ ಬೇಕು, ಇಂಥಾ ಸತ್ತು ನಾರುವ ಅಂಗಗಳನ್ನು ಮಹಾರಾಜನ ಕತ್ತಿಯಿಂದ ಕಡದು ಬಿಡುವದೆ ಒಳ್ಳೆದು" ಎಂದು ಒದರುತ್ತಾ ಇದ್ದರು. ಮಹಾರಾಜನು ಸಹಾ, ರಾಜ್ಯಸಮಾಗಮದಲ್ಲಿ ಮಾಡುವ ಕಡೇ ಪ್ರಯತ್ನಗಳು ಸಸೂತ್ರವಾಗದಿದ್ದರೆ, ತಿರುಗಿ ಬೀಳುವವರನ್ನು ಒತ್ತಾಯದಿಂದ ಸಭೆಯ ಎದೆಗೆ ತಂದೊಪ್ಪಿಸುತ್ತೇನೆಂದು ಪೋಪನಿಗೆ ಪ್ರಮಾಣಪೂರ್ವಕವಾಗಿ ಮಾತು ಕೊಟ್ಟಿದ್ದನು; ಮಹಾರಾಜನ ಸಹೋದರನಾದ ಫರ್ದಿನಂದನು, ಆತನ ಉತ್ತರಾಧಿಕಾರಿಯಾಗಿ, ಜರ್ಮನಿ ಅರಸನಾಗಿದ್ದು, "ತಾನು ಭಿಕ್ಷೆ ಬೇಡುವ ಹಾಗಾದರೂ ಚಿಂತೆ ಇಲ್ಲಾ, ಈ ಲುಥರನ ಮತವನ್ನು ನಿರ್ಮೂಲ ಮಾಡುವ ವರೆಗೆ ಸಮ್ಮನಿರೆ" ಎಂದು ಹೇಳಿದ್ದನು; ಬ್ರಂದೆನ್‌ಬುರ್ಗಿನ ಆಯಿಕೆಯ ಅರಸನಾದ ಯೊವಖೀಮನು "ಸುವಾರ್ತಾಪಕ್ಷದವರ ಸಂಗಡ ಸಮಾಧಾನ ಮಾಡುವದಕ್ಕೆ ಒಪ್ಪುವದಕ್ಕಿಂತ, ಸೀಮೆಗೀಮೆ ಎಲ್ಲಾ ಕಳಕೊಳ್ಳುವದೆ ಲೇಸು," ಎಂದು ಸಾರಿ ಸಾರಿ ಹೇಳಿದ್ದನು. ಆದರೆ ಈಗ ಅದೆಲ್ಲಾ ಬಿಟ್ಟು, ಅದೇ ಜನರು ೧೫೩೨ನೆ ಜೂಲೈ ೨೩ಲ್ಲಿ ನೂರ್ನಬೆ

ರ್ಗಿನ ಮತದಾಪ್ಪಂದ ಮಾಡಿ, "ಬರುವ ಸಭಾಕಾರ್ಯದ ಸಮಾಗಮ ಕೂಡಿ ಬರುವ ವರೆಗೆ ರಾಜ್ಯದಲ್ಲಿ ನಿರಂತರವಾದ ಸಮಾಧಾನವು ಸರ್ವರಲ್ಲಿ ಇರ ಬೇಕೆಂದೂ, ವಿಶ್ವಾಸದ ಕಾರಣದಿಂದ ಪರಸ್ಪರ ಉಪದ್ರವ ಕೊಡದೆ, ಒಬ್ಬರು ಮತ್ತೊಬ್ಬರಿಗೆ ಒಳ್ಳೆ ಸ್ನೇಹಭಾವವನ್ನೂ ಕ್ರೈಸ್ತ ಪ್ರೀತಿಯನ್ನೂ ತೋರಿಸ ಬೇಕೆಂದೂ" ನಿಶ್ಚಯಿಸಿ ಬಿಟ್ಟರು.

ಹೀಗಿರಲಾಗಿ, ಸುವಾರ್ತಾಪಕ್ಷದವರು, ತುರ್ಕರಿಗೆ ಪ್ರತಿಯಾಗಿ ಅಪೇಕ್ಷಿಸಿದ ಸಹಾಯವನ್ನು ಮಹಾ ಸಂತೋಷದಿಂದ ಒದಗಿಸಿದರು. ಇಷ್ಟು ವರೆಗೆ ಗೊತ್ತಿಲ್ಲದ ತ್ವರ್ಯದಿಂದ ರಾಜ್ಯಸೈನ್ಯವು ಕೂಡಿ ಬಂತು; ಅದು ಸ್ಪನ್ಯ ಮುಂತಾದ ದೇಶಗಳಿಂದ ಬಂದ ಸಹಾಯ ಸೇನೆಗಳ ಸಂಗಡ ಕೂಡಿ ಕೊಂಡು, ಘನವಂತನೆಂಬ ಸುಲೇಮಾನನನ್ನು ಅವನ ಎಣಿಕೆ ಇಲ್ಲದ ದಂಡಿನೊಡನೆ ಸ್ವರಾಜ್ಯಕ್ಕೆ ಓಡಿಸಿ ಬಿಟ್ಟದ್ದಲ್ಲದೆ, ಔಸ್ತ್ರಿಯದೊಳಗೆ ನುಗ್ಗಿ ಬಂದ ದಳವನ್ನು ಪೂರ್ಣ ನೆಲಸಮ ಮಾಡಿ ಬಿಟ್ಟಿತು.

ನೂರ್ನಬೆರ್ಗಿನ ಮನೋಹರವಾದ ಸಮಾಧಾನ ಘಂಟಾನಾದದಿಂದ, ಸ್ಥಿರನೆಂಬ ಪ್ರತಿನಾಮಗೊಂಡ ಸಕ್ಸ ದೇಶದ ಆಯಿಕೆಯ ಅರಸನಾದ ಯೋಹಾನನು ೧೫೩೨ನೆ ಅಗೋಸ್ತು ೧೬ಲ್ಲಿ ವಿತ್ತೆನ್‌ಬೆರ್ಗಿನ ಹತ್ರ ಶ್ವೈನಿಚ್ಚ ಎಂಬಲ್ಲಿ ಅಕಸ್ಮಾತ್ತಾಗಿ ಸರಿ, ಆದರೂ ಭದ್ರವಾಗಿಯೂ, ನಿರ್ಭಯವಾಗಿಯೂ, ತಾನು ನಂಬಿ ಕೊಂಡಿದ್ದ ರಕ್ಷಕನಲ್ಲಿ ಸಮಾಧಾನದಲ್ಲಿಯೂ ವಿಶ್ವಾಸದಲ್ಲಿಯೂ ಆನಂದದಲ್ಲಿಯೂ ಅವಸಾನವಾದನು. ಅವನಂತೆಯೆ ಮನಸ್ಸೂ ಆತ್ಮವೂವುಳ್ಳ ಮಗನಾದ ಉದಾರಿ ಎಂಬ ಪ್ರತಿನಾಮಗೊಂಡ ಯೋಹಾನ ಫ್ರೇದರಿಕನು ಪಟ್ಟವೇರಿದನು.

ನೂರ್ನಬೆರ್ಗಿನ ಮತಸಮಾಧಾನವು ಆತ್ಮಿಕ ಆಯುಧಸಮಾಧಾನವೂ, ಸದ್ಯ ವಿಶ್ರಾಂತಿಯೂ ಆಗಿತ್ತಾದಾಗ್ಯೂ, ಸಮಾಧಾನ ಇರುವ ವರೆಗೆ ನಿರಂತರ ಎಂಬ ಮಾತನ್ನು ಹ್ಯಾಗೂ ಕೈ ಕೊಂಡರು. ಈ ಸಮಾಧಾನ ಬಹುಕಾಲ ಉಳಿದ ಕಾರಣ, ಸುವಾರ್ತಾಪಕ್ಷದ ಸಭೆಯು ಸಮಾಧಾನದಲ್ಲಿಯೆ ಕೆಲವು ವರ್ಷ ವರೆಗೆ ವೃದ್ಧಿ ಆಗುತ್ತಾ ಹೋಯಿತು.

ಹ್ಯಾಗಂದರೆ, ಬೇಗ ಕೂಡಿ ಬರುವದೆಂದು ಹೇಳಿದ ರಾಜ್ಯಸಮಾಗಮವು ಬಹುಕಾಲ ಬರಲೇ ಇಲ್ಲಾ; ಮಹಾರಾಜನು ಸಮಾಗಮವನ್ನು ಕರಿಸ ಬೇಕೆಂದು ಪೋಪನ ಹತ್ರ ಎಷ್ಟು ಬೇಡಿ ಕೊಂಡರೂ, ಈತನು ಅಲ್ಲಾಡಲಿಲ್ಲಾ. ಪೋಪನು ಸಮಾಗಮವನ್ನು ಕರಿಸದಿದ್ದರೆ, ಧರ್ಮಭೇದಗಳನ್ನು ವಿಚಾರಿಸಿ ತೀರಿಸುವದಕ್ಕೆ ಜರ್ಮನಿ ದೇಶದ ಕ್ರೈಸ್ತರ ಜನಾಂಗಸಭೆಯನ್ನು ತಾನೆ ಕರಿಸುತ್ತೇನೆಂತಾ ಮಹಾರಾಜನು ಎಷ್ಟು ಬೆದರಿಸಿದರೂ, ಪೋಪನು ಕರಿಸುತ್ತೇನೆ ಕರಿಸುತ್ತೇನೆ ಎಂತಾ ಹೇಳಿದನಲ್ಲದೆ, ಕಾರ್ಯ ನಡಿಸಲಿಲ್ಲಾ. ಪೋಪನು ಅದಕ್ಕೆ ಬಹಳ ಹೆದರಿದನು.

ಇದನ್ನು ಸಹಾ ದೇವರು ತಾನೆ, ತನ್ನ ಕೃಪೆಯನ್ನೂ ಆಡಳಿತೆಯನ್ನೂ ಮಹಿಮೆ ಪಡಿಸುವ ಬಗ್ಯೆ, ಮಾಡಿದನೆಂದೂ, ದೇವರು ತಾನೆ ಪುನಸ್ಥಾಪನೆಯ ಕಾರ್ಯಕ್ಕೆ ಅನುಗ್ರಹದಿಂದ ಒಲಿದು, ಪೋಪನಿಗೆ ಜಯದ ಹೃದಯವನ್ನು ಕೊಟ್ಟನೆಂದೂ ನೆನಸ ತಕ್ಕದ್ದು. ಯಾಕಂದರೆ ಪೋಪನು ತಾನೆ ಕರಿಸದೆ ಇದ್ದಾಗ್ಯೂ, ಯಾರು ಕರಿಸಿದರೂ, ಪಶ್ಚಿಮ ಕ್ರೈಸ್ತಸ್ಥಾನದ ಸಾಮಾನ್ಯ ಕ್ರೈಸ್ತ ಸಮಾಗಮದಿಂದ ಪುನಸ್ಥಾಪನೆಯ ಕಾರ್ಯಕ್ಕೆ ಏನು ಪ್ರಯೋಜನ ಬರುತ್ತಿತ್ತು? ಹೆಚ್ಚಾಗಿ ಅಧ್ಯಕ್ಷರು ಪೋಪವತ್ಸಲ ದೇಶಗಳಿಂದಲೆ ಬರುವ ಅಧ್ಯಕ್ಷರು, ಅಲ್ಲಿ ಕೂಡಿ ಬರುತ್ತಿದ್ದರು. ಒರ್ಮ್ಸಿನಲ್ಲಿಯೂ ಔಗ್ಸ್ಬುರ್ಗಿನಲ್ಲಿಯೂ ಮಾಡಿದ ಹಾಗೆಯೆ, ಅವರು ಈ ಸರ್ತಿ ಸಹಾ ಸುವಾರ್ತಾಕಾರ್ಯವನ್ನು ನಿಂದಿಸಿ, ನ್ಯಾಯಶೀರಿಸದೆ ಬಿಡುತ್ತಿದ್ದಾರೇ? ಇದಲ್ಲದೆ "ಈ ಘಳಿಗೆಯವರೆಗೆ ಸಮಾಗಮ ಕರಿಯ ಬೇಕು, ಸಮಾಗಮ ಕರಿಯ ಬೇಕು ಎಂತ ಹೇಳಿದರಲ್ಲಾ! ಹಾಗಾದರೆ ಈಗ ಅದರ ತೀರ್ಪಿಗೆ ಒಳಗಾಗಿ ವಿಧೇಯವಾಗ ಬೇಕು" ಎಂದು ಸುವಾರ್ತಾಪಕ್ಷದವರಿಗೆ ಹೇಳಲಿಕ್ಕೆ ರೋಮ ಪಕ್ಷದವರಿಗೆ ಒಳ್ಳೆ ಆಸ್ಪದವಾಗುತ್ತಿತ್ತು.

§ ೧೩.

# ಶ್ವೈಚ್ಚ ದೇಶದಲ್ಲಿಯೂ ಫ್ರೆಂಚ ದೇಶದಲ್ಲಿಯೂ ಆದ ಪುನಸ್ಥಾಪನೆ

ಜರ್ಮನಿ ದೇಶದ ಪುನಸ್ಥಾಪನೆಯ ಕಾರ್ಯವು ಸಮಾಧಾನದಲ್ಲಿ ನಡಿಯುತ್ತಿರುವ ಮಾತನ್ನು ಕೇಳಿದ ಮೇಲೆ, ಬೇರೆ ಕ್ರೈಸ್ತ ದೇಶಗಳಲ್ಲಿ ಹ್ಯಾಗೆ ನಡಿಯಿತೆಂತ ಸಹಾ ಕೇಳುವಾ.

ಜರ್ಮನಿ ದೇಶದ ಪುನಸ್ಥಾಪನೆಯ ಕಾಲದಲ್ಲಿಯೆ ಅದಕ್ಕೆ ಸಂಬಂಧವಾಗಿರದೆ, ಶ್ವೈಚ್ಚ ದೇಶದಲ್ಲಿ ಅದೇ ಪ್ರಕಾರ ಪುನಸ್ಥಾಪನೆಯ ಕಾರ್ಯವು ಆರಂಭವಾಯಿತು. ತೊಗ್ಗೆನ್‌ಬುರ್ಗ ಎಂಬ ತಾಲೂಕಿನಲ್ಲಿರುವ ವಿಲ್ದಹೌಸ್ ಎಂಬಲ್ಲಿ ೧೪೮೪ನೆ ಜನವರಿ ೧ಲ್ಲು ಹುಟ್ಟಿದ ಉಲ್ರಿಖ ಜ್ವಿಂಗ್ಲಿಯು ಅದರ ಕಾರಣವಾದನು. ಅವನ ತಂದೆ

ಅಲ್ಲಿ ಸುಬೆದಾರನಾಗಿದ್ದನು. ಜ್ವಿಂಗ್ಲಿಯು, ಈಗ ಶ್ವೈಚ್ಚ ದೇಶದಲ್ಲಿ ಮುಖ್ಯ ಪಟ್ಟಣ ವಾಗಿರುವ ಬೆರ್ನನಲ್ಲಿಯೂ, ಔಸ್ಟ್ರಿಯ ದೇಶದ ರಾಜಧಾನಿ ಆಗಿರುವ ವಿಯನ್ನದ ಲ್ಲಿಯೂ ವಿದ್ಯಾಭ್ಯಾಸ ಮಾಡಿ, ಮಾನುಷಬುದ್ಧಿಜ್ಞಾನಗಳಲ್ಲಿ ಸಂಪನ್ನನಾದ್ದಲ್ಲ ದೆ, ಲುಥರನ ಹಾಗೆಯೆ ದೇವವಾಕ್ಯದ ಗ್ರಂಥವನ್ನು ಕಂಡು, ಅದರಲ್ಲಿ ಬಹು ಆಸ ಕ್ತಿಯಿಂದ ಶೋಧನೆ ಮಾಡಿ, ಆತ್ಮಿಕವಾದ ಉತ್ತಮ ವಿದ್ಯೆಯನ್ನು ಸಹಾ ಕಲಿತನು. ಗ್ಲಾರ ಎಂಬ ಪಟ್ಟಣದಲ್ಲಿ ೧೫೦೬ನೆಯಿಂದ ಪ್ರಸಂಗಿಯಾಗಿದ್ದು, ತನಗಾದ ದೇವ ವಾಕ್ಯೋದಯದಿಂದ ಮೆಲ್ಲ ಮೆಲ್ಲಕ್ಕೆ ರೋಮಿಯ ಅಪವಿಶ್ವಾಸವನ್ನು ತಿಳುಕೊಂ ಡು, ಮತ್ತೆ ೧೫೧೬ನೆಯಿಂದ ಮರೀಯಳ ಆಶ್ರಮವೆಂಬಲ್ಲಿ ಸಭಾಬೋಧಕನಾಗಿ, ತಕ್ಕಷ್ಟು ಸುವಾರ್ತೆಗೆ ಅನುಸಾರವಾಗಿ ಪ್ರಸಂಗಿಸ ತೊಡಗಿದನು. ೧೫೧೮ರಲ್ಲಿ ಚು ರಿಖಿನಲ್ಲಿ ಸಭಾಬೋಧಕೋದ್ಯೋಗವನ್ನು ಹೊಂದಿ, ಅಲ್ಲಿರುವ ಮಹಾ ದೇವಾಲಯ ದಲ್ಲಿ ಹೊಸ ಒಡಂಬಡಿಕೆಯನ್ನೆಲ್ಲಾ ಆರಂಭದಿಂದ ಕಡೆ ವರೆಗೆ ಪ್ರಸಂಗಗಳಿಂದ ವಿವ ರಿಸಿದನು. ಅಧಿಕಾರಸ್ಥರೂ ಜನರೂ ಎಲ್ಲರೂ ಅವನ ಬೋಧನೆಗೆ ಮನ ಒಪ್ಪಿದರು.

ಹೀಗಿದ್ದರೂ, ಶ್ವೈಚ್ಚ ಪುನಸ್ಸ್ಥಾಪನೆಯ ನಿಜವಾದ ಆರಂಭವು ೧೫೧೯ರಲ್ಲಿ ಆಯಿತು. ಈ ಪ್ರಕಾರ ಜರ್ಮನಿಯಲ್ಲಿಯೂ ಶ್ವೈಚ್ಚದಲ್ಲಿಯೂ ಒಂದೆ ವರ್ಷದಲ್ಲಿ ಈ ದಿವ್ಯ ಕಾರ್ಯಕ್ಕೆ ಆರಂಭವಾಯಿತೆಂತ ಹೇಳ ಬಹುದು. ಹ್ಯಾಗಂದರೆ, ಬೆರ್ನ ಹರ್ದ ಸಮ್ಸನನೆಂಬ ಬರಿಯಡಿ ಬೈರಾಗಿ ಒಬ್ಬನು, ತೆಚ್ಚ್ಲನ ಹಾಗೆಯೆ, ಪಾಪಪರಿ ಹಾರದ ಚೀಟುಗಳನ್ನು ತಕ್ಕೊಂಡು, ಚುರಿಖ ಸೀಮೆಯಲ್ಲಿ ತಿರುಗಾಡಿ, ಅವನಂತೆಯೆ ನಿರ್ಲಜ್ಜೆಯಿಂದ ಮಾರುತ್ತಾ ಇದ್ದನು. ಇವನ ಪಾಪಕಂದಾಯವು ಹ್ಯಾಗೂ ತೆಚ್ಚ ಲನದರಷ್ಟು ಕ್ರಯದಲ್ಲಿ ಪ್ರಿಯವಾಗಿರಲಿಲ್ಲ. ಈ ಅನರ್ಥಕ್ಕೆ ಎದುರಾಗಿ ಜ್ವಿಂಗ್ಲಿಯು ಲುಥರನ ಹಾಗೆಯೆ ಮಹಾ ಆಸಕ್ತಿಯಿಂದ ಕೋಪಿಸಿ, ಆಲೋಚಿಸಿ, ಶೋಧಿಸುತ್ತಿ ರುವಾಗ್ಯೆ, ಆ ಕಾಲದಲ್ಲಿ ಪ್ರಬಲವಾಗಿದ್ದ ಸಭೆಯ ದುರವಸ್ಥೆಯು ಹೆಚ್ಚು ಹೆಚ್ಚಾಗಿ ಪ್ರತ್ಯಕ್ಷವಾಗಲು, ಪ್ರಸಂಗಗಳಿಂದಲೂ ಪುಸ್ತಕಗಳಿಂದಲೂ ಅದನ್ನು ಚನ್ನಾಗಿ ಖಂಡಿ ಸಿದನು. ಪೋಪನ ಕಡೆಯವರು ಘೋಳಿಟ್ಟರು. ಆದರೆ, ಅವನಿದ್ದ ಸ್ವತಂತ್ರವಾದ ಸಂ ಸ್ಥಾನವು ಅವನನ್ನು ಕಾಪಾಡಿತು. ಅಧಿಕಾರಿಗಳ ಅಪ್ಪಣೆ ಅನುಜ್ಞೆಗಳಿಂದ ಉಭಯ ಪಕ್ಷದವರಿಗೂ, ಮುಖ್ಯವಾಗಿ ಜ್ವಿಂಗ್ಲಿಗೂ ಅಧ್ಯಕ್ಷನ ಮಹಾ ಪ್ರತಿನಿಧಿಯಾದ ಕಾ ನ್ಸ್ಟನ್ಸಿನ ಯೋಹಾನ ಫಾಬರನಿಗೂ, ೧೫೨೩ರಲ್ಲಿ ಪ್ರಖ್ಯಾತಿ ಪಟ್ಟ ಧರ್ಮಸಂವಾ ದವು ಆಯಿತು. ಇದರ ಫಲವೇನಾಯಿತಂದರೆ, ಅಧಿಕಾರಿಗಳು ಸಮಸ್ತ ಸಭಾಬೋ ಧಕರಿಗೆ ದೇವರ ವಾಕ್ಯವನ್ನು ನಿರ್ಮಲವಾಗಿ, ದೇವರ ವಾಕ್ಯಕ್ಕೆ ಅನುಸಾರವಾಗಿ

ಉಪದೇಶಿಸ ಬೇಕೆಂದು ಅಪ್ಪಣೆ ಕೊಟ್ಟರು, ಮತ್ತು ಸ್ವಲ್ಪ ಕಾಲದ ಮೇಲೆ ಮೀಸನ್ನೂ ಪ್ರತಿಮೆಗಳನ್ನೂ ವಿಸರ್ಜಿಸಿ ಬಿಟ್ಟರು.

ಚುರಿಖಿಗೆ ಹತ್ತಿ ಬಾಸೆಲ್‌ಪಟ್ಟಣ ಬಂತು. ಅಲ್ಲಿ ವಿದ್ವಾಂಸನಾದ ಐಕೊಲಂಪಾದ್ಯನು ಸಭೆಯ ತಿದ್ದುಪಾಟಿಯನ್ನು ಆಸಕ್ತಿಯಿಂದ ನಡಿಸಿದನು. ಬೆರ್ನ್, ಶಾಫ್‌ಹೌಸೆನ್ ಎಂಬ ತಾಲೂಕುಗಳು ಸಹಾ ಬೆಂಸಟ್ಟಿ ಬಂದವು. ಈ ಪ್ರಕಾರ ಜರ್ಮನ್ ಭಾಷೆ ನಡಿಯುವ ಶ್ವೈಚಿನಲ್ಲಿ ಪುನಸ್ಥಾಪನೆ ಆರಂಭವಾಯಿತು.

ಆದಾಗ್ಯೂ, ಬೇರೆ ತಾಲೂಕುಗಳು, ಮುಖ್ಯವಾಗಿ ಶ್ವಿಚ್ಚ, ಊರಿ, ಉತರ್‌ವಲ್ಡೆನ್ ಎಂಬ ಮೂಲತಾಲೂಕುಗಳು ರೋಮಿಾಯ ಸಭೆಗೆ ಅಂಟಿ ಕೊಂಡಿರಲಾಗಿ, ಉಭಯ ಪಕ್ಷದವರಿಗೆ ಯುದ್ಧವಾಯಿತು. ರೋಮಿಾಯ ಪಕ್ಷದವರು ಚುರಿಖ ಸೀಮೆಯಲ್ಲಿ, ಅಲ್ಲಿಯವರು ಸಿದ್ಧವಾಗುವಷ್ಟರೊಳಗೆ ಬಂದು ಬಿದ್ದರು. ಬೇಗ ಕೂಡಿ ಬಂದ ಒಂದು ತಂಡು ಚ್ವಿಂಗ್ಲಿಯನ್ನು ಸಹಾ ತಕ್ಕೊಂಡು, ಅವರಿಗೆದುರಾಗಿ ಹೋದರು. ೧೫೩೧ನೇ ಅಕ್ಟೋಬರ ೧೧ಲ್ಲು ಕಪ್ಪೆಲ್ ಎಂಬಲ್ಲಿ ಆದ ರಣದಲ್ಲಿ ಸುವಾರ್ತಾಪಕ್ಷದವರು ಗಲಿಬಿಲಿಯಾಗಿ ಪಲಾಯನ ಮಾಡಿದರು. ಚ್ವಿಂಗ್ಲಿ ಮಾತ್ರವೆ ಬೇರೆ ಕೆಲವರ ಸಹಿತವಾಗಿ ಮೆಟ್ಟಿದ್ದಲ್ಲಿ ನಿಂತನು. ರಣದಲ್ಲಿ ಘಾಯವಾಗಿ ನೆಲಕ್ಕೆ ಬಿದ್ದಾಗ, ಶತ್ರುಗಳ ರಾಣುವೆಯವನೊಬ್ಬನು ಪರಿಶುದ್ಧ ಕನ್ನಿಕೆಯಾದ ಮರೀಯಳನ್ನು ಆರಾಧಿಸ ಬೇಕೆಂದು ಹೇಳಲಾಗಿ, ಅವನು ಆ ಪ್ರಕಾರ ಮಾಡದಿರುವವರಿಂದ, ಕುತ್ತಿಗೆ ಇರಿದು ಕೊಂದನು.

ಆದರೂ ಈ ಅಪಜಯದಿಂದ ಸಹಾ ಸುವಾರ್ತಾಕಾರ್ಯಕ್ಕೆ ಅಳಿವು ಬರಲಿಲ್ಲಾ. ರೋಮಿಾಯ ಜನರ ತಾಲೂಕುಗಳು ಅದೇ ೧೫೩೧ಲ್ಲಿಯೆ ಸುವಾರ್ತಾಪಕ್ಷದವರ ಸಂಗಡ ಸಂಧಾನ ಮಾಡಿ, ತಮ್ಮ ಹಾಗೆಯೆ ಅವರನ್ನು ಸಹಾ ಇರಗೊಡಿಸಿದರು. ಚ್ವಿಂಗ್ಲಿಯ ಪರಿಮುಖವಾಗಿ ಆರಂಭವಾದ ಸಂಸರ್ಗಕ್ಕೆ ಪುನರೂಪಿತ ಸಭೆ ಎಂಬ ಹೆಸರಾಯಿತು.

ಲುಥರನ ಗ್ರಂಥಗಳು ಜರ್ಮನಿ ದೇಶದಿಂದ ಹಾರಿಸಿ ತಂದ ಸುವಾರ್ತೆಯ ಬೀಜವು ಫ್ರೆಂಚ ದೇಶದಲ್ಲಿ ಮುಂಚೆಯೆ ಮೊಳೆತು ಇತ್ತು. ಹೀಗಿರಲಾಗಿ ಲುಥರನು ಪರಿಸು ರಾಜಧಾನಿಯಲ್ಲಿರುವ ಸರ್ವಶಾಲೆಯ ಸೊರ್‌ಬೊನ್ ಎಂಬ ಪ್ರಖ್ಯಾತಿ ಪಟ್ಟ ದೇವವಿದ್ಯಾಪಂಡಿತರ ಸಂಘದ ವಿಷಯದಲ್ಲಿ ಮೆಚ್ಚಿಗೆಯಾಗಿದ್ದನು, ಆದರೆ ಅವನು ನೆನಸಿದ್ದು ತಪ್ಪಾಗಿತ್ತೆಂತ ಮತ್ತೆ ಕಂಡು ಬಂತು. ಹ್ಯಾಗಂದರೆ, ಈ ಸೊರ್‌ಬೊನ್ ಎಂಬವರು ೧೫೨೧ಲ್ಲು ಅವನ ಗ್ರಂಥಗಳನ್ನು ಸುಟ್ಟು ಬಿಟ್ಟರು. ಆದರೂ ಆ ವರ್ಷದೊಳಗೆಯೆ ಮೋ ಎಂಬ ಸುತ್ತಲೂ ಲುಥರೀಯ ಸಭೆಯು ಉಂಟಾಗಿ, ಆತ್ಮ

ಪ್ರಕಾಶವೂ ಶಕ್ತಿಯೂ ಉಳ್ಳ ವಿಲ್ಹೆಲ್ಮ್ ಬ್ರೀಶಾನ್ ಎಂಬ ಅಧ್ಯಕ್ಷನ ಆಶ್ರಯದಿಂದ ಸಮಾಧಾನದಲ್ಲಿಯೂ ಮನೋಹರವಾಗಿಯೂ ಬೆಳೆಯಿತು. ಈ ಸಭೆಯು ಫ್ರೆಂಚ ಲುಥರೀಯ ಸಭೆಯ ಮೂಲಸಭೆಯಾಗಿದ್ದು ಇಂದಿನ ವರೆಗೂ ಬಾಳುತ್ತದೆ.

ಆದರೂ ಶ್ವೈಚ್ಚ ದೇಶದಿಂದ ಈಚೆಗೆ ಬಂದ ಪುನರೂಪಿತ ಸಭೆಯು ಲುಥರೀಯ ಸಭೆಗಿಂತ ಅಧಿಕವಾಗಿ ಹಬ್ಬಿತು. ಅದರ ಸ್ಥಾಪಕನು ಕಪ್ಪೆಲಿನ ರಕ್ತಾಂಗಣದಲ್ಲಿ ಘಾಯವಾದ ಕೊರಳಿನಿಂದ ಕಡೇ ಸರ್ತಿ ಉಸುರು ಬಿಟ್ಟ ಸಮಯದಲ್ಲಿಯೆ ಬುರ್ಗೆಯ ಸುತ್ತಲಿರುವ ಸೀಮೆಯಲ್ಲಿ ಆಗ್ಯೆ ಇಪ್ಪತ್ತೆರಡೇ ವರ್ಷ ಪ್ರಾಯವುಳ್ಳವನಾಗಿ, ಜ್ವಿಂಗ್ಲಿಯನ್ನು ಅನುಸರಿಸಿ, ಅವನಿಗಿಂತ ಅಧಿಕನಾದ ಯೌವನಸ್ಥನೊಬ್ಬನು ತನಗೆ ದೇವರ ವಾಕ್ಯದಿಂದ ಉದಯವಾದ್ದನ್ನು ಪರಿಶುದ್ಧ ಆಸಕ್ತಿಯಿಂದ ಪ್ರಸಂಗಿಸುತ್ತಾ, ಸಭೆಯನ್ನು ತಿದ್ದುತ್ತಾ ಇದ್ದನು.

ಈ ಮನುಷ್ಯನ ಹೆಸರು ಯೋಹಾನ ಕಲ್ವೀನನು. ಅವನು ೧೫೦೯ರಲ್ಲಿ ಫ್ರೆಂಚ ದೇಶದ ನೊಯಾಂ ಎಂಬಲ್ಲಿ ಹುಟ್ಟಿದನು. ಅಸಾಧಾರಣವಾದ ಬುದ್ಧಿಬಲವುಳ್ಳವನಾಗಿಯೂ, ಅಗಾಧ ಶಕ್ತಿಯುಳ್ಳವನಾಗಿಯೂ, ಶುದ್ಧ ಆಸಕ್ತಿಯುಳ್ಳವನಾಗಿಯೂ ಇದ್ದು, ಶಾಲೆಯಲ್ಲಿ ಕಲಿಯುತ್ತಿರುವ ಹುಡುಗನಾಗಿರುವಾಗಲೆ ಸಹಶಿಷ್ಯರ ದುರ್ಗುಣಗಳನ್ನು ನೋಡಿದರೆ, ಗಂಭೀರ ಮನಸ್ಸಿನಿಂದ ಗದರಿಸುವನು. ಅವನು ಪರಿಸ ಪಟ್ಟಣದಲ್ಲಿ ಪರಮಾರ್ಥವನ್ನು ಅಭ್ಯಾಸ ಮಾಡಿ, ಸಾಹಸದಿಂದಲೂ, ವಿದ್ಯಾವೃದ್ಧಿಪ್ರವರ್ತನದಿಂದಲೂ ಬಹಳ ಬೇಗನೆ ಕೀರ್ತಿಗೊಂಡಿರಲಾಗಿ, ೧೮ನೆ ವರ್ಷ ಪ್ರಾಯದಲ್ಲಿಯೆ ಪೋಂಲೆವೆಕ್ ಎಂಬಲ್ಲಿ ಸಭೆಯ ಬೋಧಕೋದ್ಯೋಗ ಹೊಂದಿದನು. ಇಲ್ಲಿರುವಾಗ್ಯೆ, ಜರ್ಮನ ಮತ್ತು ಶ್ವೈಚ ಪುನಸ್ಥಾಪಕರ ಗ್ರಂಥಗಳನ್ನೂ, ಅವರ ಬುದ್ಧಿವಂತಿಕೆಯಿಂದ ಸತ್ಯವೇದವನ್ನೂ ಓದಿ ಕೊಂಡಿದ್ದಲ್ಲಿ, ರೋಮಿಯ ಬೋಧನೆಯು ಸಮವೊ ಸಮವಲ್ಲವೊ ಅಂತಾ ಸಂಶಯ ಪಡ ತೊಡಗಿ, ಸಂಶಯಗಳನ್ನು ಖಂಡಿಸ ಎಷ್ಟು ನೋಡಿದರೂ ಆಗದೆ ಹೋಗಲಾಗಿ, ರೋಮಿಯರ ಪ್ರಕಾರ ಹೃದಯದಲ್ಲಿ ನಂಬಲಾರದೆ ಇದ್ದ ಕಾರಣ, ಪರಮಾರ್ಥದ ಬೋಧಕೋದ್ಯೋಗವನ್ನು ತಾನಾಗಿ ಬಿಟ್ಟನು. ಮತ್ತೆ ಒರ್ಲೆಯಂ ಎಂಬಲ್ಲಿರುವ ಸರ್ವಶಾಲೆಗೆ ನಡದು, ಅವನಿಗೆ ಸಹಜವಾಗಿದ್ದ, ಎಲ್ಲಾ ಅಟಕ ಮುರಿದು ಮುಂದರಿಸುವ ಸಾಹಸದಿಂದ ನ್ಯಾಯವಿದ್ಯೆಯನ್ನು ಕಲಿಯ ತೊಡಗಿ, ಬಹು ಬೇಗ ಈ ವಿದ್ಯೆಯಲ್ಲಿ ಸಹಾ ಮಹಾ ಪರಿಶ್ರಮವುಳ್ಳವನಾದಾಗ, ಅವನಿಗೆ ಪಂಡಿತನಾಮವನ್ನು ಇಡ ಬೇಕೆಂದಿದ್ದರು; ಆದರೆ ಮನುಷ್ಯರ ಬಿರುದುಗಳೂ ಘನಗಳೂ ಅವನನ್ನು ಮೆಚ್ಚಿಸದೆ ಇರುವದರಿಂದ, ಅವನು ಆ ಮಾತಿಗೆ ಒಪ್ಪಲಿಲ್ಲಾ. ಒರ್ಲೆಯನಿನಿಂದ ಬುರ್ಗೆಗೆ ಹೋಗಿ, ಅಂತರಂಗದಲ್ಲಿ ನ್ಯಾಯವಿದ್ಯೆಯಿಂದಲೂ

ಸಂತುಷ್ಟಿ ಪಡದವನಾಗಿ, ಪೂರ್ಣ ಮನಸ್ಸಿನಿಂದ ಹಳೆ ಭಾಷೆಗಳ ಅಭ್ಯಾಸ ಮಾಡುತ್ತಾ, ಇವುಗಳಲ್ಲಿ ಚಂನಾಗಿ ವಿತ್ಪತ್ತಿ ಬಂದ ಮೇಲೆ, ದೇವರ ವಾಕ್ಯವನ್ನು ಮೂಲಭಾಷೆಯಲ್ಲಿ ಶೋಧಿಸ ತೊಡಗಿದನು. ದಿನ ಹೋಗುತ್ತಾ, ದಿವ್ಯ ಸತ್ಯದ ಬೆಳಕಿನಲ್ಲಿ ಅವನ ಆತ್ಮದ ಕಂಣುಗಳು ಪ್ರಕಾಶವಾಗಲು, ತಾನು ಗ್ರಹಿಸಿದ ಸತ್ಯವಾದ ಧರ್ಮದ ತಿಳುವಿಕೆಯನ್ನು ಕ್ರೈಸ್ತರೆಲ್ಲರಿಗೆ ತಿಳಿಸ ಬೇಕೆಂಬ ಅಪೇಕ್ಷೆಯು ಅವನಲ್ಲಿ ಕಡು ಪ್ರಬಲವಾಯಿತು. ಇಂಥಾ ಅಪೇಕ್ಷೆಯಿಂದ ತುಂಬಿದವನಾಗಿ, ಸಭಾಲಯ ಪೀಠಗಳ ಗೊಡವೆ ಇಲ್ಲದೆ, ಬೈಲು ಮೈದಾನುಗಳಲ್ಲಿ ನಿಂತು, ಉರಿಯುವ ಆಸಕ್ತಿಯಿಂದ ಪ್ರಸಂಗಿಸಿದ್ದಲ್ಲಿ, ಕೇಳಿದವರೆಲ್ಲಾ ವಿಸ್ಮಯ ಪಟ್ಟು, ಅವನ ಮಾತುಗಳಿಗೆ ಪೂರ್ಣವಾಗಿ ಒಡಂಬಟ್ಟರು.

೧೫೩೩ಲ್ಲಿ ಅವನು ಪರಿಸಿಗೆ ತಿರಿಗಿ ಹೋಗಿ, ಅಲ್ಲಿರುವ ಪುನರೂಪಿತ ಸಭೆಯವರನ್ನು ಕೂಡಿಕೊಂಡು, ಬುದ್ಧಿಚಾತುರ್ಯವೂ ಆತ್ಮಬಲವೂ ಉಳ್ಳ ಪ್ರಬಂಧಗಳಿಂದಲೂ ಪ್ರಸಂಗಗಳಿಂದಲೂ ಅವರನ್ನು ಎಚ್ಚರಿಸುತ್ತಾ, ಬಲಪಡಿಸುತ್ತಾ, ಸ್ಥಿರಪಡಿಸುತ್ತಾ ಇದ್ದು, ಅತಿ ಚೊಕ್ಕವಾದ ಗ್ರಂಥಗಳಿಂದ ದೂರಕ್ಕೂ ಸುವಾರ್ತೆಯ ಕಾರ್ಯವನ್ನು ನಡಿಸುತ್ತಾ, ಅಷ್ಟು ವರೆಗೂ ಯೌವನಪ್ರಾಯದವನೆ ಆಗಿದ್ದಾಗ್ಯೂ, ಫ್ರೆಂಚ ದೇಶದಲ್ಲಿ ಪುನಃಸ್ಥಾಪನೆಯ ಮುಖ್ಯ ಸ್ತಂಭವಾದನು.

ಆದರೆ ಬೇಗನೆ ರೋಮಿಯರ ಕಾಟ ತಾಳಲಾರದೆ, ಪರಿಸು ಪಟ್ಟಣವನ್ನು ಬಿಟ್ಟು ಹೋಗ ಬೇಕಾಯಿತು. ೧೫೩೬ಲ್ಲಿ ಅವನು ಫ್ರೆಂಚ ಭಾಷೆ ಆಡುವ ಸ್ವೈಚ ಸೀಮೆಯಲ್ಲಿರುವ ಗೆನ್ವಿಗೆ ಬಂದು ವಾಸ ಮಾಡಿದನು. ಇದೇ ಮತ್ತೆ ಅವನ ಮಹಾ ಪ್ರವೃತ್ತಿಯ ಮುಖ್ಯ ಸ್ಥಾನವಾಯಿತು. ಅವನು ಅಲ್ಲಿಗೆ ಬರುವ ಮುಂಚೆಯೆ, ಆಸಕ್ತ ಪ್ರಸಂಗಿಯಾದ ಫಾರೆಲ್ ಎಂಬವನು ಸುವಾರ್ತೆಯ ಮರೆಯಾಗಿದ್ದ ಬೋಧನೆಯನ್ನು ಪ್ರಸಂಗಿಸಿ, ಜನರ ಮನಸ್ಸು ದುಡಿದು ಕೊಂಡಿದ್ದನು. ಹೀಗಿರಲಾಗಿ, ಕಲ್ವೀನನು ಪ್ರಸಂಗಿಸಿದ ಮೊದಲನೆ ಸರ್ತಿಯೆ, ಜನರು ಅವನಲ್ಲಿ ಪ್ರೀತಿ ಬೆರಗಾದರು; ಅವರು ಅವನ ಮನೆಯನ್ನು ಸುತ್ತಿಕೊಂಡು, ಆ ಊರು ಬಿಟ್ಟು ಎಂದಿಗೂ ಹೋಗ ಬಾರದೆಂದು ಧಿಟವಾಗಿ ಪಂಥ ಕಟ್ಟಿ ಕೊಂಡರು. ಮತ್ತೆ ಅಲ್ಲಿರುವ ಬೋಧಕರಲ್ಲಿ ನಾಯಕನಾಗಿ, ಅತ್ಯಾಶ್ಚರ್ಯ ರೀತಿಯಿಂದ ಸುವಾರ್ತಾ ಕಾರ್ಯವಂನು ನಡಿಸಿದನು.

ಕಲ್ವೀನನು ಶಿಲೆಯಂತೆ ಸ್ಥಿರವಾದ ಮನುಷ್ಯನಾಗಿದ್ದನು. ಏನಾದರೂ ಸಮವೆಂತಲೂ ಒಳ್ಳೆದೆಂತಲೂ ತಿಳುಕೊಂಡರೆ, ಅದನ್ನು ಹ್ಯಾಗಾದರೂ ನಡಿಸದೆ ಬಿಡಾ,

ಆಗ್ಯೆ ಯಾರ ದಾಕ್ಷಿಣ್ಯವಾದರೂ ಅವನಿಗೆ ಇರಲಿಲ್ಲಾ. ಹೀಗಾಗಿ, ಅನೇಕರ ಸಂಗಡ ವಿರುದ್ಧ ಕಟ್ಟಿಕೊಂಡು, ಕಡೆಯಲ್ಲಿ ಪಟ್ಟಣದ ಅಧಿಕಾರಿಗಳ ಸಂಗಡ ಸಹಾ ತರ್ಕವಾಗಲಾಗಿ, ಅವರು ಎರಡು ವರ್ಷದ ಮೇಲೆ ಅವನನ್ನು ಗಡಿ ದಾಟಿಸಿ ಬಿಟ್ಟರು.

ಇದರಿಂದ ಅವನಿಗೆ ಅತಿರೇಕ ದುಃಖವಾಗಲಿಲ್ಲಾ. ಧೈರ್ಯ ಮುಖದಿಂದ ಸ್ಟ್ರಾಸ್‌ಬುರ್ಗಿಗೆ ಹೋಗಿ, ಅಲ್ಲಿ ಫ್ರೆಂಚ ಭಾಷೆಯವರ ಸಭಾಬೋಧಕನಾದ್ದಲ್ಲದೆ, ಸರ್ವಶಾಲೆಯಲ್ಲಿ ದೇವವಿದ್ಯೆಯ ಶಾಸ್ತ್ರಿಯ ಉದ್ಯೋಗ ಸಹಾ ಹೊಂದಿದನು. ಅಷ್ಟರೊಳಗೆ ಗೆನ್ವಿನವರು ಅವನಿಗೋಸ್ಕರ ಗೋಳಾಡಿ, ಒದರಿ, ಕೂಗಿ, ಅವನನ್ನು ತಿರಿಗಿ ಕರಿಸ ಬೇಕೆಂದು ಒತ್ತಿದಾಗ, ಪಟ್ಟಣದ ಅಧಿಕಾರಿಗಳು ವಿನಯದಿಂದ ಅವನಿಗೆ ಒಂದು ಕಾಗದ ಬರದು, ಗೆನ್ವಿಗೆ ತಿರಿಗಿ ಬರುವ ಹಾಗೆ ಉಪಕಾರ ಮಾಡ ಬೇಕೆಂದು ಬೇಡಿ ಕೊಂಡು, ಅವನ ಚಿತ್ತಕ್ಕೆ ಇನ್ನೂ ಮುಂದೆ ಎದುರ್ನಿಲ್ಲೆವು ಎಂದು ಮಾತು ಸಹಾ ಕೊಟ್ಟರು.

ಕಲ್ವೀನನು ತಿರಿಗಿ ಗೆನ್ವಿಗೆ ಬಂದು, ಅಘೋರ ಸಾಹಸ ಕಾರ್ಯವನ್ನು ಆರಂಭಿಸಿದನು. ಸಭೆಯ ಬೋಧನೆಯು ಶುದ್ಧವಾದರೆ ಸಾಲದು, ಅದಕ್ಕೆ ಸರಿ ಬೀಳುವ ನಡತೆ ಸಹಾ ಅವಶ್ಯವೆಂಬದು ಅವನಿಗೆ ಹೃತ್ಸ್ವಚಿತವಾಗಿರುವದರಿಂದ, ತನ್ನಿಂದಾಗುವಷ್ಟು ಈ ವಿಷಯದಲ್ಲಿ ಪ್ರಯತ್ನ ಮಾಡಿದನು. ಅದಕ್ಕೋಸ್ಕರ ಬಿಗಿಯಾದ ಸಭೆಯ ಕಟ್ಟು ಮಾಡಿ, ದೊಡ್ಡವರಾಗಲಿ ಬಡವರಾಗಲಿ, ಯಾರಾದರೂ ದೇವರ ಕಟ್ಟಳೆಗಳನ್ನು ಪ್ರಕಟವಾಗಿ ಮೀರಿ ಪಾಪಗಳನ್ನು ಮಾಡಿದರೆ, ಅಂಥವರು ಕಠಿಣವಾದ ಪ್ರಾಯಶ್ಚಿತ್ತ ಮಾಡ ಬೇಕೆಂದು ನಿಶ್ಚಯಿಸಿದನು. ಈ ಪ್ರಕಾರ ಬಹಿರಂಗದಲ್ಲಿಯಾದರೂ, ಕ್ರೈಸ್ತ ಸಭೆಯ ಮೂಲಕಾಲದಿಂದ ಅಂದಿನ ವರೆಗೂ ಕಾಣದಂಥಾ, ಕ್ರಮವಾದ ಗಂಭೀರವಾದ ಕ್ರೈಸ್ತ ನಡತೆಯು ಗೆನ್ವಿನಲ್ಲಿ ಉಂಟಾಯಿತು.

ಆತನು ಯಥಾರ್ಥ ಮನಸಿನಿಂದ, ದೇವರ ಮಹಿಮೆಯ ಮೇಲೆಯೂ, ಮನುಷ್ಯರ ರಕ್ಷಣೆಯ ಮೇಲೆಯೂ ದೃಷ್ಟಿ ಇಟ್ಟು, ಕೆಲಸವನ್ನು ನಡಿಸುತ್ತಾನೆಂತ ನೋಡಿ, ತಾನು ನಿರಪರಾಧವಾಗಿ, ಸಮಸ್ತರಿಗೆ ಮಾದರಿಯಾಗ ತಕ್ಕ ಪ್ರಕಾರ ಜೀವನ ನಡಿಸಿದನೆಂದು ತಿಳಿದು, ಎಲ್ಲರೂ ಅವನ ಕಠಿಣ ಕ್ರಮಕ್ಕೆ ಒಳಗಾದರು. ಆದಾಗ್ಯೂ ಸಭೆಯ ಕ್ರಮಗಳನ್ನು ನಡಿಸಲಿಕ್ಕೆ ಹೋಗಿ, ನಾಗರಿಕರ ಕಾರ್ಯಗಳಲ್ಲಿ ಸಹಾ ತನ್ನ ಕೈ ಹಾಕಿದನೆಂಬದನ್ನು ಪೂರ್ಣವಾಗಿ ಅಲ್ಲಗಳೆಯಲಿಕ್ಕೆ ಆಗುವದಿಲ್ಲಾ. ೫೫ ವರ್ಷ ಪ್ರಾಯದಲ್ಲಿ ಆತನು ವಿಶ್ವಾಸ ಧೈರ್ಯದಲ್ಲಿ ತೀರಿ ಹೋದನು.

ಗೆನ್ವಿನಿಂದಲೇ ಕಲ್ವೀನನು ಗ್ರಂಥಗಳಿಂದಲೂ, ವಿಶ್ವಾಸವನ್ನು ಸಾರುವದರಿಂದಲೂ ಫ್ರೆಂಚ ದೇಶದ ಪುನರೂಪಿತ ಸಭೆಯನ್ನು ವಿಸ್ತರಿಸುವದಕ್ಕೆ ಬಹಳ ಬಹಳ

ಸಹಾಯ ಮಾಡಿದನು. ಅವನ ಬೋಧನೆಗೂ ಜ್ವಿಂಗ್ಲಿಯ ಬೋಧನೆಗೂ ಸ್ವಲ್ಪ ಮಾತ್ರವೇ ಹೆಚ್ಚು ಕಡಿಮೆ ಅದೆ. ಅವನಿಂದಲೇ ಶ್ವೈಚ ದೇಶದ ಫ್ರೆಂಚ ಮಾತಾಡುವ ಪುನರೂಪಿತ ಸಭೆಯವರೂ, ಜರ್ಮನಿಯ ಹೆಚ್ಚಾದ ಪುನರೂಪಿತ ಸಭೆಯವರೂ ತಮ್ಮ ಬೋಧನೆಯ ಗ್ರಹಿಕೆಯನ್ನು ತಕ್ಕೊಂಡರು.

ಇಲ್ಲಿಂದ ನಾವು ಸ್ವಲ್ಪ ಹೊತ್ತು ಆಚೆಗೆ, ಅಂದರೆ, ವಿಲಾಯತಿ ಖಂಡದಿಂದ ದಾಟಿ ಹೋಗ ಬೇಕಾಗಿರುವ ಸಮುದ್ರಕಂಠದ ಆಚೇ ಕಡೆಯಲ್ಲಿರುವ ಇಂಗ್ಲಿಷು ದೇಶದಲ್ಲಿ ಏನು ನಡಿಯಿತೆಂತ ಸಂಕ್ಷೇಪವಾಗಿ ವಿಚಾರಿಸುವಾ. ಅಲ್ಲಿಗೂ ವಿತ್ತೆನ್‌ಬೆರ್ಗಿನಿಂದ ದೇವರ ಸುವಾರ್ತೆಯ ಬೆಳಕು ಬಂದು ಮುಟ್ಟಿತು. ಆದಾಗ್ಯೂ ಅದು ಕೆಲವರಲ್ಲಿ ಮಾತ್ರವೇ ಉರಿಯಿತು, ಇದಲ್ಲದೆ, ಅಲ್ಲಿಲ್ಲಿ ಮರಣಶಿಕ್ಷೆಯಿಂದ ಅದನ್ನು ಸರ್ಕಾರದವರು ಅಣಗಿಸಿ ಇದ್ದರು. ಅರಸನಾದ ಎಂಟನೆ ಹೆನ್ರಿಯು ಪುನಃಸ್ಥಾಪನೆಯ ಕಾರ್ಯವನ್ನು ಆರಂಭಿಸಿದವನು. ಈತನು ಸುಗುಣವುಳ್ಳ ಮನುಷ್ಯನಾಗಿರದೆ, ತನ್ನ ದೇಶವನ್ನು ಪೋಪನ ಅಧಿಕಾರದಿಂದ ತಪ್ಪಿಸ ಬೇಕೆಂಬ ಸ್ವಾರ್ಥದಿಂದ ಈ ಕೆಲಸ ಮಾಡಿದನು. ಹ್ಯಾಗಂದರೆ, ಅವನು ತನ್ನ ಹೆಂಡತಿ ಕಥರೀನೆಯಿಂದ ವಿವಾಹಬಂಧ ಕಡದು, ತನಗೆ ಪ್ರಿಯಳಾಗಿದ್ದ ಅನ್ನಬೋಲಿನ್ ಎಂಬವಳನ್ನು ಮದಿವೆ ಮಾಡಿ ಕೊಳ್ಳುವದಕ್ಕೆ ಅನುಜ್ಞೆ ಕೊಡ ಬೇಕೆಂದು ಪೋಪನ ಹತ್ರ ಕೇಳಿದಾಗ, ಇವನು ತನ್ನ ಒಪ್ಪಿಗೆ ಕೊಡದಿರಲಾಗಿ, ಇನ್ನೂ ಮುಂದೆ ರೋಮದ ಅಧ್ಯಕ್ಷನಲ್ಲ, ಅಂದರೆ ಪೋಪನಲ್ಲ, ತಾನೇ ಸ್ವದೇಶದ ಕ್ರೈಸ್ತ ಸಭೆಗೆ ತಲೆಯಾಗಿದ್ದೇನೆಂತ ಸಾಧಿಸಿದನು. ಇದಲ್ಲದೆ ಈ ಅರಸನು ರಚಿಸಿದ ವಿಶ್ವಾಸಪ್ರಮಾಣವು ಅನೇಕ ವಿಷಯಗಳಲ್ಲಿ ರೋಮಿಯ ಆಗಿತ್ತಲ್ಲದೆ, ಸತ್ಯ ಸುವಾರ್ತೆಗೆ ಅನುಕೂಲವಾಗಿರಲಿಲ್ಲ. ಅರಸು ಹೆನ್ರಿಯು ತೀರಿ ಹೋದ ಮೇಲೆ, ೬ನೆ ಎದುವರ್ದನ ಕಾಲದಲ್ಲಿ ಕೆಂಟರ್ಬರಿಯ ಮಹಾಧ್ಯಕ್ಷ ಥೋಮ ಕ್ರೆನ್ಮರನು ಸ್ನೇಹಿತರ ಸಹಾಯದಿಂದ ಶುದ್ಧವಾದ ವಿಶ್ವಾಸಪ್ರಮಾಣವನ್ನು ರಚಿಸಿದನು ಸರಿ, ಆದರೆ ಅದಕ್ಕೋಸ್ಕರ ಅವನು, ಮತ್ತೆ ರಾಣಿಯಾದಂಥಾ ರೋಮಪಕ್ಷದ ಮರೀಯಳ ಅಪ್ಪಣೆಯಿಂದ, ಬೇರೆ ಅನೇಕರ ಸಂಗಡ, ಸಾಕ್ಷಿಮರಣ ಅನುಭವಿಸ ಬೇಕಾಯಿತು. ಈಕೆಯ ತರುವಾಯ (೧೫೫೮ನೆಯಿಂದ) ರಾಣಿಯಾದ, ಸ್ಥಿರವಾಗಿ ಸುವಾರ್ತಾಪಕ್ಷದಲ್ಲಿದ್ದ, ಎಲಿಸಬೇಥಳ ಕಾಲದಲ್ಲಿ ಪುನಃಸ್ಥಾಪನೆಯು ಆ ದೇಶದಲ್ಲಿ ಪೂರ್ಣ ಜಯ ಹೊಂದಿತು. ಇಂಗ್ಲಿಷು ದೇಶದ ರಾಜಕ್ರೈಸ್ತಸಭೆಯು ಲುಥರೀಯ ಸಭೆಗಲ್ಲ, ಹೆಚ್ಚಾಗಿ ಪುನರೂಪಿತ ಸಭೆಗೆ ಸಂಬಂಧವಾಗಿದೆ.

ಸ್ಕಾತ ದೇಶದಲ್ಲಿ ಸಹಾ ೧೬ನೆ ವರ್ಷಶತದ ಉತ್ತರಾರ್ಧದಲ್ಲಿಯೆ ಪುನಃಸ್ಥಾಪಕ ಯೋಹಾನ ನೊಕ್ಸನ ಮಹಾ ಸಾಹಸದಿಂದ ಪೋಪನ ಅಧಿಕಾರವು ಕೆಡವಿ

೧೪*

ಹಾಕಿದ್ದಾಗಿ, ಬೋಧನೆಯಲ್ಲಿಯೂ ಕಟ್ಟಳೆಗಳಲ್ಲಿಯೂ (ಕಲ್ವೀನಗ್ರಂಥಗಳಿಗನುಸಾರವಾದ) ಪುನರೂಪಿತ ಸಭೆಯು ಸ್ಥಾಪನೆ ಆಯಿತು.

§ ೧೪.

# ಪ್ರತಿಕಕ್ಷಿಕರ ಸಭೆಗಳಲ್ಲಿ ಮಾಡಿದ ಯೇಕೀಕರಣ ಪ್ರಯತ್ನಗಳು

ಇವು ಜರ್ಮನಿಯೊಳಗೆ ಮಾತ್ರವೆ ಸಫಲವಾಗುತ್ತವೆ.

ಇಷ್ಟಾದ ಮೇಲೆ ನಾವು ತಿರಿಗಿ ಪುನಃಸ್ಥಾಪನೆಯ ಸೀಮೆಯಾಗಿರುವ ಜರ್ಮನಿಗೆ ತಿರುಗಿ ಕಂಡು, ಜರ್ಮನಿ ಪುನಃಸ್ಥಾಪನೆಗೂ ಶ್ವೈಚ ದೇಶದ ಪುನಃಸ್ಥಾಪನೆಗೂ, ಯಾವ ಸಂಪರ್ಕ ಉಂಟಾಯಿತೆಂತ ವಿಚಾರಿಸ ತಕ್ಕದ್ದು.

ಈ ಎರಡು ದೇಶಗಳ ಪುನಃಸ್ಥಾಪನೆಯು ಒಂದಕ್ಕೊಂದು ಕಾರ್ಯಕಾರಣವಾಗಿರದೆ ಹ್ಯಾಗೆ ಉಂಟಾದವೋ, ಹಾಗೆಯೆ ಅವುಗಳ ರೂಪಾಕೃತಿ ಸಹಾ ಯೇಕ ಪ್ರಕಾರವಾಗಿರಲಿಲ್ಲ, ಮುಖ್ಯವಾಗಿ ರಾತ್ರಿಭೋಜನದ ಬೋಧನೆಯಲ್ಲಿ ಪುನರೂಪಿತ ಸಭೆಯುವರಿಗೂ ಲುಥರೀಯ ಸಭೆಯುವರಿಗೂ ವ್ಯತ್ಯಾಸವಾಯಿತು. ಚ್ವಿಂಗ್ಲಿಯು ಮನುಷ್ಯಬುದ್ಧಿಯಿಂದ ಗ್ರಹಿಸಲಿಕ್ಕಾಗುವ ರೀತಿಯಾಗಿ ಈ ಪ್ರಸಾದವನ್ನು ಆಲೋಚಿಸಿ, ಅದು ಬರೆ ನೆನಪಿಗೆ ತರುವ ಗುರುತು ಎಂದು ಹೇಳಿ, ರೊಟ್ಟಿ ದ್ರಾಕ್ಷೇರಸ ಅಂದರೆ ಕರ್ತನ ಶರೀರ ರಕ್ತಗಳನ್ನು ಅರ್ಥೈಸುವ ವಸ್ತುಗಳಾಗಿರುತ್ತವೆ ಎಂಬದಾಗಿ ಸಾಧಿಸಿದನು; ಆದರೆ ಲುಥರನು ರೊಟ್ಟಿ ದ್ರಾಕ್ಷೇರಸಗಳಲ್ಲಿ ಕ್ರಿಸ್ತನ ಶರೀರ ರಕ್ತಗಳು, ನಾವು ಗ್ರಹಿಸ ಕೂಡದ ರೀತಿಯಾಗಿ ಆದರೂ, ಬರಹದ ಖಂಡಿತ ವಾಕ್ಯಗಳಿಗೆ ಅನುಸಾರವಾಗಿ, ನಿಜವಾಗಿ ಸಾನ್ನಿಧ್ಯವಾಗಿದ್ದು, ಭಕ್ಷ ಪಾನಗಳಾಗುತ್ತವೆ ಎಂಬ ಮಾತನ್ನು ಪಟ್ಟಿ ಹಿಡಿದನು. ಹೀಗಿದ್ದರೂ, ಭೇದವಾಗಿರುವವರನ್ನು ಒಂದು ಮಾಡುವದಕ್ಕೆ ಆರಂಭದಿಂದಲೇ ಬಹಳ ಪ್ರಯತ್ನ ಮಾಡಿದರು; ಮತ್ತು ಉಭಯತ್ರರ ವೈರಿಗೆ ಹೆಚ್ಚು ಬಲದಿಂದ ಎದರುನಿಲ್ಲಲಾಗುವ ಹಾಗಾಗ ಬೇಕೆಂಬ ರಾಜ್ಯಪ್ರಯೋಜನದ ಆಲೋ

ಚನೆಯಿಂದ ಸಹಾ ಮುಖ್ಯವಾಗಿ ಹೆಸ್ಸಿನವ ದೇಶಾಯಿಯು ಬಹಳವಾಗಿ ಅದನ್ನು ಅಪೇಕ್ಷಿಸಿದನು.

ಈ ಬಗ್ಗೆ ಆ ದೇಶಾಯಿಯು ೧೫೨೯ರಲ್ಲಿ ಉಭಯತ್ರರ ಪ್ರಖ್ಯಾತಿ ಪಟ್ಟ ದೇವವಿದ್ಯಾಪಂಡಿತರೊಳಗೆ ಮಾರ್ಬುರ್ಗದಲ್ಲಿ ಸಂವಾದವಾಗುವ ಹಾಗೆ ಮಾಡಿದನು. ಒಂದು ಪಕ್ಷಕ್ಕೆ ಲುಥರ ಮೆಲಂಥೋನ ಯೋನ (ನುರ್ನಬೆರ್ಗದ) ಒಸಿಯಂದ್ರ ಮುಂತಾದವರೂ, ಒಂದು ಪಕ್ಷಕ್ಕೆ ಜ್ವಿಂಗ್ಲಿ, ಐಕೊಲಂಪಾದ್ಯ, ಬೂಸರ್, ಹೇಡಿಲ್ಯೊ (ಕಡೆಯವರಿಬ್ಬರು ಸ್ತ್ರಾಸ್‌ಬುರ್ಗದವರು) ಮುಂತಾದವರೂ ಅಲ್ಲಿಗೆ ಬಂದರು. ದೇಶಾಯಿಯು ಅವರೆಲ್ಲರನ್ನು ಅತಿಥಿಗಳಾಗಿ ತನ್ನ ಕೋಟೇ ಅರಮನೆಗೆ ತರಿಸಿ, ಮಹತ್ವದಲ್ಲಿ ಉಪಚರಿಸಿದನು.

ಮೂರು ದಿನಗಳ ವರೆಗೆ, ಅಂದರೆ, ಅಕ್ಟೋಬರ ೧ನೆಯಿಂದ ೩ನೆ ವರೆಗೆ ಅಲ್ಲಿ ಘನವುಳ್ಳ ಶ್ರೀಮಂತನ ಮುಂದೆಯೂ ಧೊರೆಗಳ ಮುಂದೆಯೂ ವಿದ್ವಾಂಸರ ಮುಂದೆಯೂ ಉಭಯತ್ರರಲ್ಲಿರುವ ಮತಭೇದಗಳ ವಿಷಯದಲ್ಲಿ ತರ್ಕವಾಯಿತು. ಹ್ಯಾಗಂದರೆ ಲುಥರನ ಬೋಧನೆಗೆ ವ್ಯತ್ಯಾಸವಾಗಿ ಶ್ವೈಚ ದೇಶದ ಬೋಧಕರು, ಬಾಲಕಸ್ನಾನ, ಜನ್ಮಪಾಪ, ಆತ್ಮಸಂಪ್ರದಾನ ಮುಂತಾದವುಗಳ ವಿಷಯದಲ್ಲಿ ಕಲಿಸುತ್ತಿದ್ದರು. ಆದರೂ ಅವರು ಎಲ್ಲಾ ವಿಷಯಗಳಲ್ಲಿಯೂ ವಿತ್ತೆನ್‌ಬೆರ್ಗದವರಿಂದ ಸೋತು ಅವರಿಂದ ಬೋಧನೆ ತಕ್ಕೊಂಡರು "ಎಷ್ಟು ಹೆಚ್ಚಾಗಿ ಅವರು ಕೇಳಿದರೋ ಅಷ್ಟಕ್ಕೆ ಹೆಚ್ಚಾಗಿ ಅವರು ಆ ಬೋಧನೆಗೆ ಮೆಚ್ಚಿದರು" ಎಂದು ಮೆಲಂಥೋನನು ಹೇಳುತ್ತಾನೆ. ಈ ಪ್ರಕಾರ ೧೪ ಸಂಗತಿಗಳಲ್ಲಿ ತಮ್ಮೊಳಗೆ ಯೇಕವಾದರು, ಆದರೂ ೧೫ನೆ ಕಡೇ ಸಂಗತಿಯಾಗಿರುವ ರಾತ್ರಿಭೋಜನದ ಮುಖ್ಯ ವ್ಯತ್ಯಾಸ ಬೋಧನೆಯ ವಿಷಯದಲ್ಲಿ ಅವರು ಒಂದಾಗಲಿಲ್ಲ. ಲುಥರನು ತರ್ಕದ ಆರಂಭದಲ್ಲಿ ಈ ವಿಷಯದಲ್ಲಿ ಹಲಿಗೆಯ ಮೇಲೆ, "ಇದು ನನ್ನ ಶರೀರವಾಗಿದೆ" ಎಂಬ ವಾಕ್ಯವನ್ನು ಬರದು, ಮಹಿಮೆಯುಳ್ಳ ಪ್ರಸಾದದಾಯಕನ "ಆಗಿದೆ" ಎಂಬ ಮಾತಿಗೆ ಸ್ಥಿರವಾಗಿ ನಿಂತು, ಅದು ನಿಜವಾಗಿ "ಆಗಿದೆ" ಎಂಬ ಅರ್ಥ ಉಳ್ಳದ್ದೆಂದು ಅಪೊಸ್ತಲನಾದ ಪೌಲನ ೧ನೇ ಕೊರಿ. ೧೦, ೧೬. ೧೧, ೨೩—೨೯. ವಾಕ್ಯವನ್ನು ಸಾಕ್ಷಿಯಾಗಿ ತಕ್ಕೊಂಡನು. ಆದರೆ ಜ್ವಿಂಗ್ಲಿಯು ಸರ್ವಥಾ ಅದಕ್ಕೆ ಒಪ್ಪಿ ಕೊಳ್ಳದೆ, ರೊಟ್ಟಿ ದ್ರಾಕ್ಷೇರಸಗಳು ಶರೀರ ರಕ್ತಗಳನ್ನು ಅರ್ಥಿಸುತ್ತವೆಂದು ಬಲವಾಗಿ ಸಾಧಿಸಿ, ಅದಕ್ಕೆ ಯೋಹಾನ. ೬, ೬೩. ಆಧಾರವಾಗಿ ತಕ್ಕೊಂಡನು. ಆದರೆ ಲುಥರನು, ಈ ಸಂಧಿಯಲ್ಲಿ ರಾತ್ರಿಭೋಜನದ ಪ್ರಸ್ತಾಪವಿಲ್ಲವಲ್ಲ ಅಂದನು. ಜ್ವಿಂಗ್ಲಿಯು ನಾವು ಕ್ರಿಸ್ತನ ಶರೀರ ರಕ್ತಗಳನ್ನು ನಿಜವಾಗಿ ತಿಂದು ಕುಡಿಯುವದಾದರೆ, ಅದು ಅನುಚಿತವಾದ ಕಾರ್ಯ

ವಾದೀತೆಂದು ಹೇಳಲಾಗಿ, — ಲುಥರನು, ಇಲ್ಲಿ ಸ್ಥೂಲ ರೀತಿಯಾಗಿ ಬರೇ ಇಂದ್ರಿಯಗಳಿಂದ ತಿಂದು ಕುಡಿಯುವ ಮಾತು ಇರುವದಿಲ್ಲ; ಅತ್ಯುನ್ನತವಾದ ಆಶ್ಚರ್ಯ ರೀತಿಯಾದ ಮರ್ಮವುಳ್ಳ ಪ್ರಸಾದಭಾವವಾದ ಸಂಗತಿಯಾಗಿಯೂ, ಆದರೂ ಬರಹಕ್ಕನುಸಾರವಾಗಿ ನಿಜವಾಗಿ ಬಾಯಿಯಿಂದ ಭಕ್ಷಿಸುವ ಸಂಗತಿಯಾಗಿಯೂ ಇರುತ್ತದೆಂದು ತರ್ಕಿಸಿದನು. ಈ ಬೋಧನೆಯಿಂದ ಅವರಿಗೆ ಐಕ್ಯವಾಗಲಿಲ್ಲ. ಆದರೂ ಉಭಯತರು ಸ್ನೇಹಭಾವ ಬಿಟ್ಟು, ತಮ್ಮ ತಮ್ಮ ಮನೆಗೆ ಹೋಗದೆ, ಪರಸ್ಪರ ಮಾತು ಕೊಟ್ಟು, ಬರದಿಟ್ಟದ್ದೇನಂದರೆ: "ಕ್ರಿಸ್ತನ ನಿಜ ಶರೀರವೂ ರಕ್ತವೂ ರೊಟ್ಟಿಯಲ್ಲಿಯೂ ದ್ರಾಕ್ಷೇರಸದಲ್ಲಿಯೂ ಶಾರೀರಿಕವಾಗಿ ಉಂಟೋ ಇಲ್ಲವೋ ಎಂಬ ವಿಷಯದಲ್ಲಿ ಸದ್ಯಕ್ಕೆ ಯೇಕಮತ್ಯವಾಗಲಾರದೆ ಇದ್ದರೂ, ಉಭಯ ಪಕ್ಷದವರು ಮನಸ್ಸಾಕ್ಷಿ ಪುರಸ್ಸರವಾಗಿ ಒಬ್ಬರಿಗೊಬ್ಬರು ಕ್ರೈಸ್ತ ಪ್ರೀತಿಯನ್ನು ತೋರಿಸಿ, ಸರ್ವತ್ರಾಣವುಳ್ಳ ದೇವರು ತನ್ನ ಆತ್ಮದಿಂದ ಸಮವಾದ ಗ್ರಹಿಕೆಯನ್ನು ಕೊಡ ಬೇಕೆಂದು ಶ್ರದ್ಧೆಯಿಂದ ಬೇಡಿ ಕೊಳ್ಳ ತಕ್ಕದ್ದು. ಆಮೆನ್"

ಉಭಯ ಸಭೆಯವರು ಪೂರ್ಣವಾಗಿ ಯೇಕ ಮನಸ್ಸಾಗಿ ಇರದೆ ಇದ್ದದ್ದು. ದುಃಖಕರವಾದದ್ದು. ಇದಲ್ಲದೆ ಲುಥರನ ವಿಶ್ವಾಸದ ಮಕ್ಕಳು ಸಹ ಶ್ವೈಚ ಪಂಡಿತರ ಬೋಧನೆಗೆ ಮನ ಒಪ್ಪಿದ್ದು ಅನೇಕರಿಗೆ ಅತಿ ದುಃಖಕರವಾಗಿ ಕಂಡಿತು. ಮಾರ್ಬುರ್ಗದಲ್ಲಿ ಸಂವಾದಕ್ಕೆ ಕೂಡಿ ಬಂದಲ್ಲಿ ಸ್ಟ್ರಾಸ್‌ಬುರ್ಗದ ದೇವವಿದ್ಯಾಪಂಡಿತರು ಜ್ವಿಂಗ್ಲಿಯ ಪಕ್ಷದಲ್ಲಿದ್ದರೆಂದು ನೋಡಿದೆವಲ್ಲ! ಮೇಲ್ ಜರ್ಮನಿಯ ಪಟ್ಟಣಗಳಾದ ಸ್ಟ್ರಾಸ್‌ಬುರ್ಗ (ಆ ಕಾಲದಲ್ಲಿ ಇದು ಜರ್ಮನಿಗೆ ಶೇರಿ ಇತ್ತು;) ಮೆಮ್ಮಿಂಜೆನ ಲಿಂಡೌ ಕಾನ್‌ಸ್ಟನ್ಜ, ತಾವು ಲುಥರೀಯ ಅರಿಕೆಗೆ ರಾತ್ರಿಭೋಜನದ ಸೂತ್ರದಲ್ಲಿ ಒಪ್ಪಿ ಕೊಳ್ಳಲಾರದೆ ಇರುವದರಿಂದ, ಔಗ್ಸ್‌ಬುರ್ಗದ ರಾಜಸಭೆಯಲ್ಲಿ (೧೫೩೦) ವಿಂಗಡವಾದ ಅರಿಕೆಯನ್ನು ಬರದು ಕೊಟ್ಟರು. ಇವರು ಮಾತ್ರವಲ್ಲ, ಬೇರೆ ಕೆಲವು ಮೇಲ್ ಜರ್ಮನಿಯ ಪಟ್ಟಣಗಳು ಸಹ ಈ ಸೂತ್ರದ ಸಂಗತಿಯಲ್ಲಿ ಪೂರ್ಣವಾಗಿ ಅಥವಾ ಬಹಳವಾಗಿ ಜ್ವಿಂಗ್ಲಿಗೆ ಒಪ್ಪಿಗೆಯಾಗಿದ್ದರು. ಇದು ಲುಥರನ ನಂಬಿಗೆಯುಳ್ಳ ಹೃದಯಕ್ಕೆ ಬಹಳ ದುಃಖ ತಂತು. ಹ್ಯಾಗಂದರೆ ಇವನು ಎಲ್ಲರನ್ನು ಒಬ್ಬನೇ ಕ್ರಿಸ್ತನ ಕೆಳಗೆ ಒಂದೇ ಅನ್ಯೋನ್ಯದಲ್ಲಿ ಶೇರಿಸ ಬೇಕೆಂದು ಬಹಳವಾಗಿ ಅಪೇಕ್ಷಿಸಿದನಲ್ಲ!

ಆದಾಗ್ಯೂ ಬೇರೆ ಕಾಲವು ಬಂತು. ೧೫೩೬ನೆ ವರುಷದಿಂದಲೆ ಮೇಲ್ ಜರ್ಮನಿಯ ಪಟ್ಟಣಗಳು ಹೆಚ್ಚು ಹೆಚ್ಚಾಗಿ ಲುಥರೀಯಬೋಧ ಗ್ರಹಿಕೆಗೆ ಒಪ್ಪಿ ಕೊಳ್ಳಲಾರಂಭಿಸಿ, ಉಭಯ ಪಕ್ಷದವರು ಹೃದಯಪೂರ್ವಕವಾಗಿ ಇಚ್ಛೈಸುತ್ತಿರಲಾಗಿ, ಪ್ರಾರ್ಥನೆಯಿಂದಲೂ ಸ್ನೇಹಭಾವದ ಪತ್ರಿಕೆಗಳಿಂದಲೂ ಪೂರ್ಣ ಯೇಕತ್ವಕ್ಕೆ ಎಲ್ಲಾ

ಒದಗಿ ಬಂತು. ಕಡೆಯಲ್ಲಿ ೧೫೩೬ನೆ ವಸಂತಕಾಲದಲ್ಲಿ ಈ ಕಾರ್ಯವನ್ನು ಸ್ಥಿರ ಮಾಡುವದಕ್ಕೆ ಥುರಿಂಗೆನಿನ ಐಸನಕಿನಲ್ಲಿ ಸಮಾಗಮವನ್ನು ನಿಶ್ಚೈಸಿದ್ದರು. ಲುಥರನು ಇದಕ್ಕೆ ಎಷ್ಟು ಸಂತೋಷ ಪಟ್ಟನೆಂದು ಔಗ್ಸ್‌ಬುರ್ಗಕ್ಕೆ ಬರದ ಕಾಗದದಿಂದ ಕಂಡು ಬರುತ್ತದೆ. ಅದರಲ್ಲಿ ಅವನು ಹೇಳುವದೇನಂದರೆ: “ಸುವಾರ್ತೆಯು ತಿರಿಗಿ ಉದಯವಾದಂದಿನಿಂದ ಇಂದಿನ ವರೆಗೂ, ದುಖ್ಖಕರವಾದ ಛೇದದ ಮೇಲೆ ಈಗ ಕಡೆಯಲ್ಲಿ ಯೇಕತ್ವವನ್ನು ನಿರೀಕ್ಷಿಸುವದಕ್ಕೂ ನೋಡುವದಕ್ಕೂ ಆಗುವದರಿಂದ, ಮುಂಚೆ ಎಂದೂ ಇಂಥಾ ಸಂತೋಷ ಪ್ರಾಪ್ತವಾಗಲಿಲ್ಲ. ಮತ್ತು ಅದು ಛಿದ್ರವಾದ ಮೇಲೆ ಕರ್ತನೇ ನಿನ್ನ ಚಾಕರನನ್ನು ಈಗ ಸಮಾಧಾನವಾಗಿ ಹೋಗಗೊಡಿಸುತ್ತಿ ಎಂದು ಆನಂದಬಾಷ್ಪಗಳಿಂದ ಹೇಳುವೆನು.” ಮೇಲ್ ಜರ್ಮನಿಯ ನಿಯೋಗಿಗಳಾಗಿದ್ದ ಸ್ತ್ರಾಸ್‌ಬುರ್ಗದ ಬೂಸರ್ ಕಪಿತೊ ಎಂಬವರೂ ಉಲ್ಮದ ಫ್ರೆಕ್ತನೂ, ಔಗ್ಸ್‌ಬುರ್ಗದ ವೋಲ್‌ಫಾರ್ತ್ ಮತ್ತು ಮುಸ್ಕುಲ ಎಂಬುವವರೂ, ಮೈನ್ ತೀರದಲ್ಲಿರುವ ಫ್ರಂಕಫುರ್ತ, ಎಸ್ಲಿಂಗೆನ್ ಮೆಮ್ಮಿಂಗನ್ ಮುಂತಾದ ಕಡೆಯಿಂದ ಕಳುಹಿಸಲ್ಪಟ್ಟವರೂ ತ್ವರೆಯಾಗಿ ಸಂತೋಷದಿಂದ ಐಸನಕಿಗೆ ಬರ ಹೊರಟರು; ಆದರೆ ಲುಥರನಿಗೆ ಅಸ್ವಸ್ಥವಾಯಿತು, ತಾಳಲಾರದ ಸೊಂಟಬೇನೆಯು ಅವನನ್ನು ಪೀಡಿಸಿತು. ಆದ್ದರಿಂದ ಅವನಿಗೆ ಸ್ವಲ್ಪ ಸಮೀಪವಾಗಿರುವ ಗ್ರಿಮ್ಮ ಎಂಬಲ್ಲಿಗೆ ಸಮಾಗಮವು ಕೂಡಿಬರತಕ್ಕದ್ದೆಂದು ನಿಶ್ಚೈಸಿದಾಗ, ಪ್ರಯಾಣದಲ್ಲಿದ್ದ ಮೇಲ್ ಜರ್ಮನಿಯವರು ಬೇಗ ಒಂದು ಆಳು ಕಳುಹಿಸಿ, ಲುಥರನೂ ಸಹಉದ್ಯೋಗಸ್ಥರೂ ತಮ್ಮ ಊರಲ್ಲಿ ಇರಲಿ, ವಿತ್ತೆನ್‌ಬೆರ್ಗವನ್ನು ನೋಡಲಿಕ್ಕೆ ನಮಗೆ ಬಹಳ ಮನಸ್ಸುಂಟು, ನಾವೇ ಅಲ್ಲಿಗೆ ಬರುತ್ತೇವೆ ಎಂದು ಹೇಳಿ ಕಳುಹಿಸಿದರು. ಈ ಪ್ರಕಾರ ಆ ಸಮಾಗಮವು ವಿತ್ತೆನ್‌ಬೆರ್ಗದಲ್ಲಿಯೇ ಆಯಿತು.

ಮೇ ೨೨ಲ್ಲು ಲುಥರನ ಕೋಣೆಯಲ್ಲಿ ಸಭೆ ಕೂಡಿತು. ಅವನ ಕಡೆಯಲ್ಲಿ ಸರ್ವಶಾಲೆಯ ಶಾಸ್ತ್ರಿಗಳ ಹೊರ್ತು, ಘನವುಳ್ಳ ದೇವವಿದ್ಯಾಪಂಡಿತರಾಗಿ ಇದ್ದ ಐಸೆನಕದ ಮೇನ್ಯನೂ ಗೋಥದ ಮಿಕೋನ್ಯನೂ ಇದ್ದರು. ಇವರು ತಮ್ಮ ಮಾರ್ಗವಾಗಿ ಬಂದಂಥಾ ಮೇಲ್‌ಜರ್ಮನಿಯವರ ಒಟ್ಟಿಗೆ ಬಂದಿದ್ದರು. ಬೂಸರನು ಮೊದಲು ಮಾತಾಡಲಾರಂಭಿಸಿ, ಈ ಸಮಾಗಮವುದಿಂದ “ನನ್ನ ಹೃದಯವು ಹರ್ಷವಾಗಿದೆ, ದೇವರ ರಮ್ಯವಾದ ಪ್ರಕಾಶವು ಹೊರಟ ಪಟ್ಟಣದಲ್ಲಿ ಸಂತೋಷ ಪಡುತ್ತೇನೆ. ನಾಲ್ಕು ವರುಷದಿಂದ ದಣಿಯದೆ ಪೇಚಾಡಿ, ಅಪೇಕ್ಷಿಸುವ ಐಕ್ಯವು ಯಾವಾಗ ಪ್ರಾಪ್ತಿಯಾದೀತೆಂದು ಕಾದು ಕೊಂಡಿದ್ದೇನೆಂದು” ಹೇಳಿದನು. ಈ ಮಾತಿಗೆ ಲುಥರನು ನಮ್ರವಾಗಿ ಉತ್ತರ ಕೊಟ್ಟು, ಬಹು ಆಸಕ್ತಿಯಿಂದ ಹೇಳಿದ್ದೇನಂದರೆ: ನನಗೂ

ಯೇಕತ್ವ ಬೇಕು, ಆದರೆ ಸತ್ಯ ಸ್ಥಿರವಾದದ್ದು ಬೇಕು; ನೀವು ಇದನ್ನು ಇಚ್ಛೈಸುತ್ತೀರಾದರೆ, ನಿಮ್ಮ ಮುಂಚಿನ ಅಬದ್ಧ ಬೋಧನೆಯನ್ನು ಅಲ್ಲಗಳದು, ರೊಟ್ಟಿಯು ನಮಗೋಸ್ಕರ ಕೊಡಲ್ಪಟ್ಟ ಕ್ರಿಸ್ತನ ಶರೀರವಾಗಿದೆ ಎಂತಲೂ, ದ್ರಾಕ್ಷೇರಸವು ನಮಗೋಸ್ಕರ ಚೆಲ್ಲಲ್ಪಟ್ಟ ಕ್ರಿಸ್ತನ ರಕ್ತವಾಗಿದೆ ಎಂತಲೂ, ಖಂಡಿತವಾಗಿ ಹೇಳಿ, ಕೊಡುವವನೂ ತಕ್ಕೊಳ್ಳುವವನೂ ಯೋಗ್ಯರಾಗಿದ್ದರೂ ಅಯೋಗ್ಯರಾಗಿದ್ದರೂ, ಕ್ರಿಸ್ತನ ಸ್ಥಾಪನೆಯ ವಾಕ್ಯದ ಬಲದಿಂದ ಹಾಗಾಗುತ್ತದೆಂದು ಒಪ್ಪಿ ಕೊಂಡು, ಈ ಸಂಗತಿಯನ್ನು ಮುಬ್ಬ ಕೂಟದಲ್ಲಿ ಅರಿಕೆ ಮಾಡ ಬೇಕು ಅಂದನು.

ಈ ಬಗ್ಗೆ ಮೇ ೨೩ ಲ್ಲಿ ತಿರಿಗಿ ಎಲ್ಲರೂ ಲುಥರನ ನಿವಾಸದಲ್ಲಿ ಕೂಡಿ ಬಂದರು. ಆಗ್ಯೆ ಮೇಲ್‌ಸೀಮೆಯವರು ತಮ್ಮ ಮುಂಚಿನ ಬೋಧನೆಯನ್ನು ಹಿಂದಕ್ಕೆ ತಕ್ಕೊಂಡು, ಬುಡದಿಂದ ತುದಿಯ ವರೆಗೆ ರಾತ್ರಿಭೋಜನದ ಬೋಧನೆಯಲ್ಲಿ ಲುಥರನಿಗೆ ಒಪ್ಪಿ, ನಿಸ್ಸಂಶಯವಾಗಿ ಔಗ್ಸ್‌ಬುರ್ಗದ ಅರಿಕೆಗೆ ಸಮ್ಮತವಾದರು. ಇಷ್ಟಾದ ಮೇಲೆ ಬೇರೆ ಕೋಣೆಗೆ ಹೋಗಿ, ಒಟ್ಟಿಗೆ ಅರಿಕೆಯನ್ನು ಬಾಯ್ಯಿಂದ ಹೇಳಿ, ತಿರಿಗಿ ಬಂದು, ಎಲ್ಲರ ಮುಂದೆ ಆ ಪ್ರಕಾರವೇ ಮಾಡಿದ ಮೇಲೆ, ಲುಥರನ ಪಕ್ಷದವರು, ಈಗ ನಿಮಗೂ ನಮಗೂ ಸಮಾಧಾನವಾಯಿತು ಎಂತಾ ಹೇಳಲಾಗಿ, ಎಲ್ಲರೂ ಯೇಕಮನಸ್ಸಿನಿಂದ ದೇವರಿಗೆ ಪ್ರಾರ್ಥನೆ ಮಾಡಿ, ಕರ್ತನ ನಾಮವನ್ನು ಹೊಗಳಿದರು.

ಈ ಪ್ರಕಾರ ವಿತ್ತೆನ್‌ಬೆರ್ಗದ ಯೇಕೀಕರಣದ ಕಾರ್ಯವು ಸಾಧನೆಯಾದ ತರುವಾಯ, ಮೆಲಂಥೋನನು ಯೇಕೀಕರಣ ಪತ್ರವನ್ನು ರಚಿಸಲಾಗಿ, ಅದನ್ನು ಸಭಾಲಯಗಳಲ್ಲಿ ಪೀಠದಿಂದ ಓದಿ ತಿಳಿಸಿದಾಗ ಅವರಿಗೂ, ಮೇಲ್‌ಸೀಮೆಯವರಿಗೆ ವರ್ತಮಾನ ಮುಟ್ಟಿದಾಗ, ಇವರಿಗೂ ಮಹಾ ಸಂತೋಷವಾಯಿತು.

ತರುವಾಯ ಪುನರೂಪಿತ ಸಭೆಯವರಲ್ಲಿ ಎದ್ದ ಕಲ್ವೀನನ ಮಹಾ ಪ್ರಯತ್ನದಿಂದ ಅವರಲ್ಲಿ ದೇವರ ಕಾರ್ಯಕ್ಕೆ ಅತ್ಯಭ್ಯುದಯವಾದ್ದಲ್ಲದೆ, ಬೋಧನೆಯಲ್ಲಿಯೂ ಹೊಸ ಬೆಳಕು ದೊರಕಿತು. ಈತನು ಕಿಸ್ತನ ಶರೀರ ರಕ್ತಗಳು ಭಕ್ಷಪಾನವಾಗುತ್ತದೆಂದು ಹೇಳಿದನು ಸರಿ, ಆದಾಗ್ಯೂ ಅವು ಆತ್ಮಿಕವಾಗಿ ವಿಶ್ವಾಸಿಗೆ ಮಾತ್ರವೆ ಪ್ರಾಪ್ತವಾಗುತ್ತವೆಂದು ಬೋಧನೆ ಕೊಟ್ಟನು. ಹೀಗಾಗಿ ಉಭಯ ಪಕ್ಷದವರಿಗೆ ಮತ್ತೆ ಸಹಾ ಪೂರ್ಣ ಐಕ್ಯವು ಉಂಟಾಗಲಾರದೆ ಹೋಯಿತು. ಇದಲ್ಲದೆ ದೈವಸಂಕಲ್ಪದಿಂದ ಮಾತ್ರವೆ ಕೆಲವರಿಗೆ ರಕ್ಷಣೆ ಬರುತ್ತದೆ, ಮತ್ತೊಬ್ಬರಿಗೆ ಬರುವದಿಲ್ಲ ಎಂಬ ಕಲ್ವೀನನ ಬೋಧನೆಯಿಂದ ಸಹಾ ಭೇದವಾದವರಿಗೆ ಅನ್ಯೋನ್ಯವಾಗುವದಕ್ಕೆ ಆಸ್ಪದ ಕಡಿಮೆ ಆಯಿತು.

ಅಂದಿನಿಂದ ಇಂದಿನ ವರೆಗೆ ಯೇಕೀಕರಣಕ್ಕೋಸ್ಕರ ಅನೇಕ ಪ್ರಯತ್ನ ಮಾಡುತ್ತಾ ಬಂದದೆ. ಸುವಾರ್ತಾಪಕ್ಷದ ಸಮಸ್ತ ಕ್ರೈಸ್ತರಿಗೆ, ಸತ್ಯವಿಶ್ವಾಸಿಗಳಿಗೆ ಸಹಾ, ಸದ್ಯಕ್ಕೆ ಪೂರ್ಣ ಐಕ್ಯವಾದೀತೆಂದು ನೆನಸುವದಕ್ಕೆ ನನಗೆ ಧೈರ್ಯವಿಲ್ಲ. ಆದಾಗ್ಯೂ ಸುವಾರ್ತಾಪಕ್ಷದ ಮಿತ್ರತ್ವ ಎಂಬ ಕೂಟದಿಂದಲೂ ಬೇರೆ ಕಾರ್ಯಗಳಿಂದಲೂ, ಮುಖ್ಯವಾಗಿ ಕ್ರೈಸ್ತರಲ್ಲದವರಿಗೆ ಸುವಾರ್ತೆಯನ್ನು ಕಳುಹಿಸಿ ಕೊಡುವ ಬಗ್ಗೆ ಸ್ಥಾಪಿಸಿದ ಕೂಟಗಳ ಸಾಹಸದಿಂದಲೂ, ವಿಶ್ವಾಸಿಗಳ ನಿಜ ಐಕ್ಯಕ್ಕೆ ಹೆಚ್ಚು ಹೆಚ್ಚಾಗಿ ಮಾರ್ಗವಾಗುವ ಹಾಗೆ ತೋರುತ್ತದೆ. ಹ್ಯಾಗೂ ಈಗಲೆ ಸುವಾರ್ತಾಸಭೆಗಳಲ್ಲಿ ಒಟ್ಟಾರೆ ಸಹಾ ಎರಡು ಮುಖ್ಯ ಬೋಧನೆಗಳಲ್ಲಿ ಐಕ್ಯವು ಅದೆ. ಆ ಬೋಧನೆಗಳು ಯಾವವೆಂದರೆ: ೧) ದೇವವಾಕ್ಯ ಮಾತ್ರವೆ ರಕ್ಷಣಾಬೋಧನೆಗೆ ಒಂದೇ ಬುಗ್ಗೆಯಾಗಿರುತ್ತದೆ; ೨) ನೀತಿಯು ಕ್ರಿಸ್ತನಲ್ಲಿಡುವ ವಿಶ್ವಾಸದಿಂದ ಮಾತ್ರವೆ ಬರುತ್ತದೆ. ಈ ಎರಡು ಬೋಧನೆಗಳಿಂದ ತಾವು ನಿಜವಾಗಿ ಒಂದಾಗಿದ್ದೇವೆಂದು ಸುವಾರ್ತಾಪಕ್ಷದವರೆಲ್ಲರು ತಿಳುಕೊಂಡು, ಸತ್ಯ ಕ್ರೈಸ್ತ ಪ್ರೀತಿಯಿಂದ ಅನ್ಯೋನ್ಯದಲ್ಲಿ ಬದುಕಿ, ಒಳ್ಳೇ ಕ್ರೈಸ್ತ ಜೀವನದಿಂದ ದೇವರನ್ನು ಮಹಿಮೆ ಪಡಿಸುವದಕ್ಕೆ ಒಬ್ಬರನ್ನೊಬ್ಬರು ಪ್ರೇರೇಪಿಸಿ, ಸತ್ಯದ ಅಚಂಚಲ ಬಿಡ ಕೂಡದ ಅಸ್ತಿವಾರದ ಮೇಲೆ ಕಟ್ಟ ತಕ್ಕ ಸತ್ಯವಾದ ದೇವಪ್ರಿಯವಾದ ಐಕ್ಯದ ಸುದಿನವು ಬೇಗ ಬರಲೆಂದು ಪ್ರಾರ್ಥಿಸುತ್ತಾ ಇರ ತಕ್ಕದ್ದು.

§ ೧೫.

# ನರಕದ ಭಿಯೋನು, ಅದರ ನ್ಯಾಯತೀರ್ಪು

ವಿತ್ತೆನ್‌ಬೆರ್ಗದ ಅನ್ಯೋನ್ಯದ ಕಾಲದಲ್ಲಿ ದೇವರು ತಾನು ನ್ಯಾಯಾಧಿಪತಿಯಾಗಿದ್ದೇನೆಂದು ಪ್ರಕಟ ಮಾಡಿದನು. ಇದಕ್ಕೆ ಲುಥರನೂ ಎಲ್ಲಾ ಸಭೆಯೂ, ಸತ್ಯ ನೀತಿಗಳಿಗೋಸ್ಕರ ಸಂತೋಷ ಪಟ್ಟಾಗ್ಯೂ, ಬಡ ಜನರ ದುರಾವಸ್ಥೆಯನ್ನು ಕಂಡು, ದುಃಖ ಭಯ ಕಂಪಗಳಿಂದ ತುಂಬಾದರು.

ಕ್ರಿಸ್ತನು ಸಭೆ ಕಟ್ಟುವಲ್ಲಿ ಸೈತಾನನು ಗುಡಿ ಕಟ್ಟುತ್ತಾನೆಂಬದು ಬಹು ಕಾಲದಿಂದ ತಿಳಿದು ಬಂದದೆ. ಆದರೆ ಬಿಯಾೀನಿನ ಪೂರ್ಣರಾಜ್ಯವೂ ಸ್ವರ್ಗೀಯ ರಾಜ್ಯವೂ ಭೂಮಿಯಲ್ಲಿ ಈಗಲೆ ಸ್ಥಾಪನೆ ಆಗುತ್ತದೆ ಎಂಬ ಮಾತು ಈ ಲೋಕದಲ್ಲಿ ಇಷ್ಟು ವರೆಗೆ ಒಂದೇ ಸರ್ತಿ ಬಂತು. ಆದ್ದರಿಂದ ಈ ಕಥೆಯು ಅಪರೂಪವಾದ್ದಾಗಿರುವ ಕಾರಣ, ಅದನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವಾ.

೧೫೩೩ನೇ ವರುಷದಲ್ಲಿ ಹೊಲ್ಲ ದೇಶದ ಹರ್ಲೆಮ್ ಎಂಬಲ್ಲಿ ರೊಟ್ಟಿಗಾರನಾಗಿದ್ದ ಯೋಹಾನ ಮಥೀಸೆನ್ ಎಂಬ ಅಪರೂಪ ಮನುಷ್ಯನೊಬ್ಬನು ಆ ದೇಶದಲ್ಲಿ ಸಂಚರಿಸುತ್ತಾ, ತಾನು ಸಹಸ್ರ ವರ್ಷ ರಾಜ್ಯವನ್ನು (ಪ್ರಕ. ಯೋಹಾ೨೦.) ಸ್ಥಾಪಿಸಲಿಕ್ಕೆ ದೇವರು ಕಳುಹಿಸಿದಂಥಾ ಪ್ರವಾದಿ ಎಂದು ಸಾರಿದನು. ಈ ರಾಜ್ಯದಲ್ಲಿ ಜನರಿಗೆ ನವೀನವಾದ ಆತ್ಮಪ್ರಕಾಶವು ಉಂಟಾಗಿ, ಸತ್ಯವೇದಪುಸ್ತಕವು ಅನವಶ್ಯವಾಗುವದು; ಅದರಲ್ಲಿ ಲೌಕಿಕ ಅಧಿಕಾರಿಗಳು ಬೇಡಾ, ಎಲ್ಲರೂ ಸ್ವತಂತ್ರಿಕರೂ ಸಮಾನರೂ ಆಗುವರು; ಯಾರಿಗೂ ಆಸ್ತಿ ಇರ ಬಾರದು, ಎಲ್ಲಾ ಆಸ್ತಿಯು ಎಲ್ಲರಿಗೆ ಹುದುವಾಗಿರ ಬೇಕು; ಆ ರಾಜ್ಯದವರೆಲ್ಲರು ಕೇವಲ ಭಕ್ತರೂ ಪರಿಶುದ್ಧರೂ ಆಗಿರುವರು, ದುಷ್ಟರೆಲ್ಲಾ ಅವರ ಕೈಯಿಂದ ನಾಶವಾಗಿ ಹೋಗ ಬೇಕು; ಎಲ್ಲರೂ ಸುಖಾನಂದ ಹರ್ಷಗಳಲ್ಲಿ ಬದುಕಿ, ಪರಲೋಕದ ಭಾಗ್ಯವನ್ನು ಈಗಲೇ ಪಡಿದವರಾಗಿರುವರು; ಆದರೆ ಈ ರಾಜ್ಯದೊಳಗೆ ಬರುವವರು ತಿರಿಗಿ ಸ್ನಾನ ತಕ್ಕೊಳ್ಳ ಬೇಕು; ಬಾಲಸ್ನಾನವು ಸಮವಲ್ಲ; ಈ ಪುನಃಸ್ನಾನವು ಭಾಗ್ಯವುಳ್ಳ ಬಿಯಾೀನು ರಾಜ್ಯದ ಅಂಗವಾಗಿರುವದಕ್ಕೆ ಒಡಂಬಡಿಕೆಯ ಗುರ್ತೂ ಪಿವ್ಯ ಮುದ್ರೆಯೂ ಆಗಿರುತ್ತದೆ ಎಂದು ಹೇಳಿದನು.

ಬಾಲಸ್ನಾನವು ನಿರರ್ಥಕವೆಂದು ಮ್ಯುಂಚರನೂ ಅವನ ಕಾಲದಲ್ಲಿಯೂ ಮತ್ತೆಯೂ ಬೇರೆ ಅನೇಕರೂ ಹೇಳಿದ್ದಾರೆ. ಈ ಮಾತಿನಿಂದ, ಪುನಃಸ್ನಾನವು ಅವಶ್ಯವೆಂಬ ಮಾತಿಗೆ ದೂರವಲ್ಲ. ಮಥೀಸೆನನದು ಸಹಾ ಮ್ಯುಂಚರನ ರಂಭಾರೂಥಿಯೇ ಆಗಿದ್ದು, ಸೈತಾನನು ಅದನ್ನು ಸ್ವಲ್ಪ ಮುಂದೆ ನಡಿಸಿದನೆಂದು ನೆನಸ ತಕ್ಕದ್ದು. ಆದಾಗ್ಯೂ ಅನೇಕರು ಈ ಹೊಸ ಪ್ರವಾದಿಯನ್ನು ನಂಬಿ ಅವನ ಶಿಷ್ಯರಾದರು.

ಈ ಮಥೀಸೆನನು ಲೈದೆನ್ ಎಂಬ ಹೊಲ್ಲ ದೇಶದ ಪಟ್ಟಣದಲ್ಲಿ ಚಿಪ್ಪಿಗನೂ ಪಾನಕಛತ್ರ ಇಟ್ಟವನೂ ಆಗಿದ್ದ ಯೋಹಾನ ಬೊಕ್ಕೆಲ್ ಎಂಬವನ ಗುರ್ತ ಮಾಡಿದನು. ಇವನು ಅಧಿಕ ಮಹಿಮೆ ಹೊಂದ ಬೇಕೆಂದಿದ್ದನು. ಈ ಯೋಹಾನನು ಸುಂದರಪುರುಷನೂ ಚಾತುರ್ಯ ವಾಗ್ಜಾಲತ್ವ ಉಳ್ಳವನೂ ಆಗಿದ್ದಾಗ್ಯೂ, ಹಗುರ ಮನಸ್ಸಿನವನಾಗಿದ್ದನು. ಇವನಲ್ಲಿಯೂ ಆ ತರದ ಆಲೋಚನೆಗಳು ಬಹು ಕಾಲದಿಂದ

ಹುಟ್ಟಿರಲಾಗಿ, ಚಿಯಾನುರಾಜ್ಯದ ಸುಖಜೀವದ ಪ್ರಸಂಗವನ್ನು ಅಕ್ಕರೆಯಿಂದ ಕೇಳಿ, ಮತ್ತೀಸೆನನಿಂದ ಪುನಃಸ್ನಾನ ತಕ್ಕೊಂಡು, ಸದ್ಯದಲ್ಲಿ ಆ ಕಾರ್ಯಕ್ಕೆ ಬಹು ಬಲವುಳ್ಳ ಸಹಾಯಕನಾದನು. ಮತ್ತೀಸೆನನು ತಾನೆ ಕೆಲಸ ನಡಿಸಿದ್ದು ಸಾಕೆಂದನ್ನದೆ, ತನ್ನ ಅಪಾಸ್ತಲರನ್ನು ಹಾಲ್ಲ, ಫ್ರೀಸ, ಜರ್ಮನಿ ದೇಶಗಳಿಗೆ ಸಹಾ ಕಳುಹಿಸಿದನು.

ವೆಸ್ತಫಾಲದ ಮಿನ್‌ಸ್ತರ್ ಎಂಬ ಪಟ್ಟಣದವರು ಅಧಿಕ ಗೆಲವಿನಿಂದ ಈ ಪಕ್ಷದವರನ್ನು ಅಂಗೀಕರಿಸಿದರು. ಅಲ್ಲಿಯವರು ಸ್ವಲ್ಪ ಮುಂಚೆ ಬಲಾತ್ಕಾರದಿಂದ ಸಭೆಗಳನ್ನು ಪುನರೂಪಿಸಿ, ಲುಥರನ ಬಂಡಿತ ಬೆದರಿಕೆಗೆ ಕಿವಿ ಕೊಡದೆ, ದಕ್ಷಿಣ ಪೂರ್ವದಿಂದ ಮ್ಯುಂಚರನ ದುರಾತ್ಮವನ್ನು ಸೇರಿಸಿ ಕೊಂಡಿದ್ದರು. ಇದಕ್ಕೆ ಮುಖ್ಯವಾಗಿ ಲಂಬೆರ್ತ ದೇವಾಲಯದ ಸಭಾಬೋಧಕನಾದ ಬೆರ್ನದ ರೊಥ್ಮನನು ಒಳಗಾಗಿ, ಮತ್ತೀಸೆನನ ನಿಯೋಗಿಗಳಿಂದ ತಿರಿಗಿ ಸ್ನಾನ ತಕ್ಕೊಂಡವರಲ್ಲಿ ಮೊದಲನೆಯವನಾದನು. ಅವನನ್ನು ಅನೇಕ ಸಭಾಬೋಧಕರೂ ಚೂರಿ ಜನರೂ ಅನುಸರಿಸಿದರು. ಲೈದೆನದ ಯೋಹಾನನು ಸಹಾ ಆ ಪಟ್ಟಣಕ್ಕೆ ಬಂದು ಕೆಲಸ ನಡಿಸಲಾಗಿ, ಅವರ ಕಾರ್ಯವು ಅಧಿಕ ಪ್ರಶಸ್ತವಾಯಿತು. ಆದರೆ ಕಡೆಯಲ್ಲಿ ಆ ಮಹಾ ಪ್ರವಾದಿ ತಾನೇ ಅಲ್ಲಿಗೆ ಬಂದು, ದೇವರ ಪ್ರಕಟಣೆಯಿಂದೆಂದು ಹೇಳಿ, ದೇವರು ಮಿನ್‌ಸ್ತರವನ್ನು ಪರಿಶುದ್ಧ ಪಟ್ಟಣವಾದ ಚಿಯಾನು ಆಗಿ ಆರಿಸಿ ಕೊಂಡಿದ್ದಾನೆಂದೂ, ಆಯಲ್ಪಟ್ಟವರೆಲ್ಲರು ಒಟ್ಟು ಕೂಡಿ ಅಲ್ಲಿಂದ ರಾಜ್ಯವನ್ನು ವಿಸ್ತರಿಸ ಬೇಕೆಂದೂ ಪ್ರಸಂಗಿಸಿದಾಗ, ಮಿನ್‌ಸ್ತರದ ಪುನಃಸ್ನಾನದ ಕಾರ್ಯವು ಗುಡ್ಡೆಗೆ ಬೇರಿ ಹತ್ತಿದ ಹಾಗೆ ಮುಂದರಿಯಿತು. ಪ್ರವಾದಿ ಬಂದಂದಿನಿಂದ ಅಪರೂಪವಾದ ಕಾರ್ಯಗಳು ನಡದವು. ಪಾರಮಾರ್ಥಿಕರೂ ಲೌಕಿಕರೂ, “ಮಾನಸಾಂತರ ಪಟ್ಟು ನಡತೆ ಸಮ ಮಾಡಿ ಕೊಳ್ಳಿರಿ, ಸ್ನಾನ ತಕ್ಕೊಂಡವರಾಗಿ ಸ್ನಾನ ತಕ್ಕೊಳ್ಳದ ಪರರನ್ನು ಹತ ಮಾಡಿರಿ” ಎಂದು ಒದರುತ್ತಾ, ಪಟ್ಟಣ ಸುತ್ತಿ ಕೊಂಡರು. ಬಾಲ್ಯದಲ್ಲಿ ಸ್ನಾನ ಹೊಂದಿದವರೆಲ್ಲರಿಗೆ ಸ್ನಾನವಿಲ್ಲದ ಪರರೆಂದು ಹೇಳಿದರು. ಆಗ್ಯೆ ಭಯಂಕರವಾದ ಉತ್ಪಾತವಾದ ಹಾಗೆ ಆಯಿತು. ಹೆಂಗಸರು ಕೂದಲು ಬಿಟ್ಟು, ಬೀದಿಬೀದಿ ಓಡುತ್ತಾ, ನೆಲಕ್ಕೆ ಬಿದ್ದು, ಕೈಗಳನ್ನು ಚಾಚಿ, ಕ್ರೂಜೆಯ ಆಕೃತಿಯನ್ನು ಮಾಡಿದರು. ಅಥವಾ ತಾವು ರಕ್ಷಕನನ್ನು ಕಂಡವರಂತೆ, ಮೈ ಮರತು, ಆಕಾಶದಲ್ಲಿ ಆತನಿಗೆ ಎದುರಾಗಿ ಹಾರುವವರ ಹಾಗೆ ಮಾಡಿದರು; ಕೈ ಚಪ್ಪಳಿಸಿ, ಎದೆ ಬಡಕೊಂಡು, ಗಂಡಸರಿಗಿಂತ ಹೆಚ್ಚಾಗಿ ಒದರಿ, “ಮಾನಸಾಂತರ ಪಡಿರಿ, ಸ್ನಾನವಿಲ್ಲದ ಪರರನ್ನು ಹತ ಮಾಡಿರಿ” ಎಂದು ಬೊಬ್ಬೆ ಹಾಕಿದರು.

ಪಟ್ಟಣದ ಅಧಿಕಾರಿಗಳು ಇದನ್ನು ಶಾಂತ ಪಡಿಸ ಬಹುದಿತ್ತು; ಆದರೆ ಅವರು ಅಪಧೈರ್ಯದಿಂದ ಪುನಃಸ್ನಾನಿಕರಿಗೆ ಆಶ್ರಯ ಕೊಟ್ಟರು; ಆದರೆ ಇವರು ತಮಗೆ ಬಲ

ಬಂತೆಂದು ಕಂಡ ಕೂಡಲೆ, ಪಟ್ಟಣದ ಅಧಿಕಾರಿಗಳು ತೋರಿಸಿದ ದಯಕ್ಕೆ ಬದಲಾಗಿ, ಅವರನ್ನು ಕೆಲಸದಿಂದ ತೆಗದು ಬಿಟ್ಟರು. ಈಗ ಎಲ್ಲಾ ಅಧಿಕಾರವು ಮತ್ಥೀಸೆನನ ಕೈಯಲ್ಲಿ ಬಂತು. ಇದರಿಂದ ಮೊದಲಾಗಿ ದೇವಾಲಯಗಳಿಗೆ ನಷ್ಟ ಪ್ರಾಪ್ತಿಯಾಯಿತು. ಹ್ಯಾಗೆಂದರೆ, ಅವರು ಅವುಗಳ ಭಂಡಾರವನ್ನು ಸುಲು ಕೊಂಡರು, ಪೀಠಗಳನ್ನೂ ಸ್ನಾನಪಾತ್ರಗಳನ್ನೂ ರೂಪಗಳನ್ನೂ ಒಡದು ಬಿಟ್ಟರು, ಕ್ರೂಜೆಗಳನ್ನು ಕಾಲುಗಳಿಂದ ತುಳದರು. ಈ ಪ್ರಕಾರ ಪರಿಶುದ್ಧ ಪಟ್ಟಣದಲ್ಲಿದ್ದ ಅಶುದ್ಧವಾದ್ದೆಲ್ಲಾ ಹೋಯಿತು; ಪುನಃಸ್ನಾನದ ಒಡಂಬಡಿಕೆಯ ಗುರ್ತನ್ನು ತಕ್ಕೊಳ್ಳದವರೆಲ್ಲರನ್ನು ಡಾಣ್ಣೆ ಕತ್ತಿಯಿಂದ ಪಟ್ಟಣದ ಹೊರಗೆ ಓಡಿಸಿದರು. ಅನೇಕರು ತಾವಾಗಿ ಪಲಾಯನ ಮಾಡಿದರು. ಆದರೂ ಅಷ್ಟಕ್ಕೆ ಹೆಚ್ಚಾಗಿ ಚಿಯೋನಿನವರು ಒಳಗೆ ನುಗ್ಗಲಾಗಿ, ನಾಲ್ಕು ಕಡೆಯಿಂದಲೂ ಪೊಳ್ಳು ಹಲ್ಕಿ ಜನರು, ಮುಖ್ಯವಾಗಿ ಹೆಂಗಸರು, ಬಹಳ ಬಹಳ ಬಂದು ಶೇರಿದರು. ಹೀಗಾಗಿ ಗಂಡಸರಿಗಿಂತ ಹೆಂಗಸರು ನಾಲ್ಕು ಪಾಲು ಆದರು. ಎಲ್ಲಾ ಸಭೆಯ ಆಸ್ತಿ, ಓಡಿಸಲ್ಪಟ್ಟವರ ಮತ್ತು ಓಡಿ ಹೋದವರ ಎಲ್ಲಾ ಹೊನ್ನು ಹಣ, ಒಡಂಬಡಿಕೆಯವರ ಎಲ್ಲಾ ಸ್ಥಿರ ಆಸ್ತಿ, ಒಂದೇ ಭಂಡಾರದಲ್ಲಿ ಹಾಕಿ, ಅದರಿಂದ ಒಬ್ಬೊಬ್ಬನು ಬೇಕಾದಷ್ಟು ತೆಗದನು. ಈ ಪ್ರಕಾರ ಸರ್ವರು ಸುಖ ಸಾಮ್ರಾಜ್ಯವಾಗಿ ಬದುಕಿದರು.

ತನ್ಮಧ್ಯ ಮಿನ್ಸ್ತರದ ಮುಂಚಿನ ಅಧ್ಯಕ್ಷನು ಸಹಾಯದಳ ತಕ್ಕೊಂಡು, ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಮತ್ಥೀಸೆನನು ಮೂವತ್ತು ಮಂದಿಯನ್ನು ತಕ್ಕೊಂಡು, ತನಗೆ ಜಯ ನಿಶ್ಚಯವೆಂದು, ಅವರ ಮೇಲೆ ಹೋಗಿ ಬಿದ್ದನು. ಆದರೆ ಬೆಳಕಿನ ಮೇಲೆ ಪತಂಗ ಹಾರಿದ ಹಾಗೆ ಆಯಿತಲ್ಲಾ. ಒಬ್ಬ ಪಾಯದಳದವನು ಅವನನ್ನು ಭಲ್ಲೆಯಿಂದ ತಿವಿದು ಹತ ಮಾಡಿದನು. ಆಗ್ಯೆ ಪುನಃಸ್ನಾನಿಕರು ಬಹು ದುಃಖಿತರಾದಾಗ, ಲೈದೆನದ ಯೋಹಾನನು ಅತಿ ಗೆಲವಿನಿಂದ ಅವರ ಮಧ್ಯಕ್ಕೆ ಓಡಿ ಬಂದು, ಹೀಗೆಯೆ ಆಗ ಬೇಕೆಂದು ತನಗೆ ಆತ್ಮದಿಂಡ ಮುಂಚೆಯೆ ತಿಳಿಸಿ ಇತ್ತು. ತಾನು ಮತ್ಥೀಸೆನನ ಉತ್ತರಾಧಿಕಾರಿಯೂ, ಅವರನ್ನು ಭಾಗ್ಯವುಳ್ಳ ಚಿಯೋನು ರಾಜ್ಯದಲ್ಲಿ ಮೇಯಿಸಿ ಪಾಲಿಸಿ ನಡಿಸುವವನೂ ಆಗಿದ್ಧೇನೆಂದು ಹೇಳಿದನು. ಆಗ್ಯೆ ಜನರು ಉಪಶಮಿಸಿ ಕೊಂಡು, ಅವನಿಗೆ ವಶವಾದರು, ಯೋಹಾನನು ಹೊಸತಾದ ಸುಖಾಚಾರಗಳನ್ನು ಉಂಟು ಮಾಡಿದನು. ಹಾಗೆಯೇ ಮತ್ಥೀಸೆನನ ಕೆತ್ತಿದ ರೂಪದಂತೆ ಅತಿ ಸುಂದರವಿಧವೆಯನ್ನು ಮದಿವೆ ಮಾಡಿ ಕೊಳ್ಳುವ ಹಾಗೆ, ತಾನು ಮದಿವೆಯಾದವನಾಗಿದ್ದದರಿಂದ, ದೇವರ ಪ್ರಕಟಣೆಯಿಂದೆಂದು, ಬಹು ಪತ್ನಿತ್ವದ ಆಚಾರವನ್ನು ಆರಂಭಿಸಿದನು. ಜನರು ಅವನನ್ನು ಹೊಗಳಿದರು. ಮತ್ತು ಅಲ್ಪರೆಂದು

ಅನಿಸಿಕೊಳ್ಳ ಮನಸ್ಸಿಲ್ಲದವರೆಲ್ಲರು ಕೆಲವು ಹೆಂಡರನ್ನು ಮದಿವೆ ಮಾಡಿ ಕೊಂಡರು; ಹೆಂಗಸರಿಗೆ ಕಡಿಮೆ ಇರಲಿಲ್ಲವೆಂದು ನಾವು ಮುಂಚೆಯೇ ಹೇಳಿದ್ದೇವಲ್ಲಾ! ಯೋಹಾನನು ಹದಿನೇಳು ಮಂದಿಯನ್ನು ಮದಿವೆ ಮಾಡಿ ಕೊಂಡನು. ಜನರು ಮಹಾ ಸುಖದಲ್ಲಿ ಸೊಕ್ಕಿ, ಘಟ್ಟಿ ಥಪ್ಪವಾದ ಕೋಟೆಯ ಗೋಡೆಗಳೊಳಗೆ ಕೂತು, ಶತ್ರುಗಳನ್ನು ನಿಂದಿಸುತ್ತಾ, ತುಚ್ಛೀಕರಿಸುತ್ತಾ, ದಿನದಿನ ಅಧಿಕಾಧಿಕವಾಗಿ ಸೊಕ್ಕಿನಿಂದ ಮೆರೆದರು.

ಇನ್ನೊಂದು ಅಪರೂಪ ಸಂಗತಿ ಆಯಿತು. ಅಕ್ಕಸಾಲಿಗ ದುಸೆಂಚೂರ್ ಎಂಬವನು ಜನರ ಮುಂದೆ ತನಗೆ ದಿವ್ಯ ಪ್ರಕಟಣೆಯಾಯಿತೆಂದು ಹೇಳಿ, ಚಿಯೋನಿಗೆ ದೃಶ್ಯವಾದ ಅರಸನು ಬೇಕು, ಪರಿಶುದ್ಧನೂ ಪ್ರವಾದಿಯೂ ಆಗಿರುವ ಲೈದೆನದ ಯೋಹಾನನು ಈ ಅರಸನು ಇರ ಬೇಕು; ಈತನು ಸಮಸ್ತ ಭೂಮಂಡಲದ ಮೇಲೆ ಸಕಲ ಮಹಾರಾಜ, ರಾಜ, ಅರಸು, ಶ್ರೀಮಂತರ ಮೇಲೆ ಅಧಿಕಾರ ನಡಿಸ ಬೇಕು, ಎಂದು ಸಾರಿದನು. ಝುಗಝುಗಿಸುವ ಒಂದು ಖಡ್ಗವನ್ನು ಯೋಹಾನನ ಕೈಯಲ್ಲಿಟ್ಟು "ನೀತಿಯ ಈ ಖಡ್ಗವನ್ನೂ ಅದರೊಡನೆ ಎಲ್ಲಾ ಅಧಿಕಾರವನ್ನೂ ತಕ್ಕೊ" ಎಂದು ಹೇಳಿದನು. ಅವನು ಯೋಹಾನನ ತಲೆಯ ಮೇಲೆ ಅಭಿಷೇಕದ ಎಣ್ಣೆಯನ್ನು ಹೊಯಿದಾಗ, ಜನರೆಲ್ಲಾ ಜಯ ಜಯ ಎಂದು ಆರ್ಭಟಿಸಿದರು. ಯೋಹಾನನು ತನ್ನ ರಾಜ್ಯವನ್ನು ಸಮಸ್ತ ಕಡೆಯಲ್ಲಿಯೂ ಸ್ಥಾಪಿಸುವ ಬಗ್ಯೆ ೨೭ ಅಪೋಸ್ತಲರನ್ನು ಕಳುಹಿಸಿ ಕೊಟ್ಟನು. ಇವರು ಅತ್ಯಾಸಕ್ತಿಯಿಂದ ಪ್ರಸಂಗಿಸಿದರು. ಆದರೆ ಎದುರ್ನಿಲ್ಲುವ ಸಮಸ್ತ ಅರಸುಗಳನ್ನು ಕೊಂದು ಹಾಕ ಬೇಕೆಂದು ಅವರು ಪ್ರಸಂಗಿಸಿದಾಗ, ಅರಸುಗಳು ಅವರನ್ನು ಹಿಡಿಸಿ, ತಲೆ ಹ್ಯೊಸಿ, ಗಲ್ಲಕ್ಕೆ ಹಾಕಿ ಬಿಟ್ಟರು.

ಆದರೆ ಮುನ್'ಸ್ತರದಲ್ಲಿ ಸಮಸ್ತ ಅಧಿಕಾರವೂ ಮಹಿಮೆಯೂ ಯೋಹಾನನಿಗೆ ಬಂತು. ಅವನು ಅಪರೂಪವಾದ ಅಲಂಕಾರ ಧರಿಸಿ ಕೊಂಡನು. ತಲೆಯ ಮೇಲೆ ಮುಮ್ಮಡಿ ಕಿರೀಟ, ಕಂಠಕ್ಕೆ ಭಾರವಾದ ಭಂಗಾರದ ಸರಪಣಿ, ಅದಕ್ಕೆ ಲೋಕಾಧಿಕಾರ ಕಾಣಿಸುವ ಗುರ್ತಾಗಿ ಅಪರೂಪವಾದ ನೀಲರತ್ನ. ಇದಲ್ಲದೆ ಭಂಗಾರದ ಕೇದಗೆ ಕಟ್ಟಿ ಕೊಂಡು, ಅದರಲ್ಲಿ "ಸರ್ವರ ಮೇಲೆ ನೀತಿಯ ಅರಸನು" ಎಂದು ಕೆತ್ತಿಸಿದನು. ಈ ಪ್ರಕಾರ ಯೋಹಾನನು ಹೊಸ ಪೋಪನೂ ಎರಡನೆ ಕ್ರಿಸ್ತನೂ ಆದ ಹಾಗೆ ಆಯಿತು. ಅವನು ಅರಮನೆಗೂ ರಾಜ್ಯಕ್ಕೂ ಸೇನಾಧಿಪತಿಗಳೂ ಪ್ರಧಾನಿಗಳು ಮುಂತಾದ ಘನ ಮಹಿಮೆಯುಳ್ಳ ಉದ್ಯೋಗಸ್ಥರನ್ನು ನೇಮಿಸಿದನು. ಹೈಂಚ ಕ್ರೆಚ್ಟಿಂಗ್ ಅವನ ಪ್ರಧಾನಿಯಾದನು. ಮುಂಚೆ ಪಟ್ಟಣನಾಯಕನಾಗಿದ್ದ ಬೆರ್ನ್'ದ ಕ್ನಿಪ್ಪರ್'ದೊಲ್ಲಿಂಗ್ ಮಾರೆಕಾರರ ಅಧಿಪತಿಯಾದನು. ಅವನು ನ್ಯಾಯಸ್ಥಾ

ನಕ್ಕೆ ಹೋಗುವಾಗ್ಯೆ, ಪಾರಮಾರ್ಥಿಕ ಲೌಕಿಕ ಅಧಿಕಾರಿಗಳು ಅವನಲ್ಲಿ ಕೂಡಿಯವೆ ಎಂಬದಕ್ಕೆ ಗುರ್ತಾಗಿ, ಕಿಂಕರರು ಖಡ್ಗವನ್ನೂ ಸತ್ಯವೇದಪುಸ್ತಕವನ್ನೂ ಅವನ ಮುಂದೆ ಹಿಡಿದು ನಡದರು. ಸಂತೇ ಬೀದಿಯಲ್ಲಿ ಬಂಗಾರ ರಕ್ತಾಂಬರ ಉಳ್ಳ ಎತ್ತರವಾದ ಸಿಂಹಾಸನ ಇಟ್ಟಿತ್ತು. ನ್ಯಾಯ ವಿಚಾರಿಸುವದಕ್ಕೆ ಅದರಲ್ಲಿ ಕೂತು ಕೊಂಡನು. ಯಾರಿಗಾದರೂ ವ್ಯವಹಾರವಿದ್ದರೆ, ಅದನ್ನು ಅರಿಕೆ ಮಾಡುವ ಮುಂಚೆ, ನೆಲದಲ್ಲಿ ಅಡ್ಡ ಬೀಳ ಬೇಕೆಂದು ಅಪ್ಪಣೆ ಇತ್ತು. ಸಂತೇ ಸ್ಥಳದಲ್ಲಿಯೆ ಬಹಿರಂಗವಾಗಿ ದೇವಾರಾಧನೆ ನಡಿಯಿತು. ಇದಾದ ಮೇಲೆ, ಅದೇ ಸ್ಥಳದಲ್ಲಿ ನಾಟ್ಯವಾಡುವ ಪದ್ಧತಿ ಮಾಡಿದರು.

ಅತ್ತಕಡೆಯಲ್ಲಿ ಮುತ್ತಿಗೆ ಹಾಕಿದವರು ಹಲ್ಲ ಮಾಡಲಿಕ್ಕೆ ನೋಡಿದ್ದು ಸಹಾ ನಿರರ್ಥಕವಾಯಿತು. ಹ್ಯಾಗಂದರೆ ಪುನಃಸ್ನಾನಿಕರು ಬಹು ಧೈರ್ಯದಿಂದ ಸಾಧಿಸಿದರು. ಹೆಂಗಸರು ಕುದಿಯುವ ಸುಣ್ಣವನ್ನೂ ಉರಿಯುವ ರಾಳವನ್ನೂ ಮೇಲೆ ಬಂದು ಬೀಳುವವರ ಮೇಲೆ ಹೊಯ್ದರು. ಈ ಪ್ರಕಾರ ಪಟ್ಟಣವನ್ನು ಕೈವಶ ಮಾಡಿ ಕೊಳ್ಳಲಾರದೆ, ಶತ್ರುಗಳು, ಅವರು ಆಹಾರವಿಲ್ಲದೆ ನಾಶವಾಗುವ ಹಾಗೆ, ಎಲ್ಲಾ ಕಡೆಯಿಂದಲೂ ಪಟ್ಟಣ ಸುತ್ತಿ ಕೊಂಡರು. ಆಗ್ಯೆ ಚಿಯೋನಿನ ಸ್ವರ್ಗೀಯ ಸುಖಕ್ಕೆ ಬಂದ ಗತಿ ಏನು ಹೇಳಲಿ! ಆಹಾರ ದಿನದಿನ ಕಡಿಮೆ ಆಯಿತು. ಜನರು ಹಶಿವೆಯಿಂದ ಸಾಯುವದಾಯಿತು. ಅನೇಕರು ಮನುಷ್ಯಮಾಂಸ ತಿಂದರು. ಹೀಗಾದರೂ ಯಾರೂ ದೂರ ಬಾರದು, ಹಾಗೆ ಮಾಡಿದವರನ್ನು ಹತ ಮಾಡಿ ಬಿಡುವರು. ಬೆರ್ನ್‌ದ ಕ್ನಿಪ್ಪರ್ ಡಾಲ್ಲಿಂಗನು ಅಸಂಖ್ಯಾತವಾದ ತಲೆಗಳನ್ನು ಕಡದನು. ಅನೇಕ ಸರ್ತಿ ಇಡೀ ಶರೀರವನ್ನು ಇಮ್ಮಡಿಯಾಗಿ ಕಡದು ಬಿಟ್ಟನು. ಒಂದು ಸಾರಿ ಅರಮನೆಯಲ್ಲಿ ಥಾಟು ತಮಾಶೆ ಮಾಡುತ್ತಿರುವಾಗ್ಯೆ, ರಾಣಿಗಳಲ್ಲಿ ಒಬ್ಬಳು ಜನರ ದುಖ್ಖಾವಸ್ಥೆಗೋಸ್ಕರ ಗೋಳಾಡಿದ್ದಕ್ಕೆ, ಯೋಹಾನನು ತಾನೇ ಸ್ವಂತ ಕೈಯಿಂದ ಸಂತೇ ಸ್ಥಳದಲ್ಲಿ ಅವಳ ತಲೆ ಕಡದು ಬಿಟ್ಟನು; ಅವನ ಬೇರೆ ಹೆಂಡರು ಆಗ್ಯೆ ಅವನ ಸುತ್ತಲೂ ನಿಂತಿರಲಾಗಿ, ಅವನು ದೇವರಿಗೆ ಸ್ತೋತ್ರಗೀತವನ್ನು ಹಾಡಿ, ಅವರೊಡನೆ ಈ ರಕ್ತಾಂಗಣದಲ್ಲಿ ಕುಣಿದಾಡಿದನು. ಅವನ ಸೋತು ಹೋದ ಜನರು ಅವನ ಹಿಂದ ಕಡೆಯಲ್ಲಿ ಹಾಗೆಯೆ ಮಾಡಿದರು.

ಕಡೆಯಲ್ಲಿ ದ್ರೋಹದಿಂದ ಪಟ್ಟಣವು ಶತ್ರುವಶವಾದಾಗ, ಅವರ ಸೈನ್ಯವು ಕೋಪಭ್ರಷ್ಟವಾಗಿ ಒಳ ಹೊಕ್ಕು, ಉಳಿದವರನ್ನು ನಿಷ್ಕರುಣೆಯಾಗಿ ಕೊಂದು ಬಿಟ್ಟರು. ಕೆಳಗೆ ಮೊನೆ ಮೇಲೆ ಮಾಡಿ ಹಿಡಿದ ಭಲ್ಲೆಗಳಲ್ಲಿ ಜನರನ್ನು ಕಿಟಕಿಗಳಿಂದ ದೂಡಿ ದಾಬ್ಬಿದರು. ಯೋಹಾನನು ಜಯಭ್ರಷ್ಟನಾಗಿ ಅಡಗಿ ಕೊಂಡಿದ್ದ ಒಂದು ಗುಣಿಯ

ಲ್ಲಿ ಶಿಕ್ಕಿದಾಗ, ಅವನು ಗರ್ವದ ಹೆಮ್ಮೆಯಿಂದ “ದೇವರ ಅಭಿಷಿಕ್ತನ ಮೇಲೆ ಕೈ ಹಾಕ ನಾಡುವವನು ನರಕದಲ್ಲಿ ಎಂದೆಂದಿಗೂ ಸುಡ ಬೇಕು” ಎಂದು ಒದರಿದನು.

ಕಡೆಯಲ್ಲಿ ಈ ನರಕ ಚಿಯಾನಿನ ಅರಸನ ಗತಿ ಏನಾಯಿತಂದರೆ: ಕಬ್ಬಿಣದ ಪಂಜರದಲ್ಲಿ ಅವನನ್ನಿಟ್ಟು, ದೇಶದಲ್ಲೆಲ್ಲಾ ತಿರುಗಾಡಿಸಿ, ಮಿನ್‌ಸ್ತ್ರರಕ್ಕೆ ತಿರಿಗಿ ತಂದು, ಅವನ ಸಿಂಹಾಸನದ ಸ್ಥಳದಲ್ಲಿ ಸಂತೇ ಜಾಗದಲ್ಲಿ ಕಾಲ್ಲಿಸಿದರು. ಇಬ್ಬರು ಮಾರೆಕಾರರು ಎಡ ಬಲಕ್ಕೆ ನಿಂತು, ಒಂದು ತಾಸು ವರೆಗೆ ಬೆಂಕಿಯಲ್ಲಿ ಉರಿಯುವ ಇಕ್ಕಳಗಳಿಂದ ಚಿಮುಟುತ್ತಾ ಇದ್ದರು. ಆಗೈ ಅವನ ಮದ ಕುಂದಿತು. ಅವನು ಬಾಬ್ಟೆ ಹ್ಯಾದು, ತಾನು ಹತ್ತು ಸಾರಿ ಮರಣಕ್ಕೆ ಪಾತ್ರನೆಂದು ಅರಿಕೆ ಮಾಡಿದನು. ಆ ಮೇಲೆ ಬೆಂಕೀ ಕಿಡಿಯುರಿಯುವ ಕಠಾರಿಯಿಂದ ಅವನನ್ನು ತಿವಿದು ಕಾಂದರು. ಇದು ೧೫೩೬ನೇ ಜನವರಿ ೨೨ಲ್ಲು ಆಯಿತು.

ಕ್ರೆಚ್ಚಿಂಗ್ ಕ್ನಿಪ್ಪರ್‌ದಾಲ್ಲಿಂಗ್ ಎಂಬವರಿಗೂ ಇದೇ ಅವಸ್ಥೆ ಆಯಿತು. ಅವರ ಹೆಣಗಳನ್ನು ಕಬ್ಬಿಣದ ಪಂಜರಗಳಲ್ಲಿ ಹಾಕಿ, ಲಂಪೆರ್ತ ದೇವಾಲಯದ ಗೋಪುರದ ಮೇಲೆ ತೂಗ ಹಾಕಿದರು. ಆ ಪಂಜರಗಳು ಇಂದಿನ ವರೆಗೂ ಅಲ್ಲೇ ಅವೆ.

---

§ ೧೬.

# ನಿಜ ಸುವಾರ್ತಾಚಿಯೋನಿನ ಅಭಿವೃದ್ಧಿ

ಹೀಗೆ ಮಾಡುವ ರೋಮುಪಕ್ಷದವರು ಈ ಮಿನ್‌ಸ್ತ್ರರದ ಅನರ್ಥ ರಂಚಾರೂಢಿಗೆ ಪುನಃಸ್ಥಾಪನೆಯೆ ಕಾರಣವೆಂದು ಹೇಳದೆ ಬಿಡಲಿಲ್ಲ. ಆದರೆ ಈಗ ಅಂಥಾ ಅಪವಾದದಿಂದ ಕೇಡು ಬರುವ ಹಾಗೆ ಇರಲಿಲ್ಲ. ಹ್ಯಾಗಂದರೆ ಸುವಾರ್ತಾಪಕ್ಷದವರ ಬಾಧನೆಯು ಪ್ರಕಟವಾಗಿ ತಿಳಿದು ಬಂದಿತ್ತು; ಔಗ್ಸ್‌ಬುರ್ಗದ ಅರಿಕೆಯಿಂದ ಇವರಿಗೂ ಅವರಿಗೂ ಹೆಚ್ಚು ಕಡಿಮೆ ಉಂಟೆಂದು ಪ್ರತ್ಯಕ್ಷವಾಗಿತ್ತು. ಇದಲ್ಲದೆ ಲುಥರನು ಹೇಳುವ ಪ್ರಕಾರ “ಮಿನ್‌ಸ್ತ್ರರದಲ್ಲಿ ಪಿಶಾಚನು ದೇವರ

ಷಣೆಯಿಂದ ಕಾರ್ಯವನ್ನು ಅತ್ಯುಪಹಾಸ್ಯವಾಗಿ ನಡಿಸಲಾಗಿ," ಕುರುಡನು ಸಹಾ ಇದು ವಿತ್ತೆನ್‌ಬೆರ್ಗದವನ ಆತ್ಮವೂ ಕೃತ್ಯವೂ ಅಲ್ಲವೆಂದು ಗ್ರಹಿಸದಿರಲಿಲ್ಲ. ಇದರ ಹೊರತು ಪುನಃಸ್ನಾನಿಕರು ತಾವೆ, ಲುಥರನು "ಪೋಪನಿಗಿಂತ ಕಡೆ ಎಂದು" ನಿಂದಿಸಲಾಗಿ, ಇಂಥಾ ಬುದ್ಧಿಯಿಲ್ಲದ ಅಪವಾದ ಆರೋಪಣೆಯಿಂದ ತಮ್ಮ ಕಾರ್ಯವನ್ನು ತೀರಾ ಕೆಡಿಸಿ ಕೊಂಡರು.

ಅದರಿಂದ ಅಡ್ಡ ಕಟ್ಟಿದವರಾಗಿರದೆ, ನಿಜವಾಗಿ ಪುಟಕ್ಕೆ ಹಾಕಿದವರಂತಾಗಿ, ಸುವಾರ್ತಾಸಭೆಯವರು ಅಭಿವೃದ್ಧಿಯಾಗಿ ಎಡತಡೆ ಇಲ್ಲದೆ ಬೆಳಬೆಳದು ಬಲಗೊಂಡು ಅಧಿಕಾಧಿಕ ಹೆಚ್ಚಿದರು. ಈ ಬಹಿರಂಗದ ವೃದ್ಧಿಯನ್ನು ಸಹಾ ತಕ್ಕಷ್ಟು ಕೇಳುವಾ.

೧೫೩೪ಲ್ಲಿ ದೇಶಗಡಿದಾಟಿಸಿದ ವಿರ್ತೆಮ್‌ಬೆರ್ಗದ ರಾಜನಾಯಕ ಉಲ್ರಿಖನು ನಾಯಕದೇಶವನ್ನು ತಿರಿಗಿ ಹೊಂದಿದನು. ಗಡಿಪಾರಾಗಿದ್ದ ಸಮಯದಲ್ಲಿ ಸುವಾರ್ತೆಯನ್ನು ಕೇಳಿ, ತಿಳಿದು, ನಂಬಿ, ದೇಶಾಂತರದಿಂದ ಅಧಿಕ ಭಕ್ತಿಯುಳ್ಳವನಾಗಿ ತಿರಿಗಿ ಬಂದನು. ಬಂದ ಕೂಡಲೇ ತನ್ನ ದೇಶದಲ್ಲಿ ಸರ್ವರ ಅಪೇಕ್ಷೆಗೆ ಅನುಸಾರವಾಗಿ ಪುನಃಸ್ಥಾಪನೆಯನ್ನು ಆರಂಭಿಸಿದನು. ೧೫೩೯ಲ್ಲಿ ಸಕ್ಸದ ರಾಜನಾಯಕನ ಸೀಮೆಯಲ್ಲಿಯೂ ವಿಶ್ವಾಸದ ಧ್ವಜವು ನೆಟ್ಟಿತು. ಆ ಕಾಲದಲ್ಲಿ ಆಯಿಕೆಯ ಅರಸ್ತನವೆಂದೂ ನಾಯಕತ್ವವೆಂದೂ ಎರಡು ಭಾಗವಾಗಿತ್ತು. ಆದರೆ ರಾಜನಾಯಕ ಗೆಯೊರ್ಗನು, ಅವನ ದಾಯಾದಿಯಾದ ಪ್ರಿಯ ಆಯಿಕೆಯ ಅರಸನ ಹಾಗೆ ಎಷ್ಟು ಮಾತ್ರವೂ ಇರದೆ, ಜೀವಾಂತ್ಯದ ವರೆಗೂ ಲುಥರನ ಖಂಡಿತ ಎದುರಾಳಿಯಾಗಿದ್ದನು. ಆದರೆ ೧೫೩೯ಲ್ಲಿ ಅವನು ತೀರಿ ಹೋದ ಮೇಲೆ, ಅವನ ಉತ್ತರಾಧಿಕಾರಿಯಾದ ಹೈನ್ರಿಕನು ತಡ ಮಾಡದೆ, ಸುವಾರ್ತಾಕಾರ್ಯಕ್ಕೆ ಸಮ್ಮತವಾದನು. ಆಗ್ಯೆ "ಅವನ ಪ್ರಜೆಯವರು ಮೊಣಕಾಲೂರಿ, ಈ ಮಹಾ ರಕ್ಷಣೆಗೋಸ್ಕರ ದೇವರಿಗೆ ಕೃತಜ್ಞಾಪಿಸಿದರು."

ಬ್ರನ್‌ದೆನ್‌ಬುರ್ಗದಲ್ಲಿಯೂ ಸುವಾರ್ತಾಕಾರ್ಯವು ಅದೇ ಕಾಲದಲ್ಲಿ ಪ್ರಶಸ್ತವಾಯಿತು. ಆಯಿಕೆಯ ಅರಸನಾದ ಮೊದಲನೆ ಯೊವಖೀಮನು ಪುನಃಸ್ಥಾಪನೆಯ ಮಹಾ ವೈರಿಯಾಗಿರಲಾಗಿ, ಅವನ ಸ್ವಂತ ರಾಣಿ ಎಲಿಸಬೇತಳು ಪುನಃಸ್ಥಾಪನೆಗೆ ಒಪ್ಪಿಗೆಯಾಗಿದ್ದದರಿಂದ, ಅವನ ಮರಣಕರ ಕೋಪಕ್ಕೆ ತಪ್ಪಿಸಿ ಕೊಂಡು, ದೇಶಾಂತರ ಹೋಗ ಬೇಕಾಯಿತು. ಆದರೆ ಅವನ ಮಗನೂ ಉತ್ತರಾಧಿಕಾರಿಯೂ ಆಗಿದ್ದ ಎರಡನೇ ಯೊವಖೀಮನು ೧೫೩೯ನೆಯಿಂದ ಪ್ರಕಟವಾಗಿ ಸುವಾರ್ತೆಗೆ ಒಪ್ಪಿ ಕೊಳ್ಳಲಾಗಿ, ಅವನ ಪ್ರಜೆಯವರು ಬಹು ಹರ್ಷದಿಂದ ದೇವರನ್ನು ಹೊಗಳಿದರು.

೧೫೪೨ರಲ್ಲಿ ಪುನಃಸ್ಥಾಪನೆಯ ಕೇವಲ ವೈರಿಯೂ ಅತಿ ದುಷ್ಟ ಮನುಷ್ಯನೂ ಆಗಿದ್ದ ಬ್ರೌನ್‌ಶ್ವೈಗವೊಲ್‌ಫೆನ್‌ಬ್ಯುತ್ತ್ಲದ ರಾಜನಾಯಕ ಹೈನ್ರಿಕನನ್ನು ಅವನ ದುಷ್ಟ ಕಾರ್ಯಗಳಿಗಾಗಿ ನೆರೆ ಅರಸುಗಳು ಯುದ್ಧದಲ್ಲಿ ಜೈಸಿ, ಓಡಿಸಿ, ಸೀಮೆಯಲ್ಲೆಲ್ಲಾ ಬಹುಕಾಲದಿಂದ ಅಪೇಕ್ಷಿಸಿದ ಸುವಾರ್ತಾಚಾರದ ದೇವಾರಾಧನೆಯನ್ನು ಸ್ಥಾಪಿಸಿದರು.

ಲುಥರನ ಜೀವಕಾಲದಲ್ಲಿಯೇ ಇಂದಿನ ವರೆಗೂ ಜರ್ಮನಿಯಲ್ಲಿ ಸುವಾರ್ತಾ ಪಕ್ಷಕ್ಕೆ ಶೇರಿರುವ ಸೀಮೆ ಎಲ್ಲಾ ಸ್ವಲ್ಪ ಕಡಿಮೆ ಶೇರಿ ಹೋಯಿತು. ಮತ್ತೆ ಶೇರಿದ್ದು ಯಾವದೆಂದರೆ: § ೯ಲ್ಲಿಯೂ ಈಗಲೇ ಮೇಲೆ ಹೇಳಿದ್ದೂ, ಪೊಮ್ಮರ, ಶ್ಲೇಸ್ವಿ, ಮೆಕ್ಲಿನ್‌ಬುರ್ಗ, ಹೊಲ್‌ಸ್ಟೈನ, ಪೂರ್ವಫ್ರೀಸ, ಆಯಿಕೆಯ ಫಲ್ಜ, ಬಾದೆನ, ನಸ್ಸೌ, ಸ್ವರ್ತ್ಸ್‌ಬುರ್ಗ ಮುಂತಾದ್ದು. ಇದಲ್ಲದೆ ಸ್ವತಂತ್ರ ಪಟ್ಟಣಗಳಾದ ಹಂಬುರ್ಗ, ಬ್ರೇಮೆನ್, ಲೂಬೆಕ್, ಮಗ್ದೆಬುರ್ಗ, ಮೈನ್ ತೀರದಲ್ಲಿರುವ ಫ್ರಂಕಫುರ್ತ, ಉಲ್ಮ, ಸ್ಟ್ರಾಸ್‌ಬುರ್ಗ ಮುಂತಾದ ಅನೇಕ ಪಟ್ಟಣಗಳೂ, ಸುಮಾರು ಅರ್ಧ ಜರ್ಮನಿ ದೇಶವೂ ಸ್ವಲ್ಪ ಕಾಲದೊಳಗೆ ಪೋಪನ ಒತ್ತಾಯದಿಂದ ಬಿಡುಗಡೆಯಾಯಿತು. ಆಗ್ಯೆ ಅದು "ನಮ್ಮ ಪ್ರಾಣವು ಪಕ್ಷಿಯ ಹಾಗೆ ಬೇಟೆಗಾರರ ಉರ್ಲಿನಿಂದ ತಪ್ಪಿಸಿ ಕೊಂಡಿತು; ಉರ್ಲು ಹರಿಯಿತು. ನಾವು ತಪ್ಪಿಸಿ ಕೊಂಡೆವು" ಕೀರ್ತ. ೧೨೪, ೭. ಎಂಬ ಮಾತನ್ನು ಹಾಡಿತು.

ಔಸ್ಟ್ರಿಯ, ಬೊಹೆಮ್ಯ, ಮೇರ ಮುಂತಾದ ಕಡು ರೋಮಿಯ ಪ್ರಭುಗಳ ದೇಶಗಳಲ್ಲಿ ಸಹಾ ಸುವಾರ್ತಾಕಾರ್ಯಕ್ಕೆ ಅನೇಕಾನೇಕ ಅನುಸಾರಿಗಳು ಇದ್ದರು. ಔಸ್ಟ್ರಿಯದ ಬಾಧ್ಯತೆಯ ಸೀಮೆಗಳ ಪ್ರಭುವಾಗಿದ್ದ ಅರಸು ಫರ್ದಿನಂದನನ್ನು ಅವನ ಸ್ವಂತ ರಾಜ್ಯಸಭೆಯವರು ಪುನಃಸ್ಥಾಪನೆಯನ್ನು ಆರಂಭಿಸ ಬೇಕೆಂದು ಬೇಡಿ ಕೊಂಡರಲ್ಲಾ! ಅವನಿಗೆ ಅದರಿಂದ ಬಹಳ ಚಿಂತೆ ಹುಟ್ಟಿತು. ಅವನು ಬಹು ಸಾಹಸದಿಂದ ತನ್ನ ರಾಜ್ಯದಲ್ಲಿ ಸುವಾರ್ತಾಕಾರ್ಯವು ಬಲಗೊಳ್ಳದ ಹಾಗೆ ಹಿಮ್ಮೆಟ್ಟಿಸ ನೋಡಿದನು. ಆದಾಗ್ಯೂ ಎಷ್ಟು ಒತ್ತಾಯವೂ ಹಿಂಸೆಯೂ ಇದ್ದರೂ, ಅವನ ಪ್ರಜೆಯಲ್ಲಿ ಅನೇಕರು ಸುವಾರ್ತಾಪಕ್ಷವನ್ನು ಬಿಡಲಿಲ್ಲ.

ಒಂದು ಪಾರಮಾರ್ಥಿಕ ಆಯಿಕೆಯ ಅರಸ್ತನ ಸಹಾ ಸುವಾರ್ತಾಪಕ್ಷದ ಸಭೆಗೆ ಒಳಗಾಗಲಿಕ್ಕಿತ್ತು. ಕೊಲೊನ್ಯದ ಆಯಿಕೆಯ ಅರಸನಾದ ವೃದ್ಧ ಹೆರ್ಮನನು ಸತ್ಯವನ್ನು ತಿಳುಕೊಂಡು, ತನ್ನ ಜನರಿಗೆ ಅದರ ಆಶೀರ್ವಾದ ಶಿಕ್ಕ ಬೇಕೆಂದು ಯತ್ನೈಸಿದನು. ಅವನು (೧೫೪೧—೪೩) ಬೂಸರನನ್ನೂ ಮೆಲಂತೊನನನ್ನೂ ಆಲೋಚನೆಗೆ ಕರದು, ಈ ಕಾರ್ಯ ಹ್ಯಾಗೆ ನಡಿಸ ಬೇಕಾದೀತೆಂದು ಅವರ ಹತ್ತರ ಕೇಳಿದನು.

ಆದರೆ ಬೇರೆ ಉದ್ಯೋಗಸ್ಥರು ಅವನಿಗೆ ಎದುರ್ನಿಂತು, ಪೋಪ ಮಹಾರಾಜರ ಸಹಾಯ ಅಪೇಕ್ಷಿಸಿದಾಗ, ವೃದ್ಧನಾದ ಆಯಿಕೆಯ ಅರಸನು ಎಷ್ಟು ಹೋರಾಡಿದರೂ, ಜಯ ಹೊಂದದಿರಲಾಗಿ, ಘನ ಬಿರುದು ಮಾನ ಅಧಿಕಾರಗಳನ್ನು ತ್ಯಜಿಸಿ, ತನ್ನ ಕುಟುಂಬದ ಆಸ್ತಿ ಇರುವಲ್ಲಿಗೆ ಹೋಗಿ ಬದುಕಿದನು.

ನಾವು ಈಗ ಜರ್ಮನಿ ದೇಶ ದಾಟಿ, ಆಚೆಗೆ ನೋಡಿದರೆ, ಅಲ್ಲಿಯೂ ಪುನಃಸ್ಥಾಪನೆಯ ಕಾರ್ಯವು ಪ್ರಾಂತ್ಯದೇಶದಲ್ಲಿ ಹಬ್ಬುವದನ್ನು ನೋಡ ಬಹುದು. ಇದ್ಯಾವದಂದರೆ: ಪೂರ್ವಪ್ರುಸ್ಯದೇಶ. ಅಲ್ಲಿ ಜನರು ಜರ್ಮನಿ ಭಾಷೆ ಮಾತಾಡುತ್ತಾ ಇದ್ದರೂ, ನಿಜ ಜರ್ಮನಿಗೆ ಶೇರಿದ್ದಾಗಿ ಎಣಿಸಲಿಲ್ಲ. ಅದು ಜರ್ಮನಿಯ ಶ್ರೀಮಂತ ಸವಾರರಿಗೆ ಶೇರಿ ಇತ್ತು. ಅವರ ಮುಖ್ಯಸ್ಥನು ತಕ್ಕಷ್ಟು ಕಾಲದಿಂದ ಸಾಕಷ್ಟು ನಿರ್ಬಂಧವಾಗಿ ಆಳುತ್ತಾ ಇದ್ದನು. ಬ್ರನ್‌ದೆನ್‌ಬುರ್ಗದ ಅಲ್‌ಬ್ರೆಖ್ತ ಎಂಬ ಮುಖ್ಯಸ್ಥನು ೧೫೨೫ರಲ್ಲಿ ಅದನ್ನು ಲೌಕಿಕ ನಾಯಕ ಸೀಮೆ ಮಾಡಿ, ಸಮ್ಲಂದ ಪೊಮೆಸನ್ಯಗಳ ಇಬ್ಬರು ಅಧ್ಯಕ್ಷರ ಅನುಮತಿಯಿಂದ ಸ್ವಲ್ಪ ಕಾಲದ ಮೇಲೆ ಸುವಾರ್ತಾಕಾರ್ಯವನ್ನು ಆರಂಭಿಸಿದನು. ಹರಟೆ ತರ್ಕ ಏನೂ ಇಲ್ಲದೆ, ಅತಿ ಛಂದವಾಗಿ ನವೀಕರಣದ ಕಾರ್ಯವು ನಡಿಯಿತು. ಇದಕ್ಕೆ ಲುಥರನ ಹೃದಯವು ಬಹಳ ಸಂತೋಷ ಪಟ್ಟಿತು.

ಆಗೈ ಒಂದೇ ರಾಜ್ಯವಾಗಿ ಇದ್ದ ದೆನ್‌ಮಾರ್ಕ ನೊರವೇಗ್ಯ ಸೀಮೆಗಳಲ್ಲಿ ಅರಸುಗಳು ಪುನಃಸ್ಥಾಪನೆಯ ಕಾರ್ಯವನ್ನು ಆರಂಭದಿಂದಲೆ ಮುಂದರಿಸಿದರು. ೧೫೨೦ರಲ್ಲಿ ಲುಥರನು ಕಳುಹಿಸಿದಂಥಾ ಶಾಸ್ತ್ರಿ ಮರ್ತ್ತಿನ್ ರೈನ್‌ಹರ್ದನು ಏನೂ ತೊಂದರೆ ಇಲ್ಲದೆ ಪ್ರಸಂಗಿಸಿದನು. ೧೫೨೭ರಲ್ಲಿ ಓದೆನ್‌ಸೆ ಎಂಬಲ್ಲಿ ಕೂಡಿ ಬಂದ ರಾಜ್ಯಸಭೆಯವರು ರೋಮಿಯಾಯರಿಗೆ ಹ್ಯಾಗೋ ಹಾಗೆಯೆ ಸುವಾರ್ತಾಪಕ್ಷದವರಿಗೂ ಪೂರ್ಣ ಸ್ವತಂತ್ರವನ್ನು ಕೊಟ್ಟರು. ೧೫೩೬ನೆಯಿಂದ ಹಿಡಿದು ಪುನಃಸ್ಥಾಪನೆಯ ಕಾರ್ಯವು ಮೇಲು ಆಯಿತು. ಅರಸನಾದ ೩ನೆ ಕ್ರಿಸ್ತಿಯಾನನು ೧೫೩೭ರಲ್ಲಿ ತನ್ನ ರಾಜ್ಯದ ಸಭೆಗಳಲ್ಲಿ ಸುವಾರ್ತೆಗೆ ಅನುಕೂಲವಾದ ಆಚಾರಗಳನ್ನು ಸ್ಥಾಪಿಸುವದಕ್ಕೆ ವಿತ್ತೆನ್‌ಬೆರ್ಗದಿಂದ ಪಂಡಿತ ಬೂಗೆನ್‌ಹಾಗೆನನನ್ನು ಕರಿಸಿದನು. ಈತನು ೫ ವರುಷ ವರೆಗೆ ಅಲ್ಲಿ ಇದ್ದು, ಕಾರ್ಯವನ್ನು ತೀರಿಸಿ ಹೋದನು.

ಸ್ವೇದ ದೇಶದಲ್ಲಿ ಲುಥರನಿಂದ ವಿತ್ತೆನ್‌ಬೆರ್ಗದಲ್ಲಿ ಬೋಧನೆ ತಕ್ಕೊಂಡ ಒಲಾವನೂ ಲೌರೆಂತ್ಸ್ಯಪೇತರ್ಸನನೂ ಎಂಬ ಇಬ್ಬರು ಪ್ರಖ್ಯಾತಿ ಪಟ್ಟ ಜನರು ಶುದ್ಧ ಬೋಧನೆಯನ್ನು ಸಾರಿದರು. ಇವರು ಮತ್ತೆ ಭಾರಿ ಉದ್ಯೋಗಗಳನ್ನು ಹೊಂದಿದರು. ಒಲಾವನು ಸರ್ವಶಾಲೆಯ ಕರಣಿಕನಾದನು. ಲೌರೆಂತ್ಸ್ಯನು ಉಪ್ಸಲದ

ಮಹಾ ಅಧ್ಯಕ್ಷನಾದನು. ಈ ಪ್ರಕಾರ ಅವರು ಸುವಾರ್ತಾಸಭೆಯ ಸ್ಥಾಪನೆಗೆ ಕೈ ಕೊಡುವದಕ್ಕೆ ಬಹಳ ಆಧಾರ ಶಿಕ್ಕಿತು. ೧೫೨೭ಲ್ಲು ವೆಸ್ತ್ರೇಸದಲ್ಲಿ ಕೂಡಿ ಬಂದ ರಾಜ್ಯಸಭೆಯಲ್ಲಿ ರೋಮಾಯ ಪಕ್ಷದವರಿಗೆ ಅಪಜಯವಾಗಿ, ೧೫೪೪ಲ್ಲು ಅಲ್ಲಿಯೆ ಕೂಡಿ ಬಂದ ರಾಜ್ಯಸಭೆಯಲ್ಲಿ ಪೋಪನವರ ಉಳಿಕೆ ಬಲ ಸಹಾ ಪೂರ್ತಿಯಾಗಿ ಮುರಿದು ಹೋಯಿತು.

ಹುಂಗಾರದಲ್ಲಿಯೂ ಸೀಬೆನ್‌ಬುರ್ಗದಲ್ಲಿಯೂ ಬೆಳಕು ಹರದು ಬಂತು. ಹುಂಗಾರದಲ್ಲಿ ಮತ್ಥೀಯ ದೇವೈ ಎಂಬವನಿಂದಲೂ ಸೀಬೆನ್‌ಬುರ್ಗದಲ್ಲಿ ಯೋಹಾನ್ ಹೊಂತರ್ ಎಂಬವನಿಂದಲೂ ಸುವಾರ್ತಾಕಾರ್ಯವು ನಡಿಸಲಾಯಿತು. ಬಹುಕಾಲದ ವರೆಗೆ ಅತಿರೇಕ ಹಿಂಸೆಗೆ ಒಳಗಾದಾಗ್ಯೂ, ನಿವಾಸಿಗಳಲ್ಲಿ ಅನೇಕರು ಸುವಾರ್ತೆಯನ್ನು ಬಿಡಲಿಲ್ಲ.

ಪೋಲ ದೇಶದಲ್ಲಿಯೂ ಲುಥರನ ಗ್ರಂಥಗಳಿಗೆ ಫಲ ಬಂತು. ಆದರೆ ಅರಸನೂ ಅವನ ಪಾರಮಾರ್ಥಿಕರೂ ವಿಪರೀತ ಎದುರಾಳಿಗಳಾಗಿರಲಾಗಿ, ಸುವಾರ್ತಾಪಕ್ಷದವರು ಕುಂದಿ ಹೋದರು.

ಪೋಪವತ್ಸಲರಾದ ಇತಲ ಹಿಸ್ಪನ್ಯ ದೇಶಗಳವರಲ್ಲಿ ಸಹಾ ಸುವಾರ್ತೆಯ ಬೆಳಕು ಪ್ರಜ್ವಲವಾಗಿ, ಎಲ್ಲಾ ಬೆಳಗಿಸುವ ಹಾಗೆ ತೋರಿತು. ಆದರೆ ಈ ಜ್ವಾಲೆಯು ವಿಶ್ವಾಸಿಗಳ ವಿನಾಶಕ್ಕೆ ಮಾಡಿದ ಚಿತಿಜ್ವಾಲೆಗಳಲ್ಲಿ ಅಣಗಿ ನೊಂದು ಹೋಯಿತು.

ಈಗ ಕಡೆಯಲ್ಲಿ ಸಭೆಯ ಒಳವೃದ್ಧಿಯ ಮೇಲೆ ದೃಷ್ಟಿ ಇಟ್ಟು, ಕ್ರೈಸ್ತಧರ್ಮವು ಸುವಾರ್ತಾಸಭೆಯವರ ಬದುಕು ಬಾಳ್ವೆಗಳಲ್ಲಿ ಹ್ಯಾಗೆ ಕಾಣ ಬಂತೆಂದು ತಕ್ಕಷ್ಟು ವಿಚಾರಿಸುವಾ.

ಕೇವಲ ಪರಿಶುದ್ಧರೂ ಭಕ್ತರೂ ಮಾತ್ರವೆ ಪ್ರೀತಿ ಆನಂದಗಳಲ್ಲಿ ಯೇಕಮಧ್ಯವಾಗಿ ಬದುಕುವ ಸ್ವರ್ಗೀಯ ಚಿಯೋನು ಪ್ರತ್ಯಕ್ಷವಾಗಲಿಲ್ಲವೆಂಬದು ನಿಜವೆ. ಭೂಮಿಯಲ್ಲಿ ಸ್ವರ್ಗೀಯ ಚಿಯೋನು ಇರದು, ಅದು ಪರದಲ್ಲಿಯೇ ಸಾಧ್ಯ, ಭೂಮಿಯಲ್ಲಿ ಒಂದೂ ಸಂಪೂರ್ಣವಲ್ಲ, ಎಲ್ಲಾ ಅಪೂರ್ಣ. ಭೂಮಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಪಾಪ ಕಷ್ಟ ತುಂಬಿಯದೆ. ಆದಾಗ್ಯೂ ಶುದ್ಧವಾದ ದೇವರ ವಾಕ್ಯವೂ ಅದಕ್ಕನುಸಾರವಾದ ನಿಜಪ್ರಸಾದಗಳೂ ಇರುವಲ್ಲಿ ಕ್ರಿಸ್ತನ ನಿಜ ದೃಶ್ಯ ಸಭೆಯೂ ಇರುವದು. ಅದೇ ಆತನು ಕೃಪೆ ಸತ್ಯಗಳೊಡನೆ ವಾಸವಾಗಿರುವ ಭೌಮ್ಯ ಚಿಯೋನು; ಅಲ್ಲಿ ಸುಳ್ಳುಕ್ರೈಸ್ತರೂ ಕಪಟಸ್ಥರೂ ಪ್ರತ್ಯಕ್ಷ ಪಾಪಿಗಳೂ ಭಕ್ತರ ನಡುವೆ ಇದ್ದಾಗ್ಯೂ, ಯಥಾರ್ಥ ಕ್ರೈಸ್ತರು ಅಂಥಾ ಕಡೆಯಲ್ಲಿ ತಪ್ಪ ಕೂಡದು. ಜೀವವುಳ್ಳ ಬಲವಾದ ದೇವವಾಕ್ಯವು ಪ್ರಬಲವಾಗಿರುವಲ್ಲಿ ತಿದ್ದುಪಾಟಿಗೆ ಅದರಿಂದ ಫಲ ಕಾಣ

ಬೇಕು. ಯಾಕಂದರೆ, ಕರ್ತನು ಯೆಶಾಯ ೫೫, ೧೧. ವಾಗ್ದತ್ತ ಮಾಡಿದ ಪ್ರಕಾರ
ಆಗ ಬೇಕಲ್ಲ: "ನನ್ನ ಬಾಯಿಂದ ಹೊರಡುವ ನನ್ನ ವಾಕ್ಯವಿರುವದು; ಅದು ಸು
ಮ್ಮನೆ ನನ್ನ ಬಳಿಗೆ ತಿರುಗಿ ಕೊಳ್ಳದೆ, ನಾನು ಯಾವದರಲ್ಲಿ ಮೆಚ್ಚುತ್ತೇನೋ ಅದನ್ನು
ಮಾಡುವದು; ನಾನು ಯಾವದರ ನಿಮಿತ್ತ ಅದನ್ನು ಕಳುಹಿಸಿದೆನೋ, ಅದರಲ್ಲಿ
ಸಫಲವಾಗುವದು."

ಆದರೆ ಈ ಪ್ರಿಯ ದೇವವಾಕ್ಯವು ಪುನಃಸ್ಥಾಪನೆಯಾದ ಸಭೆಯ ಮೂಲಕಾ
ಲದಲ್ಲಿ ಶುದ್ಧ ಅಚ್ಚಾಗಿ ಮಾತ್ರವಲ್ಲ, ಮಹಾ ಆಸಕ್ತಿಯಿಂದಲೂ ಪ್ರಸಂಗಿಸಲಾ
ಯಿತು; ಕರ್ತನು ಸುವಾರ್ತಿಕರ ಸಮೂಹಗಳಿಂದ ಅದನ್ನು ಕಳುಹಿಸಿ ಕೊಟ್ಟನು.
ಮತ್ತು ಇವರು ತಿರಿಗಿ ಶಿಕ್ಕಿದ ಮನುಷ್ಯರ ಒಂದೇ ನಿತ್ಯ ಆದರಣೆಯನ್ನು ಅತಿ ಹ
ರ್ಷಮುಖದಿಂದ ಸಾರಿದರು. ಆ ಕಾಲದಲ್ಲಿ ಎಷ್ಟು ಒಳ್ಳೇ ಪ್ರಸಂಗಗಳನ್ನು ಮಾಡಿ
ದರೆಂಬದಕ್ಕೆ ಲುಥರನು ಬರದಿಟ್ಟ ಪ್ರಸಂಗಪುಸ್ತಕಗಳು ಮಾತ್ರವಲ್ಲ, ಮತ್ತಿತರ
ಗ್ರಂಥಗಳು ಸಹಾ ಸಾಕಾದ ಸಾಕ್ಷಿಗಳಾಗಿದ್ದಾವೆ. ಹಾಗೆಯೇ ನ್ಯೂರ್ನ್‌ಬೆರ್ಗ್‌ದ
ಪ್ರಸಂಗಿಯಾದ ವೈತ್ ದೀತರಿಕ್ ಸುವಾರ್ತೆಗಳ ಮೇಲೆ ಮಾಡಿದ ಒಳ್ಳೇ ಗ್ರಂಥ.
ಲುಥರನ ಅತ್ಯಂತ ಆಪ್ತನಾದ ವಿರ್ತೆಮ್‌ಬೆರ್ಗ್‌ದೇಶದ ದೇವವಿದ್ಯಾಪಂಡಿತ ಯೋ
ಹಾನ ಬ್ರೆಂಚನ ಆದಿತ್ಯವಾರ ಹಬ್ಬದಿನಗಳ ಪತ್ರಿಕೆಗಳ ವ್ಯಾಖ್ಯಾನ, ಇತ್ಯಾದಿ. ಜ
ನರು ಸಹಾ ದೇವಾಲಯಗಳಿಗೆ ಸಂತೋಷದಿಂದ ಬಂದು ರಮ್ಯವಾದ ಹೃದಯವ
ನ್ನಾದರಿಸುವ ಹರ್ಷಧೈರ್ಯ ಹುಟ್ಟಿಸುವ ಚೀಯೋನು ಗೀತಗಳ ಹಾಡಿ, ದಿವ್ಯ
ಪ್ರಸಂಗಗಳನ್ನು ಕಿವಿ ಹೃದಯಗಳಿಂದ ಆಲೈಸುತ್ತಾ ಇದ್ದರು. ಇದಲ್ಲದೆ ಹೊಸತಾ
ಗಿ ಛಾಪೆ ಆದ ಸುವಾರ್ತಾಭಾವದ ಪ್ರಸಂಗಪುಸ್ತಕಗಳೂ, ಬೇರೆ ಅನೇಕ ಮನನಕ್ಕೆ
ತಕ್ಕ ಪುಸ್ತಕಗಳೂ ಜನರಿಗೆ ಉಂಟಾಗಿದ್ದವು. ಮುಖ್ಯವಾಗಿ ಪುಸ್ತಕಗಳ ಪುಸ್ತಕ
ವಾದ ಸತ್ಯವೇದ ಗ್ರಂಥ ಸಹಾ ಸ್ವಭಾಷೆಯಲ್ಲಿ ಅವರಿಗೆ ಶಿಕ್ಕಿತು. ಮತ್ತು ಅವರು ಸಾಹ
ಸದಿಂದಲೂ ಆಸಕ್ತಿಯಿಂದಲೂ ಇದನ್ನು ಓದಿ ವಿಚಾರಿಸಿದರು. ಹೀಗಾಗಿ ಕೈಕೆಲಸ
ದವರೂ ಒಕ್ಕಲಿಗರೂ ಸಹಾ ದಿವ್ಯ ಸತ್ಯದ ತಿಳುವಿಕೆಯಲ್ಲಿ ಬಹು ಜ್ಞಾನವನ್ನು ಹೊಂ
ದಿದವರಾಗಿ, ರೋಮಿಯ ಪುರೋಹಿತರ ಬಾಯಿ ಕಟ್ಟುವದಕ್ಕೆ ಶಕ್ತರಾದರು. ಲು
ಥರನು ಜನರಿಗೆ "ಪ್ರಿಯ ಜರ್ಮನರೇ, ಸಂತೆಯು ಬಾಗಲಲ್ಲಿರುವಾಗ್ಯೆ ಕೊಂಡು
ಕೊಳ್ಳಿರಿ, ಬಿಸಲೂ ಒಳ್ಳೇ ಸಮಯವೂ ಇರುವಾಗ್ಯೆ ಕೊಯ್ಯಿರಿ, ಶಿಕ್ಕುತ್ತಿರುವ ಸಮ
ಯದಲ್ಲಿ ದೇವರ ಕೃಪೆಯನ್ನೂ ವಾಕ್ಯವನ್ನೂ ಪ್ರಯೋಗಿಸಿರಿ" ಅಂಥ ಬುದ್ಧಿ ಹೇಳಿ,
ಹಾರಿ ಬರುವ ಘಾಳಿಮಳೆಯಂತೆ ದೇವರ ವಾಕ್ಯವೂ ಕೃಪೆಯೂ ದಾಟಿ ಹೋಗಿ ತಿರಿಗಿ
ಬಾರದೆ ಇದ್ದೀತು ಎಂದು ತಿಳಿಸಿದನು. ಅವನ ಮಾತುಗಳು ಸಾರ್ಥಕವಾದವು.

ಚಿಕ್ಕವರ ಉಪದೇಶದ ಮೇಲೆ ಆ ಕಾಲದಲ್ಲಿ ಕಣ್ಣಿಟ್ಟರು. ಲುಥರನು ೧೫೨೪ಳಲ್ಲಿ ಜರ್ಮನಿಯ ಸಮಸ್ತ ಪಟ್ಟಣಗಳ ಅಧಿಕಾರಿಗಳಿಗೆ, ಅವರು ಕ್ರೈಸ್ತಶಾಲೆಗಳನ್ನು ಸ್ಥಾಪಿಸಿ ನಡಿಸ ತಕ್ಕದ್ದೆಂದು ಬುದ್ಧಿ ಹೇಳಿದನು. ಅಂಥಾ ಕೀಲು ಮೇಲು ಶಾಲೆಗಳನ್ನು ಇಡ ಬೇಕೆಂದು ಯಾವಾಗಲೂ ಬೇಡಿ ಕೊಂಡನು. ಇದು ಸಹಾ ಸಾರ್ಥಕವಾಯಿತು. ಈ ಬಗ್ಗೆ ವಿಸರ್ಜನೆ ಮಾಡಿದ ಮಠ ಉಂಬಳಿಗಳ ಆಸ್ತಿಯು ಉಪಯೋಗವಾಯಿತು. ಇದನ್ನು, ಹೊಸ ದೇವಾಲಯಗಳನ್ನೂ ರೋಗಿ ಗೃಹಗಳನ್ನೂ ಅನಾಥರ ಶಾಲೆಗಳನ್ನೂ ಕಟ್ಟುವದಕ್ಕೆ ಮಾತ್ರವಲ್ಲ, ಪಾಠಶಾಲೆಗಳನ್ನು ಮಾಡುವದಕ್ಕೂ ಬಡ ವಿದ್ಯಾರ್ಥಿಗಳ ಸಹಾಯಕ್ಕೂ ಪ್ರಯೋಗಿಸಿದರು. ಈ ಪ್ರಕಾರ ಎಲ್ಲಾ ಕಡೆಯಲ್ಲಿಯೂ ಬಲದಿಂದ ದೇವರ ವಾಕ್ಯವನ್ನು ತಿಳಿಸುವಂಥಾ ವಿದ್ಯಾಶಾಲೆಗಳು ತರುಣರಿಗೋಸ್ಕರ ಉಂಟಾದವು. ಅವುಗಳಲ್ಲಿ ದೇವರ ವಾಕ್ಯದ ಬೋಧನೆಯು ಪ್ರಾಮುಖ್ಯವಾಗಿರಲಾಗಿ, ಲುಥರನು ಅದರ ಫಲ ಕಂಡು, ದೇವರನ್ನು ಹೊಗಳಿ, ಹೇಳಿದ್ದೇನಂದರೆ: "ಈಗಿನ ಎಳೆ ಮಕ್ಕಳು ಬಾಲಬೋಧನೆ ಸತ್ಯವೇದ ಚನ್ನಾಗಿ ಕಲಿತವರಾಗಿ ಬೆಳಿಯುವದರಿಂದ ನನ್ನ ಹೃದಯದಲ್ಲಿ ಸುಖವಾಗುತ್ತದೆ. ಈಗ ಚಿಕ್ಕ ಹುಡುಗರೂ ಹುಡಿಗಿಯರೂ ಮುಂಚಿನ ಮಠಶಾಲೆಗಳವರು ಶಕ್ತರಾಗಿದ್ದದಕ್ಕಿಂತಲೂ ಈಗ ಇರುವದಕ್ಕಿಂತಲೂ ಹೆಚ್ಚಾಗಿ ದೇವರ ವಿಷಯ, ಕ್ರಿಸ್ತನ ವಿಷಯ ಕಲಿತು, ನಂಬಿ, ಮಾತಾಡ ಶಕ್ತರಾಗಿರುವದನ್ನು ಕಂಡು ಆನಂದ ಪಡುತ್ತೇನೆ. ನಿಶ್ಚಯವಾಗಿ ಈ ಎಳೆ ಮಕ್ಕಳು ರಮ್ಯವಾದ ಪರದೈಸು, ಅಂಥಾದ್ದು ಲೋಕದಲ್ಲಿ ಇಲ್ಲಾ."

ಹಿರಿ ಕಿರಿಯರಿಗೆಲ್ಲಾ ದೇವರ ವಾಕ್ಯವು ಸಮೃದ್ಧಿಯಾಗಿ ಶಿಕ್ಕಿರಲಾಗಿ, ತಿದ್ದುಪಾಟಿಯು ಸರಾಗವಾಯಿತು. ಅನೇಕರು ಅದನ್ನು ತುಚ್ಛೀಕರಿಸಿದರೂ ಅಥವಾ ಅಪಯೋಗಿಸಿದರೂ, ಅನೇಕರಲ್ಲಿ ಅದು ಪುನರ್ಜನ್ಮದ ನಿರ್ಲಯವಾದ ಬೀಜವಾಗಿ ಪ್ರತ್ಯಕ್ಷವಾಗದಿರಲಿಲ್ಲ. ಅವರಲ್ಲಿ, ಮನುಷ್ಯನಿಯಮಗಳ ಖಾರವಾದ ನೊಗಕ್ಕೆ ತಪ್ಪಿಸಿಕೊಂಡು, ಸ್ವತಂತ್ರದಲ್ಲಿ ಸಂತೋಷ ಪಡುವ ಹೊಸ ಜೀವ ಉಂಟಾಯಿತು. ಅತ್ತ ಕಡೆಯಲ್ಲಿ ಖದ್ರವಾದ ಲೇಖನದ ವಾಕ್ಯದ ಸೂತ್ರದಿಂದ ಮದಚ್ರಾಂತಗಳ ಅಸಹ್ಯಗಳಿಗೆ ದೂರವಾಗಿ, ಪರಿಶುದ್ಧ ಮೇರೆಗಳಿಗೆ ಒಳಗಾಗಿ ಇತ್ತು. ಈ ಹುಟ್ಟಿದ ಹೊಸ ಜೀವವು ಸಮಸ್ತ ಹೊರಗಿನ ಒತ್ತಾಯ ಕಷ್ಟಗಳಲ್ಲಿ ದೇವರ ಸಮಾಧಾನದಿಂದ ಅಂತರಂಗದಲ್ಲಿ ಖಾಗ್ಯವುಳ್ಳದ್ದಾಗಿ, ಬಲಹೀನ ಮಾಂಸದ ಕಾಲ್ತಪ್ಪುಗಳಿಂದ ಹೆಚ್ಚುಕಡಿಮೆ ಬರುತಾತ್ತ ಇದ್ದರೂ, ಹೇಳ ಕೂಡದ ಕೃಪೆಯನ್ನು ತೋರಿಸಿದವನ ಕೈಗೆ ನಿಜಖಕ್ತಿಯಿಂದ ತನ್ನನ್ನು ಒಪ್ಪಿಸಿ ಕೊಟ್ಟಿತು.

ಪಾರಮಾರ್ಥಿಕರ ನಡೆನುಡಿಯು ದೇವರ ವಾಕ್ಯದಿಂದ ಪರಿಶುದ್ಧ ಮಾಡಲ್ಪಟ್ಟ ಮನೆತನಗಳಲ್ಲಿ ಒಟ್ಟಾರೆ ಮುಂಚಿಗಿಂತ ಎಷ್ಟೋ ಘನ ಉಳ್ಳದ್ದಾಗಿತ್ತು. ಮುಖ್ಯವಾಗಿ ಸುವಾರ್ತಾಪಕ್ಷದ ಅರಸರ ಅರಮನೆಗಳಲ್ಲಿ, ಎಲ್ಲಾ ಕಡೆಯಲ್ಲಿ ಅಲ್ಲವಾದರೂ ಹೆಚ್ಚು ಕಡೆಯಲ್ಲಿ, ಸದ್ಭಕ್ತಿಯ ನಡತೆಯು ಪ್ರಬಲವಾಯಿತು. ಸತ್ಯ ದೇವಭೀತಿಯ ದೇವಭಕ್ತಿಯ ಆತ್ಮವು ಲೌಕಿಕ ಪಾರಮಾರ್ಥಿಕ ನಾಯಕರಲ್ಲಿ ಪ್ರಕಟವಾಯಿತು. ಇದೇ ಗುಣವು ಇನ್ನೂ ಅಧಿಕವಾಗಿ ಪಟ್ಟಣದವರಲ್ಲಿಯೂ ಒಕ್ಕಲಿಗರಲ್ಲಿಯೂ ಬಡವರಲ್ಲಿ ಸಹಾ ಬಲ ಗೊಂಡಿತು. ಆಗ್ಯೆ ಲುಥರನು ಹಾಡಿದ್ದೇನಂದರೆ: "ದೇಶವು ಫಲ ತಂದು ತಿದ್ದು ಕೊಳ್ಳುತ್ತದೆ ನಿನ್ನ ವಾಕ್ಯವು ಸಫಲವಾಯಿತು."

ಆದಾಗ್ಯೂ ಸುವಾರ್ತಾಪಕ್ಷದ ಸಭೆಗೂ ರೋಮಿಯ ಸಭೆಗೂ ಪುನರೈಕ್ಯ ಮಾಡುವದಕ್ಕೆ ತಿರಿಗಿ ತಿರಿಗಿ ಪ್ರಯತ್ನ ಮಾಡದೆ ಬಿಡಲಿಲ್ಲ ಸರಿ, ಆದರೆ ಅದೆಲ್ಲ ನಿರರ್ಥಕವಾಗಿ ಹೋಯಿತು. ೧೫೪೧ಲ್ಲು ರೇಗೆನ್ಸ್ಬುರ್ಗದಲ್ಲಿ ನಡದ ಮತವಾದದಿಂದ ಐಕ್ಯವು ಸಾಧನೆಯಾದೀತೆಂದು ಕೆಲವರು ನೆನಸಿದರು. ಆ ತರ್ಕದಲ್ಲಿ ರೋಮಿಯ ಪಕ್ಷದಲ್ಲಿ ಅಗ್ರಸ್ಥನಾಗಿ ಇದ್ದ ಮಹಾಧ್ಯಕ್ಷ ಕೊಂತರೀನಿ ಎಂಬವನು ಹೃದಯದಲ್ಲಿ ಸುವಾರ್ತಾಪಕ್ಷದವರ ಭಾವವುಳ್ಳವನಾಗಿದ್ದನು. ಈ ತರ್ಕದಲ್ಲಿ ರೋಮುಪಕ್ಷದವರು ನಾಲ್ಕು ಮುಖ್ಯ ವ್ಯತ್ಯಾಸ ಬೋಧನೆಗಳಲ್ಲಿ ತರ್ಕ ಬಿಟ್ಟು, ಕೃಪೆಯಿಂದ ವಿಶ್ವಾಸದ ಮೂಲವಾಗಿ ನೀತಿನಿರ್ಣಯ ಆಗುತ್ತದೆ ಎಂಬ ಮೂಲಬೋಧನೆಯಲ್ಲಿ ಸಹಾ ಒಪ್ಪಿಗೆ ಕೊಟ್ಟರು. ಆದರೆ ಈ ವರ್ತಮಾನ ಕೇಳಿ, ಪೋಪನು ಭಯ ಪಟ್ಟು, ಕೊಂತರೀನಿಗೆ ಈಗ ಸಾಕು, ತಿರುಗಿ ಕೊಳ್ಳಿರಿ ಎಂಬ ಅಪ್ಪಣೆ ಕಳುಹಿಸಿದನು. ಸುವಾರ್ತಾಪಕ್ಷದವರು ಮುಂಚೆಯೆ ಅಭರವಸವುಳ್ಳವರಾಗಿರುವದರಿಂದ, ಈ ಕಾರ್ಯವು ಬೇಗ ತೀರಿ ನಿಷ್ಫಲವಾಯಿತು.

ಕಡೆಯಲ್ಲಿ ಮೂರನೆ ಪೌಲನೆಂಬ ಪೋಪನು ತ್ರಿದೆಂತದಲ್ಲಿ ೧೫೪೫ಲ್ಲು ಸರ್ವಸಮಾಗಮವನ್ನು ಕರಿಸಿದನು. ಆದರೆ ಸುವಾರ್ತಾಪಕ್ಷದವರಿಗೆ ಅಲ್ಲಿಗೆ ಹೋಗುವದಕ್ಕೆ ಎಷ್ಟಾದರೂ ಮನಸ್ಸು ಇರಲಿಲ್ಲ. ಲುಥರನು, ಸುವಾರ್ತಾಸಭೆಯಲ್ಲಿ ಕಾಡುವ ಬೋಧನೆಯ ವಿಷಯದಲ್ಲಿ ಪರಿಶುದ್ಧ ಆತ್ಮದಿಂದ ನಿಶ್ಚಯವಾಗಿ ಇದ್ದು, ಸಮಾಗಮ ಅಗತ್ಯವಿಲ್ಲವೆಂದು ಹೇಳಿದನು. ಎಲ್ಲರು ಈ ಮಾತಿಗೆ ಒಪ್ಪಿ ಕೊಂಡು, ಪೋಪನು ಅಗ್ರಸ್ಥನಾಗಿರಲಾಗಿ, ತಾವು ಆಪರಾಧಿಗಳೆಂದೂ ಮೊದಲೆ ನ್ಯಾಯತೀರ್ಪಿಗೆ ಒಳಗಾದವರೆಂದೂ ಒಪ್ಪಿ ಕೊಳ್ಳ ತಕ್ಕ ಸಮಾಗಮದ ಅಧಿಕಾರವು ನ್ಯಾಯವಾದ್ದಲ್ಲವೆಂದು ಹೇಳಿದರು.

ಸುವಾರ್ತಾಪಕ್ಷದವರು ಅಲ್ಲಿಗೆ ಹೋಗಲಿಲ್ಲ, ಹೋಗದೆ ಇದ್ದದ್ದು ಒಳ್ಳೆದಾಯಿತು. ಆ ಸಮಾಗಮವು ಯಾವ ಪ್ರಯೋಜನಕ್ಕೆ ಬರುತ್ತಿತ್ತೆಂಬದು ತ್ರಿದೆಂತದಲ್ಲಿ ೧೮ ವರುಷ ನಡದ ಸಮಾಗಮದ ಸಂಭಾಷಣೆಯಿಂದ ಪ್ರತ್ಯಕ್ಷವಾಯಿತು. ಹ್ಯಾಗೆಂದರೆ, ಬಹಳ ಸ್ವಲ್ಪ ಮಂದಿ ಆಗಿದ್ದ ಸುವಾರ್ತಾಪಕ್ಷದವರು ಆರಂಭದಲ್ಲಿಯೆ ಆ ಸಭೆಯಲ್ಲಿ ಭಯದಿಂದ ಮಾತಾಡಿದ ಮೇಲೆ, ರೋಮಪಕ್ಷದವರು ಬೇಗನೇ ಅವರ ಬಾಯಿ ಮುಚ್ಚಿ, ರೋಮಿಯ ಸಭೆಯ ಸಮಸ್ತ ಅಬದ್ಧ ಬೋಧನೆಗಳನ್ನು ಹ್ಯಾಗೂ ಸಾಧಿಸಿ, ಪುನರಪಿ ಸ್ವೀಕರಿಸಿ, ಸ್ಥಿರ ಪಡಿಸಿದರು.

§ ೧೭.

## ಲೂಥರನ ಉದ್ಯೋಗಗುಣಭಾವ

ಲೂಥರನ ಮುಖ್ಯ ಉದ್ಯೋಗವು ಮಹಾಶಾಲೆಯಲ್ಲಿ ಶಾಸ್ತ್ರಿಯದಾಗಿತ್ತು. ಅಲ್ಲಿ ವಿದ್ಯಾಶಾಲೆಯ ಕೋಣೆಯಲ್ಲಿ ಪೀಠದಿಂದ ಭಾಷಣಗಳನ್ನು ಮಾಡುವನು. ವಿದ್ಯಾರ್ಥಿಗಳು ಅವನನ್ನು ಸುತ್ತಿ ಕೊಂಡು, ಆತುರತ್ವದಿಂದಲೂ ಆಶ್ಚರ್ಯದಿಂದಲೂ ತುಂಬಿದವರಾಗಿ, ಅವನನ್ನು ಆಲೈಸುವರು. ವಿದ್ಯಾರ್ಥಿಗಳ ಹೊರತು, ಪ್ರಾಯ ಬಂದವರೂ ಮುದುಕರೂ ಸರ್ವಶಾಲೆಯ ಬೇರೆ ಶಾಸ್ತ್ರಿಗಳೂ ಸಹಾ ಸಂತೋಷದಿಂದ ಅವನ ಬೋಧನೆಗೆ ಕಿವಿ ಕೊಡುವರು. ಸತ್ಯವೇದಪುಸ್ತಕಗಳನ್ನು ಮೂಲಭಾಷೆಯಿಂದ ವಿವರಿಸುವವನಾಗಿ, ವಿಶ್ವಾಸದಿಂದ ನೀತಿನಿರ್ಣಯ ಬರುತ್ತದೆಂಬದಕ್ಕೆ ಘಟ್ಟಿ ಸಾಕ್ಷಿಯಾಗಿರುವ ರೋಮ ಗಲತರ ಪತ್ರಿಕೆಗಳನ್ನೂ, ಕೀರ್ತನೆಗಳನ್ನೂ, ಮೋಶೆಯ ಉತ್ಪತ್ತಿಪುಸ್ತಕವನ್ನೂ, ಹೆಚ್ಚಾಗಿ ಟೀಕಿಸುವನು. "ಅವನು ಈ ದಿವ್ಯ ಗ್ರಂಥಗಳನ್ನು ವಿವರಿಸಿದ ರೀತಿಯಿಂದ, ಭಕ್ತಿಯೂ ಬುದ್ಧಿಯೂ ಉಳ್ಳವರ ಆಲೋಚನೆಯ ಪ್ರಕಾರ, ಉದ್ದ ಕತ್ತಲೆಯ ರಾತ್ರಿಯ ಮೇಲೆ ಬೋಧನೆಯ ಹೊಸ ಬೆಳಕು ಮೂಡಿದ ಹಾಗೆ ಆಯಿತು" ಎಂದು ಮೆಲಂಥೋನನು ಹೇಳುತ್ತಾನೆ.

ಇದಲ್ಲದೆ, ಅವನಿಗೆ ಬಹು ತಕ್ಕದ್ದಾಗಿರುವ ಬೇರೊಂದು ಸ್ಥಳದಲ್ಲಿ, ಅಂದರೆ ಪ್ರಸಂಗಪೀಠದಲ್ಲಿ, ಅಧಿಕ ಸಾಹಸ ಮಾಡಿದನು. ಮುಂಚೆ ಔಗುಸ್ತೀನರ ಚಿಕ್ಕ ದೇ

ವಾಲಯದಲ್ಲಿಯೂ, ಮತ್ತೆ ಊರಿನ ಅಥವಾ ಕೋಟೆಯ ದೇವಾಲಯಗಳಲ್ಲಿಯೂ, ಆಯಾ ಬೋಧಕನು ಅಸ್ವಸ್ಥವಾಗಿದ್ದರೆ ಅಥವಾ ಪ್ರಯಾಣಕ್ಕೆ ಹೋಗಿದ್ದರೆ, ಅನೇಕ ಸರ್ತಿ ಪ್ರಸಂಗಿಸಿದನು. ಆದಾಗ್ಯೂ ಯಾವದಾದರೂ ಒಂದು ಸಭೆಯ ಬೋಧಕನಾಗಿ ಎಂದೂ ನೇಮಕವಾಗಿರಲಿಲ್ಲ. ಆಗ್ಯೆ ಅವನು ಯಾರಿಂದಲೂ ಕಲಿಯದಂಥ ರೀತಿಯಾಗಿ, ತುಂಬ ಕೂಡಿ ಬಂದ ಜನರಿಗೆ ಪ್ರಸಂಗಿಸಿದನು. ಅವನು ಪ್ರಸಂಗವಾಕ್ಯದಿಂದಲೂ ಸತ್ಯವೇದದಿಂದಲೂ ಹೊಗದು, ಸರಳವಾಗಿಯೂ ಎಲ್ಲರೂ ಗ್ರಹಿಸತಕ್ಕ ರೀತಿಯಾಗಿಯೂ ಬೋಧಿಸಿದನು. ಅವನ ಪ್ರಸಂಗದಲ್ಲಿ ಆತ್ಮಬಲವೂ ಜೀವಬಲವೂ ರಸವೂ ಪ್ರಾಣವೂ ಇತ್ತು, ಪ್ರೀತಿಯುಳ್ಳ ಹೃದಯದಿಂದ ಬಂದು ಕೇಳುವವರ ಹೃದಯಕ್ಕೆ ತಾಗಿತು. ಇದಲ್ಲದೆ ಅವನ ನುಡಿಯು ಅತಿ ಮನೋಹರವಾಗಿರುವದರಿಂದ, ಜನರು ಎಷ್ಟು ಕೇಳಿದರೂ ಸಾಕೆಂದನ್ನಲಿಲ್ಲ. ವಾಗ್ಜಾಲತ್ವದಲ್ಲಿ ಲೂಥರನಿಗಿಂತ ದೊಡ್ಡವನು ಆ ಕಾಲದಲ್ಲಿ ಇರಲಿಲ್ಲ, ಇಂದಿನ ವರೆಗೂ ಬರಲಿಲ್ಲ. ಅವನ ಪ್ರಸಂಗಕ್ಕೆ ಆಶ್ಚರ್ಯವಾದ ಫಲ ಸಹಾ ಹುಟ್ಟಿತು.

ಇದಲ್ಲದೆ ಹಗಲಿರುಳೂ ಅನೇಕ ತಾಸು ಕಷ್ಟ ಮಾಡುತ್ತಾ ಒಳ್ಳೇ ಪುಸ್ತಕಗಳನ್ನು ರಚಿಸಿದನು. ಸತ್ಯವೇದದ ಭಾಷಾಂತರ, ಅವನ ಎರಡು ಬಾಲಬೋಧನೆಗಳು, ಪ್ರಸಂಗಪುಸ್ತಕ, ಬೇರೆ ಕೆಲವು ಪ್ರಶಸ್ತವಾದ ಗ್ರಂಥಗಳು, ಇವುಗಳನ್ನು ಕುರಿತು ಮುಂಚೆ ಕೇಳಿದಿರಿ. ಇದಲ್ಲದೆ ಮನೆಯಲ್ಲಿ ಓದುವದಕ್ಕೆ ಸುವಾರ್ತೆಗಳ ವಿಷಯದಲ್ಲಿ ಒಂದು ಪ್ರಸಂಗಪುಸ್ತಕವನ್ನೂ, ಬೇರೆ ಅನೇಕ ಗ್ರಂಥಗಳನ್ನೂ, ಪದಿಗಳನ್ನೂ ಲೆಖ್ಖವಿಲ್ಲದೆ ಬರದನು. ಲೂಥರನು ತಾನೆ ತನ್ನ ಸಭಾಪ್ರಸಂಗಪುಸ್ತಕವು ತನ್ನ ಗ್ರಂಥಗಳಲ್ಲೆಲ್ಲಾ ಉತ್ತಮವಾದ್ದೆಂದು ಹೇಳುತ್ತಾನೆ. ಆದರೆ ಅಂಗ್ಲದೇಶದ ಯೋಹಾನ ಬನ್ಯನನು ಲೂಥರನು ಬರದ ಪೌಲನ ಗಲತಪತ್ರಿಕೆಯ ವ್ಯಾಖ್ಯಾನವೆ ಅತ್ಯುತ್ತಮವೆಂದು ಹೇಳಿ, ಆ ವಿಷಯದಲ್ಲಿ ಬರದದ್ದು ಏನಂದರೆ: "ಪರಿಶುದ್ಧ ಬರಹದ ಹೊರತು, ಲೂಥರನ ಈ ಪುಸ್ತಕವನ್ನು ನಾನು ನೋಡಿದ ಎಲ್ಲಾ ಪುಸ್ತಕಗಳಿಗಿಂತ ಅಧಿಕೋತ್ತಮವೆಂದು ಎಣಿಸುತ್ತೇನೆ, ಎಂಬದಾಗಿ ನಾನು ಧಿಟವಾಗಿ ಹೇಳುತ್ತೇನೆ. ಯಾಕಂದರೆ ಅದು ಘಾಯ ಪಟ್ಟ ಮನಸ್ಸಾಕ್ಷಿಗೆ ಅತಿಯೋಗ್ಯವಾದ್ದಾಗಿರುತ್ತದೆ."

ಪುಸ್ತಕಗಳ ಹೊರತು, ಅವನು ಲೆಖ್ಖವಿಲ್ಲದ ಕಾಗದ ಪತ್ರಗಳನ್ನು ಬರದನು. ಸಾವಿರಾರು ಕಾಗದಗಳನ್ನು ಪ್ರಭುಗಳಿಗೂ ಧೊರೆಗಳಿಗೂ ಪಟ್ಟಣಾಧಿಕಾರಿಗಳಿಗೂ ಪ್ರಸಂಗಿಗಳಿಗೂ ಬೇರೆ ಅನೇಕರಿಗೂ ಕಳುಹಿಸುತ್ತಾ ಇದ್ದನು. ಎಲ್ಲಾ ಕಡೆಯಿಂದಲೂ ಅವನಿಂದ ಬುದ್ಧಿ ಕೇಳುವದಕ್ಕೆ ಅವನಿಂದ ಆದರಣೆ ತಕ್ಕೊಳ್ಳುವದಕ್ಕೆ ಅವನಿಗೆ ಜನರು ಬರಿಯುತ್ತಿರಲಾಗಿ, ಎಲ್ಲಾ ಕಡೆಗೂ, ಜರ್ಮನಿ ದೇಶದ ಪ್ರಾಂತ್ಯಗಳನ್ನು ದಾಟಿ

ಸಹಾ, ಕರ್ಕರೆಯೆಂದೆಣಿಸದೆ, ಉತ್ತರ ಕಳುಹಿಸಿ, ಬೋಧಿಸುತ್ತಾ ಆದರಿಸುತ್ತಾ, ಬುದ್ಧಿ ಹೇಳುತ್ತಾ, ದೇವರ ಕಾರ್ಯ ನಡಿಸಿದನು.

ಅವನು ತಾನೆ ಬೇರೆ ಬೇರೆ ಕೆಲಸಗಳಿಗೋಸ್ಕರ ವಿತ್ತೆನ್‌ಬೆರ್ಗ್‌ದಿಂದ ಪ್ರಯಾಣಗಳನ್ನು ಸಹಾ ಮಾಡಿದನು. ಅವನ ಕೆಲಸಗಳು ಯಾವಾಗಲೂ ಪರಿಶುದ್ಧ ಕಾರ್ಯಕ್ಕಾಗಿ ಇದ್ದವು. ಈಚೆಗೆ ಆಚೆಗೆ, ಬಡಗಲು ತೆಂಕಲು, ಮೂಡಲು ಪಡುವಲು, ನಾಲ್ಕು ದಿಕ್ಕಿಗೂ ಅವಶ್ಯವಿದ್ದಲ್ಲಿಗೆ ಹೋಗಿ, ಸಭೆಯ ಸ್ಥಿತಿಯನ್ನು ಸಮ ಮಾಡುವನು, ಒಳ ಹೊಕ್ಕ ಅಕ್ರಮಗಳನ್ನು ನಿವಾರಿಸುವನು, ಆದರಣೆಯಿಂದಲೂ ಪ್ರಸಂಗದಿಂದಲೂ ಚಿಗುರಿದ ಸಸಿಗಳಿಗೆ ನೀರು ಹೊಯ್ಯುವನು, ಅಥವಾ ಸಭೆಯ ಕ್ಷೇಮಾರ್ಥವನ್ನು ಆಲೋಚಿಸುವಂಥಾ ದೇವವಿದ್ಯಾಪಂಡಿತರ ಮತ್ತು ಅರಸುಗಳ ಕೂಟಗಳಿಗೆ ಹೋಗಿ, ಅವನಲ್ಲಿದ್ದ ಮಹಾ ಪ್ರಕಾಶವನ್ನು ಬೆಳಗಿಸುವನು.

ಕಡೆಯಲ್ಲಿ ಲುಥರನು ಒಬ್ಬನೇ ನಡದಾಡುತ್ತಾ ಇದ್ದಾಗ್ಯೆ, ಅಥವಾ ರಾತ್ರಿಯಲ್ಲಿ ಚಂದ್ರ ನಕ್ಷತ್ರಗಳು ಒಳಗೆ ಮಿಂಚುತ್ತಿರುವ ಕಿಟಕಿಯ ಹತ್ತರ ನಿಂತಿರುವಾಗ್ಯೆ, ಅಥವಾ ಮೇಜಿನಲ್ಲಿ ಇಟ್ಟ ದೀಪದ ಪ್ರಕಾಶವನ್ನು ನೋಡುತ್ತಾ ಇರುವಾಗ್ಯೆ, ಆತ್ಮದ ಅಮಲು ತಾಗಿದವನಂತೆ, ಈ ಲೋಕದ ಗೊಡವೆ ಪೂರ್ತಿ ಮರತವನಂತೆ, ಅನೇಕ ಸರ್ತಿ ಇದ್ದನಲ್ಲಾ! ಆಗ್ಯೆ ಏನು ಮಾಡಿದನು? ಆ ಸಮಯದಲ್ಲಿ ಆತನು ಪರಿಶುದ್ಧ ಸತ್ಯ, ಅಗಾಧ ಪ್ರೀತಿ, ಸ್ವರ್ಗೀಯ ಪ್ರಭೆ, ಬಲವುಳ್ಳ ಜೀವ ತುಂಬಿದಂಥಾ, ಅತಿ ಅಮೋಲ್ಯವಾದ ಗೀತಗಳನ್ನು ರಚಿಸಿದನು. ಕೆಲವು ನಮ್ಮ ಕರ್ನಾಟಕ ಗೀತಪುಸ್ತಕದಲ್ಲಿ ಭಾಷಾಂತರ ಮಾಡಿ ಅವೆ. ಹಾಗೆ: ೧೧. "ಪವಿತ್ರ ದೇವರಾತ್ಮನೆ;" ೪೨. "ಯೆಹೋವನು ತಾತ್ಕಾಲಿಕ ಸಹಾಯವಾಗಿ ಇದ್ದಾನೆ;" ೪೫. "ಈಗನ್ಯ ಜನರಕ್ಷಕ, ಕನ್ಯಾಸ್ತ್ರೀಯಿಂದ ಹುಟ್ಟಿದ;" ೫೩. "ಮಧ್ಯ ಜೀವದೊಳಗೆ ಮೃತಿಯಲ್ಲಿದ್ದೇವೆ;" ೫೭. "ಯೇಸುವು ಕ್ರೂಜೆಯಲ್ಲಿ ಸತ್ತೆಮ್ಮ ಪಾಪಕ್ಕಾಗಿ;" ೯೬. "ತಂದೆಯಾದ ದೇವರೇ ನಮ್ಮಲ್ಲಿ ವಾಸ ಮಾಡು;" ೧೧೦. "ನಾವೊಬ್ಬ ದೇವರಲ್ಲಿಯೆ ಏಕವಾಗಿ ನಂಬುತ್ತೇವೆ;" ೧೩೨. "ಆಕಾಶದಿಂದ ಬಂದೆನು, ಸುವರ್ತಮಾನ ತಂದೆನು." ಕೆಲವು ಗೀತಗಳಿಗೆ ತಾನೇ ರಾಗಗಳನ್ನು ಸಹಾ ಮಾಡಿದನು. ಮತ್ತು ಈ ರಾಗಗಳು ಅತಿ ಮನೋಹರವಾಗಿಯೂ ಗಂಭೀರವಾಗಿಯೂ ಅವೆ. ಅನೇಕ ಪ್ರಾಣಿಗಳು ಈ ಗೀತಗಳನ್ನು ಹಾಡಿ, ತಮ್ಮನ್ನು ದೇವರಲ್ಲಿ ಬಲ ಪಡಿಸಿ ಕೊಳ್ಳುತ್ತಾ ಬಂದರು. ಅನೇಕರು ಈ ಗೀತಗಳನ್ನು ಹಾಡುವದನ್ನು ಕೇಳಿ, ಸುವಾರ್ತೆಯ ಕಾರ್ಯಕ್ಕೆ ಒಳ ಬಿದ್ದಿದ್ದಾರೆ.

ಈ ಪ್ರಕಾರ ದೇವರ ಕಾರ್ಯದಲ್ಲಿ ಕಷ್ಟಾಯಾಸ ಪಡುವ ಲುಥರನ ಚಿತ್ರವನ್ನು ನಮ್ಮ ಮುಂದೆ ಇಟ್ಟುಕೊಂಡ ಮೇಲೆ, ಅವನ ಮುಖ್ಯ ಗುಣಗಳನ್ನು ಸಹಾ ವಿಚಾರಿಸುವಾ.

ಮೊದಲಾಗಿ ದೇವರು ಅವನಿಗೆ ಕೊಟ್ಟ ಸ್ವರ್ಗೀಯ ಬುದ್ಧಿವಂತಿಕೆ ನಮಗೆ ಎದು ರಾಗುತ್ತದೆ. ಲುಥರನಿಗೆ ಸ್ವಾಭಾವಿಕವಾಗಿ ಬಹಳ ಬುದ್ಧಿ ಇತ್ತು. ಮನುಷ್ಯವಿದ್ಯೆಗ ಳನ್ನು ಸಹಾ ಹೇರಳವಾಗಿ ಸಂಪಾದಿಸಿ ಕೊಂಡಿದ್ದನು. ಆದರೂ ಅವನಿಗೆ ಸ್ವರ್ಗೀಯ ಬೆಳಕು ಎಲ್ಲಾದರಲ್ಲಿ ಪ್ರಾಮುಖ್ಯವಾಗಿಯೂ ಎಲ್ಲಾದಕ್ಕೆ ಆಧಾರವಾಗಿಯೂ ಇತ್ತು. ಅವನು ನಿಜವಾಗಿ ದೇವವಿದ್ಯಾಪಂಡಿತನಾಗಿ ಇದ್ದನು. ಅಪೊಸ್ತಲರ ಕಾಲದಂದಿನಿಂ ದ ಅವನಿಗೆ ಎಣೆಯಾದವರು ಅನೇಕರಿಲ್ಲಾ, ಒಂದು ವೇಳೆ ಯಾರೂ ಇಲ್ಲಾ.

ಇದಲ್ಲದೆ ದೇವರ ವಾಕ್ಯದ ಮೇಲೆ ಅವನ ಪ್ರೀತಿಯು ಬಹಳ ದೊಡ್ಡದಾಗಿ ಇತ್ತು. ಈ ವಾಕ್ಯದಿಂದ ಸ್ವರ್ಗೀಯ ಬೆಳಕು ಅವನಿಗೆ ಹುಟ್ಟಿ, ಎಲ್ಲಾದಕ್ಕಿಂತ ಪ್ರಿಯ ವೂ ಮನೋಹರವೂ ಆಗಿ ಇತ್ತು. ಎರ್ಫುರ್ತದ ಪುಸ್ತಕಸಂಗ್ರಹದಲ್ಲಿ ಅದನ್ನು ಕಂ ಡಂದಿನಿಂದ, ಜೀವಾಸ್ತಮಯದ ವರೆಗೂ ಅದು ಅವನ ಹೃದಯದ ಆನಂದವೂ ಆದ ರಣೆಯೂ ಆಗಿ ಇತ್ತು. ದಿನದಿನ ಪರಿಶುದ್ಧ ಲೇಖನವನ್ನು ಓದುತ್ತಾ, ೪೦ ವರುಷ ಕಳದನು. ಈ ಪ್ರಕಾರ, ಅವನ ಧೃತಿಯ ಬಲ ಸಹಾ ಬಹಳ ದೊಡ್ಡದಾಗಿರುವದರಿಂ ದ, ದೇವರ ವಾಕ್ಯವು ಸ್ವಲ್ಪ ಕಡಿಮೆ ಅವನಿಗೆ ಬಾಯಿಪಾಠವಾಯಿತು. ತನ್ನ ಗ್ರಂಥ ಗಳಿಂದ ಸಮಸ್ತರಲ್ಲಿ ದೇವರ ವಾಕ್ಯದ ಮೇಲೆ ಪ್ರೀತಿ ಹುಟ್ಟುವ ಹಾಗೆ ಮಾಡಲಿಕ್ಕೆ ಅಪೇಕ್ಷಿಸಿದನು. ಅಷ್ಟು ಕೈಗೂಡಿದ ಮೇಲೆ, ತನ್ನ ಗ್ರಂಥಗಳು ಇಲ್ಲವಾದರೆ ಆದೀ ತೆಂತ ನೆನಸಿದನು.

ದೇವರ ಮಾನವನ್ನೂ ಮನುಷ್ಯರ ಮಂಗಲವನ್ನೂ ಹೆಚ್ಚಿಸ ಬೇಕೆಂಬ ಮಹಾ ಆಸಕ್ತಿಯು ಅವನಲ್ಲಿ ಕಾಣ ಬಂತು. ತನಗೆ ಮಹಿಮೆಯುಳ್ಳವನಾಗಿ ಕಾಣಿಸಿ ಕೊಂ ಡ ದೇವರನ್ನು ಮಹಿಮೆ ಪಡಿಸುವದಕ್ಕೂ, ಆತನು ಕ್ರಿಸ್ತನಲ್ಲಿ ನಿತ್ಯ ಕರುಣೆಯುಳ್ಳವ ನಾಗಿ ಇದ್ದಾನೆಂಬ ಆತನ ನಾಮದ ಕೀರ್ತಿಯನ್ನು ವಿಸ್ತರಿಸುವದಕ್ಕೂ, ಇಚ್ಛೈಸಿದ ನು. ತಾನು ಪಡಕೊಂಡ ದೇವರ ಆದರಣೆಯನ್ನು ತನ್ನ ಕುಲದವರಾದ ಮನುಷ್ಯರೆ ಲ್ಲರೂ ಪಡೆಯ ಬೇಕು, ತಾನು ಮುಂಚೆ ನರಗುತ್ತಾ ಇದ್ದ ಆತ್ಮಿಕ ಅಂಧಕಾರದ ದು ಖ್ಖಕರ ಸಂಕೋಲೆಗಳೊಳಗಿಂದ ಅವರು ಸಹಾ ಬಿಡುಗಡೆಯಾಗ ಬೇಕು ಎಂಬದೇ ಅ ವನ ಮುಖ್ಯ ಆಲೋಚನೆ, ಅವನ ಹೃದಯದ ಬಲವಾದ, ಎಡತಡೆ ಇಳಿಯದ, ಆ ತುರತ್ವ ಆಗಿತ್ತು. ರಕ್ಷಕನಾದ ದೇವರ ಪ್ರೀತಿಯು ತನ್ನ ಸಹಮನುಷ್ಯರ ಮೇಲೆ ಇಟ್ಟ ಪರಿಶುದ್ಧವಾದ ಪ್ರೀತಿಯು ಅವನನ್ನು ಪ್ರೇರೇಪಿಸಿತು. ಆದ್ದರಿಂದಲೆ ದೇವರ ಮಾನ ವನ್ನೂ ಮನುಷ್ಯರ ಮಂಗಲವನ್ನೂ ಸಾಧಿಸುವದಕ್ಕೆ ಅತ್ಯವಶ್ಯ ಕರಣವಾಗಿರುವ ಸತ್ಯ ವೇದದ ತತ್ತ್ವವನ್ನು ವಿಸ್ತರಿಸುವದಕ್ಕೆ ಮಹಾ ಆಸಕ್ತಿಯನ್ನು ತೋರಿಸಿದನು.

ಇದರ ಸಂಗಡ ದೇವರಲ್ಲಿ ಇಟ್ಟ ಭರವಸದಿಂದ ನಿರ್ಭಯವಾದ ಧೈರ್ಯವು ಅವನಲ್ಲಿ ಇತ್ತು. ಯಾವ ಕಂಟಕದಿಂದಲಾದರೂ, ಚಿತಿಯ ಅಗ್ನಿಯ ಮರಣದಿಂದಲಾದರೂ, ತನ್ನ ಕೆಲಸ ನಡಿಸದಂತೆ ಎಂದೂ ಭಯ ಪಡಲಿಲ್ಲವೆಂಬ ಮಾತು ನಮಗೆ ಮುಂಚೆಯೆ ತಿಳಿದು ಬಂದದೆ. ತಾನು ದೇವರ ಕೈಯಲ್ಲಿ ಇದ್ಧೇನೆಂದೂ, ಆತನ ಚಿತ್ತವಿಲ್ಲದೆ ಶತ್ರುಗಳು ಒಂದು ರೋಮವನ್ನಾದರೂ ಬಗ್ಗಿಸಲಾರರೆಂದೂ ತಿಳಿದಿದ್ದನು. ಆದರೂ ಅವಶ್ಯವಿದ್ದರೆ ತನ್ನ ಜೀವವನ್ನು ಸಹಾ ಅರ್ಪಿಸುವದಕ್ಕೆ ಸಿದ್ಧವಾಗಿ ಇದ್ದನು. ಯಾಕಂದರೆ ತನ್ನ ಕಾರ್ಯವು ನ್ಯಾಯವಾಗಿಯೂ ಪರಿಶುದ್ಧವಾಗಿಯೂ ಇತ್ತೆಂದೂ, ಅದಕ್ಕೋಸ್ಕರ ಎಲ್ಲಾ ಕಳಕೊಂಡರೂ ಚಿಂತೆ ಇಲ್ಲವೆಂದೂ, ತಾನು ಅಪಜಯವಾದರೂ, ತನ್ನ ಕಾರ್ಯವು ಅಪಜಯವಾಗ ಕೂಡದಂಥಾ ಕರ್ತನ ಕಾರ್ಯವಾಗಿದೆ ಎಂದೂ ತಿಳಿದಿದ್ದನು. “ಇದು ದೇವರ ಕಾರ್ಯ,” ಈ ಒಂದು ಮಾತು ಅವನ ಧೈರ್ಯವನ್ನು ಆಶ್ಚರ್ಯ ರೀತಿಯಾಗಿ ಬಲ ಪಡಿಸಿತು. ನಾನು ಮಡಿದು ಹೋಗ ಬಹುದು, ಅದೇನು ವಿಶೇಷ! ಆತನು ತನ್ನ ಕಾರ್ಯವನ್ನು ನಡಿಸದಿರನು, ನಾನು ಬೂದಿಯಾದರೆ, ಆ ಬೂದಿಯ ಮೇಲೆ ಆತನ ಸಭೆಯು ಬೆಳದು ಮೆರೆಯುವದು, ಎಂದು ನೆನಸಿದನು.

ಇದೇ ಕಾರಣದಿಂದ ಏನಾದರೂ ಸತ್ಯ, ನ್ಯಾಯವಾದ್ದು ಎಂದು ತಿಳಿದರೆ, ಅದನ್ನು ಅವನು ಬಿಡ. ತನಗೆ ಶುಭ್ರವಾಗಿ ಉದಯವಾದ ಸುವಾರ್ತೆಯ ಸತ್ಯವನ್ನು ಜೀವಾಂತ್ಯದ ವರೆಗೂ ಬಿಮ್ಮಗೆ ಹಿಡಿದನು. ಯಾವಾಗಲೂ ಅದನ್ನು ಅರಿಕೆ ಮಾಡಿದನು, ಬೋಧಿಸಿದನು, ಸಾರಿದನು. ಹ್ಯಾಗೆ ಬೆದರಿಕೆಯಿಂದಲೋ, ಹಾಗೆಯೇ ವಾಗ್ದತ್ತಗಳಿಂದಲಾದರೂ ಮುಖಸ್ತೌತ್ಯದಿಂದಲಾದರೂ ಸತ್ಯದ ಮಾರ್ಗ ತ್ಯಜಿಸುವದಕ್ಕೆ ಎಡೆಬಿಡಲಿಲ್ಲಾ. ಅವನು ಯಾರನ್ನೂ ಮಾಂಸದ ಪ್ರಕಾರ ಅರಿಯನು. ಅತಿ ಘನವುಳ್ಳ ಸ್ವಪಕ್ಷದವರೂ ಅತ್ಯಂತ ಪ್ರಿಯ ಸ್ನೇಹಿತರೂ, ಸತ್ಯಕ್ಕೆ ಕೇಡು ಬರುವ ಹಾಗೆ ಅವನಿಗೆ ತೋರಿದರೆ, ಅವನನ್ನು ಸ್ವಲ್ಪವಾದರೂ ಬಾಗುವದಕ್ಕೆ ಪ್ರೇರೇಪಿಸ ಶಕ್ತರಾಗಲಿಲ್ಲಾ. ಪೂರ್ಣ ನಿರ್ಮಲವಾದ ಸಭೆಯ ಪುನಃಸ್ಥಾಪನೆ ಆಗ ಬೇಕೆಂಬ ಒಂದೇ ಗುರಿಯನ್ನು ಕಣ್ಣ ಮುಂದೆ ಇಟ್ಟು ಕೊಂಡು, ಮಾಂಸದ ಬಲಹೀನತ್ವದಲ್ಲಿಯೂ ಮಾರ್ಗಾಯಾಸದ ಕಷ್ಟದಲ್ಲಿಯೂ ಹಿಂಜರಿಯದೆ, ಮುಂದೆ ಮುಂದೆ ನಡದನು.

ಆಯಾಸ ತಿಳಿಯದಂಥವನ ಹಾಗೆ, ಅವನು ಮಾಡಿದ ಪ್ರಯತ್ನಗಳ ಸಂಗತಿಯನ್ನು ಮುಂಚೆ ಹೇಳಿದ್ಧೇವೆ. ಅವನು ಬಹುಕಾಲ ಬದುಕಲಿಲ್ಲ, ಶರೀರವು ಅನೇಕ ಸರ್ತಿ ಆರೋಗ್ಯವಾಗಿರಲಿಲ್ಲ. ಆದಾಗ್ಯೂ ಅವನು ಬರದದ್ದೂ ನಡಿಸಿದ್ದೂ ವಿಸ್ಮಯ ಹುಟ್ಟಿಸುತ್ತದೆ, ಗ್ರಹಿಕೆ ಮೀರುವಷ್ಟು ಅದೆ.

ಅವನು ಪ್ರಪಂಚದಲ್ಲಿ ಈ ಪ್ರಕಾರ ಕಷ್ಟ ಪಟ್ಟರೂ, ಪ್ರಪಂಚದ ಸುಖ ಚಿಂತಿಸಲಿಲ್ಲ, ತನ್ನ ಕಷ್ಟಕ್ಕೆ ತಕ್ಕ ಫಲ ಕೇಳಲಿಲ್ಲ. ಈ ಭೂಮಿಯ ಹೊನ್ನು ಹಣ, ಮಾನ ಆಸ್ತಿ ಧನ ಅಪೇಕ್ಷಿಸಲಿಲ್ಲ. ತಾನು ನಡಿಸಿದ ಶಾಸ್ತ್ರಿಯ ಉದ್ಯೋಗದಿಂದ ಬರುವ ತಿಂಗಳೊಂದಕ್ಕೆ ಸುಮಾರು ೧೪ ರೂಪಾಯಿ, ಮತ್ತೆ ಸುಮಾರು ೨೦ ರೂಪಾಯಿ, ಸಾಕು ಎಂದು ಮಾಡಿ ಕೊಂಡನು. ಒಂದೊಂದು ಸರ್ತಿ ಅದು ಸಹಾ ಹೆಚ್ಚಾಯಿತೆಂದು ಭಾವಿಸಿದನು. ಒಂದಾನೊಂದು ದಿನ ಆಯಿಕೆಯ ಅರಸನು ಒಂದು ಕರಿ ಬಣ್ಣದ ಮತ್ತು ತೋಗಲುಬಂಣದ ಅಂಗಿಯನ್ನು ಕಳುಹಿಸಿ ಕೊಟ್ಟಾಗ, ಅರೆ ಮನಸ್ಸಿನಿಂದ ತಕ್ಕೊಂಡನು. ಮತ್ತು ಇನ್ನು ಮುಂದೆ ಈ ಪ್ರಕಾರ ಮಾಡ ಬಾರದೆಂದು ಅತಿ ವಿನಯದಿಂದ ಬೇಡಿ ಕೊಂಡನು. ಕರಿ ಬಣ್ಣದ ಅಂಗಿಯು ಅತಿ ನಯವಾಗಿಯೂ ಬೆಲೆಯುಳ್ಳದ್ದಾಗಿಯೂ ಅದೆ ಎಂದು ನೆನಸಿ, ಕೃಪೆಯುಳ್ಳ ಅರಸನ ಮನಸು ನೋಂದಿಸ ಬಾರದೆಂಬ ಭಯದಿಂದ ಮಾತ್ರವೆ ಅದನ್ನು ಧರಿಸಿದನು. ಮತ್ತೊಂದು ಸರ್ತಿ ಅರಸನು ಶ್ನೇಬೆರ್ಗದ ಖನಿಯ ಉತ್ಪತ್ತಿಯಲ್ಲಿ ಅವನಿಗೆ ಒಂದು ಪಾಲು ಕೊಡ ಬೇಕೆಂದಿದ್ದಾಗ, ಖಂಡಿತವಾಗಿ ನಿವಾರಿಸಿದನು. ಪುಸ್ತಕ ಮಾರುವವರು ಅವನಿಗೆ ಬಹಳ ಹಣ ಕೊಡಬಹುದಾಗಿದ್ದರೂ, ತಾನು ಬರದ ಗ್ರಂಥಗಳನ್ನೆಲ್ಲಾ ಕಾಸು ತಕ್ಕೊಳ್ಳದೆ ಕೊಟ್ಟನು. ಹೀಗಾಗಿ ಅವರು ಅಗ್ಗವಾಗಿ ಮಾರುವದಕ್ಕೂ ಹೆಚ್ಚಾಗಿ ವಿಸ್ತರಿಸುವದಕ್ಕೂ ಆಗಬೇಕೆಂದು ಇಚ್ಛೈಸಿದನು.

ಆದರೂ ಪ್ರಪಂಚಕಾರ್ಯಗಳಲ್ಲಿ ಸಹಾ ದೇವರ ದಯೆಯನ್ನು ತಿಳುಕೊಂಡು, ಎಲ್ಲಾ ಕೃತಜ್ಞತೆಯಿಂದ ಅನುಭವಿಸುವ ಹೃದಯವು ಅವನಿಗೆ ಇತ್ತು. ಅವನ ಸ್ನೇಹಿತರ ಸಾಕ್ಷಿಯಿಂದ ಏನು ತೋರುತ್ತದಂದರೆ: ಅವನು ಬಹು ಮಿತಸ್ಥನಾಗಿ ಬದುಕಿ, ತಾನು ಘೋರ ಶರೀರ ಉಳ್ಳವನಾಗಿ ಇದ್ದರೂ, ಅತಿರೇಕ ಸ್ವಲ್ಪ ತಿಂದು ಕುಡಿದು, ಸಾಧಾರಣ ಆಹಾರವೆ ತನಗೆ ಸಾಕೆಂದಂದು, ಅನೇಕ ಸರ್ತಿ ದಿನದಿನ ಒಂದಿಷ್ಟು ರೊಟ್ಟಿಯನ್ನೂ, ಒಂದಿಷ್ಟು ಬೊಂಬಿಲು ಮೀನನ್ನೂ ಭಕ್ಷಿಸಿದನು. ಆದರೆ ಅವನು ಈ ಅಲ್ಪವಾದ ಆಹಾರವನ್ನು ಸಹಾ ಹೊಗಳಿದನು. ಯಾವದಾದರೂ ವಿಶೇಷವಾದ ಸಮಯದಲ್ಲಿ ರುಚಿಕರವಾದ ತಾಳಿಸಿದ ಭಕ್ಷವೂ ದ್ರಾಕ್ಷೀ ರಸವೂ ಮೇಜಿಗೆ ಬಂದರೆ, ಈ ಒಳ್ಳೇ ಪದಾರ್ಥಗಳನ್ನು ಸಹಾ ದೇವರಿಗೆ ಕೃತಜ್ಞೋಪಿಸಿ ತಕ್ಕೊಂಡನು. ಆದರೂ ಇದರಲ್ಲಿಯೂ ಮಿತಿ ತಪ್ಪಲಿಲ್ಲ. ತನ್ನ ಕುಟುಂಬದವರ ಸಂಗಡ ಹ್ಯಾಗೋ ಹಾಗೆಯೇ ಪ್ರಿಯ ಸ್ನೇಹಿತರಲ್ಲಿ ಔತಣಕ್ಕೆ ಕರದರೆ, ಅಲ್ಲಿಯೂ ಹಸನ್ಮುಖನಾಗಿಯೂ ಆನಂದ ಹೃದಯದವನಾಗಿಯೂ ಇದ್ದನು. ಅವನ ಕ್ರೈಸ್ತಭಕ್ತಿಯು ಕರಿ ಮೋರೆಯದಾಗಿ ಇರಲಿಲ್ಲ, ಬೈರಾಗಿ ಮಠವನ್ನು ಬಿಟ್ಟಂದಿನಿಂದ, ಯತಿಪರಿಶುದ್ಧತ್ವದ ಭಾವದ್ದಾಗಿರಲಿಲ್ಲ.

ಅವನು ದಯಾಳುವಾಗಿಯೂ ಪರೋಪಕಾರಿಯಾಗಿಯೂ ಇದ್ದನು. ಒಬ್ಬೊಬ್ಬರು ಲುಥರನು ಕಠೋರ ದುಡುಕುವ ಕೋಪದ ಮನುಷ್ಯನಾಗಿ ಇದ್ದನೆಂದು ನೆನಸ್ಯಾರು. ಆದರೆ ಅದು ಸಮವಲ್ಲ. ಅನೇಕ ವರುಷಗಳ ವರೆಗೆ ಅನುದಿನವು ಅವನ ಸಹವಾಸದಲ್ಲಿದ್ದ ಮೆಲಂತಾನನು, "ಲುಥರನು ಮನುಜರಲ್ಲಿ ಅತಿ ದಯಾಭಾವದ ಮನುಷ್ಯನೂ, ಮಾತಿನಲ್ಲಿ ನಮ್ರತೆಯುಳ್ಳವನೂ, ಸ್ನೇಹಭಾವದವನೂ, ಮನೋಹರನೂ ಆಗಿದ್ದನಲ್ಲದೆ, ಸರ್ವಥಾ ಸಂತಾಪ ಸ್ವೈರ ಜಗಳ ಉಳ್ಳವನಲ್ಲ. ಆದಾಗ್ಯೂ ಅವನ ಮಾತುಗಳಲ್ಲಿಯೂ ಮುಖದಲ್ಲಿಯೂ ಅಂಥಾ ಮನುಷ್ಯನಿಗೆ ಯೋಗ್ಯವಾದ ಗಂಭೀರತ್ವವೂ ಧೀರತ್ವವೂ ಇತ್ತೆಂದು" ಹೇಳುತ್ತಾನೆ. ಅವನು ಎಲ್ಲರ ಮಾತು ಆಲೈಸಿದನು, ಎಲ್ಲರಿಗೂ ಸೇವೆ ಮಾಡ ಸಿದ್ಧವಾಗಿ ಇದ್ದನು. ಬಡವರನ್ನು ಕಂಡರೆ, ಯಥಾನುಶಕ್ತಿಯಿಂದ ಮಾತ್ರವಲ್ಲ, ತನಗೆ ಕಡಿಮೆಯಾದರೂ ಚಿಂತೆ ಇಲ್ಲವೆಂದು, ಶಕ್ತಿ ಮೀರಿ ಸಹಾ ಉದಾರಿಯಾಗಿ ಇದ್ದನು. ಒಂದಾನೊಂದು ದಿನ ಒಬ್ಬ ಬಡ ವಿದ್ಯಾರ್ಥಿಯು ಸಹಾಯ ಮಾಡ ಬೇಡಿದನು. ಅವನ ಕೈಯಲ್ಲಿ ಹಣ ಇಲ್ಲ. ಹೆಂಡತಿಯ ಹತ್ತರ ಕೇಳಿದನು. ಅವಳ ಹತ್ತರಲೂ ಏನೂ ಇಲ್ಲ. ಆಗೈ ಮನೆತನದ ಅಲಂಕಾರಕ್ಕೆ ಇಟ್ಟ ತೆಳ್ಳಗಾದ ಬೆಳ್ಳೀ ಗಿಂಡ್ಲು ತೆಗದು, ಬಲವಾದ ತನ್ನ ಕೈಗಳಿಂದ ಅದನ್ನು ಬೇಗ ಒತ್ತಿ, ಮುದ್ದೆ ಮಾಡಿ, ವಿದ್ಯಾರ್ಥಿಗೆ ಕೊಟ್ಟು, ಇದನ್ನು ಅಕ್ಕಸಾಲಿಗನಿಗೆ ಮಾರಿ, ಹಣ ಮಾಡಿ ಕೊಳ್ಳ ಬೇಕೆಂದು ಹೇಳಿ ಕಳುಹಿಸಿದನು.

ಮತ್ತೊಂದು ವಿಶೇಷ ಗುಣ ಯಾವದಂದರೆ: ಅವನ ಯಥಾರ್ಥತ್ವ. ಅವನು ಹ್ಯಾಗೆ ಮಾತಾಡಿದನೋ, ಹ್ಯಾಗೆ ಕಾಣಿಸಿ ಕೊಂಡನೋ ಹಾಗೆಯೆ ಅವನ ಹೃದಯದ ಭಾವವಿತ್ತು. ಒಳಗೊಂದು ಹೊರಗೊಂದು ಎಂಬದು ಅವನಿಗೆ ಕೇವಲ ವಿರೋಧವಾಗಿ ಇತ್ತು. "ಸತ್ಯನ್ಯಾಯಗಳ ದೇವರೇ ಸಂಪೂರ್ಣತ್ವವೂ ನೆಟ್ಟನೆತನವೂ ನನ್ನನ್ನು ಕಾಯಲಿ„ ಎಂಬದೇ ಅವನ ಪ್ರಾರ್ಥನೆಯಾಗಿ ಇತ್ತು.

ಅವನ ಭಕ್ತಿಯು ನಿಷ್ಕಪಟವಾದ್ದಾಗಿತ್ತು. ಅದು ಮತ್ತೊಬ್ಬರ ಕಣ್ಣಿಗೆ ಕಾಣಬೇಕೆಂಬ ಜಾತಿಯದಾಗಿರಲಿಲ್ಲ. ಮತ್ತು ಅವನ ಭಕ್ತಿಯಲ್ಲಿ ಏನು ಕಣ್ಣಿಗೆ ಕಂಡು ಬಂತೋ, ಅದು ತನ್ನಷ್ಟಕ್ಕೆ ಒಳಗಿನಿಂದ ಪ್ರಕಾಶಿಸಿತು. ಅವನ ಭಕ್ತಿಯು ಮುಖದಲ್ಲಿ ಮಾತ್ರವಲ್ಲ, ಅವನ ಪೂರ್ಣ ನಡತೆಯಲ್ಲಿಯೂ, ಕೆಟ್ಟತನವನ್ನು ತ್ಯಜಿಸುವ ಗುಣದಲ್ಲಿಯೂ ಪ್ರತ್ಯಕ್ಷವಾಯಿತು. ಲುಥರ ಪಕ್ಷಕ್ಕೆ ಎಂದಿಗೂ ಬಾರದಂಥಾ, ಎರಸ್ಮನು ಸಹಾ ಲುಥರನ ವಿಷಯದಲ್ಲಿ "ಈ ಮನುಷ್ಯನು ಅವನ ಶತ್ರುಗಳು ಸಹಾ ದೂರಲಿಕ್ಕೆ ಆಗ ಕೂಡದಂಥಾ ನಿರ್ಮಲತ್ವವೂ, ನಡೆನುಡಿಯಲ್ಲಿ ನಿರಪರಾಧಿತ್ವವೂ ಉಳ್ಳ

ಪನಾಗಿ ಇದ್ದಾನೆಂದು„ ಹೇಳಿದನು. ಮತ್ತೆ, ಮುಖ್ಯವಾಗಿ ಅವನು ಶೀರಿ ಹೋದ ಮೇಲೆ ಮಾತ್ರವೆ, ಕೆಲವರು ಅವನ ನಡತೆಯಲ್ಲಿ ದೋಷ ಆರೋಪಣೆ ಮಾಡುವದಕ್ಕೆ ಪ್ರೇಚಾಡಿದರು.

ಕಡೆಯಲ್ಲಿ ಅವನ ಉರಿಯುವ ಪ್ರಾರ್ಥನಾಸಕ್ತಿಯನ್ನೂ ಅತಿ ವಿಶೇಷವಾದ ಪ್ರಾರ್ಥನಾವರವನ್ನೂ ವಿಚಾರಿಸ ತಕ್ಕದ್ದು. ಯಾವ ದಿನದಲ್ಲಿ ಆದರೂ, ಅತ್ಯನುಕೂಲವಾದ ಎರಡು, ವಿಶೇಷಕಾಲಗಳಲ್ಲಿ ಮೂರು ತಾಸುಗಳನ್ನು ಪ್ರಾರ್ಥನೆಗೆ ತಕ್ಕೊಳ್ಳದೆ ಬಿಟ್ಟದ್ದಿಲ್ಲ. ಮತ್ತು ಅವನ ಪ್ರಾರ್ಥನೆಯು ಎಷ್ಟು ಶಕ್ತಿಯುಳ್ಳದ್ದಾಗಿತ್ತು! ವೈತದೀಟ್ರಿಖನು ಹೇಳುವದೇನಂದರೆ: “ಒಂದು ಸಾರಿ ಅವನು ಪ್ರಾರ್ಥನೆ ಮಾಡುವದನ್ನು ಕೇಳುವದಕ್ಕೆ ಸಮಯ ಶಿಕ್ಕಿತು. ಓ ದೇವರೇ ಎಂಥಾ ಆತ್ಮ, ಎಂಥಾ ವಿಶ್ವಾಸ ಅವನ ಮಾತುಗಳಲ್ಲಿ ಇದ್ದವು! ದೇವರ ಸಂಗಡ ಮಾತಾಡುವವನಂತೆ, ಕೇವಲ ನಿಮಗ್ನನಾಗಿಯೂ, ತಂದೆಯ ಸಂಗಡ ಮಾತಾಡುವವನಂತೆ ಕೇವಲ ಕೋರಿಕೆ ವಿಶ್ವಾಸಗಳಿಂದ ತುಂಬಿದವನಾಗಿಯೂ ಪ್ರಾರ್ಥಿಸಿದನು.” ಮೆಲಂತೋನನು ಸಹಾ: “ಅವನು ಸಮಸ್ತ ಸಭೆಗೋಸ್ಕರ ಬಿಸಿಬಿಸಿ ಕಣ್ಣೀರಿಟ್ಟು ಪ್ರಾರ್ಥಿಸುತ್ತಿರುವಾಗ್ಯೆ, ಅನೇಕ ಸರ್ತಿ ಕಂಡಿದ್ದೇನೆಂದು” ಹೇಳುತ್ತಾನೆ. ಈ ಪ್ರಕಾರ ಅವರಿಗೋಸ್ಕರ ಮಾಡಿದ ಅವನ ಕಷ್ಟದ ಮೇಲೆ ದೇವರ ಆಶೀರ್ವಾದವು ಬರ ಬೇಕಾಯಿತು. ಅವನ ಸ್ವಂತ ಮಾತುಗಳನ್ನೂ ಮತ್ತಾಬ್ಬರ ಮಾತುಗಳನ್ನೂ ಚನ್ನಾಗಿ ವಿಚಾರಿಸಿದರೆ, ಅವನ ಪ್ರಿಯ ಮೆಲಂತೋನನನ್ನೂ ಅವನ ಹೆಂಡತಿ ಕೇತೆಯನ್ನೂ ಮರಣದೋಳಗಿಂದ ರಕ್ಷಿಸುವ ಹಾಗೆ ಪ್ರಾರ್ಥಿಸಿ, ದೇವರಿಂದ ಈ ಬಿನ್ನಹಗಳನ್ನು ಹೊಂದಿದನೆಂದು ನೆನಸ ಬೇಕಾಗುತ್ತದೆ.

ಈ ಪ್ರಕಾರ ಲುಥರನನ್ನು ಸಂಕ್ಷೇಪವಾಗಿ ಚಿತ್ರಿಸಿದಂತೆ ಆಯಿತು. ಆದರೂ ಕಡೆಯಲ್ಲಿ ಮೆಲಂತೋನನು ಅವನ ವಿಷಯದಲ್ಲಿ ಹೇಳುವ ಮೂರು ಮಾತುಗಳನ್ನು ಇಲ್ಲಿ ಬರಿಯದಿರಲಾಗದು. ಅವು ಯಾವವಂದರೆ: ೧ನೆ, “ಬೂಗೆನಹಾಗೆನನು ವ್ಯಾಕರಣಶಾಸ್ತ್ರಿ, ನಾನು ತರ್ಕಶಾಸ್ತ್ರಿ, ಯೋನನು ವಾಕ್ಚತುರನು, ಆದರೆ ಲುಥರನು ಇದೆಲ್ಲಾ ಆಗಿ ಇದ್ದಾನೆ. ಅವನಿಗೆ ನಮ್ಮಲ್ಲಿ ಯಾರೂ ಎಣೆ ಅಲ್ಲ;” ೨ನೆ: “ಅವನಿಗೆ ದೇವರು ಕೊಟ್ಟ ವರಗಳು ಬೇರೆ ಮನುಷ್ಯರ ವರಗಳಿಗೆ ಬಹಳವಾಗಿ ಮಿಗಿಲಾಗಿರುತ್ತವೆ;” ೩ನೆ: “ಈ ಒಬ್ಬ ವೀರಮನುಷ್ಯನಿಂದ ದೇವರು ಮಹತ್ವವಾದ್ದನ್ನು ಮಾಡಲಿಚ್ಛೈಸುತ್ತಾನೆ.” ನಿಶ್ಚಯವಾಗಿ ಅವನು ಸಭೆಯ ಪುನಃಸ್ಥಾಪನೆಯ ಮಹಾ ಕಾರ್ಯವನ್ನು ನಡಿಸಿ ತೀರಿಸುವದಕ್ಕೆ ಕಳುಹಿಸಲ್ಪಟ್ಟ ದೇವರ ಮನುಷ್ಯನಾಗಿ ಇದ್ದನು.

ಆದರೆ ಲುಥರನು ಸಹಾ ತಪ್ಪು ದೋಷವಿಲ್ಲದವನಲ್ಲ, ಅವನು ಬರೇ ಮನುಷ್ಯನಾಗಿ ಇದ್ದನಲ್ಲಾ! ಕೋಪವೂ ಉತ್ತ್ವೇಗವೂ ಅವನಿಗೆ ಬಹಳ ಇತ್ತೆಂದು ಕೆಲವರು ಹೇಳಿದರು. ಆದಾಗ್ಯೂ ಸಾಧಾರಣ ಬಳವಳಿಕೆಯಲ್ಲಿ ಅತಿ ನಮ್ರವಾಗಿಯೂ ಮೃದು ಮನಸ್ಸಿನವನಾಗಿಯೂ ಇದ್ದನು. ಆದರೆ ದಿವ್ಯ ಸತ್ಯಕ್ಕೋಸ್ಕರ ಹೋರಾಡುವಾಗ್ಯೆ ಮಾತ್ರವೆ, ಅವನ ಕಿಡಿ ಏರುವದು. ಮತ್ತು ಇಂಥಾ ಸಮಯದಲ್ಲಿ, ಒಂದೊಂದು ಸರ್ತಿ, ಅವನ ಆಸಕ್ತಿಯು ಮೇರೆ ತಪ್ಪಿ, ಎದುರಾಳಿಗಳಿಗೆ ಕಠಿಣ ಮಾತುಗಳನ್ನು ಹೇಳಿದ್ದು ಇದ್ದರೆ, ಇದರ ಕಾರಣ ಸಹಾ ಅಲ್ಪವಾದ್ದಾಗಿರಲಿಲ್ಲ. ಒಂದು ಕಡೆಯಲ್ಲಿ ಅವನು ತಾನೇ ಹೇಳುವದೇನಂದರೆ: "ಯಾರಾದರೂ ತಾವೇ ನಿಂದೆಗೆ ಗುರಿಯಾದರೆ ತಾಳ್ಮೆಯಿಂದ ಸಹಿಸ ತಕ್ಕದ್ದು; ಆದರೆ ದೇವರ ವಾಕ್ಯಕ್ಕೂ ಮಾನಕ್ಕೂ ವಿರೋಧವಾಗಿ ಏನಾದರೂ ನಡಿಸುವ ಸಮಯದಲ್ಲಿ, ಎಷ್ಟಾದರೂ ತಾಳ್ಮೆಯಿಂದಿರದೆ, ಬಲವಾಗಿ ಎದುರಿಸುವದು ನ್ಯಾಯ;" ಯಾಕಂದರೆ "ಕತ್ತಲೆಯ ಒಂದಿಷ್ಟು ಪಾಲಾದರೂ, ಒಂದೇ ಒಂದು ಸಂಣ ಮೋಡವಾದರೂ ಮುಚ್ಚಿ ಕೊಳ್ಳದ ಹಾಗೆ, ಬೋಧನೆಯು ಪೂರ್ಣ ಶುದ್ಧ, ನಿರ್ಮಲ, ನಿರಾಳ, ಶುಭ್ರವಾಗಿರ ಬೇಕು;" ಯಾಕಂದರೆ, "ಬೋಧನೆಯ ಆಕೃತಿಯೂ ಪ್ರಮಾಣವೂ ಛಿದ್ರ ಮಾಡಿರುವದರಿಂದ, ಅದಕ್ಕೆ ಕೂಡಿಸಿದರೂ ಅದರಿಂದ ತೆಗದರೂ ಕೇಡು ಬಾರದಿರದು." ಆದಾಗ್ಯೂ ಈ ವಿಷಯದಲ್ಲಿ ಲುಥರನು ನಿರಪರಾಧಿಯಾಗಿ ಇದ್ದನೆಂದು ಯಾರೂ ಹೇಳ ಬಾರದು. ಆದರೂ ಎಲ್ಲಾ, ಹಾಗೆ ಈ ದೋಷಗಳು ಸಹಾ, ಹೊಸ ವೊಡಂಬಡಿಕೆಯ ರಕ್ತದಿಂದ ಪುನೀತವಾದವೆಂದು ನೆನಸ ತಕ್ಕದ್ದು.

ಅತ್ತ ಕಡೆಯಲ್ಲಿ ದೇವರು ಅವನನ್ನು ಅನೇಕ ಕಷ್ಟಗಳಿಂದ ಒಗದು ಶುದ್ಧ ಮಾಡದೆ ಬಿಡಲಿಲ್ಲ. ಬರಬರ ದುಃಖಕರವಾಗಿ ಬಂದ ಕರ್ಲ್‌ಸ್ತತ್ತನ ಭ್ರಮಣಗಳಿಂದಲೂ, ಸುವಾರ್ತೆಯ ಸ್ವತಂತ್ರವನ್ನು ಅಪಯೋಗಿಸಿದ ಬೇರೆ ಅನೇಕರ ಮೂರ್ಖತನದಿಂದಲೂ ದುಷ್ಟತ್ವದಿಂದಲೂ, ಅವನ ಹೃದಯಕ್ಕೆ ಎಷ್ಟೋ ವ್ಯಸನ ಬಂತು! ಇದಲ್ಲದೆ ಅನೇಕ ಸರ್ತಿ ಬಹಳ ವೇದನೆಯುಳ್ಳ ಮರಣಕ್ಕೆ ಹತ್ತರ ತರುವ ರೋಗಗಳು ಪ್ರಾಪ್ತಿಯಾದವು. ಅವನಿಗೆ ಅಶ್ಮರಿಯಿಂದಲೂ, ಹೊಟ್ಟೆಬೇನೆಯಿಂದಲೂ, ತಲೆಶಿಟತದಿಂದಲೂ, ನಾಡಿಯ ಬಲ ಕುಂದುವದರಿಂದಲೂ, ವಾತದಿಂದಲೂ, ಕಪಾಲವಾತದಿಂದಲೂ, ಮಂದ ದೃಷ್ಟಿಯಿಂದಲೂ ಬಹಳ ಸಂಕಟ ಬಂತು. ಕೆಲವು ಸರ್ತಿ, ಹಾಗೆಯೇ ೧೫೨೭ರಲ್ಲು ಮತ್ತೆ ೧೫೩೭ರಲ್ಲು, ಮರಣಕಾಲವು ಸಮೀಪಿಸಿತೆಂದು ನೆನಸಿ, ತನ್ನ ಪ್ರಿಯ ಹೆಂಡತಿ ಕೇತೆಯನ್ನೂ ಮಕ್ಕಳನ್ನೂ, ತಂದೆ ಇಲ್ಲದವರಿಗೆ ತಂದೆಯೂ ವಿಧವೆಗಳ ಪರಿಪಾಲಕನೂ ಆಗಿರುವ ದೇವರಿಗೆ ಒಪ್ಪಿಸಿ ಕೊಟ್ಟು, ಅನಾಥರನ್ನು ಕಾಪಾಡ ಬ

ಲ್ಲವನಲ್ಲಿ ನಂಬಿಕೆ ಇಟ್ಟನು. ಆದರೆ ದೇವರು ಆ ಕಾಲದಲ್ಲಿ ಆಶ್ಚರ್ಯ ರೀತಿಯಾಗಿ ಅವನಿಗೆ ತಿರಿಗಿ ಬಲ ಕೊಟ್ಟರೂ, ೧೫೪೧ನೆಯಿಂದ ಅವಸಾನಕಾಲದ ವರೆಗೆ ಶರೀರಕ್ಕೆ ಕ್ಷೇಮವಿಲ್ಲದವನಾಗಿ ಇದ್ದನು.

ಅವನ ಕಡೇ ಕಾಲದಲ್ಲಿ ವಿತ್ತೆನ್‌ಬೆರ್ಗದ ವಿದ್ಯಾರ್ಥಿಗಳಲ್ಲಿ ಬಂದ ನಾನಾ ಅನರ್ಥಗಳಿಂದ ಅವನಿಗೆ ದುಃಖವಾಯಿತು. ಅದರಿಂದ ಅವನ ಬಲ ಕುಂದಿದ ಶರೀರಕ್ಕೆ ಅಧಿಕ ಕಷ್ಟ ಬಂತು. ಇದರ ವಿಷಯದಲ್ಲಿ ವ್ಯಸನದಿಂದಲೂ ದುಃಖದಿಂದಲೂ ತುಂಬಿದವನಾಗಿ, ೧೫೪೫ಲ್ಲಿ ವಿತ್ತೆನ್‌ಬೆರ್ಗವನ್ನು ಬಿಟ್ಟು ಹೋಗಿ, ತಿರಿಗಿ ಬರುವದಿಲ್ಲವೆಂದು ಹೇಳಿದನು. ಅತಿ ದುಃಖಿತರಾದ ಸರ್ವಶಾಲೆಯ ಉದ್ಯೋಗಸ್ಥರು ತಮ್ಮ ಅಧ್ಯಕ್ಷನೂ ಯಜಮಾನನೂ ಹ್ಯಾಗಾದರೂ ತಿರಿಗಿ ಬರ ಬೇಕೆಂದು ಬಹಳವಾಗಿ ಬೇಡಿ ಕೊಂಡ ಮೇಲೆ, ಅವನಿಗೆ ಅಹಿತವಾದ್ದೆಲ್ಲಾ ತೆಗದು ಬಿಡುತ್ತೇವೆಂದು ಮಾತು ಕೊಟ್ಟದರಿಂದಲೆ, ಮುಂಚಿನ ಆಲೋಚನೆ ಬಿಟ್ಟನು. ಈ ಅನರ್ಥವು ಈ ದೇವಸೇವಕನ ಶಿಕ್ಷೆಯೂ ಶುದ್ಧೀಕರಣವೂ ಆಗಿ ಇತ್ತು. ಚಿಕ್ಕವರನ್ನು ಮಾತ್ರವೆ ತನ್ನ ಸ್ವರ್ಗರಾಜ್ಯದಲ್ಲಿ ಶೇರಿಸಿ ಕೊಳ್ಳುವ ಕರ್ತನಾದ ಯೆಹೋವನ ಮುಂದೆ ಮಹಾ ವಿಶ್ವಾಸವುಳ್ಳ ಕ್ರೈಸ್ತರು ಅವಸಾನಕಾಲದ ಸಮಯದಲ್ಲಿ ಅನೇಕ ಸರ್ತಿ ಈ ಪ್ರಕಾರ ದುಃಖ ಕಷ್ಟಗಳನ್ನು ಅನುಭವಿಸುವದು ಬರುತ್ತದೆ. ಹಾಗೆಯೆ ಲುಥರನಿಗೆ ಆಯಿತು.

§ ೧೮.

# ಲುಥರನ ಅವಸಾನ

ಈಗ ಕಡೆಯಲ್ಲಿ ಲುಥರನು ಮರಣಕಾಲದಲ್ಲಿ ಹ್ಯಾಗಿದ್ದನೆಂಬದನ್ನು ಸಹಾ ಕೇಳುವಾ. ಅಂಥಾ ಸಮಯದಲ್ಲಿ ಮನುಷ್ಯರ ಸ್ವಭಾವರೂಪವು ಹೆಚ್ಚಾಗಿ ಪ್ರಕಟವಾಗುತ್ತದೆ.

ಮರಣಕಾಲವು ಹ್ಯಾಗೆ ಸಮೀಪಿಸಿತೋ ಅಷ್ಟಕ್ಕೆ ಹೆಚ್ಚಾಗಿ ಅದು ಬೇಗ ಬರಲೆಂದು ಅಪೇಕ್ಷಿಸಿದನು. ೧೫೪೫ನೇ ನವಂಬರ ೧೭ಲ್ಲಿ ಅವನು ಮೋಶೆಯ ಉತ್ಪತ್ತಿ ಪುಸ್ತಕದ ವ್ಯಾಖ್ಯಾನವನ್ನು ತೀರಿಸಿ, ಹೇಳುವದೇನಂದರೆ:

“ಇದೀಗ ಪ್ರಿಯ ಉತ್ಪತ್ತೀ ಪುಸ್ತಕ! ಕರ್ತನಾದ ದೇವರು, ಮತ್ತಾಬ್ಬರು ನನ್ನ ಮೇಲೆ ಇನ್ನು ಚನ್ನಾಗಿ ವ್ಯಾಖ್ಯಾನ ಬರಿಯುವ ಹಾಗೆ ಮಾಡಲಿ! ನಾನು ಇನ್ನು ಕೆಲಸ ಮಾಡಲಾರೆ, ಬಲ ಕುಂದಿ ಹೋಯಿತು, ನನಗೆ ಒಳ್ಳೇ ಆನಂದಕರವಾದ ಘಳಿಗೆಯನ್ನು ಕಾಡ ಬೇಕೆಂದು ದೇವರನ್ನು ಬೇಡಿ ಕೊಳ್ಳಿರಿ!” ಒಬ್ಬ ಸ್ನೇಹಿತನಿಗೆ ಬರದದ್ದೇನಂದರೆ: “ನನಗೆ ಲೋಕದಿಂದ ಸಾಕಾಯಿತು, ಲೋಕಕ್ಕೆ ನಂನಿಂದ ಸಾಕಾಯಿತು; ಪ್ರಯಾಣಸ್ಥನು ಬಿಡಾರ ಬಿಟ್ಟು ಹೋಗುವಂತೆ, ನಾವು ಸಹಾ ಇಜ್ಜಾಡಾಗುತ್ತೇವೆ. ಆದ್ದರಿಂದ ಕೃಪೆಯ ಘಳಿಗೆಯನ್ನು ಬೇಡಿ ಕೊಳ್ಳುತ್ತೇನೆ, ಇಹಚೋಗವು ನನಗೆ ಸಾಕು.

ಕಡೇ ಕಾಲದಲ್ಲಿ ಒಂದು ಸಾರಿ ಅವನು ಹೇಳಿದ್ದೇನಂದರೆ: “ದುಖ್ಖವೂ ಆಕಾಂತವೂ ಜರ್ಮನಿಯ ಮೇಲೆ ಬರುವ ಮುಂಚೆಯೆ, ನಾನು ಸಮಾಧಾನದಲ್ಲಿ ತೀರಿ ಹೋಗುತ್ತೇನೆ.” ಹಾಗೆಯೆ ಆಯಿತು. ಸ್ವಲ್ಪ ಮುಂಚೆ ಅವನು ತೀರಿ ಹೋದನು.

ಲುಥರನು ಹುಟ್ಟಿದ ಮನ್ಸ್ಫೆಲ್ದ ಸೀಮೆಯ ದೇಶಾಯಿಗಳಲ್ಲಿ ಭೇದಗಳೂ ತಪ್ಪುಗಳೂ, ಸಭೆಯ ವಿಷಯದಲ್ಲಿ ಸಹಾ, ಬಂದಿದ್ದವು. ಲುಥರನು ಅವರಲ್ಲಿ ಸಮಾಧಾನ ಮಾಡಿಸ ಬೇಕೆಂದು, ಅವರು ಅವನನ್ನು ಬೇಡಿ ಕೊಂಡರು. ಮತ್ತು ಲುಥರನು ತನ್ನ ಮುಂಚಿನ ಚೂಪಶಿಗಳ ಮೇಲೆ ಪ್ರೀತಿ ಇಟ್ಟು, ತಾನು ರೋಗಿಷ್ಟನಾಗಿ ಇದ್ದರೂ, ಅದು ಹಿಮಕಾಲವಾಗಿ ಇದ್ದರೂ, ಗಾಡವೆ ಇಲ್ಲದೆ, ಮನ್ಸ್ಫೆಲ್ದದ ಮುಖ್ಯಪಟ್ಟಣವಾದ ಐಸ್ಲೇಬನಕ್ಕೆ ಹೋಗ ಹೊರಟನು.

೧೫೪೬ನೆ ಜನವರಿ ೨೩ಲ್ಲು ವಿತ್ತೆನ್'ಬೆರ್ಗ್‌ದಿಂದ ಪಯಣ ಮಾಡಿದನು. ಸಾಲೆ ಎಂಬ ನದಿಗೆ ನೆರೆ ಬಂದಿರುವದರಿಂದ, ಹಲ್ಲೆ ಎಂಬ ಪಟ್ಟಣದಲ್ಲಿ ಕೆಲವು ದಿನ ಉಳುಕೊಳ್ಳ ಬೇಕಾಯಿತು. ತನ್ನ ಪೂರ್ವಸ್ನೇಹಿತನೂ ಸಹಉದ್ಯೋಗಿಯೂ, ತನ್ನ ಥೃ ಸಭಾಧಿಕಾರಿ ಆದವನೂ ಆಗಿ ಇರುವ ಯೋನನ ಬಳಿಯಲ್ಲಿ ನಿವಾಸ ಮಾಡಿ, ಪ್ರಯಾಸ ತಕ್ಕೊಂಡು, ಕೆಲಸ ನಡಿಸಿ, ಪೌಲನ ಸಂಪರ್ತನದ ವಿಷಯದಲ್ಲಿ ಅವನ ಸಭಾಲಯದಲ್ಲಿ ಪ್ರಸಂಗಿಸಿದನು. ಜನವರಿ ೨೮ಲ್ಲು ಅಷ್ಟು ವರೆಗೂ ತುಂಬಿಯೆ ಇದ್ದ ಸಾಲೆ ನದಿಯನ್ನು ದಾಟಿದನು. ಆಗ್ಯೆ ಬಿರುಘಾಳಿಯು ನಾವೆಯನ್ನು ಮಗಚಿ ಬಿಡುತ್ತದೋ ಎಂಬ ಹಾಗೆ ಆಯಿತು. ಈ ಕಂಟಕಕಾಲದಲ್ಲಿ ಅವನು ಸಂಗಡ ಬಂದ ಸ್ನೇಹಿತನಿಗೆ ಹೇಳಿದ್ದೇನಂದರೆ: “ಪ್ರಿಯ ಪಂಡಿತ ಯೋನನೆ, ಪಂಡಿತ ಮತ್ತೀನನಾದ ನಾನು ಮೂರು ಮಕ್ಕಳ ಸಂಗಡಲೂ ನಿಮ್ಮ ಸಂಗಡಲೂ ಮುಳುಗಿ ಹೋಗುತ್ತಿದ್ದರೆ, ಸೈತಾನನಿಗೆ ಬಹಳ ಮೆಚ್ಚಿಗೆಯಾಗುತ್ತಿತ್ತಲ್ಲಾ?” ಆದರೆ ದೇವರು ಕೈ ಕೊಟ್ಟು, ಅದೇ ದಿನ ಐಸ್ಲೇಬನಕ್ಕೆ ಮುಟ್ಟುವ ಹಾಗೆ ಮಾಡಿದನು.

ಅಷ್ಟರೊಳಗೆ ಮನ್ಸ್‌ಫೆಲ್ಡದ ದೇಶಾಯಿಗಳು ದೊಡ್ಡ ಪರಿವಾರ ತಕ್ಕೊಂಡು, ತಮ್ಮ ಸೀಮೆಯ ಪ್ರಾಂತ್ಯದ ವರೆಗೆ ಎದುರುಗೊಳಿಸಿ ಬಂದಿದ್ದರು. ಈ ಪ್ರಕಾರ ಉತ್ಸವವಾಗಿ ಪಟ್ಟಣಕ್ಕೆ ಹೋಗುತ್ತಿರುವಾಗ್ಯೆ, ಹಿಮಕಾಲದ ಮಹಾ ಛಳಿಘಾಳಿಯಿಂದ ರೋಗಿಯಾಗಿರುವ ಲುಥರನಿಗೆ ಪಟ್ಟಣದ ಸಮೀಪದಲ್ಲಿ ಸ್ಮರಣೆ ತಪ್ಪುವಷ್ಟು ಆಕಾಂತ ಬಂತು. ಆದರೂ ಅವನನ್ನು ಮನೆಯಲ್ಲಿ ಸೇರಿಸಿ ಕಾಂಡ ಪಟ್ಟಣಕರಣೀಕನಾದ ಪಂಡಿತ ದ್ರಾಖ್‌ಸ್ತೆತ್ತನಲ್ಲಿ ಬಿಸಿ ವಸ್ತ್ರಗಳಿಂದಲೂ ತಕ್ಕ ಔಷಧಗಳಿಂದಲೂ ಬೇಗ ತಿರಿಗಿ ಉಪಶಮನವಾಯಿತು.

ಮರುದಿನ ಪ್ರಾತಃಕಾಲದಿಂದ ಹಿಡಿದು ಫೆಬ್ರುವರಿ ೧೬ನೆ ವರೆಗೆ ದಿನದಿನ ಪ್ರಯತ್ನ ಮಾಡಿ, ಬಹಳ ಆಯಾಸದಿಂದಲೂ ಪ್ರಾರ್ಥನೆಯಿಂದಲೂ ಕಾರ್ಯಗಳನ್ನೆಲ್ಲಾ ಸಮವಾಗಿ ತೀರಿಸಿ, ಸಮಾಧಾನ ಮಾಡುವದಕ್ಕೆ ಹೋರಾಡಿದನು. ಬಹಳ ತರ್ಕಗಳಿಂದ ಹೆಚ್ಚಾದ್ದೆಲ್ಲಾ ಅವನ ಮನಸ್ಸಿನ ಪ್ರಕಾರವೆ ಆಯಿತು. ಮುಖ್ಯವಾಗಿ ಸಭೆಯ ಕಾರ್ಯಗಳು ಪೂರ್ಣವಾಗಿ ಹಸ್ತಗತವಾದವು. ಫೆಬ್ರುವರಿ ೧೬ಲ್ಲು ಒಂದು ಒಪ್ಪಂದವನ್ನು ಬರದು, ಉಭಯಪಕ್ಷದವರು ದಸ್ಕತು ಹಾಕಿದದರಿಂದ, ಕ್ರೈಸ್ತ ಸಭೆಯ ಕಾರ್ಯವೆಲ್ಲಾ ಸಮಸ್ತ ದೇಶದಲ್ಲಿ ಸಮವಾಯಿತು.

ಇದಲ್ಲದೆ ವೃದ್ಧಾಪ್ಯ ರೋಗ ಕಷ್ಟಾಯಾಸ ಪಡುತ್ತಿರುವ ಲುಥರನು ಆ ಸಮಯದಲ್ಲಿಯೂ ವಿಶ್ವಾಸ ಬಲ ಪಡಿಸುವ ಕಾಗದಗಳನ್ನು ಬರಿಯುತ್ತಾ ಇದ್ದನು, ಇಬ್ಬರು ಯೌವನಸ್ಥರಾದ ಸಭಾಸೇವಕರನ್ನು ಪ್ರಸಂಗೋದ್ಯೋಗಕ್ಕೆ ನಿಶ್ಚೈಸಿದನು, ತಾನೆ ನಾಲ್ಕು ಸಾರಿ ಪ್ರಸಂಗಿಸಿದನು. ಮತ್ತಾ. ೧೧, ೨೫—೩೦. "ಕಷ್ಟ ಪಟ್ಟು ಭಾರ ಹೊರುವವರೆಲ್ಲರೆ, ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು," ಎಂಬ ವಾಕ್ಯದಿಂದ ಮಾಡಿದ ಪ್ರಸಂಗದ ಕಡೇ ಮಾತು ಏನಂದರೆ: "ದೇವರು, ನಾವು ಆತನ ಪ್ರಿಯ ವಾಕ್ಯವನ್ನು ಕೃತಜ್ಞಾಪನೆಯಿಂದ ತಕ್ಕೊಂಡು, ಆತನ ಮಗನಾದ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಿಳಿವಿಕೆಯಲ್ಲಿಯೂ ವಿಶ್ವಾಸದಲ್ಲಿಯೂ ಬೆಳದು, ಅವನ ಭಾಗ್ಯಕರವಾದ ಅರಿಕೆಯಲ್ಲಿ ಕಡೆ ವರೆಗೂ ಸ್ಥಿರವಾಗಿ ನಿಲ್ಲುವ ಹಾಗೆ ನಮಗೆ ಕೃಪೆ ಕಾಡಲಿ! ಆಮೆನ್." ಈ ಕೃಪೆಯು ಅವನಿಗೆ ಯಥೇಷ್ಟವಾಗಿ ಶಿಕ್ಕಿತು. ಮತ್ತಾಬ್ಬರಿಗೋಸ್ಕರ ಕಷ್ಟ ಮಾಡುವಾಗ್ಯೆ ಅವನು ತನ್ನ ಆತ್ಮಕ್ಕೆ ಚಿಂತಿಸುವದನ್ನು ಬಿಡದೆ, ತನ್ನ ವಿಶ್ವಾಸವನ್ನು ಬಲಗೊಳಿಸುವದಕ್ಕೆ ಎರಡು ಸಾರಿ ರಾತ್ರಿ ಭೋಜನವನ್ನು ತಕ್ಕೊಂಡನು.

ಮೇಲೆ ಹೇಳಿದ ಫೆಬ್ರುವರಿ ೧೬ಲ್ಲು ಅವನು ಹೇಳಿದ್ದೇನಂದರೆ: "ಐಸ್ಲೇಬನದ ನನ್ನ ಪ್ರಿಯ ಭೂಪತಿಗಳನ್ನು ಸಮಾಧಾನ ಪಡಿಸಿದ ಮೇಲೆ, ಮನೆಗೆ ಹೋಗಿ

ಶವ ಪೆಟ್ಟಿಗೆಯಲ್ಲಿ ಇಟ್ಟು, ನನ್ನ ಶರೀರವನ್ನು ಹುಳಗಳಿಗೆ ತಿನ್ನುವದಕ್ಕೆ ಕೊಡುತ್ತೇನೆ.” ಆದರೆ ಕರ್ತನ ಚಿತ್ತವು ಬೇರೆ ಆಗಿ ಇತ್ತು.

ಫೆಬ್ರುವರಿ ೧೭ಲ್ಲು ದೇಶಾಯಿಗಳು ಅವನ ನಿತ್ರಾಣಕ್ಕೋಸ್ಕರ ಇದ್ದ ಮನೆಯಲ್ಲೇ ಇರ ಬೇಕೆಂದು ಅಪೇಕ್ಷಿಸಿದರು. ಮಂಚದಲ್ಲಿ ಮಲಗುತ್ತಾ, ಅಥವಾ ಕೋಣೆಯಲ್ಲಿ ತಿರುಗಾಡುತ್ತಾ, ಬಹಳ ಬಹಳ ಪ್ರಾರ್ಥನೆ ಮಾಡುತ್ತಾ, ಆ ದಿನ ಕಳೆದನು. ಒಂದು ಸಾರಿ ಪಂಡಿತ ಯೋನನಿಗೂ ಮನ್ಸ್‌ಫೆಲ್ಡದ ಅರಮನೇ ಪ್ರಸಂಗಿಯಾದ ಮಿಖಯೆಲ್ ಕೇಲ್ಯನಿಗೂ ಹೇಳಿದ್ದೇನಂದರೆ: “ನಾನು ಇಲ್ಲಿ ಐಸ್ಲೇಬನದಲ್ಲಿ ಹುಟ್ಟಿ, ಸ್ನಾನ ಹೊಂದಿದೆ, ನಾನು ಇಲ್ಲೇ ತೀರಿ ಹೋಗುವದಾದರೆ ಹ್ಯಾಗೆ!”

ರಾತ್ರಿಯ ಊಟದ ಸಮಯದಲ್ಲಿ ದೊಡ್ಡ ಭೋಜನಶಾಲೆಯ ಮೇಜಿಗೆ ಹೋಗಿ ಕೂತು ಕೊಂಡನು, ಆದರೆ ಸ್ವಲ್ಪ ಮಾತ್ರವೆ ಉಂಡನು. ಅವನ ಗುಣಕ್ಕೆ ಅನುಸಾರವಾಗಿ, ಆತ್ಮಜ್ಞಾನ ವೃದ್ಧಿಯಾಗ ತಕ್ಕದ್ದನ್ನೂ, ಮುಖ್ಯವಾಗಿ ಮರಣದ ವಿಷಯದಲ್ಲಿಯೂ ನಿತ್ಯ ಜೀವದ ವಿಷಯದಲ್ಲಿಯೂ ಮಾತಾಡಿದನು. ಆಗ್ಯೆ ಒಬ್ಬನು ಕೇಳಿದ ಪ್ರಶ್ನೆಗೆ ಉತ್ತರವಾಗಿ, ಪರಜೀವದಲ್ಲಿ ಒಬ್ಬನ ಗುರ್ತು ಒಬ್ಬನಿಗೆ ಸಿಕ್ಕುವದು, ಎಂದು ಹೇಳಿದನು.

ಊಟ ಆದ ಮೇಲೆ, ತನ್ನ ಕೋಣೆಗೆ ತಿರಿಗಿ ಹೋಗಿ, ಕಿಟಕಿಯ ಹತ್ರ ನಿಂತು ಪ್ರಾರ್ಥನೆ ಮಾಡಿದನು. ಪಂಡಿತ ಯೋನನ ಸೇವಕನು ಅವನ ಪ್ರಾರ್ಥನೆಯನ್ನು ಕೇಳಿ, ಬರದಿಟ್ಟ ಮಾತುಗಳಲ್ಲಿ ಒಂದು ಯಾವದೆಂದರೆ: “ಕರ್ತನಾದ ದೇವರೆ, ಪರಲೋಕದಲ್ಲಿ ಇರುವ ತಂದೆಯೆ, ನೀನು ನನ್ನನ್ನು ಆ ಬಗ್ಯೆ ಕಳುಹಿಸಿದ್ದಿ ಎಂದು ಲೋಕಕ್ಕೆಲ್ಲಾ ನಿಶ್ಚಯವಾಗುವ ಹಾಗೆ, ನನ್ನ ಪ್ರಿಯ ಜನ್ಮದೇಶದ ಸಭೆಯನ್ನು, ಕಡೆ ವರೆಗೂ ಬಿದ್ದು ಹೋಗದೆ, ಶುದ್ಧ ಸತ್ಯದಲ್ಲಿಯೂ ನಿನ್ನ ವಾಕ್ಯದ ಸತ್ಯ ಅರಿಕೆಯ ಸ್ಥಿರತ್ವದಲ್ಲಿಯೂ ಕೃಪೆಯಿಂದ ಕಾಪಾಡ ಬೇಕು ! ಆಹಾ, ಪ್ರಿಯ ಕರ್ತನಾದ ದೇವರೆ! ಆಮೆನ್.”

ಸ್ವಲ್ಪ ತರುವಾಯ ಅವನು ತನ್ನ ಎದೆಗೆ ನೋವು ಆಗುತ್ತದೆಂದು ಹೇಳಿದಾಗ, ಅವನಿಗೆ ಮದ್ದು ಕೊಟ್ಟು, ಬಟ್ಟೆಗಳಿಂದ ಎದೆಯನ್ನು ತಿಕ್ಕಿದಾಗ, ಸ್ವಲ್ಪ ಗುಣ ಕಂಡಿತು. ೯ ಘಂಟೆಗೆ ಮಂಚದಲ್ಲಿ ಒರಗಿ ಕೊಂಡು, ಸುಮಾರು ಒಂದು ತಾಸು ಸ್ವಾಭಾವಿಕವಾಗಿ ನಿದ್ರೆ ಮಾಡಿದನು. ಎಚ್ಚರಾದಾಗ ಹತ್ರ ಇರುವ ಕೋಣೆಗೆ ಹೋಗಿ, ಹೊಸ್ತಿಲು ದಾಟುವಾಗ್ಯೆ ಹೇಳಿದ್ದೇನಂದರೆ: “ದೇವರು ಕಾಯಲಿ! ನಾನು ಈಗ ಮಲಗುತ್ತೇನೆ! ನಿನ್ನ ಕೈಗೆ ನನ್ನ ಆತ್ಮವನ್ನು ಒಪ್ಪಿಸಿ ಕೊಡುತ್ತೇನೆ! ಕರ್ತನೇ, ನಂಬಿಕೆಯುಳ್ಳ ದೇವರೇ, ನೀನು ನನ್ನನ್ನು ಬಿಡುಗಡೆ ಮಾಡಿದ್ದಿ!” ಅಲ್ಲಿ ಚನ್ನಾಗಿ ಸಿದ್ಧ

ಮಾಡಿದ, ಛಳಿಗೋಸ್ಕರ ಬಿಸಿ ಮಾಡಿದ, ಹಾಸಿಗೆಯಲ್ಲಿ ಮಲಗಿ ಕೊಂಡು, ಅಲ್ಲಿದ್ದವರಿಗೆ, ದೇವರು ನಿಮಗೆ ಒಳ್ಳೇ ರಾತ್ರಿ ಕೊಡಲೆಂದು ಹೇಳಿ, ಕೈ ಕೊಟ್ಟು: "ಪಂಡಿತ ಯೋನನೆ, ಆಚಾರ್ಯ ಕೇಲಿಯೆ, ಇಲ್ಲಿ ಇರುವವರೆಲ್ಲರೆ, ನಮ್ಮ ಕರ್ತನಾದ ದೇವರಿಗೋಸ್ಕರವೂ ಆತನ ಸುವಾರ್ತೆಗೋಸ್ಕರವೂ ಅದಕ್ಕೆ ಒಳ್ಳೇದಾಗುವ ಹಾಗೆ ಪ್ರಾರ್ಥಿಸಿರಿ; ಯಾಕಂದರೆ ಶ್ರಿದೆಂತದ ಸಮಾಗಮವೂ ಕರ್ಕರೆಯ ಪೋಪನೂ ಅದರ ಮೇಲೆ ಬಹಳ ಕೋಪ ಮಾಡುತ್ತಾರೆ" ಎಂದು ಹೇಳಿದನು. ಕಡೆಯಲ್ಲಿ ನಿದ್ರೆ ಬಿದ್ದು, ಸ್ವಾಭಾವಿಕವಾಗಿ ಶ್ವಾಸ ತೆಗಿಯುತ್ತಾ, ಮಧ್ಯರಾತ್ರಿಯ ಮೇಲೆ ಒಂದು ಘಂಟೆಯ ವರೆಗೆ ಮಲಗಿದನು.

ಆಗ್ಯೆ ಎಚ್ಚರವಾಯಿತು. ಸ್ನೇಹಿತರು ಅವನ ಬಳಿಯಲ್ಲಿಯೆ ಇದ್ದು, ಹ್ಯಾಗೆ ಅದೆ ಎಂತ ಕೇಳಿದರು. ಅವನು "ಆಹಾ, ಕರ್ತನಾದ ದೇವರೆ, ನನಗೆ ಎಷ್ಟು ನೋವು ಆಗುತ್ತದೆ! ಬಹು ಪ್ರಿಯ ಪಂಡಿತ ಯೋನನೆ, ನಾನು ಹುಟ್ಟಿ ಸ್ನಾನ ಹೊಂದಿದ ಈ ಐಸ್ಲೇಬನದಲ್ಲಿಯೆ ಸಾಯುತ್ತೇನೆಂದು ನೆನಸುತ್ತೇನೆ," ಅಂದನು. ಮತ್ತು ಎದ್ದು, ಮತ್ತೊಬ್ಬರ ಸಹಾಯವಿಲ್ಲದೆ, ಆ ಕೋಣೆಯಿಂದ ರಾತ್ರಿ ಎಲ್ಲಾ ಬಿಸಿ ಇಟ್ಟ ಕೋಣೆಯೊಳಗೆ ತಿರಿಗಿ ಬಂದು, ಹೊಸ್ತಿಲಲ್ಲಿ "ಕರ್ತನೆ ನಿನ್ನ ಕೈಗೆ ನನ್ನ ಆತ್ಮವನ್ನು ಒಪ್ಪಿಸಿ ಕೊಡುತ್ತೇನೆಂದು" ಪ್ರಾರ್ಥಿಸಿದ ಮೇಲೆ, ಕೋಣೆಯಲ್ಲಿ ಆಚೆ ಈಚೆ ಒಂದೆರಡು ಸರ್ತಿ ನಡದಾಡಿ, ತಿರಿಗಿ ಮಂಚದಲ್ಲಿ ಒರಗಿ ಕೊಂಡು, ಹೇಳಿದ್ದೇನಂದರೆ: "ಎದೆಯೊಳಗೆ ಬಹಳ ಒತ್ತುತ್ತದೆ, ಆದರೂ ಇಷ್ಟು ವರೆಗೆ ಹೃದಯದ ಸ್ಥಳದಲ್ಲಿ ಏನೂ ಕಷ್ಟ ಬರಲಿಲ್ಲ."

ಅಷ್ಟರೊಳಗೆ, ತ್ವರ್ಯದಿಂದ ಹೇಳಿ ಕಳುಹಿಸಿದ ಇಬ್ಬರು ವೈದ್ಯರೂ ಕೆಲವು ಪ್ರಭುಗಳೂ ಬಂದರು. ಅವನನ್ನು ತಿರಿಗಿ ತಿಕ್ಕಿದರು. ಮನ್ಸ್ಫೆಲ್ದದ ಅಲ್'ಬ್ರೆಖ್ತ ದೇಶಾಧಿಯ ಪತ್ನಿಯು ಉಪಶಮನಾರ್ಥವಾಗಿ ಸಂಗಡ ತಂದದ್ದನ್ನು ತಾನೇ ಕೊಟ್ಟಳು. ಆದರೆ ಅವನು ನಾನು ಹೋಗುತ್ತೇನೆ ಎಂದು ಹೇಳಿದನು.

ಸ್ವಲ್ಪ ಕಾಲದ ಮೇಲೆ ಅವನು ಘಟ್ಟಿಯಾಗಿ ಪ್ರಾರ್ಥಿಸಿದ್ದು ಏನಂದರೆ: "ಪರಲೋಕದಲ್ಲಿ ಇರುವ ನನ್ನ ತಂದೆಯೆ, ದೇವರೆ, ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯೆ, ಸಕಲ ಆದರಣೆಯ ದೇವರೆ, ನೀನು ನನಗೆ ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನನ್ನು ಪ್ರಕಟಿಸಿದ್ದಕ್ಕೆ ನಿನಗೆ ಕೃತಜ್ಞಾಪಿಸುತ್ತೇನೆ. ಆತನಲ್ಲಿ ನಂಬುತ್ತೇನೆ, ಆತನನ್ನು ಪ್ರಸಂಗಿಸಿ, ಅರಿಕೆ ಮಾಡುತ್ತಾ ಬಂದಿದ್ದೇನೆ. ಆದರೆ ಆತನನ್ನು ಕರ್ಕರೆಯ ಪೋಪನೂ ಎಲ್ಲಾ ದುಷ್ಟರೂ ಅವಮಾನ ಪಡಿಸಿ, ಹಿಂಸಿಸಿ, ನಿಂದಿಸುತ್ತಾರೆ. ಓ ನನ್ನ ಕರ್ತನಾದ ಯೇಸು ಕ್ರಿಸ್ತನೆ, ನಿನ್ನ ಹತ್ತ್ರ ಬೇಡಿ ಕೊಳ್ಳುತ್ತೇನೆ! ನನ್ನ ಪ್ರಾಣವು

ನಿನಗೆ ಒಪ್ಪಿಸಿದ್ದಾಗಿರಲಿ! ಓ ಪರಲೋಕದಲ್ಲಿರುವ ತಂದೆಯೆ, ನಾನು ಈ ಶರೀರವನ್ನು ಬಿಟ್ಟು, ಈ ಜೀವವನ್ನು ಕಡದು ಕೊಂಡು ಹೋಗ ಬೇಕಾದರೂ, ನಿಶ್ಚಯವಾಗಿ ನಿನ್ನ ಬಳಿಯಲ್ಲಿ ನೆಲೆಯಾಗಿರುವೆನೆಂದೂ, ನಿನ್ನ ಕೈಯಿಂದ ನನ್ನನ್ನು ಯಾರೂ ಕಸಕೊಳ್ಳಲಾರನೆಂದೂ ನಿಶ್ಚಯವಾಗಿ ಬಲ್ಲೆ."

ಅಷ್ಟು ಹೇಳಿದ ಮೇಲೆ ಕೆಳಗೆ ಬರುವ ಎರಡು ಮಾತುಗಳನ್ನು ನುಡಿದನು: ಯೋಹಾ. ೩. ೧೬. "ಅವನಲ್ಲಿ ವಿಶ್ವಾಸ ಇಡುವವರೆಲ್ಲರು ನಾಶವಾಗದೆ, ನಿತ್ಯ ಜೀವವನ್ನು ಹೊಂದುವ ಬಗ್ಗೆ, ದೇವರು ಒಬ್ಬನಾಗಿ ಹುಟ್ಟಿದ ತನ್ನ ಮಗನನ್ನು ಕೊಡುವ ಹಾಗೆ, ಲೋಕವನ್ನು ಅಷ್ಟು ಪ್ರೀತಿ ಮಾಡಿದನು." ಕೀರ್ತ. ೬೮, ೨೦. "ದೇವರು ನಮಗೆ ರಕ್ಷಣೆಗಳ ದೇವರಾಗಿ ಇದ್ದಾನೆ; ನಮ್ಮ ಕರ್ತನಾದ ಯೆಹೋವನಿಗೆ ಮರಣದಿಂದ ಹೊರಡೋಣಗಳು ಉಂಟು."

ಒಬ್ಬ ವೈದ್ಯನು ಬಹಳ ಒಳ್ಳೆ ಒಂದು ಔಷಧವನ್ನು ಕೊಟ್ಟಾಗ, ಲುಥರನು ಒಂದು ಸವುಟು ತೆಗದು ಕೊಂಡರೂ, "ನನ್ನ ಆತ್ಮವನ್ನು ಬಿಡುತ್ತೇನೆ" ಎಂದು ಹೇಳಿ, ಬೇಗ ಬೇಗ ಮೂರು ಸರ್ತಿ "ನಿನ್ನ ಕೈಗೆ ಆತ್ಮವನ್ನು ಒಪ್ಪಿಸುತ್ತೇನೆ" ಅಂದನು.

ಆ ಮೇಲೆ ಪೂರ್ಣವಾಗಿ ಸುಮ್ಮಗಾದನು. ಹತ್ರ ಇರುವವರು ಅವನನ್ನು ಅಲ್ಲಾಡಿಸಿದರು, ತಿಕ್ಕಿದರು, ಕರದರು,—ಆದರೆ ಅವನು ಕಣ್ಣು ಮುಚ್ಚಿ ಕೊಂಡಿದ್ದನು, ಉತ್ತರ ಕೊಡಲಿಲ್ಲ. ಆಗ್ಯೆ ಪಂಡಿತ ಯೋನನು ಘಟ್ಟಿ ಶಬ್ದದಿಂದ: "ಮಾನವುಳ್ಳ ತಂದೆಯೆ, ಕ್ರಿಸ್ತನಲ್ಲಿಯೂ ನೀವು ಪ್ರಸಂಗಿಸಿದ ಬೋಧನೆಯಲ್ಲಿಯೂ ನೆಲೆಯಾಗಿ ಸಾಯುತ್ತೀರೋ?" ಎಂದು ಹೇಳಿದ್ದಕ್ಕೆ, ಘಟ್ಟಿಯಾಗಿಯೂ ಸ್ಪಷ್ಟವಾಗಿಯೂ "ಹೌದು" ಎಂದು ಉತ್ತರ ಕೊಟ್ಟನು. ಇಷ್ಟು ಆದ ಮೇಲೆ ಬಲ ಕಡೆಗೆ ಹೊರಳಿ ಕೊಂಡು, ಕೈ ಕೂಡಿಸಿ, ಸಮಾಧಾನವಾಗಿ ತೀರಿ ಹೋದನು.—ಇದು ೧೫೪೬ನೆ ಫೆಬ್ರುವರಿ ೧೮ಲ್ಲಿ ಬೆಳಗಾಗುವ ಮುಂಚೆ ೩ ಘಂಟೇ ಸಮಯದಲ್ಲಿ ಸಂಭವಿಸಿತು.

ಇದು ನೀತಿವಂತನ ಮರಣವಾಗಿತ್ತಲ್ಲವೊ? ಪ್ರಾರ್ಥಿಸುತ್ತಾ, ತಿರಿಗಿ ತಿರಿಗಿ ಪ್ರಾರ್ಥಿಸುತ್ತಾ, ದೇವರ ನಂಬಿಕೆಯುಳ್ಳ ಕೈಗಳಿಗೆ ತನ್ನನ್ನು ಒಪ್ಪಿಸಿ ಕೊಡುತ್ತಾ, ದೇವರ ಕೃಪಾವಾಕ್ಯದಲ್ಲಿಯೂ ವಾಗ್ದತ್ತದಲ್ಲಿಯೂ ಸ್ಥಿರವಾಗಿ ನಿಂತು, ಮರಣದ ಸಮಸ್ತ ವೇದನೆಗಳಲ್ಲಿ ತಂದೆಯ ಬಳಿಯಲ್ಲಿರುವ ನಿತ್ಯ ನಿವಾಸದ ಮೇಲೆ ಕಣ್ಣಿಟ್ಟು, ಅದರ ನಿಶ್ಚಯತ್ವದಲ್ಲಿ ಸಾಯುವದು; ಕ್ರಿಸ್ತನನ್ನೂ ಆತನ ಜಾಗ್ರತಕರವಾದ ಸುವಾರ್ತೆಯನ್ನೂ ನಂಬಿಕೆಯಾಗಿ ಅರಿಕೆ ಮಾಡುತ್ತಾ ಈ ಮರ್ತ್ಯತುಟಿಗಳನ್ನು ಮುಚ್ಚುವದು; ಇದು ನೀತಿವಂತನ ಮರಣವಲ್ಲವೊ? ಲುಥರನ ಮೇಲೆ ಅಪರಾಧ ಆರೋಪಿಸುವವರು ಅಸಂಖ್ಯಾತವಾಗಿ ಇದ್ದರು, ಇನ್ನೂ ಇದ್ದಾರೆ. ಆದರೆ ಅವನ ಅಂತ್ಯವನ್ನು ನೋಡಿ,

ಅವನ ಜೀವನವು ದೇವರಿಗೆ ಸಮರ್ಪಕವಾಗಿತ್ತೆಂದು ತಿಳುಕೊಳ್ಳಲಿ! ಈ ಪ್ರಕಾರ ಸಾಯಬಲ್ಲವನ ಜೀವನವು ಒಳ್ಳೇದಾಗಿರ ಬೇಕಲ್ಲವೋ? ಈ ಪ್ರಕಾರ ಸಾಯುವವನು ನಿತ್ಯವಾಗಿ ಬದುಕ ತಕ್ಕವನಲ್ಲವೋ? ನಮ್ಮ ಅಂತ್ಯವು ಆತನ ಅಂತ್ಯದ ಹಾಗೆ ಆಗಲೆಂದು ಪ್ರಾರ್ಥಿಸುವಾ!

ಹತ್ರ ನಿಂತವರ ಚಯವೂ ದುಃಖವೂ ಎಷ್ಟು ದೊಡ್ಡದಾಗಿತ್ತೆಂದು ಹೇಳ ಕೂಡದು. ಅವನನ್ನು ತಿರಿಗಿ ತಿಕ್ಕಿ, ಕಮರುಗಳಿಂದ ತಿರಿಗಿ ಎಚ್ಚರಿಸಲಾಗುತ್ತದೆಂದು ನೆನಸಿದರು. ಆದರೆ ಅವನು ಚನ್ನಾಗಿ ನಿದ್ರೆ ಗೈದವನಾಗಿದ್ದನು, ಅವನ ಹೋರಾಟವು ತೀರಿ ಇತ್ತು.

ಬೆಳಗಾಗುವ ಮುಂಚೆಯೆ ಈ ದುಃಖವರ್ತಮಾನವು ಪಟ್ಟಣದಲ್ಲೆಲ್ಲಾ ತುಂಬಿತು, ಮುಂಬೆಳಗಿಗೆ ಮನೆಯೂ ಅಂಗಳವೂ ದುಃಖಿತರಿಂದ ತುಂಬ ಆಯಿತು, ದಿನವೆಲ್ಲಾ ಜನರು ಬರುತ್ತಾ ಹೋಗುತ್ತಾ ಇದ್ದರು. ತವರದ ಶವಪೆಟ್ಟಿಗೆಯನ್ನು ಎರಕ ಹೊಯ್ದು, ಲುಥರನ ಶವವನ್ನು ಅದರಲ್ಲಿಟ್ಟದರಿಂದ, ಆ ದಿನವೆಲ್ಲಾ ಜನರು ಬಂದು ಅದನ್ನು ನೋಡುತ್ತಾ ಇದ್ದರು. ಮರಣದಲ್ಲಿಯೂ ಗಂಭೀರವಾದ ಸ್ಥಿರವಾದ ಮುಖರೇಖೆಗಳೂ ನಿತ್ಯ ಸಮಾಧಾನದ ಹೊಳಪೂ ಅವನಲ್ಲಿ ಕಾಣ ಬಂದವು.

ಮರುದಿನ ಫೆಬ್ರುವರಿ ೧೯ಲ್ಲು ಶವವನ್ನು ಮುಖ್ಯ ದೇವಾಲಯಕ್ಕೆ ಹೊತ್ತುಕೊಂಡು ಹೋದರು. ಅಲ್ಲಿ ಪಂಡಿತ ಯೋನನು ೧ ಥೆಸ್ಸ. ೪, ೧೩—೧೮. "ಇದಲ್ಲದೆ ಸಹೋದರರೆ, ನಿರೀಕ್ಷೆ ಇಲ್ಲದ ಮಿಕ್ಕಾದವರ ಪ್ರಕಾರ ದುಃಖ ಪಡದ ಹಾಗೆ, ನಿದ್ದೆ ಹೋದವರ ವಿಷಯ ನೀವು ಅರಿಯದಿರ ನನಗೆ ಮನಸ್ಸಿಲ್ಲ; ಯಾಕಂದರೆ ಯೇಸು ಸತ್ತು, ತಿರಿಗಿ ಎದ್ದನೆಂದು ನಾವು ನಂಬಿದರೆ, ಅದೇ ಪ್ರಕಾರ ದೇವರು ಯೇಸುವಿನ ಮುಖಾಂತ್ರ ನಿದ್ದೆ ಹೋದವರನ್ನು ಅವನ ಸಂಗಡ ಕರಕೊಂಡು ಬರುವನು. ಇತ್ಯಾದಿ" ಈ ವಾಕ್ಯದಿಂದ ಪ್ರಸಂಗಿಸಿದನು. ಶವವನ್ನು ರಾತ್ರಿಯಲ್ಲಿ ದೇವಾಲಯದಲ್ಲೇ ಇಟ್ಟರು, ಹತ್ತು ಗೃಹಸ್ಥರು ಕಾವಲಿಯಾಗಿ ಇದ್ದರು. ಫೆಬ್ರುವರಿ ೨೦ಲ್ಲು ಆಚಾರ್ಯ ಕೇಲ್ಯನು ನಡಿಸಿದ ದೇವಾರಾಧನೆಯು ಆದ ಮೇಲೆ, ಉತ್ಸವವಾಗಿ ಹಾಡುತ್ತಾ, ಅದನ್ನು ಪಟ್ಟಣದಿಂದ ತಕ್ಕೊಂಡು ಹೋದರು. ಅರಸುಗಳೂ ದೇಶಾಯಿಗಳೂ, ಧೊರೆಗಳೂ ಧೊರೆಸಾನಿಗಳೂ, ಬೇರೆ ಅನೇಕ ಜನರೂ ಅಳುತ್ತಾ ಗೋಳಾಡುತ್ತಾ ಅದರ ಸಂಗಡ ಬಂದರು. ಮನ್ಸ್‌ಫೆಲ್ದದ ತರುಣರಾದ ದೇಶಾಯಿಗಳು ಅಶ್ವಾರೂಢರಾದ ೪೫ ಶ್ರೀಮಂತರ ಸಂಗಡ ಶವದ ಹಿಂದೆ ವಿತ್ತೆನ್‌ಬೆರ್ಗದ ವರೆಗೆ ಬಂದರು. ಅದು ಒಂದು ಮಹಾ ದುಃಖೋತ್ಸವವಾಗಿ ಇತ್ತು. ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಮಹಾ ಘಂಟಾನಾದ ಮಾಡಿದರು. ಗಂಡಸರೂ ಹೆಂಗಸರೂ, ಮುದುಕರೂ ಮಕ್ಕಳೂ, ಎದು

ಗೊಂಡು ಬಂದು, ಅಳುತ್ತಾ, ಗೋಳಾಡುತ್ತಾ, ಸಂಗಡ ನಡದರು. ಈ ಪ್ರಕಾರ ವಿತ್ತೆನ್‌ಬೆರ್ಗದ ವರೆಗೆ ಆಯಿತು.

ಅಲ್ಲಿಗೆ ವರ್ತಮಾನವು ಮುಂಚೆಯೆ ಬಂದಿತ್ತು, ಎಲ್ಲರೂ ಮಹಾ ದುಃಖದಿಂದ ತುಂಬಾಗಿದ್ದರು. ಮೆಲಂತೋನನು ಈ ವರ್ತಮಾನದಿಂದ ಆಕಾಂತವಾಗಿ ಹೇಳಿದ್ದೇನಂದರೆ: "ಕ್ರಿಸ್ತನ ಸಭೆಯನ್ನು ಈ ಮುದಿಯಾಗಿ ಹೋದ ಲೋಕದಲ್ಲಿ ನಡಿಸಿದಂಥಾ ಇಸ್ರಯೇಲಿನ ರಥವೂ ರಾಹುತರೂ ಹೋಗಿಯೇ ಹೋಯಿತು. ಪಾಪಗಳ ಪರಿಹಾರ, ದೇವರ ಮಗನ ಮೇಲಿಡುವ ಭರವಸ, ಇವುಗಳ ಬೋಧನೆಯು ಮನುಷ್ಯ ಸೂಕ್ಷ್ಮಬುದ್ಧಿಯಿಂದ ಬಂದದ್ದಲ್ಲಾ; ದೇವರು ತಾನೆ ಈ ಮನುಷ್ಯನ ಪರಿಮುಖವಾಗಿ ತಿರಿಗಿ ಬೆಳಕಿಗೆ ತಂದದ್ದಾಗಿರುತ್ತದೆ."

ಫೆಬ್ರುವರಿ ೨೨ಲ್ಲು ಶವವು ವಿತ್ತೆನ್‌ಬೆರ್ಗಕ್ಕೆ ಸಮೀಪ ಬಂತು. ಎಲ್‌ಸ್ತರ್ ಹೆಬ್ಬಾಗಲಲ್ಲಿ ಸರ್ವಶಾಲೆಯ ಉದ್ಯೋಗಸ್ಥರೂ, ಪಾರಮಾರ್ಥಿಕರೂ, ಪಟ್ಟಣದ ಉದ್ಯೋಗಸ್ಥರೂ, ಸಮಸ್ತ ಪಟ್ಟಣಿಗರೂ, ಶಾಲೆಗಳ ಮಕ್ಕಳೂ, ಲೆಖ್ಖವಿಲ್ಲದ ಜನರೂ, ಹಾರೈಸಿ ನಿಂತಿದ್ದರು. ಘಂಟಾನಾದದಿಂದಲೂ ಜನರ ದುಃಖಾಲಾಪ ಗೋಳಾಟಗಳಿಂದಲೂ ಮೆರವಣಿಗೆಯಾಗಿ, ಪಟ್ಟಣದ ಒಂದು ಕಡೆಯಿಂದ ಮತ್ತೊಂದು ಕಡೆಗೆ ದಾಟಿ, ಕೋಟೆಯ ದೇವಾಲಯಕ್ಕೆ ಬಂದು ಮುಟ್ಟಿದರು. ವಿತ್ತೆನ್‌ಬೆರ್ಗದಲ್ಲಿ ಮುಂಚೆ ಎಂದೂ ಅಂಥಾ ಜನಸಮೂಹವನ್ನು ಕಂಡದ್ದಿಲ್ಲ.

ಲುಥರನ ಪುರೋಹಿತನಾದ ಪಂಡಿತ ಬೂಗೆನ್‌ಹಾಗೆನನು, ಯೋನನ ಹಾಗೆಯೆ, ೧ಥೆಸ್ಸ. ೪, ೧೩. ಇತ್ಯಾದಿ ವಾಕ್ಯದಿಂದ ಸಮಾಧಿಪ್ರಸಂಗವನ್ನು ಮಾಡಿದನು. ಯಾಕಂದರೆ ಅದು ತೀರಿ ಹೋದವನು ಪ್ರೀತಿ ಮಾಡಿದ ವಾಕ್ಯವಾಗಿ ಇತ್ತು. ಅದರಿಂದಲೇ, ಅವನು ತೀರಿ ಹೋದ ಆಯಿಕೆಯ ಅರಸನಾದ ಬುದ್ಧಿವಂತನೆಂಬ ಫ್ರೀದರಿಕನ ವಿಷಯದಲ್ಲಿ ೨ ಸಾರಿಯೂ, ಸ್ಥಿರನೆಂಬ ಆಯಿಕೆಯ ಅರಸನಾದ ಯೋಹಾನನ ವಿಷಯದಲ್ಲಿ ೩ ಸಾರಿಯೂ ಪ್ರಸಂಗಿಸಿ ಇದ್ದನು. ಬೂಗೆನ್‌ಹಾಗೆನನು ಆರಂಭದಲ್ಲಿ ಹೇಳಿದ್ದೇನಂದರೆ: "ಪ್ರಿಯ ಸ್ನೇಹಿತರೇ, ನಮ್ಮ ಹೃತ್ಪ್ರಿಯನಾದ ಭಾಗ್ಯದಲ್ಲಿ ಸೇರಿದ ತಂದೆಯಂತಿದ್ದ ಪಂಡಿತ ಮರ್ತೀನನ ಸಮಾಧಿಯ ಬಳಿಯಲ್ಲಿ ನಾನು ಪ್ರಸಂಗ ಮಾಡ ಬೇಕು, ಮಾಡಲಿಕ್ಕೆ ಮನಸ್ಸು ಸಹಾ ಉಂಟು. ಆದರೆ ನಾನು ಹ್ಯಾಗೆ ಮಾತಾಡಲಿ? ಕಣ್ಣೀರಿನಿಂದ ಮಾತು ಬರುವದಿಲ್ಲವಲ್ಲಾ!" ಆದಾಗ್ಯೂ ಬಹಳ ಒಳ್ಳೆ ಆದರಣೆಯ ಜೀವದ ವಾಕ್ಯಗಳನ್ನು ಹೇಳಿದನು. ಆಗೈ ಮಾತಾಡಿದ ಮಾತುಗಳಲ್ಲಿ ಎರಡು ಯಾವದೆಂದರೆ: "ಈ ಮಹಾ ಬೋಧಕನೂ ಪ್ರವಾದಿಯೂ, ದೇವರು ಕಳುಹಿಸಿದಂಥಾ ಸಭೆಯ ಪುನಃಸ್ಥಾಪಕನೂ ತೀರಿ ಹೋದರೂ, ಈ ಮನು

ಷ್ಯನ ಮಹಾ ಭಾಗ್ಯ ಉಳ್ಳ ದಿವ್ಯ ಬೋಧನೆಯು ಅತಿ ಬಲವಾಗಿ ಬದುಕುವದು" — "ಕ್ರಿಸ್ತನು ಮಾತ್ರವೆ ನಮ್ಮ ನೀತಿಯೂ ನಿತ್ಯಜೀವವೂ ಆಗಿ ಇದ್ದಾನೆಂದು ಹೇಳುವ ನಿತ್ಯ ಸುವಾರ್ತೆಯನ್ನು ತಕ್ಕೊಂಡು, ಸಭೆಯ ಮಧ್ಯದೊಳಗೆ ಹಾರಿದ ದೂತನೆಂದರೆ ಈತನೆ."

ಅವನ ಮೇಲೆ ಮೆಲಂತೋನನು ಲತೀನ ಭಾಷೆಯಲ್ಲಿ ಬಹು ಶೋಭಿತವಾದ ಭಾಷಣ ಮಾಡಿ, "ಲುಥರನು ಸ್ವರ್ಗೀಯ ಜ್ಞಾನದಿಂದ ತುಂಬಿದವನಾಗಿ, ಸತ್ಯ ಮಾನಸಾಂತರವೆಂದರೇನೆಂದೂ, ಸತ್ಯ ವಿಶ್ವಾಸವೇನೆಂದೂ, ದೇವರನ್ನು ಸಮವಾಗಿ ಆರಾಧಿಸುವದೆಂದರೇನೆಂದೂ, ದೇವರಿಗೆ ಸಮರ್ಪಕವಾದ ಸತ್ಯವಾದ ಒಳ್ಳೇ ಕ್ರಿಯೆಗಳಂದರೇನೆಂದೂ ಬೋಧಿಸಿ, ಬೇರೆ ಯಾವ ಗ್ರಂಥಗಳಲ್ಲಿ ಆದರೂ ಕಾಣುವದಕ್ಕಿಂತ ಮಿಗಿಲಾಗಿ ಕ್ರೈಸ್ತಜೀವವನ್ನೂ ಎಲ್ಲಾ ಉದ್ಯೋಗಗಳನ್ನೂ ಆಶ್ರಮಗಳನ್ನೂ ಶೋಭಿಸಿ, ಹಾಗಳಿ, ಮಹಿಮೆ ಪಡಿಸಿದವನು" ಎಂದು ತೋರಿಸಿದನು. "ಆದ್ದರಿಂದ ಭಕ್ತಿಯುಳ್ಳ ಕ್ರೈಸ್ತ ಜನರು, ದೇವರು ಈ ಪಂಡಿತ ಲುಥರನ ಪರಿಮುಖವಾಗಿ, ತನ್ನ ಸಭೆಗೆ ದಯ ಮಾಡಿದ ದಿವ್ಯ ಉಪಕಾರಕ್ಕೋಸ್ಕರ ಹಾಗಳಿ, ಎಂದೆಂದಿಗೂ ಸ್ತುತಿಸುವರೆಂಬದು ನಿಸ್ಸಂಶಯವಾಗಿದೆ" ಎಂದು ಹೇಳಿ, ಈ ಭಾಷಣವನ್ನು ಮುಗಿಸಿದನು.

ನಾವು ಸಹಾ ಹಾಗೆಯೇ ಮಾಡುವಾ! ಇಂಥಾ ಆಲೋಚನೆಯಲ್ಲಿ ಈ ದೇವರ ಮನುಷ್ಯನ ಚರಿತ್ರದಿಂದ ಬೀಳ್ಕೊಳ್ಳುವಾ! ಅವನ ಶರೀರವನ್ನು, ಆಯಿಕೆಯ ಅರಸನ ಮುಂದೆಯೂ ಅನೇಕ ವಿಶ್ವಾಸಿಗಳ ಮುಂದೆಯೂ ಲುಥರನು ಜೀವದಿಂದಿರುವಾಗ್ಯೆ ಬಲವಾದ ಪ್ರಸಂಗವನ್ನು ಮಾಡಿದಂಥಾ ಪ್ರಸಂಗಪೀಠದ ಸಮಾಧಿಯಲ್ಲಿ ಇಟ್ಟರು. ಆ ಸಮಾಧಿಯ ಮೇಲೆ ಕಂಚಿನ ತಗಡು ಹಚ್ಚಿ, ಕೆಳಗೆ ಯಾರ ಶರೀರವದೆ ಎಂದು ಶಾಸನ ಬರಸಿದರು. ಹತ್ರದಲ್ಲಿ ಇರುವ ಗೋಡೆಗೆ ಬೇರೆ ಎರಡು ತಗಡುಗಳನ್ನು ಹಚ್ಚಿ, ಅವನ ವೃತ್ತಾಂತವನ್ನು ಕೆತ್ತಿಸಿದರು. ವಿತ್ತೆನ್‌ಬೆರ್ಗದ ಕೋಟೆಯ ದೇವಾಲಯದಲ್ಲಿ ಲುಥರನ ಶರೀರವು ಉತ್ಥಾನದ ಆನಂದದಿನವನ್ನು ಎದುರು ನೋಡುತ್ತಾ ಅದೆ.

§ ೧೯.

# ಶ್ಮಲ್‌ಕಲ್ಡದ ಯುದ್ಧ

ಪುನಃಸ್ಥಾಪಕನು ಶೀರಿ ಹೋಗಿ, ನಮ್ಮ ಪುನಃಸ್ಥಾಪನಾಚರಿತ್ರ ಸಹಾ ಮುಗಿಯಲಿಕ್ಕೆ ಹತ್ತಿರವಾಯಿತು. ಅವನು ಮರಣದ ಕೋಣೆಯಲ್ಲಿ ಮಲಗುತ್ತಿರುವಾಗ್ಯೆ ಶಿಡಿಲುಮೋಡವು ದಾಟಿ ಹೋಯಿತು. ಅವನು ತಾನೆ ಅವಸಾನವಾದನು. ಆದರೆ ಯುದ್ಧದ ಶಿಡಿಲು ಅಷ್ಟರೊಳಗೆ ಜರ್ಮನಿಯ ಮೇಲೆ ಒಟ್ಟಾಯಿತು.

ಮಹಾರಾಜನು, ಸುವಾರ್ತಾಪಕ್ಷದವರನ್ನು ತ್ರಿದೆಂತದ ಸಮಾಗಮದಲ್ಲಿ ಅಂಶಿಗಳಾಗುವದಕ್ಕೆ ಸಮ್ಮತಿ ಪಡಿಸಲಾಗಲಿಲ್ಲವೆಂದು ಕೋಪಿಸಿ ಕೊಂಡನು. ಈ ಮನಸ್ಸಿನಿಂದಲೇ ಲುಥರನ ಮರಣವರ್ಷವಾದ ೧೫೪೬ರಲ್ಲಿಯೆ ರೇಗೆನ್ಸ್‌ಬುರ್ಗದಲ್ಲಿ ರಾಜ್ಯಸಭೆಯನ್ನು ಕರಸಿದನು. ನಾನಾ ಪ್ರಕಾರದ ಸುದ್ದಿಗಳಿಂದ ಅಪಧೈರ್ಯಪಡುವ ಸುವಾರ್ತಾಪಕ್ಷದ ಅರಸುಗಳು ತಾವೆ ಬಾರದೆ, ನಿಯೋಗಿಗಳನ್ನು ಆ ಸಭೆಗೆ ಕಳುಹಿಸಿದದರಿಂದ, ಅವನ ಸಂತಾಪವು ಹೆಚ್ಚಿತು. ಇಲ್ಲಿ ಸಹಾ ಭೇದವಾಗಿರುವ ಸಭೆಗಳನ್ನು ಯೇಕೀಕರಿಸುವದಕ್ಕೆ ಶಕ್ತನಾಗದ್ದರಿಂದ, ಕಡೆಯಲ್ಲಿ ಯುದ್ಧಕ್ಕೆ ಕೈ ಹಾಕಿದನು. ಆತನು ತನ್ನ ಮಹಾರಾಜಘನವನ್ನು, ಧರ್ಮದ ನೆವನದಿಂದ ಇಷ್ಟು ವರೆಗೆ ತುಚ್ಛೀಕರಿಸಿದ ಸರ್ವಸಮಾಧಾನದ ಶತ್ರುಗಳಾದ ಕೆಲವರನ್ನು, ಅವರ ಅವಿಧೇಯತ್ವಕ್ಕಾಗಿ ಶಿಕ್ಷಿಸಿ, ಆಯುಧಬಲದಿಂದ ವಿಧೇಯತ್ವಕ್ಕೆ ತಿರಿಗಿ ತರುವದು ಅವಶ್ಯವೆಂದು ರಾಯಸದಿಂದ ಪ್ರಕಟಿಸಿದನು. ಪೋಪನು ಅವನ ಕ್ರೋಧದ ಜ್ವಾಲೆಯನ್ನು ಹೆಚ್ಚಿಸುವದಕ್ಕೆ ಬಹಳವಾಗಿ ಪೇಚಾಡುತ್ತಿದ್ದು, ಸಹಾಯದಳಗಳನ್ನು ಕೊಡುತ್ತೇನೆಂದು ಮಾತುಕೊಟ್ಟನು. ಈ ಪಾಷಂಡಿಗಳಿಗೆ ಎದುರಾಗಿ ಕ್ರೂಜೆಯುದ್ಧ ನಡಿಸುವವರೆಲ್ಲರಿಗೂ ಪ್ರಾರ್ಥನೆಯಿಂದಲೂ ಹಣದಿಂದಲೂ ಸಹಾಯ ಮಾಡುವವರೆಲ್ಲರಿಗೂ ಸಂಪೂರ್ಣವಾದ ಪಾಪಪರಿಹಾರವನ್ನು ಕೊಡುತ್ತೇನೆ ಎಂದು ತಿಳಿಸಿದನು.

ಈ ಪ್ರಕಾರ ಶ್ಮಲ್‌ಕಲ್ಡದ ಯುದ್ಧವೆಂಬದು ನಡಿಯಿತು. ಸುವಾರ್ತಾಪಕ್ಷದವರು (§. ೧೨) ತಮ್ಮೊಳಗೆ ಮಾಡಿದಂಥಾ ಶ್ಮಲ್‌ಕಲ್ಡದ ಒಪ್ಪಂದದಿಂದ ಈ ಹೆಸರು ಆ ಯುದ್ಧಕ್ಕೆ ಬಂತು.

ಇವರು ಬಹು ತ್ವರಿತದಿಂದ ಯುದ್ಧಕ್ಕೆ ಸನ್ನಾಹ ಮಾಡಿದರು. ಮೇಲ್‌ಜರ್ಮನಿಯ ಔಗ್ಸ್‌ಬುರ್ಗ್, ಉಲ್ಮ್, ರೈತ್ಲಿಂಗೆನ್ ಮುಂತಾದ ಪಟ್ಟಣಗಳವರು ಹೇರಳ ದಳವನ್ನು ಕೂಡಿಸಿ, ಆ ಕಾಲದಲ್ಲಿ ಮಹಾತ್ಮಮು ಶೂರನಾದ ಬುರ್ತ್ತೆನ್‌ಬಖದ ಸಬಸ್ತಿಯನ್ ಶೆರ್ತ್ಲಿನ್ ಎಂಬ ಸೇನಾಪತಿಯ ಕೈಗೆ ಒಪ್ಪಿಸಿದರು. ವಿರ್ತ್ತೆಂಬೆರ್ಗ್‌ದ ರಾಜನಾಯಕನ ಅತಿವರರಾದ ಭಟರು ಅವರಿಗೆ ಕೂಡಿದರು. ಇವರನ್ನು ಹೈದೆಕ್ಕದ ಹನ್ಸ್‌ನೆಂಬ ಶೂರನು ನಡಿಸಿದನು. ಇದಲ್ಲದೆ ಮಹಾಧೀರರೂ ಸಂಖ್ಯೆಯಲ್ಲಿ ಅಧಿಕರೂ ಆಗಿ ಇರುವ ಆಯಿಕೆಯ ಸಕ್ಸರೂ ಹೆಸ್ಸರೂ ತಮ್ಮ ತಮ್ಮ ಅರಸುಗಳ ಕೈಕೆಳಗೆ ಯುದ್ಧಕ್ಕೆ ಹೊರಟು ಬಂದು, ಅವರ ಸಂಗಡ ಕೂಡಿದರು. ಎಲ್ಲಾ ಕಡೆಯಿಂದಲೂ ಸ್ವಚಿತ್ತದಿಂದ ಬೇರೆ ಅನೇಕರು ಸಹಾ ಬರಲಾಗಿ, ಒಟ್ಟು ಸೈನ್ಯವು ಸುಮಾರು ಎಪ್ಪತ್ತು ಸಾವಿರ ಆಯಿತು.

ಹೀಗಿದ್ದರೂ ಪ್ರತಿಕಕ್ಷಿಕರ ಕಡೆಯ ಪ್ರಧಾನರಾಗಿ ಇರುವ ಸಕ್ಸದ ಆಯಿಕೆಯ ಅರಸನೂ ಹೆಸ್ಸದ ದೇಶಾಯಿಯೂ ಇನ್ನೊಮ್ಮೆ ಸಮಾಧಾನ ಹೊಂದುವದಕ್ಕೆ ಪೇಚಾಡಿ, ಮಹಾರಾಜನಿಗೆ ಅತಿ ವಿನಯಭರಿತವಾದ ಬಿನ್ನವತ್ತಳೆ ಕಳುಹಿಸಿ, ಅದರಲ್ಲಿ ಅವಿಧೇಯತ್ವದ ಅಪವಾದಗಳನ್ನು ನಿವಾರಿಸಿ, ತಮಗೆ ವಿರೋಧವಾಗಿ ನಡಿಸುವ ಒತ್ತಾಯದ ಕೃತ್ಯಗಳಿಂದ ಮಹಾರಾಜಪಟ್ಟವನ್ನು ಅಪಯೋಗಿಸುವ ಹಾಗಾಗುತ್ತದೆಂದು ಅವನ ಮನವರಿಕೆಗೆ ತಂದು, ಯಾರ ಮೇಲೆಯೂ ಲಕ್ಷ ಇಡದೆ, ಪೋಪನ ಒಬ್ಬನ ಮಾತು ಮಾತ್ರವೆ ಕೇಳಿ, ಸತ್ಯವಾದ ಕ್ರೈಸ್ತಧರ್ಮವನ್ನು ರಾಜ್ಯದಲ್ಲಿ ನಿರ್ಮೂಲ ಮಾಡುವದಕ್ಕೆ ನೋಡಿದ ಹಾಗಾಗುತ್ತದೆ; ಆದ್ದರಿಂದ ಜರ್ಮನಿಗೆ ಬರಲಿಕ್ಕಿರುವ ಆ ಕಾಂತದ ಅಪರಾಧವು ಮಹಾರಾಜನ ಮೇಲೆ ಬರುವದು ಎಂದು ತಿಳಿಸಿದರು. ಇದಕ್ಕೆ ಬೇರೇನೂ ಉತ್ತರ ಕೊಡದೆ, ಮಹಾರಾಜನು ಅವರು ಸ್ವಾಮಿದ್ರೋಹಿಗಳೆಂದು ನಿರ್ಣೈಸಿದನು. ಹಾಗಂದರೆ ಅವರಿಗೆ ಇನ್ನು ಮುಂದೆ ಮಹಾರಾಜ್ಯದ ಆಶ್ರಯವು ತಪ್ಪಿತು ಎಂಬ ಅರ್ಥ. ಅದಕ್ಕೆ ಸುವಾರ್ತಾಪಕ್ಷದ ಅರಸುಗಳು ನಮಗೂ ನಿಮಗೂ ಯುದ್ಧವೆಂದು ಹೇಳಿ ಕಳುಹಿಸಿ, ಶತ್ರುಗಳು ಬಂದರೆ ಪ್ರತಿಯಾಗಿ ನಿಲ್ಲುವದಕ್ಕೆ ಮಾತ್ರವಲ್ಲ, ಅವರ ಮೇಲೆ ಹೋಗಿ ಬೀಳುವದಕ್ಕೆ ಸಹಾ ನಿಶ್ಚೈಸಿದರು.

ಆದರೆ ಇದು ದೇವರಿಗೆ ಒಪ್ಪಿಗೆಯಾಗಿ ಇರಲಿಲ್ಲ, ಅದರಿಂದ ಅವರ ಕಾರ್ಯಕ್ಕೆ ಹಾನಿ ಬಂತು. ಅವರು ಮಹಾರಾಜನಿಗೆ ಎದುರಾಗಿ ಸರ್ವಥಾ ಕತ್ತಿಯನ್ನು ಎಳಿಯದೆ ಲುಥರನ ಬುದ್ಧಿಮಾತಿಗೆ ಸರಿಯಾಗಿ ಅತಿ ಪರಿಶುದ್ಧವಾದ ವಿಶ್ವಾಸದಲ್ಲಿ ನೆಲೆಯಾಗಿ ಇದ್ದು, ಕರ್ತನಾದ ಯೆಹೋವನು ಕಾಪಾಡ್ಯಾನೆಂದು ನೆನಸಿ, ಎಲ್ಲಾ ಆತನಿಗೆ ಒಪ್ಪಿಸಿ ಕಾಡ ಬೇಕಾಗಿ ಇತ್ತು. ಇದೊಂದು ನಿಶ್ಚಯ: ಪ್ರಪಂಚದ ಆಯುಧ

ಗಳಿಂದ ಹೋರಾಡುವ ಮುಂಚೆ, ಪುನಃಸ್ಥಾಪನೆಯ ಕಾರ್ಯವು ವೃದ್ಧಿಯಾಯಿತು; ಪ್ರಪಂಚದ ಆಯುಧಗಳನ್ನು ಪ್ರಯೋಗಿಸಿದ ಮೇಲೆ, ಆ ಕಾರ್ಯವು ಮುಂದೆ ನಡಿಯದೆ, ತಕ್ಕಷ್ಟು ಹಿಂದೆ ನಡಿಯಿತು. ಸುವಾರ್ತಾಪಕ್ಷದವರ ಮೇಲೆ ಜಯದ ಆತ್ಮವು ಬಂದು ಬಿದ್ದ ಹಾಗೆ ಆಯಿತು, ಸ್ಥಿರತ್ವ ಹೋಯಿತು, ಅವರ ಕೆಲಸವೆಲ್ಲಾ ತಲೆಕೆಳಗೆ ಆಯಿತು.

ಅವರ ಬಳಿಯಲ್ಲಿ ದೊಡ್ಡ ಸೈನ್ಯ ಕೂಡಿ ಬಂದರೂ, ಮಹಾರಾಜನ ಬಳಿಯಲ್ಲಿ ಅಷ್ಟು ದೊಡ್ಡದು ಇರಲಿಲ್ಲ. ಮೇಲೆ ಹೋಗಿ ಬೀಳುವದಕ್ಕೆ ನಿಶ್ಚೈಸಿದ ಹಾಗೆ, ಅವರು ಆಗಲೇ ಮಹಾರಾಜನ ಮೇಲೆ ಯುದ್ಧ ನಡಿಸುತ್ತಿದ್ದರೆ, ಮನುಷ್ಯಯತ್ನದಲ್ಲಿ ನಿಸ್ಸಂಶಯವಾಗಿ ಆಗಲೇ ಜಯ ಹೊಂದುತ್ತಿದ್ದರು ಎಂದು ಹೇಳ ಬೇಕು. ಆದರೆ ಅಧಿಕಾರಿಯ ಮೇಲೆ ಹೋಗಿ ಬೀಳುವದು, ಅವನಿಗೆ ಎದುರು ನಿಲ್ಲುವದು ಸಹಾ ಸಮವೋ ಎಂಬ ಮಾತಿಗೆ ಹೆಚ್ಚಾದವರಿಗೆ ಎದೆ ಬಡಿಯಿತು, ಒಬ್ಬನಿಗೂ ಧೈರ್ಯದ ಉತ್ತರ ಬರಲಿಲ್ಲ. ಅವರು ದಿನಗಳನ್ನು ಕಳದರು, ಪಕ್ಷಗಳನ್ನು ಕಳದರು, ತಿಂಗಳುಗಳನ್ನು ಕಳದರು, ಕೈಕಟ್ಟಿದವರಂತೆ ಸುಮ್ಮನೆ ಇದ್ದರು. ಆದರೆ ಮಹಾರಾಜನು ನಾಲ್ಕು ದಿಕ್ಕುಗಳಿಂದಲೂ ಯುದ್ಧಸ್ಥರನ್ನು ಕರಸಿದನು. ಪೋಪನಾಬ್ಬನೆ ತನ್ನ ಮಾತಿಗೆ ನಿಂತು, ಹತ್ತುಸಾವಿರ ಮಂದಿಯನ್ನು ಕಳುಹಿಸಿದನು. ಸುವಾರ್ತಾಪಕ್ಷದವರು ತಡ ಮಾಡುತ್ತಿರುವಾಗ್ಯೆ, ಅವರಲ್ಲಿ ಭೇದ ಸಹಾ ಉಂಟಾಯಿತು. ಒಬ್ಬನು ಹೀಗೆ, ಒಬ್ಬನು ಹಾಗೆ ಹೇಳುತ್ತಾ, ಒಬ್ಬನಾದರೂ ಮತ್ತೊಬ್ಬನಿಗೆ ಕಿವಿ ಕೊಡಲಿಲ್ಲ. ಅವರು ದನೂಬ ನದಿಯ ಬಳಿಯಲ್ಲಿ ಇದ್ದರು. ಕರ್ಲನು ಅವರ ಸಮೀಪಕ್ಕೆ ಇಂಗೊಳ್ಸ್ತ್ರಕ್ಕೆ ಬಂದು, ಈ ಕೋಟೆಯ ಫಿರಂಗಿಗಳಿಗೆದುರಾಗಿ ತನ್ನ ಸೈನ್ಯವನ್ನು ಇಳಿಸಿ, ಛದ್ರ ಮಾಡಿ ಕೊಂಡನು. ದಳವಾಯಿ ಶೆತ್ತಿರ್ಲೀನನು ಶತ್ರುಗಳಿಗೆ ಕಾಳಗ ಕೊಡ ಬೇಕೆಂದು ಅಪೇಕ್ಷಿಸಿದನು; ಮತ್ತು ಆ ಕಾಲದಲ್ಲಿ ಮಹಾರಾಜನಿಗೆ ಹೊಲ್ಲದಿಂದ ಸೈನ್ಯವು ಬಂದು ಮುಟ್ಟದಿರುವದರಿಂದ, ದಳವು ತಕ್ಕಷ್ಟು ಕಡಿಮೆಯಾಗಿರಲಾಗಿ, ಕಾರ್ಯವು ಕೈಕೂಡಿ ಬರ ಬಹುದಿತ್ತು. ಆದರೆ ಬೇರೆ ದಳವಾಯಿಗಳು ಜಯ ಪಟ್ಟರು. ಆದಾಗ್ಯೂ ಕಡೆಯಲ್ಲಿ ಅವರು ಮಹಾರಾಜನ ದಂಡಿಗೆ ಹೋಗಿ, ಮೂರು ದಿನ ವರೆಗೆ ಗೋಡೆಗಳಿಗೆ ಸುತ್ತು ಹಾಕಿ ಕೂತರು; ನಾಲ್ಕನೆ ದಿನದಲ್ಲಿ ಹಲ್ಲ ಮಾಡದೆ, ಆ ಕಡೆಗೆ ಕೂಚಾಗಿ ಬರುವ ಹೊಲ್ಲರನ್ನು ಮುಂಚೆ ನಾಶ ಮಾಡ ಬೇಕೆಂದು ಅವರಿಗೆ ಎದುರಾಗಿ ಹೋಗುತ್ತೇವೆಂತ ಹೇಳಿ ಹೋದರು ಸರಿ, ಆದರೆ ಅವರಿಗೂ ಇವರಿಗೂ ಭೇಟಿ ಆಗಲಿಲ್ಲ. ಸ್ವಲ್ಪ ಕಾಲದ ವರೆಗೆ ವ್ಯರ್ಥವಾಗಿ ಆಚೆ ಈಚೆ ಓಡ್ಯಾಡಿದ ಮೇಲೆ, ದಂಡಿನಲ್ಲಿ ಕರ್ಕರೆಯೂ ಆಹಾರದ ಆಪತ್ತೂ ಬಂದೊದಗಿದಾಗ, ಎಲ್ಲರೂ ತಮ್ಮ ತಮ್ಮ ಮನೆಗೆ ಹೋಗಿ ಬಿಟ್ಟರು.

ಈ ಪ್ರಕಾರ ತಿರಿಗಿ ಹೋಗುತ್ತಿರುವಾಗ್ಯೆ, ಆಯಿಕೆಯ ಅರಸನಿಗೆ ಮಹಾ ವಿಪತ್ತು ವರ್ತಮಾನವು ಬಂದು ಮುಟ್ಟಿತು. ಅದೇನಂದರೆ, ಸಕ್ಸದ ಯೌವನ ಪ್ರಾಯದ ದಾಯಾದಿ ರಾಜನಾಯಕ ಮೋರಿಚ್ಚನು ಶ್ಮಲ್‍ಕಲ್ದದ ಒಪ್ಪಂದಕ್ಕೆ ಶೇರದಿದ್ದರೂ, ಸುವಾರ್ತಾಪಕ್ಷಕ್ಕೆ ಕೂಡಿದವನಾಗಿರುವದರಿಂದ, ಅವನಿಗೆ ಆಯಿಕೆಯ ಅರಸನು ತಾನು ಇಲ್ಲದ ಸಮಯದಲ್ಲಿ ತನ್ನ ದೇಶದ ಮೇಲ್ವಿಚಾರವನ್ನು ಒಪ್ಪಿಸಿ ಕೊಟ್ಟಿದ್ದನು, ಮತ್ತು ಈತನು ಅದನ್ನು ಕಾಯುತ್ತೇನೆಂದು ಮಾತು ಕೊಟ್ಟಿದ್ದನು. ಆದರೆ ಮೋರಿಚ್ಚನು ಮಹಾರಾಜನ ಸಂಗಡ ಒಳಗಿಂದೊಳಗೆ ಬೇರೊಂದು ಒಪ್ಪಂದ ಮಾಡಿ, ಸುಂದರನಾಗಿಯೂ ಶೂರನಾಗಿಯೂ ಇರುವ ಈ ಮನುಷ್ಯನು ದ್ರೋಹ ಮಾಡಿ, ೧೫೪೬ನೆ ನವಂಬರದಲ್ಲಿ ಆಯಿಕೆಯ ಅರಸನ ಸೀಮೆಯೊಳಗೆ ನುಗ್ಗಿ ಬಂದು, ಮಹಾರಾಜನ ಶಾಸನವನ್ನು ನಡಿಸುವದಕ್ಕೆ ಎಂಬದಾಗಿ, ಕೆಲವು ಪಟ್ಟಣಗಳ ಹೊರ್ತು, ಸೀಮೆಯನ್ನೆಲ್ಲಾ ಗೆದ್ದನು. ಆದರೂ ಈ ದ್ರೋಹದ ಬಾಬ್ತೆಯು ಜರ್ಮನಿಯಲ್ಲೆಲ್ಲಾ ಹಬ್ಬಿದಾಗ, ಅವನಿಗೂ ಜಯವಾಗದಿರದು. ಆಯಿಕೆಯ ಅರಸನ ರಾಣುವೆಯವರು ಅದಕ್ಕೆ ಹ್ಯಾಗೂ ಬಹಳ ಸಂತಾಪಗೊಳ್ಳಲಾಗಿ, ಆಯಿಕೆಯ ಅರಸನು ಅವರೊಡನೆ ಸ್ವದೇಶಕ್ಕೆ ಬಂದು ಯುದ್ಧ ಮಾಡಿ, ಸ್ವಲ್ಪ ಕಾಲದೊಳಗೆ ತನ್ನ ಸೀಮೆಯನ್ನೆಲ್ಲಾ ಪುನರಪಿ ಕೈವಶ ಮಾಡಿ ಕೊಂಡು, ಅಪಜಯ ಪಟ್ಟ ಮೋರಿಚ್ಚನನ್ನು ಅವನ ಸ್ವಂತ ಸೀಮೆಯಲ್ಲಿ ಒತ್ತಿದನು.

ಆದರೂ ಬೆನ್ನಿನಲ್ಲಿ ಅಪರೂಪವಾದ ಹೊಂಬಣ್ಣದ ಕ್ರೂಜೆಯ ಆಕೃತಿಯ ಕಲೆಯುಳ್ಳವನಾಗಿರುವ ಯೋಹಾನ್‍ಫ್ರೀದರಿಕನ ಜನನಕಾಲದಲ್ಲಿ ಸಾವಿರಾರು ಪುರೋಹಿತರು: "ಅಯ್ಯೋ ದೇವರೆ, ಈ ಮಗುವು ತನ್ನ ಜೀವದಲ್ಲಿ ಬಹು ಭಾರವಾದ ಕ್ರೂಜೆಯನ್ನು ಹೊರ ಬೇಕಾಗುವದೆಂಬದು ನಿಶ್ಚಯ. ಯಾಕಂದರೆ ದೇವರೂ ಪ್ರಕೃತಿಯೂ ಏನೊಂದೂ ಸುಮ್ಮನೆ ಮಾಡುವದಿಲ್ಲ" ಎಂದು ಹೇಳಿದ ಪ್ರಕಾರ, ಈ ಪ್ರಿಯ ಭಕ್ತಿಯುಳ್ಳ ಆಯಿಕೆಯ ಅರಸನು, ಈ ಕಲೆಯು ನಿಜ ಅರ್ಥವುಳ್ಳದ್ದೆಂದು, ಮತ್ತೆ ಅನುಭವಿಸ ಬೇಕಾಯಿತು.

೧೫೪೭ನೆ ವಸಂತಕಾಲದಲ್ಲು ಮಹಾರಾಜನು, ಮೇಲ್‍ಜರ್ಮನಿಯ ಪಟ್ಟಣಗಳನ್ನೂ ವಿರ್ತೆಂಬೆರ್ಗವನ್ನೂ ಚನ್ನಾಗಿ ದಂಡಿಸಿದ ತರುವಾಯ, ತ್ವರ್ಯದಿಂದ ಸಕ್ಸಕ್ಕೆ ಬಂದು, ಎಲ್ಬ ನದಿಯ ತೀರದಲ್ಲಿ ಅಕಸ್ಮಾತ್ತಾಗಿ ಎಂಬ ಹಾಗೆ, ಆಯಿಕೆಯ ಅರಸನಿಗೆ ಎದುರಾಗಿ ನಿಂತನು. ಎಲ್ಬ ನದಿಯು ಆಳವಾಗಿ ಇತ್ತು, ಸಂಕವು ಮುರಿದು ಇತ್ತು. ಆದರೆ ಎಪ್ರಿಲ್ ೨೪ರಲ್ಲು ಹೊತ್ತಾರೆ, ಅದು ಆದಿತ್ಯವಾರವಾಗಿರಲಾಗಿ, ಆಯಿಕೆಯ ಅರಸನು ಮೂಲ್‍ಬೆರ್ಗದ ದೇವಾಲಯಕ್ಕೆ ಹೋಗಿ, ದೇವರ ವಾಕ್ಯದ

ನ್ನು ಕೇಳಿ ಧ್ಯಾನಿಸುತ್ತಿರುವ ಸಮಯದಲ್ಲಿ, ಮಹಾರಾಜನ ಕಡೆಯವರು ಫಕ್ಕನೆ ದಾಟಿ ಬಂದರು. ಒಬ್ಬ ಸ್ವಾಮಿದ್ರೋಹಿಯಾದ ಹಿಟ್ಟುಗಾರನು ಹೊಳೆ ದಾಟುವ ಸ್ಥಳವನ್ನು ತೋರಿಸಿ ಇದ್ದನು. ವಿಸ್ಮಯರಾದ ಸಕ್ಸರು ಲೊಖೌವದ ಕಾಡಿಗೆ ಓಡಿ ಹೋದರು. ಅಲ್ಲಿ ಆಯಿಕೆಯ ಅರಸನು ಅವರನ್ನು ನಿಲ್ಲಿಸಿದಾಗ, ಕಾಳಗವು ಪ್ರಾರಂಭವಾಯಿತು. ಮಹಾರಾಜನ ಸವಾರರು ಒಳ್ಳೆ ಪೆಟ್ಟು ಹೊಡದಾಗ, ಜಯ ಪಟ್ಟು ಗಲಿಬಿಲಿಯಾದ ಸಕ್ಸರು ನಿಲ್ಲಲಾರದೆ ತಿರಿಗಿ ಓಡಿದರು. ಮತ್ತು ಮಹಾರಾಜನ ಕಡೆಯವರು ಬೆನ್ನಟ್ಟಿದರು, ಮೂರುಸಾವಿರ ಮಂದಿ ಅಲ್ಲೇ ಬಿದ್ದರು, ಅನೇಕರು ಕೈಶೆರೆಯಾದರು. ಆಯಿಕೆಯ ಅರಸನಿಗೂ ಇದೇ ಗತಿ ಬಂತು. ಅವನು ಸ್ಥೂಲಪುರುಷನಾಗಿ ತಪ್ಪಿಸಿ ಕೊಳ್ಳಲಾರದಿರುವದರಿಂದ, ಶತ್ರುಸವಾರರು ಮುತ್ತಿಗೆ ಹಾಕಿದಾಗ, ಬಹು ಧೈರ್ಯವಾಗಿ ಸಾಧಿಸಿದರೂ, ಕಡೆಯಲ್ಲಿ ತನ್ನನ್ನು ಒಪ್ಪಿಸಿ ಕೊಡ ಬೇಕಾಯಿತು.

ರಾಜನಾಯಕ ಅಲ್ಬನು, ಸುವಾರ್ತಾಪಕ್ಷದವರ ಮೇಲೆ ಅತಿ ಸಂತಾಪ ಪಡುವ ಈ ಶತ್ರುವು, ಅವನನ್ನು ಮಹಾರಾಜನ ಬಳಿಗೆ ತಕ್ಕೊಂಡು ಬಂದನು. ಒಂದು ಗಲ್ಲದಲ್ಲಿ ಆದ ಘಾಯದಿಂದ ರಕ್ತ ಸುರಿಯುತ್ತದೆ, ಅವನ ಕವಚವೆಲ್ಲಾ ರಕ್ತಮಯವಾಗಿ ಅದೆ. ಮಹಾರಾಜನನ್ನು ದೃಷ್ಟಿಸಿದಾಗ "ದೇವರೆ, ನನ್ನನ್ನು ಕರುಣಿಸು! ಈಗ ಇಲ್ಲಿಗೆ ಬಂದೆ" ಎಂದು ಹೇಳಿ, ಕುದುರೆಯಿಂದಿಳಿದು, ದೀನಭಾವದಿಂದಲೂ ವಿನಯದಿಂದಲೂ ಮೇಲಧಿಕಾರಿಗೆ ಸಮೀಪಿಸಿದನು. ಕರ್ಲನು ಮುಂಚೆ ಕೆಲವು ಕೋಪದ ಮಾತುಗಳನ್ನು ಆಡಿದ ಮೇಲೆ, ಸಂತಾಪದಿಂದ ಮುಖ ತಿರುಗಿಸಿದನು.

ಈ ದುರ್ಭಾಗ್ಯದ ಅರಸನ ಮೇಲೆ ಭಾರವಾದ ಕಷ್ಟ ಬಂತು. ಮೊದಲು ಅವನಿಗೆ ಮರಣಶಿಕ್ಷೆಯನ್ನು ನೇಮಿಸಿ, ಅವನಿಗೆ ಓದಿ ಹೇಳಿದರು. ಆದಾಗ್ಯೂ ಮತ್ತೆ ಮಹಾರಾಜನು ಈ ಕಠಿಣ ಶಿಕ್ಷೆಯು ಬೇಡಾ ಅಂದನು. ಆದಾಗ್ಯೂ ದ್ರೋಹಿಯಾದ ಮೋರಿಚ್ಚನಿಗೆ ಆಯಿಕೆಯ ಅರಸ್ತನದ ಬಿರುದನ್ನೂ ರಾಜ್ಯದ ದೊಡ್ಡ ಭಾಗವನ್ನೂ ಪಾರಂಪರೆಯಾಗಿ ಬಿಟ್ಟು ಕೊಡಲಿಕ್ಕೆ ಒಪ್ಪಿ ಕೊಳ್ಳ ಬೇಕೆಂದು ಹೇಳಿದಾಗ, ಅದಕ್ಕೆ ಅವನು ಒಪ್ಪಿ ಕೊಂಡು, ಪತ್ರ ಬರದು ಕೊಟ್ಟನು. ಆದರೆ ಪೋಪನಿಗೂ ಸಮಾಗಮಕ್ಕೂ ಒಳ ಬೀಳ ಬೇಕೆಂದು ಅಪ್ಪಣೆ ಕೊಟ್ಟಾಗ, ಅವನು "ರಾಜ್ಯವನ್ನೂ ಪ್ರಜೆಯನ್ನೂ ಮಾತ್ರವಲ್ಲ, ಕುತ್ತಿಗೆಯನ್ನು ಸಹಾ ಕೊಡ ಸಿದ್ಧವಾಗಿ ಇದ್ದೇನೆ, ಆದರೆ ದೇವರ ವಾಕ್ಯವನ್ನು ಬಿಡಲಾರೆನು" ಎಂದು ಖಂಡಿತವಾಗಿ ಹೇಳಿದನು.

ಹೆಸ್ಸದ ದೇಶಾಯಿಗೂ ದುರ್ಗತಿ ಬಂತು. ತಾನು ಒಬ್ಬನೆ ಲಡಾಯಿ ಮಾಡಲಾರೆನೆಂದು ನೆನಸಿ, ತನಗೆ ಮಗಳ ಗಂಡನಾದ ಮೋರಿಚ್ಚನೂ ಸ್ನೇಹಿತನಾದ

ಬ್ರಂಡೆನ್‌ಬುರ್ಗದ ಎರಡನೆ ಯೊವಖೀಮನೂ ದೈನ್ಯ ಬಂದರೆ ಮಹಾರಾಜನು ಮನ್ನಿಸಿ ಬಿಡುಗಡೆ ಮಾಡುವೆನೆಂದು ವಾಗ್ದತ್ತ ಕೊಟ್ಟಿದ್ದಾನೆಂಬದಾಗಿ ಹೇಳಿದ ಮಾತನ್ನು ನಂಬಿ, ಮಹಾರಾಜನಿಗೆ ಶರಣು ಬಿದ್ದನು. ಫಿಲಿಪ್ಪನು ಮಹಾರಾಜನ ಬಳಿಗೆ ಹಲ್ಲೆಗೆ ಬಂದು, ಮೊಣಕಾಲೂರಿ, ಕ್ಷಮೆ ಬೇಡಿ ಕೊಂಡನು. ಆದರೆ ಅವನ ಮಧ್ಯಸ್ಥರ ಕಡೆಯಲ್ಲಿ ತಪ್ಪಾಯಿತೋ, ಕರ್ಲನು ಅನ್ಯಾಯ ಮಾಡಿದನೋ, ತಿಳಿಯದು; ಹ್ಯಾಗೂ ಫಿಲಿಪ್ಪನನ್ನು ಶೆರೆ ಹಿಡಿದು ಇಟ್ಟು ಬಿಟ್ಟರು. ಎಂಥಾ ಅಕಾಂತ!

ಇತ್ತಲಾಗಿ ಇಷ್ಟು ವರೆಗೂ ಬಹು ಬಲಾಢ್ಯರಾದ ಉಭಯ ಅರಸುಗಳಿಗೂ ಒಂದೇ ಗತಿ ಆಯಿತು. ಹಿಸ್ಪಾನ್ಯದ ರಾಣುವೆಯವರ ಭದ್ರವಾದ ಕಾವಲಿಗೆ ಒಳಗಾದ ಶೆರೆಯವರಾಗಿ, ಈಗ ಬಡಗು ಕಡೆಗೆ ಹಾಲ್ಲ ದೇಶಕ್ಕೂ, ಮತ್ತೆ ತೆಂಕಲು ಕಡೆಗೆ ತಿರೋಲಕ್ಕೂ, ಈ ಪ್ರಕಾರ ಮಹಾರಾಜನು ಹೋದಲ್ಲಿಗೆ ಅವನ ಹಿಂದೆ ಹೋಗಬೇಕಾಯಿತು. ಘನ ಬುದ್ಧಿಯ ಆಯಿಕೆಯ ಅರಸನು ಸಮಸ್ತ ಸಂಕಷ್ಟಗಳಲ್ಲಿ ದೇವರಲ್ಲಿ ಭರವಸವಿಟ್ಟನು. ಈ ಬಂಧನಕಾಲದಲ್ಲಿ "ದೇವರಿಗೆ ಒಪ್ಪಿಗೆಯಾದ್ದು ನನಗೂ ಒಪ್ಪಿಗೆ, ಚಂಚಲ ಆಗಲಾರೆ" ಎಂಬ ಗೀತವನ್ನು ಮಾಡಿದನು. ಘನವಂತನೆಂಬ ಅವನ ಉಪನಾಮವು ಈ ಸಂಕಷ್ಟಕಾಲದಲ್ಲಿ ಸಾರ್ಥಕವಾಯಿತು. ಇದೆಲ್ಲಾ ಅವನಿಗೆ ದೇವರಿಂದ ಬಂದ ಪ್ರೀತಿ ಶಿಕ್ಷೆಯಾಗಿರುವದರಿಂದ, ಅವನಿಗೆ ಸಮಾಧಾನದಲ್ಲಿ ನೀತಿಯ ಫಲವು ಉಂಟಾಯಿತು. ಅವನ ಕ್ರೂಜೆಯು ಹೊಂಬಣದ್ದು ಮಾತ್ರವಲ್ಲ, ದಿವ್ಯ ಬಂಗಾರದ್ದಾಯಿತು.

ಆದರೂ ಈಗ ಮಹಾರಾಜನ ಜಯದ ಸಂಗತಿಯನ್ನು ಕೇಳ ಬೇಕು. ಅವನ ಜಯವರ್ತಮಾನವು ಬಂದಾಗ, ಪೋಪನ ಕಡೆಯವರು ಸರ್ವತ್ರದಲ್ಲಿಯೂ ಆರ್ಭಟ ಮಾಡಿ, ಪ್ರತಿಕಕ್ಷಿಕರ ಕಾರ್ಯವು ಪೂರ್ಣವಾಗಿ ಅಪಜಯವಾಯಿತೆಂದು ನೆನಸಿದರು. ಆದ್ದರಿಂದ ಈ ಪಾಷಂಡಿಮಾರ್ಗವನ್ನು ನಿರ್ಮೂಲ ಮಾಡುವದಕ್ಕೆ ತಡಮಾಡಿದನೆಂದು ಮಾತ್ರವೆ ಮಹಾರಾಜನನ್ನು ದೂರಿದರು. ಹ್ಯಾಗಂದರೆ ಮಹಾರಾಜನು ಸುವಾರ್ತಾಪಕ್ಷದವರ ಮೇಲೆ ಅತಿರೇಕ ಒತ್ತಾಯ ನಡಿಸದೆ, ತಾನು ಬಂದು ಮುಟ್ಟಿದ್ದಲ್ಲಿ ಸದ್ಯಕ್ಕೆ ಸುವಾರ್ತಾಪಕ್ಷದವರಿಗೆ ತಮ್ಮ ದೇವಾರಾಧನೆಗಳನ್ನು ಸಹಾ ನಡಿಸುವದಕ್ಕೆ ಬಿಟ್ಟದ್ದು ಅವರಿಗೆ ಆಗಲಿಲ್ಲಾ.

ಅವನು ನಡಿಸಿದ ಒಂದು ಒಳ್ಳೇ ಕಾರ್ಯವನ್ನು ಇಲ್ಲಿ ಹೇಳದಿರ ಬಾರದು. ಮಹಾರಾಜನು ವಿತ್ತೆನ್‌ಬೆರ್ಗದ ಕೋಟೆಯ ದೇವಾಲಯವಲ್ಲಿ ಲುಥರನ ಸಮಾಧಿಯ ಹತ್ರ ನಿಂತಾಗ, ರಾಜನಾಯಕ ಅಲ್ಬನೂ ಹಿಸ್ಪಾನ್ಯದ ಒಬ್ಬ ಅಧ್ಯಕ್ಷನೂ, "ಈ ಮಹಾ ಪಾಷಂಡಿಯ ಸಮಾಧಿಯನ್ನು ಅಗದು, ಅವನ ಎಲುಗಳನ್ನು ಸುಟ್ಟು ಬೂ

ದಿ ಮಾಡ ಬೇಕೆಂದು” ಬೇಡಿ ಕೊಂಡಾಗ, ಅವನು ಹೇಳಿದ್ದೇನಂದರೆ: “ನಾನು ಸತ್ತವರ ಸಂಗಡ ಅಲ್ಲಾ, ಬದುಕುವವರ ಸಂಗಡ ಯುದ್ಧ ಮಾಡುತ್ತೇನೆ; ಅವನನ್ನು ಉತ್ಥಾನ ನ್ಯಾಯತೀರ್ಪುಗಳ ದಿನದ ವರೆಗೆ ಸುಮ್ಮನಿರ ಬಿಡಿರಿ.” ಇದಲ್ಲದೆ ಆ ಸಮಾಧಿಗೆ ಹಾನಿ ಮಾಡ ಬಾರದು, ಮಾಡುವವನಿಗೆ ಮರಣಶಿಕ್ಷೆಯಾಗ ಬೇಕೆಂದು ಅಪ್ಪಣೆ ಕೊಟ್ಟನು.

ಆದರೂ ಸಭೆಯಲ್ಲಿ ಆದ ಛೇದವನ್ನು ಹ್ಯಾಗಾದರೂ ತಿದ್ದುಪಡಿ ಮಾಡ ಬೇಕೆಂಬುದೊಂದೆ ಅವನ ಮನಸ್ಸಿನ ಮುಖ್ಯ ಕಾರ್ಯವಾಗಿ ಇತ್ತು. ಅದೇ ೧೫೪೮ನೆ ವರುಷದ ಸಪ್ತಂಬರ ತಿಂಗಳಲ್ಲಿ ಔಗ್ಸ್‌ಬುರ್ಗದಲ್ಲಿ ರಾಜ್ಯಸಭೆಯನ್ನು ಕರಸಿ, ಅಲ್ಲಿ ಅಷ್ಟು ಬಹಳ ಕಠೋರರಲ್ಲದ ಪ್ಲುಕ್ಕದ ಯೂಲ್ಯನೂ, ಮಿಖಯೇಲ್ ಹೆಲ್ಡಿಂಗನೂ ಎಂಬ ಇಬ್ಬರು ಪೋಪಪಕ್ಷದ ಪಾರಮಾರ್ಥಿಕರೂ, ಬರ್ಲೀನ ಅರಮನೆಯ ಪ್ರಸಂಗಿಯಾದ ಯೋಹಾನ್ ಅಗ್ರಿಕೊಲ ಎಂಬ ಕೇವಲ ಉಗುರು ಬೆಚ್ಚಗಾಗಿ ಇರುವ ಸುವಾರ್ತಾಪಕ್ಷದ ಪಾರಮಾರ್ಥಿಕನೂ ಒಟ್ಟು ಕೂಡಿ ಕೊಂಡು, ಉಭಯಪಕ್ಷದವರಲ್ಲಿ ಇರುವ ಧರ್ಮಸಂಧಾನವೆಂಬ ಒಪ್ಪಂದವನ್ನು ಮಾಡ ಬೇಕೆಂದು ಅಪ್ಪಣೆ ಕೊಟ್ಟನು. ಇದಕ್ಕೆ ಸದ್ಯದೊಪ್ಪಂದವೆಂಬ ಹೆಸರಾಯಿತು. ಯಾಕಂದರೆ ಇದು ಸರ್ವಸಮಾಗಮ ತೀರುವ ವರೆಗೆ ಮಾತ್ರವೆ ಇದ್ದು, ಅದು ಆದ ಮೇಲೆ, ಸರ್ವರೂ ಸರ್ವಕಾಲಕ್ಕೆ ಅದಕ್ಕೆ ಒಳಗಾಗಿ ನಡಿಯ ಬೇಕೆಂದು ಅಪ್ಪಣೆ ಕೊಟ್ಟನು. ಆದರೆ ತ್ರಿದೆಂತದ ಸರ್ವಸಮಾಗಮವು ಆರಂಭದಲ್ಲಿಯೆ ಪ್ರತಿಕಕ್ಷಿಕರ ಬೋಧನೆಯನ್ನು ಪೂರ್ಣವಾಗಿ ನಿರಾಕರಿಸಿ ಬಿಟ್ಟಿದ್ದರೆಂದು ಎಲ್ಲರಿಗೂ ಗೊತ್ತು ಇತ್ತು. ಇದಲ್ಲದೆ ಈ ಸದ್ಯದೊಪ್ಪಂದದಲ್ಲಿ ಸಹಾ ಅದೇ ಹಳೇ ಪೋಪಮಾರ್ಗವು ಸ್ವಲ್ಪ ನಮ್ರರೀತಿಯಾಗಿ ತಿರಿಗಿ ಕಾಣಿಸಿತ್ತಲ್ಲದೆ ಬೇರೊಂದಲ್ಲಾ.

ಈ ಸದ್ಯದೊಪ್ಪಂದವು ಪ್ರಕಟವಾದ ಕೂಡಲೆ, ಮಹಾರಾಜನು ಸಮಸ್ತರಿಗೂ ಅದನ್ನು ಸ್ವೀಕರಿಸ ಬೇಕೆಂದು ಅಪ್ಪಣೆ ಕೊಟ್ಟು, ಅದನ್ನು ತಿರಸ್ಕರಿಸುವವರಿಗೆ ಕಠಿಣವಾದ ಶಿಕ್ಷೆ ಕೊಟ್ಟೇನೆಂದು ಬೆದರಿಸಿದನು. ಆದರೆ ಸುವಾರ್ತೆಯ ವಿಶ್ವಾಸಕ್ಕೆ ಸಹಾ ಅಲ್ಲಿ ಇಲ್ಲಿ ತಕ್ಕಷ್ಟು ಆಧಾರ ಕೊಟ್ಟಿರುವ ಕಾರಣ, ಒಂದು ಕಡೆಯಲ್ಲಿ ಪೋಪನ ಕಡೆಯವರು ಅದಕ್ಕೆ ಮೆಚ್ಚಲಿಲ್ಲ, ಅತ್ತ ಕಡೆಯಲ್ಲಿ ಪ್ರತಿಕಕ್ಷಿಕರು ಸ್ವಲ್ಪ ಕಡಿಮೆ ಎಲ್ಲರು, ಅದಕ್ಕೆ ಎದುರು ನಿಂತರು. ಮಹಾರಾಜನ ಕೃಪೆಯಿಂದ ಹೊಸತಾಗಿ ಆಯಿಕೆಯ ಅರಸನಾದ ಮೋರಿಚ್ಚನು ಸಹಾ, ಅದನ್ನು ಇದ್ದ ಹಾಗೆ ಸ್ವೀಕರಿಸ ಒಪ್ಪಲಿಲ್ಲಾ. ಬಂಧನದಲ್ಲಿ ಇದ್ದ ಸತ್ಯಪ್ರಿಯನಾದ ಯೋಹಾನ್ ಫ್ರೀದರಿಕನಿಗೆ, ಅವನು ಅದನ್ನು ತಾನೆ ಸ್ವೀಕರಿಸಿ, ಮಕ್ಕಳು ಸಹಾ ಸ್ವೀಕರಿಸುವ ಹಾಗೆ ಮಾಡಿದರೆ ಬಿಡುಗಡೆಯನ್ನೂ

ಮುಂಚೆ ಕಳಕಾಂಡದ್ದನ್ನೂ ಶಿರಿಗಿ ಕಾಡುತ್ತೇನೆಂದು ವಾಗ್ದತ್ತ ಮಾಡಿದಾಗ, ಅವನು ತಾನೆ ಉತ್ತಮವಾದ ಅರಿಕೆಯಿಂದ ಈ ದುರ್ಬೋಧನೆಯನ್ನು ನಿರಾಕರಿಸಿದನು ಮಾತ್ರವಲ್ಲ, ತನ್ನ ಮಕ್ಕಳಿಗೂ, ಇದ್ದ ಶೀಮೆಯನ್ನೆಲ್ಲಾ ಸಹಾ ಕಳಕಾಳ್ಳುವದು ಲೇಸು, ಒಳ್ಳೇ ಅರಿಕೆಯನ್ನು ಬಿಡದೆ, ತಮ್ಮನ್ನು ಸರ್ವಶಕ್ತನ ಆಶ್ರಯಕ್ಕೆ ಒಪ್ಪಿಸಿ ಕಾಡುವದು ತಕ್ಕದ್ದು, ಎಂದು ಬರದು ಕಳುಹಿಸಿದನು.

ಮಹಾರಾಜನು ಜರ್ಮನಿಯಲ್ಲಿ ಪೂರ್ಣಾಧಿಕಾರಿಯಾಗಿ ಇದ್ದರೂ, ತನ್ನಿಂದಾಗುವಷ್ಟು ಪ್ರಯತ್ನ ಮಾಡಿದರೂ, ಕೆಲವು ಸ್ಥಳಗಳಲ್ಲಿ ಮಾತ್ರವೆ ಈ ಸದ್ಧದಾಪ್ಪಂದವನ್ನು ಸ್ವೀಕರಿಸುವ ಹಾಗೆ ಮಾಡುವದು ಸಹಾ ದುರ್ಲಭವಾಯಿತು. ಮಿಕ್ಕಾದವರೆಲ್ಲಾ ಅದನ್ನು ಲಕ್ಷಿಸದೆ, ಶುದ್ಧವಾದ ಸುವಾರ್ತೆಯ ದೇವಾರಾಧನೆಯನ್ನು ನಡಿಸುತ್ತಾ ಬಂದರು. ಮುಂಚೆ ಪ್ರಪಂಚದ ಆಯುಧಗಳಿಂದ ಎದುರ್ನಿಂತದ್ದು ಅನ್ಯಾಯವಾಗಿತ್ತಾದರೂ, ಮನಸ್ಸಾಕ್ಷಿಗಳಿಗೆ ಒತ್ತಾಯ ಮಾಡುವ ಸಮಯದಲ್ಲಿ, ಈ ಪ್ರಕಾರ ಎದುರು ನಿಂತದ್ದು ನ್ಯಾಯವಾಗಿ ಇತ್ತು; ಯಾಂಕದರೆ "ಮನುಷ್ಯರಿಗಿಂತ ದೇವರನ್ನು ಹೆಚ್ಚಾಗಿ ಕೇಳ ಬೇಕು."

§ ೨೦.

# ಕಡೇ ಜಯ

ಆದರೆ ದೇವರು ತನ್ನ ಸ್ವಂತ ಕಾರ್ಯವನ್ನು ಬಿದ್ದು ಹಾೀಗ ಗಾಡಿಸುವದು ಹ್ಯಾಗೆ? ಆ ಕಾಲದಲ್ಲಿ ಕರ್ತನ ಚಿಯಾೀನಿಗೆ ದುಃಖವೂ ಆಲಾಪವೂ ಬಂದಿತ್ತು. ಆದಾಗ್ಯೂ ದೇವರು ಪ್ರೀತಿ ಮಾಡುವ, ತಾನು ಆದು ಕಾಂಡ ಪಟ್ಟಣವನ್ನು ಬಿಟ್ಟಾನೆ! ದೇವರು ನನ್ನನ್ನು ಬಿಟ್ಟನು, ಸಂಕಟದಿಂದ ಮಡಿದು ಹಾೀಗುತ್ತೇನೆ, ನನ್ನ ದೇವರು ನನ್ನನ್ನು ಮರತು ಬಿಟ್ಟನು ಎಂದು ಹೇಳುವ ಹಾಗೆ ಆಗಿ ಇತ್ತು, ಸರಿ! ಸುವಾರ್ತಾಸಭೆಯ ನಾಯಕನಂತಿದ್ದ ಆಯಿಕೆಯ ಅರಸನು ಲಾಖಾವದ ಬೈಲಿನಲ್ಲಿ ರಕ್ತ ಸಾೀರುವವನಾಗಿ ಅಪಜಯ ಪಟ್ಟು, ಮಹಾರಾಜ ಕರ್ಲನು ಪುನಃಸ್ಥಾಪನೆಯ ಮೂಲಸ್ಥಾನವಾದ ವಿತ್ತೆನ್‌ಬೆರ್ಗದಾಳಗೆ ಜಯಧ್ವನಿಯಿಂದ

ಹೊಕ್ಕ ಸಮಯದಲ್ಲಿ, ಸುವಾರ್ತಾಸಭೆಯ ಸ್ಥಿತಿಯು ಹಾಗೆ ಇತ್ತು ಸರಿ. ಆದಾಗ್ಯೂ "ಓ ಚಿಯೋನೇ, ಅತಿ ಪ್ರಿಯಳೇ, ಎಂದು ಕರ್ತನ ಬಾಯಿಯು ಹೇಳುತ್ತದೆ. ಈಗ ನೀನು ದುಖ್ಖಿತಳಾಗಿ ಇದ್ಧಿ; ಪ್ರಾಣವೂ ಆತ್ಮವೂ ಘಾಯವಾಗಿ ಅದೆ; ಆದಾಗ್ಯೂ ಎಲ್ಲಾ ನಿನ್ನ ದುಖ್ಖವನ್ನು ಈಗ ಬಿಡು; ತಾಯಿಯು ತನ್ನ ಸ್ವಂತ ಮಗುವನ್ನು ಹಗೆ ಮಾಡಿ, ಅದನ್ನು ಚಿಂತಿಸದೆ ಬಿಡುವದುಂಟೆ!" ಎಂಬ ಜರ್ಮನಿ ಕವಿಯ ಮಾತನ್ನು ಮರೆಯಲಾಗದು. ದೇವರು ತನ್ನ ಪ್ರಿಯ ಮಗುವನ್ನು ಚಿಂತಿಸಿದನು, ತನ್ನ ಮಮತೆಯನ್ನು ಸಭೆಯಲ್ಲಿ ಪ್ರಕಟ ಮಾಡಿದನು. ತನ್ನ ಸಭೆಗೆ ಮನುಷ್ಯರ ಸ್ತಂಭಗಳು ಆಧಾರವಲ್ಲವೆಂದೂ, ತಾನೊಬ್ಬನೆ ಅದನ್ನು ಆಧರಿಸಿ, ಕಾಪಾಡಿ, ಸಹಾಯ ಮಾಡುವವನೆಂದೂ ಮುಂಚೆ ಕೆಡವಿ ಹಾಕುವದಕ್ಕೆ ಬಂದವರೆ ಅದನ್ನು ತಿರಿಗಿ ಕಟ್ಟಿ ನಿಲ್ಲಿಸುವದಕ್ಕೆ ಬರುವ ಹಾಗೆ ಮಾಡುವವನು ಆಗಿದ್ಧೇನೆಂದೂ ತೋರಿಸಿದನು.

ನಮ್ಮ ವಿಶ್ವಾಸಪೂರ್ವಜರು ವಿಶ್ವಾಸವನ್ನು ಅಲ್ಲಗಳೆಯ ಅಪ್ಪಣೆ ಕೊಡುವ ಸದ್ಯದೊಪ್ಪಂದಕ್ಕೆ ಅನೇಕ ವರ್ಷಗಳ ವರೆಗೆ ಎದುರ್ನಿಂತು, ಅದರ ದೆಸೆಯಿಂದ ಅನೇಕ ವಿಧವಾಗಿ ಕಷ್ಟಗಳನ್ನು ಅನುಭವಿಸಲೂ ಮಹಾರಾಜನ ಅಪ್ಪಣೆ ಸ್ಥಿರವಾಗಿ ನಡಿಯುವ ಸ್ಥಳಗಳಲ್ಲಿ ದೇವಾರಾಧನೆಯ ವಿಷಯದಲ್ಲಿ ಒತ್ತಾಯ ತಾಳಲೂ ಬೇಕಾಯಿತು. ಅವರ ಕಷ್ಟ ಹೆಚ್ಚುವದಕ್ಕೆ ಎಂಬಂತೆ ತ್ರಿದೆಂತದ ಸಮಾಗಮಕ್ಕೆ ಆಸದರನ್ನು ಕಳುಹಿಸ ಬೇಕೆಂದು ಮಹಾರಾಜನು ಖಂಡಿತವಾಗಿ ಅಪ್ಪಣೆ ಕೊಟ್ಟನು. ಇಹಪರಕ್ಕೂ ಘಟ್ಟಿಯಾಗಿ ಹಿಡುಕೊಳ್ಳ ತಕ್ಕದ್ದೆಂದು ನೆನಸಿದ ತಮ್ಮ ವಿಶ್ವಾಸಪ್ರಮಾಣವನ್ನು ತ್ರಿದೆಂತದಲ್ಲಿ ಪ್ರತಿಪಾದ್ಯ ಮಾಡಲಿಕ್ಕೆ ಎಷ್ಟಾದರೂ ಬಿಡರೆಂದು ನಿಶ್ಚಯವಾಗಿ ತಿಳುಕೊಂಡಾಗ್ಯೂ, ಸುವಾರ್ತಾಪಕ್ಷದವರು ಆಗಿನ ವಿದ್ಯಮಾನಗಳಲ್ಲಿ ತಪ್ಪಿಸಿ ಕೊಳ್ಳುವ ಉಪಾಯ ಕಾಣಲಿಲ್ಲಾ. ಇಂಥಾ ಆಕಾಂತದಲ್ಲಿ ಒಂದೇ ಪೆಟ್ಟಿಗೆ ಅವರ ಸಮಸ್ತ ಚಿಂತೆ ಹೋರಾಟ ಕಷ್ಟ ತೀರಿ ಹೋಯಿತು. ಹ್ಯಾಗೆ? ಯಾರ ಪರಿಮುಖವಾಗಿ? ತನ್ನ ಸಭೆಯನ್ನು ಹಾಳು ಮಾಡುವದಕ್ಕೆ ಸಹಾಯ ಮಾಡಿದ ನಂಬಿಕೆ ಇಲ್ಲದ ಮೋರಿಚ್ಚನ ಪರಿಮುಖವಾಗಿಯೆ! ಅದು ಹ್ಯಾಗಾಯಿತಂದರೆ.

ಮೋರಿಚ್ಚನು ತನ್ನ ಸಭೆಯು ಪೂರ್ಣವಾಗಿ ವಿನಾಶವಾಗುವ ಹಾಗೆ ತಾನೆ ಸಹಾಯ ಮಾಡಿದಂತೆ ಆಯಿತಲ್ಲಾ ಎಂದು ಮನಃಸಾಕ್ಷಿಯಲ್ಲಿ ಸಂಕಟ ಪಟ್ಟು, ದೇವರ ಮುಂದೆಯೂ ಮನುಷ್ಯರ ಮುಂದೆಯೂ ಈ ಪಾಪವನ್ನು ಪುನೀತ ಮಾಡಲಿಕ್ಕೆ ನಿಶ್ಚೈಸಿದನು. ಇದಲ್ಲದೆ ತನ್ನ ಮಾಂವ ಹೆಸ್ಸನದ ಫಿಲಿಪ್ಪನನ್ನು ಮಹಾರಾಜನು, ಕೊಟ್ಟ ಮಾತಿಗೆ ತಪ್ಪಿ, ಎಷ್ಟು ಬೇಡಿ ಕೊಂಡರೂ ಕೇಳದೆ, ಬಂಧನದಿಂದ ಬಿಡ

ದೆ, ಅಧಿಕ ಕಠಿಣವಾಗಿ ಬಂಧಿಸುತ್ತಾನೆಂದು ನೋಡಿ, ದುಃಖದಲ್ಲಿಯೂ ಸಂತಾಪದ
ಲ್ಲಿಯೂ ಇದ್ದನು. ಅದರ ಹೊರ್ತು ಈಗಲೆ ಬಹಳ ಅಣಗಿಸಿದ ಜರ್ಮನರ ಪ್ರಾ
ಪಂಚಿಕ ಸ್ವತಂತ್ರಗಳನ್ನು ಮಹಾರಾಜನು ಪೂರ್ಣವಾಗಿ ಹಾಳು ಮಾಡ್ಯಾನೆಂದು
ಭಯ ಪಟ್ಟನು. ಮೋರಿಚ್ಚನು ಮಹಾರಾಜನ ಹೆಸರಿನಲ್ಲಿ ಸ್ಥಿರವಾಗಿ ಸುವಾರ್ತಾ
ಪಕ್ಷಕ್ಕೆ ಶೇರಿದ ಮಗ್ದೆಬುರ್ಗದ ಮೇಲೆ ರಾಜದಂಡವನ್ನು ಇಟ್ಟು, ಅದಕ್ಕೆ ಮುತ್ತಿ
ಗೆಯ ಹಾಕಿ, ಕೈವಶ ಮಾಡಿ ಕೊಂಡ ಮೇಲೆ, ಈ ಬಗ್ಯೆಯೆ ಎಂದು ನೆವನ ಮಾಡಿ
ದರೂ, ಬೇರೆ ಆಲೋಚನೆಯಿಂದ ಕೂಡಿಸಿದಂಥಾ ಮಹಾ ಸೈನ್ಯವನ್ನು ಆ ಪಟ್ಟಣದ
ಸೈನ್ಯದಿಂದ ಇನ್ನೂ ಹೆಚ್ಚಿಸಿ, ೧೫೫೨ನೆ ಮಾರ್ಚಿ ತಿಂಗಳಲ್ಲಿ ಮಹಾರಾಜನಿಗೆ ಎ
ದುರಾಗಿ ಯುದ್ಧಕ್ಕೆ ಹೊರಟನು. ಅದೇ ಕಾಲದಲ್ಲಿ ಜರ್ಮನಿ ರಾಜ್ಯದಲ್ಲೆಲ್ಲಾ ಪ
ತ್ರಿಕೆಗಳನ್ನು ಕಳುಹಿಸಿ, ತಾನು ತೊಡಗಿದ ಕೆಲಸವನ್ನು ನೀತಿ ಪಡಿಸಿ, ಮಹಾರಾಜ
ನು ಧರ್ಮಕಾರ್ಯದಲ್ಲಿಯೂ ರಾಜಕಾರ್ಯದಲ್ಲಿಯೂ ಅನ್ಯಾಯ ಮಾಡುತ್ತಾ
ನೆಂದು ಕಠಿಣವಾದ ದೂರುಮಾತುಗಳನ್ನು ಬರೆದನು.

ಕರ್ಲನಿಗೆ ಎಂಥಾ ಕಠಿಣವಾದ, ಹೇಳ ಕೂಡದ ದುಃಖ ಬಂತು! ತನ್ನ ಹೃದಯ
ದ ಪ್ರಿಯನೆಂದು ಎಣಿಸಿದವನು, ತಾನೆ ಘನ ಬಿರುದುಗಳನ್ನು ಕೊಟ್ಟು ಹೆಚ್ಚಿಸಿದವ
ನು! ಅವನಿಂದಲೆ ಇಂಥಾ ಆಕಾಂತ ಬಂತಲ್ಲಾ! ಎಷ್ಟಾದರೂ ನಿರೀಕ್ಷಿಸದಿರುವಾಗ್ಯೆ,
ಇಂಥಾ ವರ್ತಮಾನ ಬಂದದ್ದು ಅವನ ಮನಸ್ಸಿಗೆ ಎಷ್ಟು ವ್ಯಥೆ ಕೊಟ್ಟಿತು! ಕರ್ಲ
ನು ಆ ಕಾಲದಲ್ಲಿ ತಿರೋಲ ಸೀಮೆಯ ಇನ್ಸ್‌ಬ್ರುಕ್ಕದಲ್ಲಿ ಇದ್ದನು. ಧರ್ಮದ ಯೇ
ಕೀಕರಣವು ಕೈಕೂಡಿ ಬರಲಿಲ್ಲವೆಂದು ದುಃಖಿತನು, ಅದನ್ನು ಹ್ಯಾಗೆ ಸಂಪಾದಿಸಿ ಕೊ
ಳ್ಳಲೆಂದು ದಾರಿ ಕಾಣದವನು, ಸಂದುವಾತದವನು, ಸೇನೆ ಇಲ್ಲದವನು, ದಂಡು ಕ
ಟ್ಟುವದಕ್ಕೆ ಹಣ ಸಹಾ ಇಲ್ಲದವನು! ಅವನ ಅವಸ್ಥೆ ಏನು ಹೇಳಲಿ? ಅಂತರ್ಬಹಿ
ರದಲ್ಲಿಯೂ ಆಯಾಸವುಳ್ಳವನಾಗಿ, ಮೋರಿಚ್ಚನ ಸಂಗಡ ಸಂಧಾನ ಮಾಡುವ
ಅಪೇಕ್ಷೆಯಿಂದ ಪಸ್ಸವಿನಲ್ಲಿ ಅರಸುಗಳ ಸಭೆಯನ್ನು ಕೂಡಿಸುವದಕ್ಕೆ ಇಚ್ಛೈಸಿದನು.
ಆದರೆ ಮೋರಿಚ್ಚನು ಕೈಶೆರೆಯಾದ ಮಹಾರಾಜನ ಸಂಗಡ ಮಾತ್ರವೆ ಸಂಧಾನದ
ಮಾತು ಅಂದನು. ಹೀಗೆ ಹೇಳಿ, ತಿರೋಲಿಗೆ ಮುಂದೆಮುಂದೆ ನುಗ್ಗಿ ಬಂದು, ಆ
ಪರ್ವತಸೀಮೆಯ ದ್ವಾರದಂತಿರುವ ಏರೆನ್‌ಬುರ್ಗದ ಕ್ಲೌಸೆಯನ್ನು ಹಲ್ಲ ಮಾಡಿ,
ಮಹಾರಾಜನನ್ನು ಹಿಡಿಯಲಿಕ್ಕಿದ್ದನು. ಆದರೆ ಸ್ವಲ್ಪ ತಪ್ಪಿತು. ಇದಕ್ಕೂ ದೇವ
ರು ಒಪ್ಪಲಿಲ್ಲ. ಮೋರಿಚ್ಚನು ಇನ್ಸ್‌ಬ್ರುಕ್ಕಿಗೆ ಹೊತ್ತಾರೆ ಮುಟ್ಟಿದನಂದರೆ, ಆ ಕಳ
ದ ರಾತ್ರಿಯಲ್ಲಿ ಅಸ್ವಸ್ಥನಾದ ಮಹಾರಾಜನು ಪಲ್ಲಂಕಿಯಲ್ಲಿ ಎತ್ತರವಾದ ಅಲ್ಪ
ವೆಂಬ ಘಟ್ಟಗಳನ್ನು ದಾಟಿ, ಕೆರ್ನ್ತನದ ವಿಲ್ಲಖ್ಖಿಗೆ ಪಲಾಯನ ಮಾಡಿ ಇದ್ದನು.

ಮನುಷ್ಯರ ಅವಸ್ಥೆಗಳು ಎಷ್ಟು ಬೇಗ ಮೇಲೆ ಕೆಳಗೆ ಆಗುತ್ತವೆಂದು ಇಲ್ಲಿ ನೋಡ ಬಹುದು. ಈ ಅತಿ ಬಲಾಢ್ಯ ಮಹಾರಾಜನು, ಆ ಕಾಲದಲ್ಲಿ ವಿಲಾಯಿತಿಯಲ್ಲಿಯೂ ಅಮೇರಿಕದಲ್ಲಿಯೂ ಅತಿ ಶ್ರೇಷ್ಟ ಧಾರೆಯು, ಸಕ್ಸದ ಆಯಿಕೆಯ ಅರಸನ ಮೇಲೆ ಮರಣಶಿಕ್ಷೆಯನ್ನು ನೇಮಿಸಿ, ಮತ್ತೆ ದಯ ತೋರಿಸುವವನಾಗಿ, ಸಮಸ್ತ ಪ್ರಾಪಂಚಿಕ ಮಹಿಮೆಯನ್ನು ಕಳ ಕೊಂಡ ಬಡ ಬಂಧನದವನನ್ನೆಂದು ತನ್ನ ಸಂಗಡ ಎಳ ಕೊಂಡು ಹೋಗಿ ಇದ್ದನು. ಆದರೆ ಈಗ ತಾನೆ ಮುಂಚೆ ಮಾಡಿ ಇಟ್ಟಂಥಾ, ಸಕ್ಸದ ಬೇರೊಬ್ಬ ಆಯಿಕೆಯ ಅರಸನ ಹಾವಳಿ ಸಹಿಸಲಾರದೆ, ನಿರಾಧಾರ ಅಸ್ವಸ್ಥ ಕಂಗಾಲನಾಗಿ, ದೂರ ಒಂದು ಗುಡ್ಡೆಗೆ ಓಡುವದಾಯಿತು! ಪೋಪನವರು ಸುವಾರ್ತಾಪಕ್ಷದ ಸಭೆ ನೆಲಸಮವಾಯಿತೆಂದು ಸಂತೋಷ ಆರ್ಭಟ ಮಾಡುವಷ್ಟರೊಳಗೆ, ಫಕ್ಕನೆ ಅದು ತಿರಿಗಿ ಬಲವಾದ ಕೋಟೆಯಂತೆ ನಿಂತಿರುವದನ್ನು ಕಂಡು, ವ್ಯಸನ ದುಖ್ಖಾಲಾಪ ಮಾಡುವದಾಯಿತು.

ಈ ಮಹಾಶೂರನಾದ ಮೋರಿಚ್ಚನು ಇನ್ಸ್‌ಬ್ರುಕ್ಕದಿಂದ ಜಯಹರ್ಷದಲ್ಲಿ ಪಸ್ಸವಿಗೆ ಬಂದು, ಅಲ್ಲಿ ನೆರವೇರಿದ ಅರಸುಗಳ ಮಧ್ಯದಲ್ಲಿ ಅಧಿಕಾರ ನಡಿಸಿದನು. ೧೫೫೨ನೆ ಅಗೋಸ್ತ ೨ಲ್ಲು ಪಸ್ಸವಿನ ಒಪ್ಪಂದ ಮಾಡಲಾಯಿತು. ಬೇಗ ಕೂಡಿ ಬಂದು, ಎಲ್ಲಾ ಕೂಲಂಕುಶವಾಗಿಯೂ ನ್ಯಾಯಪ್ರಕಾರವಾಗಿಯೂ ನಿಶ್ಚೈಸ ತಕ್ಕ ರಾಜ್ಯಸಭೆಯಲ್ಲಿ ತೀರ್ಪಾಗುವ ವರೆಗೆ, ಉಭಯಪಕ್ಷದವರಿಗೆ ಯುದ್ಧ ನಡಿಯಬಾರದೆಂದೂ, ಸುವಾರ್ತಾಪಕ್ಷದವರನ್ನಾಗಲಿ ಅವರ ದೇವಾರಾಧನೆಯನ್ನಾಗಲಿ ನೋಂದಿಸಲಾಗದೆಂದೂ ಆ ಒಪ್ಪಂದದಲ್ಲಿ ನೇಮಕವಾಯಿತು. ಶ್ಮಲ್‌ಕಲ್ದದ ಒಪ್ಪಂದದ ಅರಸುಗಳ ಮೇಲೆ ಇಟ್ಟ ರಾಜ್ಯದಂಡವು ತೆಗದು ಹಾಕಲಾಯಿತು. ಫಿಲಿಪ್ಪನು ತನ್ನ ಹೆಸ್ಸ ಸೀಮೆಗೂ, ಯೋಹಾನ್ ಫ್ರೀದರಿಕನು ಪಾರಂಪರೆಯಾಗಿ ಹೊಂದಿದ ತನ್ನ ಬಾಧ್ಯತೆಯ ಥುರಿಂಗ ದೇಶಕ್ಕೂ, ತಿರಿಗಿ ಆನಂದ ಪಡುವ, ಅಳುತ್ತಾ ಹರ್ಷ ಪಡುವ ಪ್ರಜೆಯ ಬಳಿಗೂ ತಿರಿಗಿ ಬರೋಣವಾಯಿತು.

ಮೋರಿಚ್ಚನು ಕೆಲವು ಕಾರಣದಿಂದ ಅಷ್ಟು ಬೇಗ ಕೂಡಿ ಬಾರದಿರುವ ರಾಜ್ಯಸಭೆಯು ನೆರವೇರುವ ಮುಂಚೆಯೆ ತೀರಿ ಹೋದನು. ಅವನು ೧೫೫೩ಲ್ಲು ಶೀವರ್ಸ್‌ಹೌಸನ್ ಎಂಬಲ್ಲಿ ಯುದ್ಧ ಮಾಡಿ, ಜಯ ಹೊಂದಿ, ಆ ಕಾಳಗದಲ್ಲಿ ೩೨ ವರುಷ ಪ್ರಾಯದವನಾಗಿ ಬಿದ್ದನು.

ರಾಜ್ಯಸಭೆಯು ೧೫೫೫ಲ್ಲು ಔಗ್ಸ್‌ಬುರ್ಗದಲ್ಲಿ ಕೂಡಿ ಬಂತು. ಮುಂಚೆ ಪ್ರತಿಕಕ್ಷಿಕರ ಅರಿಕೆಯನ್ನು ಒಪ್ಪಿಸಿದಂಥಾ ಈ ಘನವಾದ ಪಟ್ಟಣದಲ್ಲಿಯೇ ಔಗ್ಸ್‌ಬುರ್ಗದ ಧರ್ಮಸಂಧಾನವೆಂಬ ಒಪ್ಪಂದ ಸಹಾ ಮಾಡಿದರಿಂದ, ಆ ಪಟ್ಟಣವು ಇಮ್ಮಡಿ

ಘೋಷಣೆ ಧರಿಸಿದ ಹಾಗಾಯಿತು. “ಸುವಾರ್ತಾಪಕ್ಷದವರು ಪೋಪಪಕ್ಷದವರ
ಹಾಗೆಯೆ ಪೂರ್ಣ ಸಮಾನ ಮಾನ್ಯಗಳೂ ಸ್ವತಂತ್ರಗಳೂ ಉಳ್ಳವರಾಗಿ ಇದ್ದಾರೆಂ
ತಲೂ, ಕ್ರೈಸ್ತರಿಗೆ ಯೋಗ್ಯವಾದ ರೀತಿಯಾಗಿ ಧರ್ಮಕಾರ್ಯಗಳಲ್ಲಿ ಸ್ನೇಹಭಾವದ ಕ
ಡೇ ಸಮಾಧಾನವಾಗುವ ವರೆಗೆ, ತಪ್ಪದೆ ಈ ಒಪ್ಪಂದವನ್ನು ಎಲ್ಲರೂ ಕೈಕೊಳ್ಳ ಬೇಕೆಂ
ದೂ” ಇಲ್ಲಿ ಉಭಯಪಕ್ಷದವರು ಪ್ರಮಾಣಪೂರ್ವಕವಾಗಿ ಮಾತು ಕೊಟ್ಟರು.
ರೋಮಪಕ್ಷದವರು “ಪಾರಮಾರ್ಥಿಕ ಬಿಟ್ಟು” ಎಂದು, ಹಾಗಂದರೆ ರೋಮಪಕ್ಷದ
ಅಧ್ಯಕ್ಷ ಮುಂತಾದವರು ಸುವಾರ್ತಾಪಕ್ಷದ ಅರಿಕೆಯನ್ನು ಸ್ವೀಕರಿಸಿದ್ದಲ್ಲಿ, ತಾವೇ ಹಾ
ಗೆ ಮಾಡಲಿಕ್ಕೆ ಅಡ್ಡಿ ಇಲ್ಲವಾದರೂ, ಅವರಿಗಿದ್ದ ಉಂಬಳಿಗಳನ್ನು ರೋಮಿಯ ಸಭೆ
ಗೆ ಬಿಟ್ಟು ಕೊಡ ಬೇಕೆಂದು ಹೇಳಿದರು. ಇದು ಸಮವಲ್ಲವೆಂದು ಸುವಾರ್ತಾಪಕ್ಷ
ದವರು ಪ್ರತಿಕಕ್ಷಿಯಾಗಿ ಹೇಳಿದ್ದನ್ನು ರಾಜ್ಯಸಭೆಯ ಕಡೆಯಲ್ಲಿ ಶೇರಿಸಿ ಕೊಂಡರೂ,
ಇದರಿಂದ ಸುವಾರ್ತಾಪಕ್ಷದ ಸಭೆ ವಿಸ್ತರಿಸುವದರಲ್ಲಿ ಸ್ವಲ್ಪ ಮೇರೆ ಕಟ್ಟಿದ ಹಾಗಾ
ಯಿತು. ಆದಾಗ್ಯೂ ಪ್ರತಿಕಕ್ಷಿಕರ ಸಭೆಯು ಆಗ ಇದ್ದಷ್ಟಕ್ಕೆ ಸ್ಥಿರವಾಗಿ ನಿಲ್ಲುವದರಲ್ಲಿ
ಏನೂ ಅಡ್ಡಿ ಆಗಲಿಲ್ಲಾ. ಕರ್ತನಾದ ಸಭೆಯ ದೇವರು ಅದಕ್ಕೆ ಸಹಾಯ ಮಾಡಿ
ಇದ್ದನು. ಆಶ್ಚರ್ಯ ರೀತಿಯಾಗಿ ಅದರ ಆಶ್ರಯವಾಗಿ ಇದ್ದನು. ಆಗ್ಯೆ ಸುವಾರ್ತಾ
ಪಕ್ಷದವರಿಗೆ ಸಂತೋಷ ಹರ್ಷ ಪಡುವದಕ್ಕೂ, ಆನಂದವಾಗಿ ಹಲ್ಲೆಲೂಯಾ ಹಾ
ಡುವದಕ್ಕೂ ಸಮಯ ಬಂತು. ಮತ್ತು ಕೃತಜ್ಞತೆಯಿಂದ ಹಾಗೆ ಮಾಡಿದರು
ಸಹಾ.

ಈಗ ಪ್ರಿಯ ಸುವಾರ್ತಾಪಕ್ಷದ ಕ್ರೈಸ್ತನೆ, ನಮ್ಮ ಪುನಃಸ್ಥಾಪನೆಯ ಚರಿತ್ರವು
ತೀರಿತು. ಅದರಿಂದ ನಾವು ಯಾವ ಬುದ್ಧಿ ತಕ್ಕೊಳ್ಳ ಬೇಕೆಂದು ಕೇಳುವಾ. ಈ ಪ್ರ
ಕಾರ ಪುನಃಸ್ಥಾಪನೆಯು ಸ್ಥಿರವಾದ್ದರಿಂದ, ಈ ಮಹಾ ದಿವ್ಯ ಉಪಕಾರವು ಅದರ
ಚರಿತ್ರದಲ್ಲಿಯೆ ಶುದ್ಧವಾಗಿಯೂ ನಿರ್ಮಲವಾಗಿಯೂ ಬಲವಾಗಿಯೂ ನಮಗೆ ಪ್ರ
ಕಾಶಿಸಿ ಝುಗಝುಗಿಸುತ್ತದೆ. ಹಾಗಾದರೆ ಕರುಣಾಳುವಾದ ದೇವರಿಗೆ ಅದಕ್ಕೋಸ್ಕರ
ಕೃತಜ್ಞಾಪಿಸಿ ಆತನ ಪರಿಶುದ್ಧ ಮಹಿಮೆಯ ಹೆಸರನ್ನು ಹೃದಯದ ಗುಂಡಿಯಿಂದ
ಹೊಗಳು. ಸುವಾರ್ತೆಯು ಹಿರಿಯರಿಂದ ನಮಗೂ ನಿನಗೂ ಬಂದದೆ. “ಯಾರಾ
ದರೂ ನಿನ್ನ ಕಿರೀಟವನ್ನು ತಕ್ಕೊಳ್ಳದ ಹಾಗೆ, ನಿನಗೆ ಉಂಟಾದದ್ದನ್ನು ಹಿಡಿದು
ಕೋ!” ದಿವ್ಯ ನಿತ್ಯವಾಕ್ಯದಿಂದ ನಿನಗೆ ಹೊಳೆಯುವ ಶುಭ್ರವಾದ ಆದರಣೆಯುಳ್ಳ ಬೆ
ಳಕನ್ನು ನಂಬು. ಆ ಬೆಳಕಿನಲ್ಲಿ ನಡಿ. ಕತ್ತಲೆಯಲ್ಲಿ ನಡಿಯುವದರಿಂದ ಸುವಾರ್ತಾಪ
ಕ್ಷದ ಹೆಸರನ್ನು ನಾಚಿಕೆ ಪಡಿಸ ಬೇಡ! ದೇವರ ಮಕ್ಕಳ ನಿಜಸ್ವತಂತ್ರವನ್ನು ಅಪಯೋ
ಗಿಸ ಬೇಡ. ಲುಥರನು ಕ್ರಿಸ್ತನ ಅನುಸಾರಿಯಾಗಿ ಇದ್ದ ಹಾಗೆ, ನೀನು ಸಹಾ ವಿಶ್ವಾ

ಸದಲ್ಲಿಯೂ ಜೀವನದಲ್ಲಿಯೂ ಅವನ ಅನುಸಾರಿಯಾಗು. ಮತ್ತು ನಮ್ಮ ನೀತಿಯಾಗಿ ಇರುವ ಕರ್ತನು, ಸಮಾಧಾನದ ದೇವರು, ನಿನ್ನ ಸಂಗಡ ಇರುವನು. ಆತನೆ ನಮ್ಮ ಪ್ರಿಯ ಪರಿಶುದ ಸಭೆಯ ಸಂಗಡ ಇಂದೂ ಎಂದೆಂದಿಗೂ ಇರಲಿ! ಆಮೆನ್.

§ ೨೧.

# ಇಂಗ್ಲಿಷು ಸ್ಕೋತ ದೇಶಗಳ ಪುನಃಸ್ಥಾಪನೆ

ಕನ್ನಡ ಜಿಲ್ಲೆಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಯು ಶ್ವೈಚ್ಚದೇಶದ ಬಾಸೆಲ್ ಪಟ್ಟಣದಿಂದ ಬಂದಿರುವದರಿಂದಲೂ, ಅಲ್ಲಿಂದ ಮಿಶನು ಕಾರ್ಯ ನಡಿಸುವವರು ಜರ್ಮನಿ ಶ್ವೈಚ್ಚ ದೇಶಗಳ ಸುವಾರ್ತಾಪಕ್ಷದ ಮುಖ್ಯ ಶಾಖೆಗಳಾಗಿರುವ ಲುಥರೀಯ ಪುನರೂಪಿತ ಎಂಬ ಎರಡು ಸಭೆಗಳವರಾಗಿರುವದರಿಂದಲೂ, ಜರ್ಮನಿ ಶ್ವೈಚ್ಚ ದೇಶಗಳ ಪುನಃಸ್ಥಾಪನೆಯ ಚರಿತ್ರವನ್ನು ಮುಂದಾಗಿ ತಕ್ಕಷ್ಟು ಕೂಲಂಕುಶವಾಗಿ ವಿಚಾರಿಸಿದೆವು. ಆದರೆ ಬಾಸೆಲ್ ಪಟ್ಟಣದ ಮಿಶನಿಗೆ ಶೇರಿದ ಕನ್ನಡ ಜಿಲ್ಲೆ, ದಕ್ಷಿಣ ಮಹಾರಾಷ್ಟ್ರ, ಕೊಡಗು, ನೀಲಗಿರಿ ಮುಂತಾದ ಕಡೆಯಲ್ಲಿ ಮಾತ್ರವಲ್ಲ, ಬಹಳ ದೊಡ್ಡ ಶೀಮೆಯಾಗಿರುವ ಮೈಸೂರು ರಾಜ್ಯದಲ್ಲಿಯೂ ಕನ್ನಡ ಮಾತಾಡುವ ಹೇರಳ ಜನರು ಇರುವದರಿಂದಲೂ, ಅಲ್ಲಿ ಮಿಶನು ಕಾರ್ಯ ನಡಿಸುವವರು ಮಹಾಬ್ರಿತ್ತದಿಂದ ಬಂದವರಾಗಿರುವದರಿಂದಲೂ, ಮುಖ್ಯವಾಗಿ ಹಿಂದುಸ್ಥಾನದಲ್ಲೆಲ್ಲಾ ದೊರೆತನ ನಡಿಸುವವರು ಅಲ್ಲಿಂದ ಬರುವದರಿಂದಲೂ, ನಮ್ಮ ದೇಶದ ರಾಣಿ ತಾನೇ ಆ ದೇಶದಲ್ಲಿರುವದರಿಂದಲೂ, ಹಿಂದುಸ್ಥಾನದಲ್ಲೆಲ್ಲಾ ಆ ದೇಶದವರೆ ಅಧಿಕವಾಗಿ ಸುವಾರ್ತಾಕಾರ್ಯವನ್ನು ನಡಿಸುವವರಾಗಿರುವದರಿಂದಲೂ, ಈ ಅವರ ಮೂಲದೇಶದಲ್ಲಿ ಸುವಾರ್ತೆಯು ಹ್ಯಾಗೆ ಪುನಃಸ್ಥಾಪನೆಯಾಯಿತು ಎಂಬದನ್ನು ವಿಚಾರಿಸುವದು ಅವಶ್ಯ ತೋರುತ್ತದೆ.

ವಿಲಾಯತಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಮುಖ್ಯವಾಗಿ ಉತ್ತರ ಪಶ್ಚಿಮ ಭಾಗಗಳಲ್ಲಿ ಉಂಟಾದ ಕ್ರೈಸ್ತಸಭೆಗಳು ಪ್ರಾಮುಖ್ಯವಾಗಿ ರೋಮಪಟ್ಟಣದ ಪೋಪನ ನಿಯೋಗಿಗಳಿಂದ ಸ್ಥಾಪನೆಯಾಗಿರುತ್ತಿರಲಾಗಿ, ಆ ಸಭೆಯವರೆಲ್ಲಾ ಸುಮಾರು ಸಾವಿರ ವರುಷಗಳ ವರೆಗೆ ಆತ್ಮಿಕಕಾರ್ಯಗಳಲ್ಲಿ ಪೋಪನ ಆಜ್ಞೆಗೆ ಒಳಗಾಗಿ ಇದ್ದವು. ಆದಾಗ್ಯೂ ಪೋಪನು ಲೌಕಿಕಕಾರ್ಯಗಳಲ್ಲಿ ಸಹಾ ತನ್ನ ಅಪ್ಪಣೆ ನಡಿಯ ಬೇಕೆಂದು ಪ್ರಯತ್ನ ಮಾಡಿ, ಅರಸು ಮಹಾರಾಜ ಮುಂತಾದ ಅಧಿಕಾರಿಗಳನ್ನು ಅಲಕ್ಷ್ಯ ಮಾಡಿ, ಅಣಗಿಸುವದಕ್ಕೆ ನೋಡುತ್ತಿರಲಾಗಿ, ಇವರು ಈ ಅನ್ಯಾಯಕ್ಕೆ ಎದುರ್ನಿಂತು ಹೋರಾಡುತ್ತಿದ್ದದ್ದಲ್ಲದೆ, ಭಕ್ತಿಯುಳ್ಳ ಕ್ರೈಸ್ತ ಜನರು ಸಹಾ ಆತ್ಮಿಕ ಕಾರ್ಯಗಳಲ್ಲಿ ಪೋಪನ ಪತ್ರ್ತಾಯ ತಾಳಲಾರದೆ, ಬೇರೆ ಬೇರೆ ಕಾಲಗಳಲ್ಲಿಯೂ ಬೇರೆ ಬೇರೆ ದೇಶಗಳಲ್ಲಿಯೂ ತಂಮಿಂದಾಗುವಷ್ಟು ಈ ಅನರ್ಥವನ್ನು ಎದುರಿಸುತ್ತಾ ಬಂದಿದ್ದರು. ಮುಖ್ಯವಾಗಿ ದೇವರ ವಾಕ್ಯದ ಭಾಷಾಂತರವೂ ಅದರ ಪ್ರಸಂಗವೂ ಪೋಪನಿಗೂ ಪೋಪನ ಕಡೆಯವರಿಗೂ ಆಗದಂಥಾ ಕಾರ್ಯವಾಗಿ ಇತ್ತು. ಜರ್ಮನಿ ದೇಶದಲ್ಲಿ ಸತ್ಯವೇದವು ಲುಥರನ ಪರಿಮುಖವಾಗಿ ರಾಜ್ಯದಲ್ಲೆಲ್ಲಾ ಸ್ವಭಾಷೆಯಲ್ಲಿ ಪ್ರಕಟವಾಯಿತೆಂದೂ ಅದರಿಂದ ಎಂಥಾ ಒಳ್ಳೇ ಫಲಗಳು ಬಂದವೆಂದೂ ಮುಂಚೆ ಕೇಳಿದೆವು. ಲುಥರನಿಗಾಗಲಿ ಅವನ ಕಡೆಯವರಿಗಾಗಲಿ ದೇವರ ವಾಕ್ಯದ ದೆಶೆಯಿಂದ ಅತಿರೇಕ ಕಠಿಣವಾದ ಯಾತನೆಗಳಾಗಲಿ ಮರಣವಾಗಲಿ ಪ್ರಾಪ್ತಿಯಾಗಲಿಲ್ಲ. ಆದರೆ ಮಹಾಬ್ರಿತ್ತದಲ್ಲಿ ಕರ್ತನಾದ ಯೇಸುವಿನ ಸಾಕ್ಷಿಗಳಿಗೆ ವಿಪರೀತ ಕಷ್ಟ ಬಂತು. ಮರಣಸಾಕ್ಷಿಗಳ ರಕ್ತವು ಸಭೆಯ ಬೀಜವೆಂಬ ಮಾತು ಅಲ್ಲಿ ಹೆಚ್ಚಾಗಿ ಪ್ರತ್ಯಕ್ಷವಾಯಿತು. ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ಸಾಕ್ಷಿಗೋಸ್ಕರವೂ ಸತ್ತವರು ಅಲ್ಲಿ ಹೆಚ್ಚು. ಆದ್ದರಿಂದ ಬೇರೆ ದೇಶಗಳಿಗಿಂತ ಅಲ್ಲಿ ದೇವರ ರಾಜ್ಯಕ್ಕೆ ಫಲ ಸಹಾ ಹೆಚ್ಚಾಗಿ ಬಂತು.

ಪೂರ್ವಕಾಲದಲ್ಲಿಯೆ ಯೋಹಾನಸಾಲಿಸ್‌ಬರಿ, ರೋಬೆರ್ತಗ್ರೊಸ್ತಹೆಸ್, ರೋಜರ ಬೇಕಾ, ಥೋಮಬ್ರದ್ವರ್ದೀನ ಮುಂತಾದವರು ಪೋಪನಿಂದ ಬರುವ ಅನರ್ಥಕ್ಕೆ ಎದುರ್ನಿಂತು, ದೇವರ ಕಾರ್ಯವನ್ನು ತಕ್ಕಷ್ಟು ನಡಿಸಿ ಇದ್ದರು. ಮುಖ್ಯವಾಗಿ ಥೋಮಬ್ರದ್ವರ್ದೀನನ ಶಿಷ್ಯನಾಗಿ ಇದ್ದ, ೧೩೨೪ರಲ್ಲು ಹುಟ್ಟಿದ ವಿಕ್ಲಿಫನು ದೇವರ ಕೈಯಲ್ಲಿ ಶತ್ರುವಿನ ಕೋಟೆ ಹಾಳು ಮಾಡಲಿಕ್ಕೆ ತಕ್ಕಂಥಾ ಒಳ್ಳೇ ಆಯುಧವಾದನು. ಈತನು ಒಕ್ಸಫೋರ್ದದ ಸರ್ವಶಾಲೆಯ ಗೆಳೆಯನೆಂಬ ಬಿರುದನ್ನು ಹೊಂದಿದವನಾಗಿ, ಆ ಸರ್ವಶಾಲೆಯ ಸಂಗಡ ತರ್ಕಮಾಡುತ್ತಿರುವ ಭಿಕ್ಷಾಬೈರಾಗಿಗಳೆಂಬವರಿಗೆ ೧೩೬೦ರಲ್ಲು ಎದುರ್ನಿಂತನು. ಇದಲ್ಲದೆ ಪೋಪನು ಇಂಗ್ಲಿಷು ಅರಸನಿಂದ ಕಂದಾಯ ಕೇಳಿದಾಗ, ಅವನು ೧೩೬೬ರಲ್ಲು ಈ ಅನ್ಯಾಯಕ್ಕೆ ಸಹಾ ಎದುರ್ನಿಂ

ತನು. ಮತ್ತೆ ಪಂಡಿತನೂ ಒಕ್ಸಫಾರ್ಡದಲ್ಲಿ ದೇವವಿದ್ಯೆಯ ಶಾಸ್ತ್ರಿಯೂ ಆಗಿ, ೧೩೭೪ಲ್ಲು ಅರಸನ ನಿಯೋಗಿಗಳಲ್ಲಿ ಒಬ್ಬನಾಗಿ, ಅರಸನಿಗೂ ಪೋಪನಿಗೂ ಬಂದಂಥಾ ಹೆಚ್ಚುಕಡಿಮೆಯನ್ನು ತೀರಿಸುವದಕ್ಕೆ ರೋಮುಪುರಕ್ಕೆ ಬಂದನು. ಆದರೆ ಇಲ್ಲಿ ಪೋಪಮತದ ಅನರ್ಥವನ್ನು ಕಣ್ಣಾರೆ ಕಂಡವನಾಗಿ, ಸ್ವದೇಶಕ್ಕೆ ತಿರಿಗಿ ಬಂದ ಮೇಲೆ, ಪೋಪನ ಎದುರುಕ್ರಿಸ್ತತನಕ್ಕೂ ಅವನ ನಿಬಂಧನೆಗಳಿಗೂ ವಿರೋಧವಾಗಿ ಮಾತಾಡಲಿಕ್ಕೂ ಬರಿಯುವದಕ್ಕೂ ತೊಡಗಿದನು. ಆ ಕಾಲದಲ್ಲಿ ಪೋಪನಾಗಿ ಇದ್ದ ೧೧ನೆ ಗ್ರೆಗೋರನು ಅವನ ಗ್ರಂಥಗಳಿಂದ ೧೯ ವಚನಗಳನ್ನು ೧೩೭೭ಲ್ಲು ಶಪಿಸಿದನು. ಆದರೆ ಅವನನ್ನು ಚನ್ನಾಗಿ ವಿಚಾರಿಸಿ, ದಂಡಿಸ ಬೇಕೆಂದು ಕೊಟ್ಟ ಅಪ್ಪಣೆಯನ್ನು ಅರಸನು ನಡಿಸಲಿಲ್ಲ. ವಿಕ್ಲಿಫನು ಹೆಚ್ಚು ಹೆಚ್ಚು ಧೈರ್ಯ ಹೊಂದಿ, ಜನರೊಳಗೆ ಸುವಾರ್ತೆಯನ್ನು ಪ್ರಸಂಗಿಸುವಂಥಾ ಚಿಕ್ಕಜನರ ಕೂಟಗಳನ್ನು ಸ್ಥಾಪಿಸಿ, ಪರಿಶುದ್ಧವಾಕ್ಯವನ್ನು ವುಲ್ಗಾತ ಎಂಬ ಲತೀನ ಭಾಷಾಂತರದಿಂದ ಇಂಗ್ಲಿಷಿನಲ್ಲಿ ಭಾಷಾಂತರಿಸಿದನು. ಅವನ ಪಕ್ಷದವರು ಸಂತೋಷದಿಂದ ದೇವರನ್ನು ಭಜಿಸುತ್ತಾ, ಪ್ರಾರ್ಥಿಸುತ್ತಾ ಇರುವದಲ್ಲದೆ, ಹರ್ಷದಿಂದ ಯಾವಾಗಲೂ ಹಾಡುತ್ತಿರುವದರಿಂದ, ಶತ್ರುಗಳು ಅವರಿಗೆ ಲೊಲ್ಲರ್ದರು, ಅಂದರೆ, ಹಾಡುಗಾರರು ಎಂಬ ಅಡ್ಡ ಹೆಸರು ಇಟ್ಟರು. ಶತ್ರುಗಳ ಸಂತಾಪವು ಏರೇರುತ್ತಾ ಬರುವ ಸಮಯದಲ್ಲಿ, ರಾತ್ರಿಭೋಜನದಲ್ಲಿ ರೊಟ್ಟಿಯು ನಿಜವಾಗಿ ಕ್ರಿಸ್ತನ ಶರೀರವಾಗಿ ಹೋಗುತ್ತದೆ ಎಂಬ ಪೋಪಬೋಧನೆಯನ್ನು ಚನ್ನಾಗಿ ಖಂಡಿಸಿದಾಗ, ಶತ್ರುಗಳ ಕ್ರೋಧವು ಮೇರೆ ದಾಟಿತು. ಆಗ್ಯೆ ಸರ್ವಶಾಲೆಯವರು ಅವನನ್ನು ಸಹವಾಸದಿಂದ ಹೊರಗೆ ಮಾಡಿದರು. ಲಂಡನಿನಲ್ಲಿ ಕೂಡಿ ಬಂದ ಸಮಾಗಮವು ಅವನ ಗ್ರಂಥಗಳೂ ಬೋಧನೆಗಳೂ ಪಾಷಂಡಿ ಜಾತಿಯವಾಗಿ ಇರುತ್ತವೆಂದು ೧೩೮೨ಲ್ಲು ಶಪಿಸಿದರು. ಈ ಪ್ರಕಾರ ಪೋಪಪಕ್ಷದವರು ಅವನನ್ನು ಹೊರಗೆ ಹಾಕಿದರೂ, ಅರಸನೂ ರಾಜ್ಯಸಭೆಯವರೂ ಅವನ ಜೀವಕ್ಕೆ ಹಾನಿ ಬಾರದ ಹಾಗೆ ಅವನನ್ನು ಕಾಪಾಡಿದರು.

ಆಗ್ಯೆ ವಿಕ್ಲಿಫನು ಲತ್ತರ್‌ವರ್ತ್ ಎಂಬಲ್ಲಿಗೆ ಹೋಗಿ, ಬೋಧಕೋದ್ಯೋಗ ನಡಿಸಿ, ೧೩೮೪ಲ್ಲು ಸಮಾಧಾನದಲ್ಲಿ ತೀರಿ ಹೋದನು. ತೀರಿ ಹೋಗುವ ಮುಂಚೆ ಕಷ್ಟವಾದ ಕೆಲಸ ಇಲ್ಲದವನಾಗಿ ತ್ರಿಯಲೊಗ, ಅಂದರೆ, ತ್ರಿಸಂಭಾಷಣೆ ಎಂಬ ಗ್ರಂಥವನ್ನು ಬರದು, ದೇವವಿದ್ಯೆಯಲ್ಲಿ ತಾನು ತಿಳಿದ ಮುಖ್ಯ ತಾತ್ಪರ್ಯವನ್ನು ಸಾಂಗೋಪಾಂಗವಾಗಿ ತಿಳಿಸಿದನು. ಈ ಗ್ರಂಥದ ಸಾರಾಂಶವೇನಂದರೆ: ಎಲ್ಲಾ ದೇವವಿದ್ಯೆಗೂ ತಿದ್ದುಪಾಟಿಗೂ ಪರಿಶುದ್ಧ ಬರಹವು ಎಲ್ಲಾ ಧರ್ಮಜ್ಞಾನದ ಒಂದೇ ಬುಗ್ಗೆಯೂ ಸೂತ್ರವೂ ಆಗಿ ಇರುತ್ತದೆ. ಇದಕ್ಕನುಸಾರವಾಗಿ ಪರಿಶುದ್ಧರ ಪೂಜೆ

ಯನ್ನೂ, ಅವಶೇಷಪೂಜೆಯನ್ನೂ, ಬಿಂಬಪೂಜೆಯನ್ನೂ, ಸಭೆಗಳಲ್ಲಿ ಲತೀನ ಭಾಷೆಯ ಪ್ರಯೋಗವನ್ನೂ, ಯಾಜಕರ ಅಲಂಕಾರ ಗಾಯನವನ್ನೂ, ಹಬ್ಬಗಳ ವಿಪರೀತ ಸಂಖ್ಯೆಯನ್ನೂ, ಪ್ರತ್ಯೇಕವಾದ ಮೀಸುಗಳನ್ನೂ, ಅವಸಾನಕಾಲದಲ್ಲಿ ತೈಲಾಭಿಷೇಕವನ್ನೂ, ಎಲ್ಲಾ ನಿಷ್ಪ್ರಯೋಜಕವಾದ ಆಚಾರಗಳನ್ನೂ ಖಂಡಿಸಿದನು. ಇವಲ್ಲದೆ ರೋಮಿಯ ಪಾಪವಿಮೋಚನೆಯ ಚೀಟುಗಳ ಬೋಧನೆಯೂ, ಅದರ ವ್ಯಾಪಾರವೂ, ಶಾಪದಂಡವೂ, ಬಹಿಷ್ಕಾರವೂ ದೇವದ್ರೋಹವಾಗಿದೆಯೆಂದೂ, ಕಿವಿಯರಿಕೆಯು ಮನಸ್ಸಾಕ್ಷಿಯ ವತ್ತಾಯವಾಗಿದೆಯೆಂದೂ, ಬೀಗದಕ್ಕೈ ಅಧಿಕಾರವು ಯಾವಾಗಲೂ ನ್ಯಾಯವಾದ್ದಲ್ಲಾ, ಕಟ್ಟುವದೂ ಬಿಡಿಸುವದೂ ಕ್ರಿಸ್ತನ ಕೀರ್ತಿಗೆ ಅನುಕೂಲವಲ್ಲವಾದರೆ ನಿರ್ಬಲವಾಗಿದೆಯೆಂದೂ ಹೇಳಿದನು. ರಾತ್ರಿಭೋಜನದ ವಿಷಯದಲ್ಲಿ ಕ್ರಿಸ್ತನ ಶರೀರವೂ ರಕ್ತವೂ ನಿಜವಾಗಿ ಸಾನ್ನಿಧ್ಯವಾಗಿರುತ್ತದೆ ಎಂಬ ರೋಮಿಯ ಬೋಧನೆಗೆ ಒಪ್ಪಿಕೊಳ್ಳದೆ, ತಕ್ಕೊಳ್ಳುವವನ ವಿಶ್ವಾಸಕ್ಕೂ ಕೊಡುವವನ ಯೋಗ್ಯತ್ವಕ್ಕೂ ಅನುಸಾರವಾಗಿ ಆತ್ಮಿಕಬಲವಾಗಿ ಸಿಕ್ಕುತ್ತದೆಂದು ಬೋಧಿಸಿದನು. ಪಾತಾಳಾಗ್ನಿಯ ಬೋಧನೆಯನ್ನು ಪೂರ್ಣವಾಗಿ ತಿರಸ್ಕರಿಸಿದನು. ಪೋಪತನವು ಪ್ರತಿಕ್ರಿಸ್ತತನವಾಗಿ ಇರುತ್ತದೆಂದೂ, ಪೋಪನ ಅಧಿಕಾರವು ದೇವರಿಂದಲ್ಲ, ಮಹಾರಾಜನಿಂದ ಬಂದದ್ದೆಂದೂ ಹೇಳಿದನು. ಸಮಸ್ತ ವಿಶ್ವಾಸಿಗಳು ವಿಶ್ವಾಸದ ಮೂಲದಿಂದಲೆ ದೇವರ ಯಾಜಕರಾಗಿ ಇರುತ್ತಾರೆಂದೂ, ಬೈರಾಗಿತನವು ಅಸ್ವಭಾವಿಕವೆಂದೂ ಬೋಧಿಸಿದನು.

ಧನವಂತರಲ್ಲಿಯೂ ವಿದ್ವಾಂಸರಲ್ಲಿಯೂ ಅವನ ಅನುಸಾರಿಗಳು ಅನೇಕರಿದ್ದರು. ಇವರನ್ನು ರೋಮುಪಕ್ಷದವರು ಕಠೋರವಾಗಿ ಹಿಂಸಿಸಿದರು. ಕಾನ್ಸ್ತನಿಚ್ಚದ ಸಮಾಗಮವು ಅವನ ಪುಸ್ತಕಗಳಿಂದ ತಿರಿಗಿ ೪೫ ವಾಕ್ಯಗಳನ್ನು ಶಪಿಸಿ, ಅವನ ಎಲುಗಳನ್ನು ಸಮಾಧಿಯಿಂದ ಅಗೆದು ತೆಗೆದು, ಹೊರಗೆ ಹರಡಿಸಿ ಬಿಡ ಬೇಕೆಂದು ಅಪ್ಪಣೆ ಕೊಟ್ಟಿತು. ಆದಾಗ್ಯೂ ಅವನು ಬಿತ್ತಿದ ಬೀಜದಿಂದ ಕೆಲವು ಪುನಃಸ್ಥಾಪನೆಯ ವರೆಗೆ ಜೀವದಿಂದುಳಿದು, ಅದರಿಂದ ಬಲಗೊಂಡು, ಮೊಳೆತು ಬೆಳೆದು ಸಫಲವಾದವು.

ವಿಕ್ಲಿಫನ ಸತ್ಯವೇದಭಾಷಾಂತರವು ಆ ಕಾಲಕ್ಕೆ ಬಹು ಪ್ರಯೋಜನವುಳ್ಳದ್ದಾಗಿದ್ದರೂ, ಛಾಪೆ ಹಾಕುವ ಉಪಾಯವು ಆ ಕಾಲದಲ್ಲಿ ತಿಳಿಯದಿರುವದರಿಂದಲೂ, ಕೈಯಿಂದ ಪ್ರತಿ ತೆಗದ ದೇವವಾಕ್ಯದ ಪ್ರತಿಗಳು ಬಹಳ ಕ್ರಯವಾಗಿರುವದರಿಂದಲೂ, ಆಸ್ತಿವಂತರು ಮಾತ್ರವೆ ಕೊಳ್ಳಲಿಕ್ಕೆ ಶಕ್ತರಾಗಿ ಇದ್ದು, ಭೂರಿ ಜನರು ಮಹಾ ಅಜ್ಞಾನದಲ್ಲಿಯೆ ಉಳಿದರು. ಆದಾಗ್ಯೂ ಸಾಧಾರಣ ಜನರಿಗೆ ಭಕ್ತಿ ವಿಷಯವಾದ ಬೋಧನೆಯನ್ನು ಹ್ಯಾಗಾದರೂ ಕೊಡ ಬೇಕೆಂದು ಸುಜನರು ಅಪೇಕ್ಷಿಸಿ, ಬಿಬ್ಲಿಯ

ಪೌಪೆರುಮ್, ಅಂದರೆ, ದರಿದ್ರರ ಸತ್ಯವೇದವೆಂಬ ಪುಸ್ತಕವನ್ನು ಛಾಪಿಸಿದರು. ಇದು ೧೪೨೦ಲ್ಲಿ ಆಯಿತಂತೆ. ಆದರೂ ಅಕ್ಷರಛಾಪೆ ಆ ಸಮಯದಲ್ಲಿ ತಿಳಿಯದಿರುವದರಿಂದ, ಚಿತ್ರ ಛಾಪೆ ಮಾಡಿದರು. ಈ ಪುಸ್ತಕಕ್ಕೆ ನಾಲ್ವತ್ತು ಚಿತ್ರಗಳಿದ್ದವು, ಒಂದೊಂದು ಚಿತ್ರಕ್ಕೆ ೩ ಭಾಗಗಳು. ಇವು ಸತ್ಯವೇದ ಚರಿತ್ರದಿಂದ ಯಾವದಾದರೂ ಒಂದು ಸಂಗತಿಯನ್ನು ತೋರಿಸುವವು. ಅದರ ಸಂಗಡ ಸತ್ಯವೇದದಿಂದ ಒಂದು ವಾಕ್ಯ, ಅಥವಾ ಚಿತ್ರದ ಅಭಿಪ್ರಾಯ ಹೇಳಿ ಇತ್ತು. ದೊಡ್ಡ ಗ್ರಂಥಗಳನ್ನು ಕೊಳ್ಳಲಿಕ್ಕೆ ಶಕ್ತಿ ಇಲ್ಲದವರು ಈ ಪ್ರಕಾರ ಸ್ವಲ್ಪ ಹಣದಿಂದ ಸತ್ಯವೇದದ ವೃತ್ತಾಂತಗಳನ್ನು ಫಳಿಸಿ ಕೊಳ್ಳುವದಕ್ಕೆ ಉಪಾಯವಾಯಿತು. ಆ ಪುಸ್ತಕದ ಪ್ರತಿಗಳು ಕೆಲವು ಇನ್ನೂ ಅವೆ. ಅದನ್ನು ತಕ್ಕಷ್ಟು ತಿಳುಕೊಳ್ಳುವ ಬಗ್ಗೆ ೪ಂನೆ ಚಿತ್ರವನ್ನು ವಿಚಾರಿಸುವಾ. ಇದರ ಮಧ್ಯಭಾಗದಲ್ಲಿ ರಕ್ಷಕನು ತನ್ನ ಭೀತಿಯಲ್ಲಿಯೂ ಪ್ರೀತಿಯಲ್ಲಿಯೂ ತೀರಿಹೋದ ಭಕ್ತನಿಗೆ ಜೀವದ ಕಿರೀಟವನ್ನು ಕೊಡುವವನಾಗಿ ಕಾಣಿಸಿ ಇದ್ದಾನೆ. ಎಡಗಡೆಯಲ್ಲಿ ಸೊಲೊಮೋನನ ಗೀತಕ್ಕೆ ಅನುಸಾರವಾಗಿ, ಮದುಮಗನಿಂದ ಕಿರೀಟ ಹೊಂದಿದ ಚಿಯೋನಿನ ಮಗಳು ಇದ್ದಾಳೆ. ಬಲಗಡೆಯಲ್ಲಿ ಪರಿಶುದ್ಧ ಯೋಹಾನನ ಸಂಗಡ ಮಾತಾಡುವ ದೂತನು ಚಿತ್ರಿಸಿ ಇದ್ದಾನೆ. ಇದಲ್ಲದೆ ಮೇಲಿನ ಭಾಗದಲ್ಲಿ ದಾವೀದನ ಚಿತ್ರವೂ ಯೆಶಾಯನ ಚಿತ್ರವೂ ಕಾಣುತ್ತವೆ. ಇದರ ಸಂಗಡ ಎರಡು ವಾಕ್ಯಗಳು, ಯಾವವೆಂದರೆ: ಸೊಲೊ. ಗೀತ. ೫, ೭. ೮. "ಪಟ್ಟಣದಲ್ಲಿ ಸಂಚರಿಸುವ ಕಾವಲಿಗಾರರು ನನ್ನನ್ನು ಕಂಡು, ನನ್ನನ್ನು ಬಡಿದು ಘಾಯ ಮಾಡಿದರು; ಅಲಂಗವನ್ನು ಕಾಯುವವರು ನನ್ನ ಮುಸುಕನ್ನು ಕಸುಕೊಂಡರು; ನಿಮಗೆ ಆಣೆ ಇಡುತ್ತೇನೆ, ಯೆರೂಸಲೇಮಿನ ಕುಮಾರ್ತೆಗಳೇ, ನೀವು ನನ್ನ ಪ್ರಿಯನನ್ನು ಕಂಡರೆ ನಾನು ಪ್ರೀತಿರೋಗದಲ್ಲಿ ಬಿದ್ದಿದ್ದೇನೆಂದು ಅವನಿಗೆ ತಿಳಿಸಿರಿ." ೨ನೆ ವಾಕ್ಯ: ಪ್ರಕಟಣೆ ೨೧, ೯. "ಮತ್ತು ಏಳು ಕಡೇ ಬಾಧೆಗಳಿಂದ ತುಂಬಿದ ಏಳು ಪಾತ್ರೆಗಳನ್ನು ಹಿಡಿದ ಏಳು ದೂತರಲ್ಲಿ ಒಬ್ಬನು ನನ್ನ ಬಳಿಗೆ ಬಂದು, ನನ್ನ ಸಂಗಡ ಮಾತಾಡಿ, ಬಾಕುರಿಮರಿಯ ಹೆಂಡತಿಯಾದ ಮದಲಗಿತ್ತಿಯನ್ನು ನಿನಗೆ ತೋರಿಸುತ್ತೇನೆ ಅಂದನು." ಇದಲ್ಲದೆ ಆ ಚಿತ್ರದಲ್ಲಿ ಕೆಲವು ಬೇರೆ ಸಣ್ಣ ಮಾತುಗಳು ಇದ್ದವು. ಸತ್ಯವೇದದ ಅಭಿಪ್ರಾಯವನ್ನು ತಿಳಿಸುವದಕ್ಕೆ ಈ ಮಾರ್ಗವು ಏನೂ ಸಾಕಾದ್ದಲ್ಲವಾಗಿ ಇದ್ದರೂ, ಜನರು ಇಷ್ಟಾದರೂ ಸಿಕ್ಕಿತೆಂದು ಸಂತೋಷ ಪಟ್ಟರು. ೧೪೭೧ ಲ್ಲಿಯೆ ಸತ್ಯವೇದದ ಇತಲ ಭಾಷಾಂತರವು ಛಾಪೆ ಆಯಿತು. ೧೪೭೫ಲ್ಲಿ ಫ್ಲೇಮು, ೧೪೭೮ಲ್ಲಿ ಸ್ಪೇನ್ಯ, ೧೪೮೮ಲ್ಲಿ ಬೊಹೆಮ್ಯ ಭಾಷಾಂತರವು ಛಾಪೆ ಆಯಿತು. ಆದರೆ ಇಂಗ್ಲಿಷು ಭಾಷೆಯಲ್ಲಿ ಹೊಸ ಒಡಂಬಡಿಕೆಯು ೧೫೨೬ನೆ ಮುಂಚೆ ಆಗಲಿಲ್ಲಾ. ಇದು ಸಹಾ

ಪರದೇಶದಲ್ಲಿ ಅಂತ್ವೆರ್ಪೆನಿನಲ್ಲಿ ಛಾಪೆ ಆಯಿತು. ಇದರ ಗ್ರಂಥಕರ್ತನ ಹೆಸರು ತಿಂದೆಲ್. ಈ ಪುಸ್ತಕವನ್ನು ಇಂಗ್ಲಿಷು ದೇಶಕ್ಕೆ ತಂದು ಮಾರಿದವರನ್ನು ಸರ್ಕಾರದವರು ಹಿಡಿದು, ಆ ಪುಸ್ತಕಗಳನ್ನು ಸೊಂಟಕ್ಕೆ ಕಟ್ಟಿ, ಮುಖ ಹಿಂದೆ ಮಾಡಿ ಕುದುರೆಯ ಮೇಲೆ ಕೂಡ್ರಿಸಿ, ಲಂಡನ್ ಪಟ್ಟಣದಲ್ಲಿ ಮೆರವಣಿಗೆ ಮಾಡಿಸಿದರು. ತಿಂದೆಲ್ ತಾನೆ ಮೋಸದಿಂದ ಕೈ ಶೆರೆ ಬಿದ್ದನು. ೧೫೩೬ಲ್ಲಿ ಫ್ಲಂದರದಲ್ಲಿ ಅವನನ್ನು ಪಾಶಿಗೆ ಹಾಕಿ, ಸುಟ್ಟು ಬಿಟ್ಟರು. ಅವನು ಅವಸಾನಕಾಲದಲ್ಲಿ ಮಹಾ ದುಖ್ಖದಿಂದ ಅನೇಕ ಸರ್ತಿ ಮುಲುಗುತ್ತಾ ಪ್ರಾರ್ಥಿಸಿದ್ದೇನಂದರೆ: “ಓ ಕರ್ತನೆ, ಅಂಗ್ಲ ದೇಶದ ಅರಸನ ಕಣ್ಣುಗಳನ್ನು ತೆರಿ.” ಅವನ ಇಬ್ಬರು ಸಹಾಯಕರಲ್ಲಿ ಒಬ್ಬನನ್ನು ಇಂಗ್ಲಿಷು ದೇಶದಲ್ಲಿಯೂ, ಮತ್ತೊಬ್ಬನನ್ನು ಪೋರ್ತುಗಾಲದಲ್ಲಿಯೂ, ಸುಟ್ಟು ಬಿಟ್ಟರು.

ಜರ್ಮನಿಯ ಪುನಃಸ್ಥಾಪನೆಯ ಕಾಲದಲ್ಲಿ ೮ನೆ ಹೆನ್ರಿಯು ಇಂಗ್ಲಿಷು ದೇಶದ ಅರಸನಾಗಿ ಇದ್ದನು. ಈತನು ಸ್ವೈರವುಳ್ಳವನೂ ಬಲಾತ್ಕಾರ ನಡಿಸುವವನೂ ಆಗಿ ಇದ್ದು, ತನ್ನನ್ನು ಹೆಂಡತಿಯ ವಿವಾಹಬಂಧದಿಂದ ಬಿಡುಗಡೆ ಮಾಡುವದಕ್ಕೆ ಪೋಪನು ಕೇಳುವದಿಲ್ಲವೆಂದು ನೋಡಿ, ಪೋಪನಿಗೆ ಎದುರ್ನಿಂತನು, ರೋಮಿಯ ಸಭಾಸಂಸರ್ಗವನ್ನು ಬಿಟ್ಟನು; ಆದಾಗ್ಯೂ ಪೋಪನ ಮಾರ್ಗವನ್ನೂ ಬೋಧನೆಗಳನ್ನೂ ಬಿಡಲಿಲ್ಲಾ. ಸಭೆಯ ಕಾರ್ಯಗಳಲ್ಲಿ ಮತ್ತೊಬ್ಬನಿಗೆ ಅಧೀನವಾಗಿರುವದಕ್ಕಿಂತ ತಾನೆ ಅಧಿಕಾರ ನಡಿಸುವದು ಅವನಿಗೆ ಹಿತ ಕಂಡಿತು. ಹೀಗಿರುವದರಿಂದ, ಆ ಕಾಲದಲ್ಲಿ ಲುಥರನ ಗ್ರಂಥಗಳಿಗೆ ಇಂಗ್ಲಿಷು ದೇಶದಲ್ಲಿ ಸಹಾ ಮಹಾ ಅಭಿಮಾನ ಬರುತ್ತದೆಂದು ನೋಡಿ, ಕರಕರೆ ಪಟ್ಟನು. ಈ ಪ್ರಕಾರ ಅವನು ಆಳುತ್ತಿರುವಾಗ್ಯೆ, ಪುನಃಸ್ಥಾಪನೆಯು ನಿಜವಾಗಿ ಉಂಟಾಗಲಿಲ್ಲವೆಂದು ಹೇಳ ಬಹುದು. ಆದಾಗ್ಯೂ ಕೆಂತರ್ಬರಿಯ ಮಹಾಧ್ಯಕ್ಷ ಥೋಮ ಕ್ರೆನ್ಮರನ ಸಾಹಸದಿಂದ ದೇವಾರಾಧನೆಗೆ ಸ್ವದೇಶಭಾಷೆಯನ್ನು ಪ್ರಯೋಗಿಸುವದಕ್ಕೂ ಪರಿಶುದ್ಧ ಬರಹವನ್ನು ಜನರಿಗೆ ಹಸ್ತಗತವಾಗುವದಕ್ಕೂ ಉಪಾಯವಾಯಿತು. ಇದಲ್ಲದೆ ಪೋಪನಿಗೂ ಇಂಗ್ಲಿಷು ದೇಶದ ಸಭೆಗೂ ಭೇದ ಬಂದದ್ದು ಸಹಾ ಪ್ರಯೋಜನಕ್ಕೆ ಬಿತ್ತು. ಹೆನ್ರಿಯ ಉತ್ತರಾಧಿಕಾರಿಯಾಗಿ ಬಂದ ಯೌವನದ ೬ನೆ ಎದ್ವರ್ದನ ಕಾಲದಲ್ಲಿ ಪುನಃಸ್ಥಾಪನೆಗೆ ಅಧಿಕ ಆಶ್ರಯ ಶಿಕ್ಕಿತು. ಈತನು ಕ್ರೆನ್ಮರನ ಪರಿಮುಖವಾಗಿಯೂ, ಜರ್ಮನಿ ದೇಶದಿಂದ ಕರಿಸಿದ ಕೆಲವು ಪುನಃಸ್ಥಾಪಕರ ಪರಿಮುಖವಾಗಿಯೂ, ಇಂಗ್ಲಿಷು ದೇಶದಲ್ಲಿ ಹೊಸ ಕ್ರಮಕ್ಕೆ ಅಸ್ತಿವಾರ ಹಾಕಿದನು. ಕ್ರೆನ್ಮರನೂ ರಿಡ್ಲಿಯೂ ೪೨ ಸೂತ್ರವುಳ್ಳ ಪುನರೂಪಿತ ಸಭೆಯ ವಿಶ್ವಾಸಪ್ರಮಾಣವನ್ನು ರಚಿಸಿದರು. ಆದರೆ ಸಭೆಯ ನವೀಕರಣಕ್ಕೆ ಈ ಪ್ರಕಾರ ಸನ್ನಾಹ ಮಾಡುತ್ತಿರುವ ಸಮಯದಲ್ಲಿ, ಅರಸನಾದ ಎದ್ವರ್ದನು ಶೀರಿ ಹೋಗಿ, ರಾಜ್ಯಾ

ಧಿಕಾರವು ಪೋಪನ ಪರಮಪತ್ರಲಳಾದ ಮರೀಯ ರಾಣಿಯ ಕೈಗೆ ಬಂದು ಮುಟ್ಟಿತು. ಈಕೆಯು ನವೀಕರಣವನ್ನೆಲ್ಲಾ ಕ್ಷಣಮಾತ್ರದಲ್ಲಿ ನಿಲ್ಲಿಸಿ ಬಿಟ್ಟು, ನಾಲ್ಕು ವರುಷ ಆಳುತ್ತಿರುವಾಗ್ಯೆ, ೪೦೦ ಜನರನ್ನು, ಅವರು ಪುನರೂಪಿತ ಬೋಧನೆಗೆ ಒಪ್ಪಿಕೊಳ್ಳುವವರೆಂದು ಜೀವಂತರಾಗಿ ಅಗ್ನಿಮರಣಕ್ಕೆ ಒಪ್ಪಿಸಿ ಬಿಟ್ಟಳು. ಹೂಪರನೂ, ಹ್ಯೂ ಲತಿಮರನೂ, ರಿಡ್ಲಿಯೂ, ರೋಜರ್ಸನೂ, ಬೇರೆ ಅನೇಕ ಪ್ರಮುಖರಾದ ಚಕ್ತರೂ, ಈ ಪ್ರಕಾರ ಮರಣಕ್ಕೊಳಗಾದರು. ಮಹಾಧ್ಯಕ್ಷ ಕ್ರೆನ್ಮರನು ತಾನೆ ಬಂಧನದಲ್ಲಿ ಬಿದ್ದಾಗ ವಾಗ್ದತ್ತಗಳಿಂದಲೂ ಬೆದರಿಕೆಗಳಿಂದಲೂ ಚಂಚಲ ಮನಸ್ಸಿಗೆ ಎಡೆಕೊಟ್ಟು, ತಾನು ಕೊಟ್ಟ ಬೋಧನೆಯನ್ನು ಒಂದು ಸಾರಿ ತಿರಸ್ಕರಿಸಿದಾಗ್ಯೂ, ಮತ್ತೆ ಈ ನಿತ್ರಾಣದ ವೃದ್ಧನು ಧೈರ್ಯ ತಕ್ಕೊಂಡು, ತಾನು ಮರಣಭಯದಿಂದ ಮಾತ್ರವೆ ತನ್ನ ಬೋಧನೆಯನ್ನು ತಿರಸ್ಕರಿಸಿದೆನೆಂದೂ, ಈಗ ಸಾಯಲಿಕ್ಕೆ ಸಿದ್ಧವಾಗಿದ್ಧೇನೆಂದೂ, ಅರಿಕೆ ಮಾಡಿದನು. ಆಗ್ಯೆ ಮರಣಶಿಕ್ಷೆಯು ನೇಮಕವಾಯಿತು. ೧೫೫೬ನೆ ಮಾರ್ಚಿ ೨೧ಲ್ಲು ಕರ್ತನಲ್ಲಿ ಧೈರ್ಯ ಮಾಡಿ ಕೊಂಡು, ಚಿತಿಯನ್ನು ಏರಿ, ಬೋಧನೆಯ ತಿರಸ್ಕಾರಕ್ಕೆ ಗುರ್ತು ಹಾಕಿದ ಬಲಗ್ಯೆಯನ್ನು ಮೊದಲಾಗಿ ನೀಡಿ ಸುಟ್ಟು, "ಕರ್ತನಾದ ಯೇಸುವೆ, ನನ್ನ ಆತ್ಮವನ್ನು ಅಂಗೀಕರಿಸು" ಎಂಬ ಮಾತಿನಿಂದ ಪ್ರಾಣ ಬಿಟ್ಟನು. ಬೇರೊಬ್ಬರು ಜರ್ಮನಿಗೆ ಪಲಾಯನ ಮಾಡಿ, ಯೋಹಾನ್ ಕಲ್ವೀನನ ಪರಿಚಿತಿ ಮಾಡಿ ಕೊಂಡು, ಶುದ್ಧತೆಯವರದೆಂಬ ಸಭಾಸಂಸರ್ಗಕ್ಕೆ ಮೊದಲನೆ ಅಸ್ತಿವಾರ ಹಾಕಿದರು. ಇವರು ಇಂಗ್ಲಿಷು ಪ್ರಾರ್ಥನಾಪುಸ್ತಕವನ್ನೂ, ಅಧ್ಯಕ್ಷರ ಸಭಾಧಿಕಾರವನ್ನೂ, ಇಂಗ್ಲಿಷು ಸಭೆಯ ಆಚಾರಗಳನ್ನೂ ಸ್ವೀಕರಿಸುವದಿಲ್ಲಾ. ಇಂಗ್ಲಿಷು ದೇಶ ಸಭೆಯು, ಮರೀಯಳ ಉತ್ತರಾಧಿಕಾರಿಯಾಗಿಯೂ ಸಮಸ್ತ ಅಂಗ್ಲದೇಶದಲ್ಲಿ ಪುನಃಸ್ಥಾಪನೆಯನ್ನು ವರ್ಧಿಸಿದವಳಾಗಿಯೂ ಇದ್ದ ಸುವಾರ್ತಾಭಾವವುಳ್ಳ ಎಲಿಸಬೇತ ರಾಣಿಯ ಆಶ್ರಯದಿಂದ ಸ್ಥಿರವಾಯಿತು. ಇಷ್ಟಾದ ಮೇಲೆ ಪೋಪತನಕ್ಕೂ ಪುನಃಸ್ಥಾಪನೆಗೂ ಇಂಗ್ಲಿಷು ದೇಶದಲ್ಲಿ ನಡದ ಹೋರಾಟದ ಚರಿತ್ರದಿಂದ ಕೆಲವು ವೃತ್ತಾಂತಗಳನ್ನು ಇಲ್ಲಿ ಹೇಳ ತಕ್ಕದ್ದು.

ಮೇಲೆ ಹೇಳಿದ ತಿಂದೆಲನಿಗೆ ಒಬ್ಬ ರೋಮಿಯ ಯಾಜಕನು, "ಪೋಪನ ಕಟ್ಟು ಕಟ್ಟಳೆಗಳಿಲ್ಲದಿರುವದಕ್ಕಿಂತ, ದೇವರ ಆಶೀರ್ವಾದ ಇಲ್ಲದಿರುವದು ಲೇಸು" ಎಂದು ಒಂದು ಸಾರಿ ಹೇಳಿದನು. ಅದಕ್ಕೆ ತಿಂದೆಲನು ಉತ್ತರ ಕೊಟ್ಟು ಹೇಳಿದ್ದೇನಂದರೆ, "ಪೋಪನಿಗೂ ಅವನ ಸಮಸ್ತ ಕಟ್ಟು ಕಟ್ಟಳೆಗಳಿಗೂ ನಾನು ಎದುರು ನಿಂತು, ದುಡುಕುತ್ತೇನೆ. ಮತ್ತು ದೇವರು ನನ್ನ ಜೀವ ಉಳಿಸಿದರೆ ಗದ್ದೆ ಹೂಡು

ವ ಹುಡುಗನು ವಿದ್ಯೆ ಕಲಿತಂಥಾ ಯಾಜಕನಾಗಿರುವ ನನಗಿಂತ ಹೆಚ್ಚಾಗಿ ಪರಿಶುದ್ಧ ಬರಹವನ್ನು ತಿಳಿದವನಾಗಿರುವದನ್ನು ಕಂಡೇನು."

ಯೋಹಾನ್‌ಬ್ರೌನನು ಗ್ರೇವ್ಸೆಂದದಿಂದ ಒಬ್ಬ ಯಾಜಕನ ಸಂಗಡ ದೋಣಿ ಯಲ್ಲಿ ಕೂತಿರುವಾಗ್ಯೆ, ತಾನು ಹೊಸ ವೊಡಂಬಡಿಕೆಯನ್ನು ಓದುತ್ತೇನೆಂದು ಅರಿಕೆ ಮಾಡಿ, ಮೋಸು ನಡಿಸುವದಕ್ಕೆ ಎದುರಾಡಿದನು. ಸ್ವಲ್ಪ ದಿವಸಗಳ ಮೇಲೆ ಬ್ರೌನ ನು ತನ್ನ ಕುಟುಂಬದವರ ಸಂಗಡಲೂ ಸ್ನೇಹಿತರ ಸಂಗಡಲೂ ಮಧ್ಯಾನ್ಹದ ಬೋಜ ನಕ್ಕೆ ಕೂತಿರುವ ಸಮಯದಲ್ಲಿ, ಅವನನ್ನು ಹಿಡಿದು ಬಂಧಿಖಾನೆಯಲ್ಲಿ ಹಾಕಿದರು, ಎಲ್ಲಿ ಎಂತ ಅವರಿಗೆ ತಿಳಿಯಲಿಲ್ಲಾ. ಪೋಪನ ಕಡೆಯ ಅಧ್ಯಕ್ಷರಾದ ವರ್‌ಹೆಮ್ ಫಿಶರ್ ಎಂಬವರ ಅಪ್ಪಣೆಯಿಂದ ಬ್ರೌನನ ಬರೇ ಕಾಲುಗಳನ್ನು ಉರಿಯುವ ಕೆಂ ಡಗಳ ಮೇಲೆ ಇಟ್ಟು ಸುಟ್ಟರು. ಈ ಪ್ರಕಾರ ವಿಶ್ವಾಸದಿಂದ ಬಿದ್ದು ಹೋಗುವ ಹಾಗೆ ಮಾಡಲಿಕ್ಕೆ ಆದೀತೆಂತ ನೆನಸಿದರು. ಆದರೆ ಕರ್ತನು ಅವನನ್ನು ಬಲ ಪಡಿಸ ಲಾಗಿ, ಈ ಯಾತನೆಯನ್ನು ಸ್ಥಿರಮನಸ್ಸಿನಿಂದ ತಾಳಿ ಕೊಳ್ಳಲಿಕ್ಕೆ ಶಕ್ತನಾದನು. ಅ ದೇ ಸಮಯದಲ್ಲಿ ಯಾಜಕರು ಪರಿಶುದ್ಧಪುಸ್ತಕವನ್ನು ಅವನ ಮುಂದೆ ಸುಟ್ಟುಬಿ ಡುವದನ್ನು ಸಹಾ ಕಣ್ಣಾರೆ ಕಾಣ ಬೇಕಾಯಿತು. ಅವನನ್ನು ಕೈಶೆರೆ ಹಿಡಿದ ಸು ಮಾರು ೨ ತಿಂಗಳ ಮೇಲೆ, ಅವನ ಚಾಕರಳು ಒಂದಾನೊಂದು ಸಾಯಂಕಾಲದಲ್ಲಿ ಅವನನ್ನು ಬಂಧಿಖಾನೆಯಲ್ಲಿ ಕಂಡಳು. ಅವನ ಅಡಿಗಳು ಹಿಮ್ಮಡಿಯ ವರೆಗೆ ಸು ಟ್ಟು ಹೋದ್ದನ್ನು ಸಹಾ ನೋಡಿದಳು. ಮತ್ತು ಮರುದಿನ ಬೆಳಿಗ್ಗೆ ಅವನನ್ನು ಜೀ ವಂತನಾಗಿ ಸುಟ್ಟುಬಿಡಲಿಕ್ಕೆ ನಿಶ್ಚೈಸಿದ್ಧಾರೆಂದು ಕೇಳಿದಳು. ಈ ವರ್ತಮಾನವನ್ನು ತಿಳಿದು, ಅವನ ಹೆಂಡತಿಯು ಅವನು ಇದ್ದಲ್ಲಿಗೆ ಬಂದು, ಆ ರಾತ್ರಿಯನ್ನು ಅವನ ಸಂಗಡ ಕಳದಳು. ಅವನು ಅವಳಿಗೆ ತಾನು ಅನುಭವಿಸಿದ್ದನ್ನೆಲ್ಲಾ ತಿಳಿಸಿ, ಇನ್ನು ಮುಂದೆಯೂ ಮಕ್ಕಳನ್ನು ದೇವರ ಭಯದಲ್ಲಿ ಸಾಕ ಬೇಕೆಂದು ಬಹಳವಾಗಿ ಬೇಡಿ ಕೊಂಡನು. ಮರುದಿನ ಅವನಿಗೆ ಅಗ್ನಿಮರಣವು ಪ್ರಾಪ್ತಿ ಆಯಿತು. ಅವಸಾನ ಕಾಲದಲ್ಲಿ ಅವನು ಹೇಳಿದ್ದೇನಂದರೆ: "ನಿನ್ನ ಕೈಗೆ ನನ್ನ ಆತ್ಮವನ್ನು ಒಪ್ಪಿಸಿ ಕೊಡು ತ್ತೇನೆ, ನೀನು ನನ್ನನ್ನು ರಕ್ಷಿಸಿದ್ಧಿ, ಓ ನನ್ನ ನಂಬಿಕೆಯುಳ್ಳ ದೇವರೆ."

೧೫೧೯ಲ್ಲಿ ಕವೆಂತ್ರಿಯಂಬಲ್ಲಿ ಒಂದೇ ಚಿತಿಯ ಬೆಂಕಿಯಲ್ಲಿ ೬ ಗಂಡಸರು ಒಂದು ಹೆಂಗಸು, ಹೀಗೆ ೭ ಮರಣಸಾಕ್ಷಿಗಳನ್ನು ಸುಟ್ಟು ಬಿಟ್ಟರು. ಅವರು ಕರ್ತನ ಪ್ರಾರ್ಥನೆಯನ್ನೂ ಹತ್ತು ಕಟ್ಟಳೆಗಳನ್ನೂ ಇಂಗ್ಲಿಷು ಭಾಷೆಯಲ್ಲಿ ತಮ್ಮ ಮಕ್ಕಳಿಗೆ ಕಲಿಸಿ ಕೊಡುತ್ತಾರೆಂಬದೆ ಅವರ ಅಪರಾಧವಾಗಿ ಇತ್ತು. ಅವರನ್ನು ಎರಡು ಹರ ದಾರಿ ದೂರದಲ್ಲಿರುವ ಮಕ್ಸ್‌ತಾಕ್ ಎಂಬ ಬೈರಾಗಿಮಠಕ್ಕೆ ಕೊಂಡು ಹೋಗುತ್ತಿರು

ವಾಗ್ಯೆ, ಅವರ ಮಕ್ಕಳನ್ನು ಕವೆಂತ್ರಿಯ ಬೈರಾಗಿಗಳಿಗೆ ಕಾಯಲಿಕ್ಕೆ ಒಪ್ಪಿಸಿ ಕೊಟ್ಟರು. ಆ ಮತದ ವಿಚಾರಕನಾದ ಸ್ತ್ರಫ್ಫೊರ್ದನು, ತಂದೆತಾಯಿಗಳಿಂದ ಕೇಳಿದ ಬೋಧನೆಯು ಯೇನೆಂದು ವಿಚಾರಿಸಿ, ತಂದೆತಾಯಿಗಳ ಹಾಗೆಯೆ ಸಾಯಬಾರದೆಂದು ಅಪೇಕ್ಷೆ ಇದ್ದರೆ, ಕರ್ತನ ಪ್ರಾರ್ಥನೆಯನ್ನಾಗಲಿ ವಿಶ್ವಾಸಪ್ರಮಾಣವನ್ನಾಗಲಿ ಹತ್ತು ಕಟ್ಟಳೆಗಳನ್ನಾಗಲಿ ಇಂಗ್ಲಿಷುಭಾಷೆಯಲ್ಲಿ ಇನ್ನು ಮುಂದೆ ಪ್ರಾರ್ಥಿಸಬಾರದೆಂದು ಹೇಳಿ ಬೆದರಿಸಿದನು. ಮತ್ತೆ ಯೆರೂಸಲೇಮ ಪ್ರವೇಶದ ಆದಿತ್ಯವಾರದಲ್ಲಿ ಆ ಕ್ರೈಸ್ತರೆಯಾದವರನ್ನು ಕವೆಂತ್ರಿಗೆ ತಿರಿಗಿ ತಂದಾಗ, ಅಧ್ಯಕ್ಷನು ಆರು ಗಂಡಸರಿಗೆ ಮರಣ ಶಿಕ್ಷೆಯನ್ನು ನಿರ್ಣೈಸಿ, ವಿಧವೆ ಹೆಂಗಸನ್ನು ಬಿಡುಗಡೆ ಮಾಡಿದನು. ಕತ್ತಲೆಯಾಗಿರುವದರಿಂದ ಅಧ್ಯಕ್ಷನ ನ್ಯಾಯಸ್ಥಾನದ ಚಾಕರನಾದ ಸೀಮೋನ್‌ಮೌರ್ತನ್ ಎಂಬವನು ಮನೆಗೆ ಮುಟ್ಟಿಸಿ ಕೊಡುತ್ತೇನೆಂದು ಹೇಳಿ, ಸಂಗಡ ಬಂದನು. ಅವಳ ಕೈ ಹಿಡಿದು ನಡಿಸುತ್ತಿರುವಾಗ್ಯೆ, ಕೈಕುಪ್ಪಸದಲ್ಲಿ ಕಾಗದದ ಸುರಳಿ ಕೈಗೆ ತಾಗಲಾಗಿ, “ಓಹೋ, ಇದೇನಿದು!” ಎಂದು ಹೇಳಿ, ಸುರಳಿ ಹೊರಗೆ ಎಳದನು. ಅದರಲ್ಲಿ ಹತ್ತು ಕಟ್ಟಳೆಗಳೂ, ವಿಶ್ವಾಸಪ್ರಮಾಣವೂ, ಕರ್ತನ ಪ್ರಾರ್ಥನೆಯೂ ಇಂಗ್ಲಿಷುಭಾಷೆಯಲ್ಲಿ ಬರದಿತ್ತು. “ಆಹಾ, ಹಾಗಾ, ಒಳ್ಳೆದು, ಬೇರೆ ಸಮಯ ಯಾಕೆ, ಈಗಲೇ ಆದೀತು! ಒಂದೇ ಸಮಯದಲ್ಲಿ ನಡಿಯಲಿ,” ಎಂದು ಹೇಳಿ, ಅಧ್ಯಕ್ಷನ ಬಳಿಗೆ ತಿರಿಗಿ ಎಳಕೊಂಡು ಹೋದನು. ಈತನು ಆ ಕ್ಷಣದಲ್ಲಿ ಅವಳಿಗೆ ಸಹಾ ಮರಣ ಶಿಕ್ಷೆಯನ್ನು ನೇಮಿಸಿದನು. ಎಪ್ರಿಲ್ ೪ಲ್ಲು ಅವರೆಲ್ಲರನ್ನು ತೋಟದಲ್ಲಿ ಒಟ್ಟಿಗೆ ಸುಟ್ಟು ಬಿಟ್ಟರು. ಅವನ ಸ್ನೇಹಿತನಾದ ರೋಬೆರ್ತ ಸಾಲ್ಕೇಬ ಎಂಬವನು ಆ ಸರ್ತಿ ಈ ಮಾರೆಕಾರರ ಕೈಗೆ ತಪ್ಪಿದರೂ, ೨ ವರುಷದ ಮೇಲೆ ಅವನನ್ನು ಸಹಾ ಹಿಡಿದು, ಕವೆಂತ್ರಿಗೆ ತಂದು, ಮರುದಿನದಲ್ಲಿಯೇ ಅಗ್ನಿಜ್ವಾಲೆಗೆ ಒಪ್ಪಿಸಿದರು.

ಲಂಡನಿನಲ್ಲಿ ಸ್ಮಿತ್‌ಫೀಲ್ದ್ ಎಂಬ ಸಂತೇ ಸ್ಥಳವದೆ. ಅಲ್ಲಿ ಬರ್ಥಲೊಮಾಯನ ಸಂತೆ ಮಾಡುತ್ತಾರೆ. ಅಲ್ಲಿ ಕೂಡಿ ಬರುವ ಸಾವಿರಾರು ಜನರು, ಅಲ್ಲೇ ಕ್ರಿಸ್ತನ ಚಾಕರರು ಎಂಥಾ ಭಯಂಕರವಾದ ಯಾತನೆಗಳನ್ನು ಅನುಭವಿಸ ಬೇಕಾಯಿತೆಂದು ನೆನಸುತ್ತಾರೋ? ಲೋಕವು ಯೋಗ್ಯವಾಗಿರದಂಥಾ ಭಕ್ತರು ಇಲ್ಲಿ ಉರಿಯುವ ಚಿತಿಗಳಲ್ಲಿ ತಮ್ಮ ಕೊಲೆಗಾರರಿಗೋಸ್ಕರ ಪ್ರಾರ್ಥನೆ ಮಾಡಿ, ಮಹಾ ಧೈರ್ಯದಿಂದ ಶ್ವಾಸ ಬ್ಬಿಟಿದ್ದಾರಲ್ಲಾ! ಕೆಲವರ ವರ್ತಮಾನ ಹೀಗೆ ಹೇಳುವೊ.

ಅರಸನಾದ ೮ನೆ ಹೆನ್ರಿಯು ಪೋಪನ ಸಂಗಡ ಜಗಳಾಡಿ, ತನ್ನನ್ನೆ ಇಂಗ್ಲಿಷು ಸಭೆಯ ಮೇಲಧಿಕಾರಿಯೆಂದು ಮಾಡಿ ಕೊಂಡಾಗ, ಪೋಪನ ಹಾಗೆಯೆ ಮನಸ್ಸಾಕ್ಷಿಗಳ ಮೇಲೆ ಅಧಿಕಾರವುಳ್ಳವನೆಂದು ಎಣಿಸಿ, ತನ್ನ ಮತಕ್ಕೆ ಒಪ್ಪದವರನ್ನೆಲ್ಲಾ ಹಿಂಸಿ

ಸ ತಾಡಗಿದನು. ಆ ಕಾಲದಲ್ಲಿ ಲಂಡನಿನಲ್ಲಿ ಯೋಹಾನ್‌ಲಂಬೆರ್ತನೆಂಬ ಒಬ್ಬ ಉಪಾಧ್ಯಾಯನಿದ್ದನು. ಈತನು ಕೆಲವು ರೋಮಿಯ ಅಬದ್ಧ ಬೋಧನೆಗಳಿಗೆ ಪ್ರತಿಕೂಲವಾಗಿ ಬರದಿದ್ದನು. ಅವನನ್ನು ಅಧ್ಯಕ್ಷನ ಸನ್ನಿಧಾನಕ್ಕೆ ತಂದಾಗ, ಅವನು ಅರಸನ ಆಶ್ರಯ ಬೇಡಿದನು. ಹೆನ್ರಿಯು ತಾನು ಮಹಾ ತರ್ಕವಾದಿ ಎಂದು ಕಾಣಿಸಿ ಕೊಳ್ಳಲಿಕ್ಕೆ ಅಪೇಕ್ಷಿತನಾಗಿ, ಲಂಬೆರ್ತನ ಸಂಗಡ ಪ್ರಕಟವಾಗಿ ತರ್ಕ ಮಾಡಲಿಕ್ಕೆ ನಿಶ್ಚೈಸಿ, ಮಹಾಂತರನ್ನೆಲ್ಲಾ ತನ್ನ ಬಳಿಗೆ ಕರಿಸಿದನು. ಬಡ ಲಂಬೆರ್ತನು ಅರಸನ ಸನ್ನಿಧಾನಕ್ಕೆ ಬಂದು, ಕ್ರಿಸ್ತನ ಕಾರ್ಯವನ್ನು ಸಾಧಿಸ ಬೇಕಾಯಿತು. ಆದರೆ ಅಲ್ಲಿ ಬಹಳ ಪಕ್ಷಪಾತ ನಡಿಯಿತು. ಅಧ್ಯಕ್ಷರು ಬಹಳ ಕೋಪ ಮಾಡಿದರು. ಅವನ ದೃಷ್ಟಾಂತ ಪ್ರಮಾಣಗಳಿಗೆ ಉತ್ತರ ಕೊಡಲಿಲ್ಲಾ. ಕಡೆಯಲ್ಲಿ ಅರಸನು ಅವನಿಗೆ ಸಾಯಲಿಕ್ಕೆ ಮನಸ್ಸುಂಟೋ, ಜೀವದಿಂದಿರುವದಕ್ಕೆ ಮನಸ್ಸುಂಟೋ, ಎಂದು ಕೇಳಿದನು. ಲಂಬೆರ್ತನು ತಾನು ತಿಳಿದ ಸತ್ಯಾರ್ಥವನ್ನು ಅಲ್ಲಗಳೆಯಲಾರೆನೆಂದು ಹೇಳಿದ್ದಕ್ಕೆ, ಅವನಿಗೆ ಅಗ್ನಿಮರಣವನ್ನು ನಿರ್ಣೈಸಿದರು. ಈ ಮರಣವು ಭಯಂಕರವಾಗಿತ್ತು. ಹ್ಯಾಗೆಂದರೆ: ಬೆಂಕಿಯು ಬಲವಾಗದಿರುವದರಿಂದ, ಅವನ ಕಾಲುಗಳೂ ಕೈಗಳೂ ಮಾತ್ರವೆ ಸುಟ್ಟು ಹೋಗುತ್ತಿರಲಾಗಿ, ಕಾವಲಿಯಾಗಿದ್ದ ಶಿಪಾಯರಲ್ಲಿ ಇಬ್ಬರು ಭಲ್ಲೆಗಳಿಂದ ಅವನನ್ನು ತಿವಿಯುತ್ತಾ ಇದ್ದರು. ಆದರೆ ಆತನು "ಕ್ರಿಸ್ತನು ಮಾತ್ರ, ಕ್ರಿಸ್ತನು ಮಾತ್ರ" ಎಂದು ಕೂಗಿದನು.

೮ನೆ ಹೆನ್ರಿಯ ಉತ್ತರಾಧಿಕಾರಿಯಾದ ಅರಸು ೬ನೆ ಎದ್‌ವರ್ದನ ರಾಜ್ಯಭಾರದ ಕಾಲದಲ್ಲಿ ಪ್ರಕಟವಾದ ದೇವಾರಾಧನೆಯನ್ನು ಇಂಗ್ಲಿಷು ಭಾಷೆಯಲ್ಲಿ ನಡಿಸಿದರು. ಜನರು ಸಹಾ ಪರಿಶುದ್ಧ ಬರಹವನ್ನು ಸ್ವಭಾಷೆಯಲ್ಲಿ ಓದುವದಕ್ಕೆ ಅಡ್ಡಿಯಾಗಲಿಲ್ಲಾ. ಅವನು ತಾನೆ ಈ ಒಳ್ಳೇ ಪುಸ್ತಕವನ್ನು ಪ್ರೀತಿ ಮಾಡುವವನಾಗಿದ್ದನು. ಅವನ ಚರಿತ್ರದಲ್ಲಿ ಒಂದು ಸಣ್ಣ ಕಥೆ ಏನಂದರೆ: ಒಂದಾನೊಂದು ದಿನ ಗೆಳೆಯರಾದ ಹುಡುಗರ ಸಂಗಡ ಆಡುತ್ತಿರುವಾಗ್ಯೆ, ಕೈಗೆ ಮುಟ್ಟದಂಥಾ ಹಲಿಗೆಯಿಂದ ಒಂದು ಪುಸ್ತಕ ತೆಗಿಯ ಬೇಕೆಂದಿದ್ದಾಗ, ಅವನ ಗೆಳೆಯರಲ್ಲಿ ಒಬ್ಬನು ಸತ್ಯವೇದದ ದೊಡ್ಡ ದಪ್ಪ ಪುಸ್ತಕವನ್ನು ತಂದು, ಅದರ ಮೇಲೆ ನಿಲ್ಲಲಿಕ್ಕೆ ಹೇಳಿದನು. ಆದರೆ ಎದ್‌ವರ್ದನು ಇದಕ್ಕೆ ಬಹಳ ಕೋಪಿಸಿ ಕೊಂಡು, ಅವನನ್ನು ಗದರಿಸಿ, ಅತಿ ಅಮೋಲ್ಯವಾದ ನಿಕ್ಷೇಪವೆಂದು ಧೃತಿ ಹೃದಯಗಳಲ್ಲಿ ಕಾಪಾಡ ತಕ್ಕದ್ದನ್ನು ಕಾಲಿನಿಂದ ತುಳಿಯಲಾಗದೆಂದು ಹೇಳಿದನು. ಅವನಿಗೆ ಪಟ್ಟಾಭಿಷೇಕವಾದ ಸಮಯದಲ್ಲಿ ಅವನು ಆಳ ತಕ್ಕ ೩ ರಾಜ್ಯಗಳ ಗುರ್ತಾಗಿ, ಮೂರು ಖಡ್ಗಗಳನ್ನು ಕೊಟ್ಟಾಗ, ಭಕ್ತಿಯುಳ್ಳ ಎದ್‌ವರ್ದನು ಮತ್ತೊಂದು ಬೇಕಲ್ಲಾ ಅಂದನು. ಅಲ್ಲಿದ್ದ ಶ್ರೀಮಂತರು ಯಾವದೆಂದು ಕೇಳಿ

ದ್ದಕ್ಕೆ, ಸತ್ಯವೇದ ಅಂದನು, ಯಾಕಂದರೆ ಇದು ಎಲ್ಲಾದಕ್ಕಿಂತ ಉತ್ತಮವಾದ ಆತ್ಮದ ಖಡ್ಗವಾಗಿದೆ ಎಂತ ಹೇಳಿದನು. ಆದರೆ ಅವನು ಕೆಲವು ವರುಷ ಮಾತ್ರವೆ ಆಳಿ, ತೀರಿ ಹೋದ ಮೇಲೆ, ಆತನ ಸಹೋದರಿಯಾದ ಮರೀಯ ರಾಣಿಯು ೧೫೫೩ರಲ್ಲಿ ಪಟ್ಟವೇರಿದಾಗ, ಮೊದಲು ಜನರಿಗೆ ಕೊಟ್ಟ ಅನುಜ್ಞೆಯನ್ನು ತೆಗದು ಹಾಕಿದಳು. ದೇವಾರಾಧನೆಯು ತಿರಿಗಿ ಲತೀನಭಾಷೆಯಲ್ಲಿ ಆಯಿತು. ಪ್ರಸಂಗಿಸುವದನ್ನೂ ಓದಿ ಹೇಳುವದನ್ನೂ ನಿಷೇಧಿಸಿದಳು. ಯಾರ ಹತ್ತರ ಇಂಗ್ಲಿಷು ಭಾಷೆಯಲ್ಲಿ ಸತ್ಯವೇದದ ಇಡೀ ಪುಸ್ತಕವಾಗಲಿ ಹೊಸ ಒಡಂಬಡಿಕೆಯಾಗಲಿ ಶಿಕ್ಕಿತೋ, ಅಂಥವನು ಪಾಷಂಡಿಗಳ ಶಿಕ್ಷೆಗೆ ಒಳಗಾದನು. ಆದರೂ ದೇಶದ ಆನೇಕ ಕಡೆಯಲ್ಲಿ ಅಲ್ಲಿ ಇಲ್ಲಿ ಕೆಲವರು ಶಿಕ್ಕಿದ ಸಮಯವನ್ನು ಉಪಯೋಗಿಸಿ, ತಿಳಿಯದ ಹಾಗೆ ಕೂಡಿ ಬಂದು, ದೇವರನ್ನು ಯಥಾರ್ಥ ಮನಸ್ಸಿನಿಂದಲೂ ಸತ್ಯದಿಂದಲೂ ಆರಾಧಿಸುತ್ತಾ ಇದ್ದರು. ಆದರೆ ಈ ಪ್ರಕಾರ ಮಾಡುವದು ಅತಿ ಕಂಟಕಕರವಾಗಿ ಇತ್ತು. ಹ್ಯಾಗೆಂದರೆ ತಿಳಿದು ಬಂದಲ್ಲಿ, ಅವರನ್ನು ಹಿಡಿದು ಕೆಲವರನ್ನು ಮರಣಕ್ಕೆ ಒಪ್ಪಿಸಿದರು. ಅವರ ಸಮಾಗಮಗಳನ್ನು ಹ್ಯಾಗೂ ನಿಲ್ಲಿಸಿ ಬಿಟ್ಟರು.

ಹಾಗೆ ಅಂಥವರು ಆಗಿಂದಾಗ್ಗೆ ೪೦ ರಿಂದ ೨೦೦ರ ವರೆಗೆ ಇದ್ದರು. ಆದರೂ ಅನೇಕರು ಒಟ್ಟು ಕೂಡಿ ಬರುವದಕ್ಕೆ ಹೆದರ ಬೇಕಾಯಿತು. ಈ ಹಿಂಸಾಕಾಲದಲ್ಲಿ ಅವರಿಗೆ ೫೫ ಪ್ರಸಂಗಿಗಳಿದ್ದರು. ಅವರಲ್ಲಿ ರಫ್ ಎಂಬವನನ್ನು ಸರ್ಕಾರದವರು ಹಿಡಿದು, ಮೇಲೆ ಹೇಳಿದ ಸ್ಮಿತ್‌ಫೀಲ್ಡದಲ್ಲಿ ಸುಟ್ಟು ಬಿಟ್ಟರು. ಲಿಚ್‌ಫೀಲ್ಡ್ ಕವೆಂಟ್ರಿ ಎಂಬಲ್ಲಿ ಮತ್ತೆ ಅಧ್ಯಕ್ಷನಾದ ಅವರ ಕಡೇ ಪ್ರಸಂಗಿಯಾದ ಬೆಂಥಮನು ಅನೇಕ ಸರ್ತಿ ತಪ್ಪಿಸಿ ಕೊಳ್ಳುವದು ಅತಿ ಕಷ್ಟವಾಯಿತು. ರಫ್ಫನು ೧೫೫೭ನೆ ದಶಂಬರ ೧೨ರಲ್ಲಿ ಆದಿತ್ಯವಾರ ದಿವಸ ಕೈಶೆರೆ ಬಿದ್ದನು. ಆ ದಿನ ಇಸ್ಲಿಂಗ್‌ತನಿನಲ್ಲಿ ಒಂದು ಆಟ ನಡಿಯಿತು. ಆ ಸಮಯದಲ್ಲಿ ಬಹಳ ಜನರು ಅಲ್ಲಿ ಕೂಡಿ ಬರುತ್ತಿರಲಾಗಿ, ವಿಶ್ವಾಸಿಗಳು ಇದು ಒಳ್ಳೆ ಸಮಯವೆಂದು ನೆನಸಿ, ತಾವು ಸಹಾ ಕೂಡಿ ಬಂದು, ರಾತ್ರಿಭೋಜನವನ್ನು ಆಚರಿಸುವದಕ್ಕೆ ನಿಶ್ಚೈಸಿದರು. ಆದರೆ ರಾಣಿಯ ಸದೃಕರಣೀಕನು ಅದನ್ನು ಕೇಳಿ, ಅಲ್ಲಿ ಕೂಡಿ ಬಂದವರನ್ನು ರಫ್ ಮತ್ತು ಸಭಾಸೇವಕ ಸಿಮ್‌ಸನ್ ಎಂಬವರ ಸಹಿತವಾಗಿ ಹಿಡಿಸಿ ತರಿಸಿದನು. ರಫ್ಫನನ್ನು ಲಂಡನಿನ ಅಧ್ಯಕ್ಷನ ನ್ಯಾಯಸ್ಥಾನಕ್ಕೆ ತಂದು, ರಾತ್ರಿಭೋಜನದಲ್ಲಿ ರೊಟ್ಟಿ ದ್ರಾಕ್ಷೇರಸಗಳು ಕ್ರಿಸ್ತನ ನಿಜಶರೀರ ರಕ್ತಗಳಾಗುವದಿಲ್ಲವೆಂದು ಹೇಳುತ್ತಾನೆಂದೂ, ಅವನು ಮೀಸಿಗೂ ಲತೀನ ಭಾಷೆಯ ದೇವಾರಾಧನೆಗೂ ಎದುರಾಡುತ್ತಾನೆಂದೂ, ರಾತ್ರಿಭೋಜನವನ್ನು ಉಭಯ ಆಕೃತಿಗಳಾಗಿ, ಅಂದರೆ ರೋಮಿಯರು ಮಾಡುವ ಹಾಗೆ ರೊಟ್ಟಿ ಮಾತ್ರ ಅಲ್ಲಾ, ದ್ರಾಕ್ಷೇ

ರಸ ಸಹಾ ಕೊಡುತ್ತಾನೆಂದೂ, ಅವನು ಪೋಪನಿಗೂ ಅವನ ಅಧಿಕಾರಪೂರ್ಣತೆಗೂ ಎದುರಾಡುತ್ತಾನೆಂದೂ, ಧರ್ಮದ ಕಾರಣದಿಂದ ರಾಜ್ಯ ಬಿಟ್ಟು ಪಲಾಯನ ಮಾಡಿದವರ ಸಂಗಡ ಕಾಗದಪತ್ರ ನಡಿಸಿ, ಅವರಿಂದ ಪುಸ್ತಕಗಳನ್ನು ಹೊಂದಿದ್ದಾನೆಂದೂ, ತಾನು ರೋಮಕ್ಕೆ ಹೋಗಿದ್ದೆ ಅಲ್ಲಿ ಒಳ್ಳೇದೇನೂ ಕಾಣಲಿಲ್ಲಾ, ಆದರೆ ಕೆಟ್ಟದ್ದು ಬಹಳ ಕಂಡಿದ್ದೇನೆ ಎಂದು ಹೇಳುತ್ತಾನೆಂದೂ, ಈ ಮುಂತಾದ ಅಪರಾಧಗಳನ್ನು ಅವನ ಮೇಲೆ ಹೊರಿಸಿದರು. ೧೦ ದಿನದ ಮೇಲೆ ದಶಂಬರ ೨೨ಲ್ಲು ಈ ಅಪರಾಧಗಳಿಗಾಗಿ ಅವನನ್ನೂ ಮರ್ಗರೇಥ ಮೊರಿಂಗ್ ಎಂಬ ಅವನ ಸಭೆಯ ಒಂದು ಸ್ತ್ರೀಯನ್ನೂ ಸ್ಮಿತ್‌ಫೀಲ್ಡದಲ್ಲಿ ಸುಟ್ಟು ಬಿಟ್ಟರು. ಅವನ ಸಭಾಸೇವಕನಾದ ಸಿಮ್‌ಸನನನ್ನು, ಮಿಕ್ಕಾದ ಸಭಾಸದರ ಹೆಸರುಗಳನ್ನು ತಿಳಿಸಬೇಕೆಂದು, ಬಹಳವಾಗಿ ಪೀಡಿಸಿದಾಗ್ಯೂ, ಅವನು ದೇವರಿಂದ ಬಲ ಹೊಂದಿ, ಸಮಸ್ತ ಕಷ್ಟಗಳನ್ನು ಧೈರ್ಯವಾಗಿ ತಾಳಿದನು. ಮಾರ್ಚ ೨೮ಲ್ಲು ಅವನನ್ನು ಅದೇ ಕಾಲದಲ್ಲಿ ಹಿಡಿದ ಹಘ್ ಫಾಕ್ಸ್ ಮತ್ತು ಯೋಹಾನ್ ದೆವನಿಶ್ ಎಂಬವರನ್ನೂ ಸ್ಮಿತ್‌ಫೀಲ್ಡದಲ್ಲಿ ಸುಟ್ಟು ಬಿಟ್ಟರು.

ಸಿಮ್‌ಸನನ ಹತ್ತರ ಸಭೆಯವರ ಹೆಸರುಗಳೂ ಸಮಾಗಮಗಳ ಸಂಗತಿಗಳೂ ಬರದಿಟ್ಟ ಒಂದು ಪುಸ್ತಕವಿತ್ತು. ಈ ಪುಸ್ತಕವನ್ನು ಅವನು ಸಾಧಾರಣವಾಗಿ ಕೈಯಲ್ಲಿ ಹಿಡು ಕೊಂಡು, ಇರುತ್ತಿದ್ದನು. ಆದರೆ ಅವರನ್ನು ಹಿಡಿಯುವ ಮುಂಚಿನ ಶುಕ್ರವಾರ, ರಘ್ಹನು ಒಂದು ವಿಶೇಷ ಕಾರಣದಿಂದ ಅದನ್ನು ಸಂಗಡ ತರಬಾರದೆಂದು ಸಿಮ್‌ಸನನನ್ನು ಬಹಳವಾಗಿ ಬೇಡಿ ಕೊಂಡನು. ಈತನು ಕಡೆಯಲ್ಲಿ ಒಪ್ಪಿ ಕೊಂಡು, ಆ ಪುಸ್ತಕವನ್ನು ರಘ್ ಥಾರೆಸೊನಿಯ ಹತ್ತರ ಇಡಲಿಕ್ಕೆ ಕೊಟ್ಟನು. ಈ ಪ್ರಕಾರ ಅದು ದೈವಘಟಣದಿಂದ ಪೋಪನವರ ಕೈಗೆ ತಪ್ಪಿತು. ಅಲ್ಲದಿದ್ದರೆ, ಎಷ್ಟು ಮಂದಿಗೆ ಅದೇ ಭಯಂಕರವಾದ ಮರಣವು ಪ್ರಾಪ್ತಿಯಾಗುತ್ತಿತ್ತು?

ಇದು ಮಾತ್ರವಲ್ಲ, ಈ ಸಜ್ಜನ ಕ್ರೈಸ್ತರ ಕೂಟದವರು ದೇವರ ಆಶ್ರಯವನ್ನು ಬೇರೆ ಅನೇಕ ವಿಧವಾಗಿಯೂ ಅನುಭವಿಸಿದರು. ಒಂದು ಸಾರಿ ಏನಾಯಿತಂದರೆ: ಅವರು ಒಂದಾನೊಂದು ದಿನ ಉಪಪಟ್ಟಣವಲ್ಲಿ ಒಂದು ಮನೆಯ ಮಾಳಿಗೆಯಲ್ಲಿ ಕೂಡಿ ಬಂದ ವರ್ತಮಾನವು ಜನರಿಗೆ ತಿಳಿಯ ಬಂದು, ಉದ್ಯೋಗಸ್ಥನಿಗೆ ಕರೆಕಳುಹಿಸಿದರು. ಆದರೂ ಅಷ್ಟರೊಳಗೆ ಈ ಕಂಟಕದ ಸಂಗತಿಯನ್ನು ತಿಳಿದ ಕೂಡಲೆ, ಆ ಕ್ಷಣದಲ್ಲಿ ದಿಕ್ಕಾಪಾಲಾಗಿ ಹೋದರು. ಅವರಲ್ಲಿ ಕೆಲವರು ಓಣಿ ದಾಟಿ ಹೋಗುವಾಗೈ ಬಹು ಕಠೋರ ಹಿಂಸಕನಾದ ಯೋಹಾನ್ ಅವೆಲೆಸ್ ಒಂದು ಸಣ್ಣ ದೇವಾಲಯದ ಹತ್ತರ ತಮ್ಮನ್ನು ಕಾದು ಕೊಂಡು ಇದ್ದದ್ದನ್ನು ಕಂಡರು. ಆದರೂ ಆಶ್ಚರ್ಯರೀತಿಯಾಗಿ ಅವನ ಕೈಗೆ ಸಹಾ ತಪ್ಪಿದರು. ಅನೇಕ ಸರ್ತಿ ಹೊಳೆಯಲ್ಲಿರುವ ನಗಗ

ಳಲ್ಲಿ ಕೂಡಿ ಬಂದರು. ಎರಡು ಮೂರು ಸರ್ತಿ ರತ್ನಿಲ್ಲಪ್ಪಕ್ಕೂ ರೆಡ್ರಿಪ್ಪಕ್ಕೂ ನಡುವೆ ಒಂದು ನಗದಲ್ಲಿ ಕೂಡಿ ಬಂದು, ಪ್ರಾರ್ಥನೆ ಪ್ರಸಂಗಗಳನ್ನು ಮಾಡಿ, ರಾತ್ರಿಭೋಜನವನ್ನು ಆಚರಿಸಿದರು. ಈ ಸುದ್ದಿ ಶತ್ರುಗಳಿಗೆ ತಿಳಿದು ಬಂದರೂ, ಅವರು ಬರುವಷ್ಟರೊಳಗೆ ಇವರು ತಪ್ಪಿದರು. ಒಂದು ಸಾರಿ ಪುಡ್ಡಿಂಗ್‌ಲೇನ್ ಎಂಬ ಕೇರಿಯಲ್ಲಿ ಸಮಾಗಮವು ಕೂಡಿ ಬಂದಾಗ, ಯೋಹಾನ್ ಅವೆಲೆಸ್ ಆ ಮನೆಗೆ ಬಂದು, ಮನೆಯಜಮಾನನ ಹತ್ತರ ಕೇಳ ಬೇಕೆಂದಿದ್ದನು. ಆದರೆ ದೇವರ ಕೃಪೆಯಿಂದ ಅವನ ಪ್ರಯತ್ನವು ನಿರರ್ಥಕವಾಯಿತು. ಅವರಲ್ಲಿದ್ದಾರೆಂಬದನ್ನು ತಿಳಿಯದೆ, ಬಂದ ಹಾಗೆ ಹೋದನು. ಮತ್ತೊಂದು ಸಾರಿ ತೆಮ್ಸ್‌ಕೇರಿಯ ಒಂದು ಮನೆಯಲ್ಲಿ ರಾತ್ರಿಯಲ್ಲಿ ಕೂಡಿ ಬಂದಲ್ಲಿಂದ ತಪ್ಪಿ ಹೋಗುವದು ಅತಿ ಕಷ್ಟವಾಗಿತ್ತು. ಹಗೆಗಾರರು ಬಾಗಲು ಮುಂದೆ ಮುತ್ತಿಗೆ ಹಾಕಿರುವದರಿಂದ, ತಪ್ಪಿಸಿ ಕೊಳ್ಳುವದು ಹ್ಯಾಗೆ ಎಂತ ಆಕಾಂತದಲ್ಲಿರುವ ಸಮಯದಲ್ಲಿ, ಅವರ ಸಂಗಡ ಇದ್ದ ನಾವಿಕನೊಬ್ಬನು ಮನೆಯ ಹಿಂದಕಡೆಯಿಂದ ಇಳಿದು, ಈಸಿ, ಸ್ವಲ್ಪ ದೂರದಲ್ಲಿದ್ದ ದೋಣಿಯನ್ನು ತಂದು, ಸಂಗಡಿಗರನ್ನೆಲ್ಲಾ ಅದರಲ್ಲಿ ಏರಿಸಿ, ಹೊಟ್ಟುಗಳಿಲ್ಲದಿದ್ದರೂ ಉಪಾಯದಿಂದ ಆಚೆ ಕಡೆಗೆ ಸೌತ್‌ವರ್ಕಿಗೆ ಮುಟ್ಟಿಸಿದನು. ಮತ್ತೊಂದು ಆಶ್ಚರ್ಯವೇನಂದರೆ: ಒಬ್ಬ ಮನುಷ್ಯನು ಸ್ನೇಹಿತನೆಂಬ ಹಾಗೆ ಮಾಡಿ ಕೊಂಡು, ಅವರೊಳಗೆ ಶೇರಿದನು. ಅವರ ಹೆಸರುಗಳನ್ನು ಎಲ್ಲಾ ಬರ ಕೊಂಡು, ಅವರಲ್ಲಿ ಏನೇನು ನಡಿಯುತ್ತದೆ ಎಂಬದನ್ನೆಲ್ಲಾ ವಿಚಾರಿಸಿ, ಹಗೆಗಾರರಿಗೆ ತಿಳಿಸ ಬೇಕೆಂಬದೆ ಅವನ ಆಲೋಚನೆ ಇತ್ತು. ಆದರೆ, ಒಂದಾನೊಂದು ದಿನ ಅವರ ಮಧ್ಯದಲ್ಲಿ ಇದ್ದಾಗ, ದೇವರು ಅವನ ಹೃದಯವನ್ನು ಮುಟ್ಟಿದನು. ತಾನು ಮಾಡಿದ್ದಕ್ಕೆಲ್ಲಾ ದುಃಖ ಮಾನಸಾಂತರ ಪಟ್ಟು, ಅಯ್ಯೋ ಎಂತ ಹೇಳಿ, ತನ್ನ ಆಲೋಚನೆಯನ್ನು ಅರಿಕೆ ಮಾಡಿ, ಮುಂಚೆ ಕಪಟದಿಂದಾದರೆ ಈಗ ಸತ್ಯ ಹೃದಯದಿಂದ ಖಿಕ್ತರ ಪಕ್ಷದವನಾದನು.

ರಪ್ಪನನ್ನು ಸುಡುವ ಮುಂಚೆ ಸಪ್ಟೆಂಬರ ೧೭ಲ್ಲು ಔಸ್ತರ್ ಎಂಬವನನ್ನು ಹೆಂಡತಿಯ ಸಹಿತವಾಗಿಯೂ ಬೇರೆ ಇಬ್ಬರ ಸಹಿತವಾಗಿಯೂ ಸ್ಮಿತ್‌ಫೀಲ್ಡದಲ್ಲಿ ಸುಟ್ಟು ಬಿಟ್ಟಿದ್ದರು. ಪ್ರಸಂಗಿ ರಪ್ಪನು ಆ ಸಮಯದಲ್ಲಿ ಅಲ್ಲಿ ಇದ್ದನು. ಮನೆಗೆ ತಿರಿಗಿ ಹೋಗುವಾಗ್ಯೆ, ತನ್ನ ಪರಿಚಿತನಾದ ಫೆರ್‍ರರ್ ಎಂಬ ಒಬ್ಬ ಧೊರೆಯನ್ನು ಕಂಡನು. ಈತನು ಎಲ್ಲಿಂದ ಬರುತ್ತೀರಿ ಎಂದು ಕೇಳಿದ್ದಕ್ಕೆ, ನಾನು ಒಂದು ಸ್ಥಳಕ್ಕೆ ಹೋಗಿದ್ದೆ, ಏನು ಬಂದರೂ ಏನು ಹೋದರೂ, ಅಲ್ಲಿ ತಪ್ಪುವದಕ್ಕೆ ನನಗೆ ಮನಸ್ಸು ಇರಲಿಲ್ಲ, ಅಂದನು. ಅದೆಲ್ಲಿ ಅಪ್ಪಾ, ಎಂದು ಫೆರ್‍ರರ್ ಧೊರೆಯು ಕೇಳಿದ್ದಕ್ಕೆ, ರಪ್ಪನು, ನಾನು ಮಾರ್ಗ ಗೊತ್ತು ಮಾಡಿ ಕೊಳ್ಳುವಲ್ಲಿಗೆ ಹೋಗಿದ್ದೆ ಅಂತ ಹೇಳಿ, ಔಸ್ತರನನ್ನು ಸುಟ್ಟು ಬಿ

ಡುವದನ್ನು ಕಂಡು ಬಂದೆ, ಅಂದನು. ಮಾರ್ಗ ಗೊತ್ತು ಮಾಡಲಿಕ್ಕೆ ಹೋದ್ದೆಂಬನು ಸತ್ಯವಾಯಿತು. ಹ್ಯಾಗೆಂದರೆ, ೩ ತಿಂಗಳ ಮೇಲೆ, ಅದೇ ಸ್ಥಳದಲ್ಲಿ ಅವನು ತನ್ನ ಜೀವವನ್ನು ಅರ್ಪಿಸ ಬೇಕಾಯಿತು.

ಮರೀಯ ರಾಣಿಯ ಕಾಲದಲ್ಲಿ ಸುಡಲ್ಪಟ್ಟ ಮೊದಲನೆಯವರಲ್ಲಿ ಸಾರ್ನ್‌ಬಿಚ್ಚದ ಮಗ್ಗಗಾರ ಥೋಮ ತಾಮ್‌ಕಿನ್ಸ್ ಎಂಬವನು ಒಬ್ಬನಾಗಿ ಇದ್ದನು. ಈತನು ಮಹಾಭಕ್ತಿಯುಳ್ಳವನಾಗಿದ್ದು, ಆ ಕಾಲದ ಒಳ್ಳೇ ಮರ್ಯಾದೆಯ ಪ್ರಕಾರ, ಯಾರಾದರೂ ನೇಯುವದಕ್ಕೆ ನೂಲು ತಂದು ಕೊಟ್ಟಾಗ, ಅವರ ಸಂಗಡ ಪ್ರಾರ್ಥನೆ ಮಾಡುವನು. ಆದರೆ ಇದು ಬರೇ ತೋರಿಕೆಯ ಭಕ್ತಿಯಾಗಿರಲಿಲ್ಲಾ, ಅವನ ನಡತೆಯಲ್ಲಾ ಸಮಸ್ತ ಕಾರ್ಯಗಳಲ್ಲಿಯೂ ಇದಕ್ಕೆ ಒಪ್ಪಿತು. ಅವನು ಸಹಾ ರೋಮಿಯ ಸಭೆಯ ವಿರೋಧಿ ಎಂದು ಅಧ್ಯಕ್ಷ ಬೊನ್ನರನಿಗೆ ದೂರು ಬಂದು ಮುಟ್ಟಿದಾಗ, ಇವನು ಅವನನ್ನು ಕೈಶೆರೆ ಹಿಡಿದು ಬಂಧನದಲ್ಲಿ ಇಟ್ಟು, ಆರು ತಿಂಗಳುಗಳ ವರೆಗೆ ತಿರಿಗಿ ತಿರಿಗಿ ವಿಚಾರಿಸುತ್ತಾ ಇದ್ದನು. ಅಧ್ಯಕ್ಷನು ತನ್ನ ಸಂತಾಪ ತಾಳಲಾರದೆ, ಒಂದು ಸಾರಿ ಅವನ ಗಡ್ಡದ ಒಂದು ಭಾಗವನ್ನು ಎಳದು ಹರದು ಪೀಡಿಸಿದನು. ಆದರೂ ಈ ಒಳ್ಳೇ ಮನುಷ್ಯನ ಮನಸ್ಸನ್ನು ಸ್ವಲ್ಪವಾದರೂ ಚಂಚಲ ಮಾಡಲಿಕ್ಕೆ ಆಗದೆ ಹೋದಾಗ, ಮುಂದಿನ ಮರಣದ ರುಚಿಯು ಹ್ಯಾಗೆಂದು ಈಗಲೆ ತಿಳಿಸುತ್ತೇನೆ ಅಂದನು. ಹಾಗೆಯೆ ಒಂದು ದಿನ ಕೆಲವು ಪಾರಮಾರ್ಥಿಕರು ತನ್ನ ಬಳಿಯಲ್ಲಿ ಕೂಡಿ ಬಂದಾಗ, ತಾಮ್‌ಕಿನ್ಸನನ್ನು ಕರಿಸಿದನು. ಒಂದು ದೊಡ್ಡ ಮೇಣಬತ್ತಿಯು ಮೇಜಿನಲ್ಲಿ ಉರಿಯುತ್ತಾ ಇತ್ತು. ಅಧ್ಯಕ್ಷನು ಈ ಮಗ್ಗಗಾರನ ಬೆರಳು ಹಿಡಿದು, ತಕ್ಕಷ್ಟು ಕಾಲ ಅವನ ಕೈಯನ್ನು ಉರಿಯುವ ಬತ್ತಿಯ ಮೇಲೆ ಹಿಡಿದನು. ತಾಮ್‌ಕಿನ್ಸನು ಬೊನ್ನರನ ರೌದ್ರವನ್ನು ಕಂಡು, ಮರಣವು ತನಗೆ ಸಮೀಪವಾಯಿತೆಂದು ನೆನಸಿ, "ಓ ಕರ್ತನೆ, ನನ್ನ ಆತ್ಮವನ್ನು ನಿನ್ನ ಕೈಗಳಿಗೆ ಒಪ್ಪಿಸಿ ಕೊಡುತ್ತೇನೆ" ಎಂದು ದೇವರಿಗೆ ಪ್ರಾರ್ಥಿಸಿದನು. ಈ ಪ್ರಕಾರ ಕೈ ಸುಡುತ್ತಿರುವಾಗ್ಯೆ ದೇವರು ತಂನ ಆತ್ಮವನ್ನು ಬಲಗೊಳಿಸಿ, ತನಗೆ ವೇದನೆ ಹತ್ತದ ಹಾಗೆ ಮಾಡಿದನೆಂದೂ, ಕೈ ಅಲ್ಲಾಡಿಸದೆ ನಿಲ್ಲುವದಕ್ಕೆ ತನಗೆ ಬಲ ಕೊಟ್ಟನೆಂದೂ, ಕಡೆಯಲ್ಲಿ ನರನಾಡಿಗಳು ಮುದ್ದೆಯಾಗಿ ರಕ್ತವು ಹಾರಿ ಒಬ್ಬ ಪುರೋಹಿತನ ಮುಖದ ಮೇಲೆ ಬಿದ್ದಾಗ, ಈತನ ಅಪೇಕ್ಷೆಯಿಂದ ಅಧ್ಯಕ್ಷನು ತನ್ನ ಕೈ ಬಿಟ್ಟನೆಂದೂ, ಮತ್ತೆ ತಾಮ್‌ಕಿನ್ಸನು ಸ್ನೇಹಿತರಿಗೆ ತಿಳಿಸಿದನು. ೧೫೫೫ನೆ ಮಾರ್ಚಿ ೧೬ರಲ್ಲಿ ಬೆಳಿಗ್ಯೆ ಆರು ಘಂಟೆಗೆ ಸ್ಮಿತ್‌ಫೀಲ್ಡದಲ್ಲಿ ತಾಮ್‌ಕಿನ್ಸನನ್ನು ಸುಟ್ಟು ಬಿಟ್ಟರು. ಆದರೆ ಅವನು ಆಶ್ಚರ್ಯಕರವಾದ ತಾಳ್ಮೆಯಿಂದಲೂ ಧೈರ್ಯದಿಂದಲೂ ದೇವರ ನಂಬಿಕೆಯಲ್ಲಿ ಎಲ್ಲಾ ಸೈರಿಸಿದನು.

ಅಧ್ಯಕ್ಷ ಹೂಪರನನ್ನು ಗ್ಲಾಸ್ತರದಲ್ಲಿ ಸುಟ್ಟು ಬಿಡುವ ಮುಂಚಿನ ರಾತ್ರಿಯಲ್ಲಿ, ಥಾಮ ದ್ರಾರಿ ಎಂಬ ಒಬ್ಬ ಕುರುಡ ಹುಡುಗನು ಆತನ ಭೇಟಿ ಮಾಡುವದಕ್ಕೆ ಇಚ್ಛೈಸಿ, ಅಪ್ಪಣೆ ಹೊಂದಿದನು. ಅಧ್ಯಕ್ಷನು ಅವನ ಸಂಗಡ ಮಾತಾಡಿ, ಕ್ರಿಸ್ತನ ವಿಶ್ವಾಸದಲ್ಲಿ ನೆಲೆಯಾಗಿದ್ದಾನೆಂದು ಕಂಡು, ಅವನಿಗೆ ಹೇಳಿದ್ದು: "ಅಯ್ಯೋ, ಬಡ ಹುಡುಗನೆ, ದೇವರು ನಿನ್ನ ಕಣ್ಣಿನ ಬೆಳಕನ್ನು ತೆಗದಿದ್ದಾನೆ, ಆದರೆ ಯಾಕೆಂತ ಆತನೆ ಬಲ್ಲ; ಆದರೆ ಮತ್ತೊಂದು ಅಧಿಕ ಬೆಲೆಯುಳ್ಳ ಬೆಳಕನ್ನು ನಿನಗೆ ದಯಮಾಡಿದ್ದಾನೆ. ಆತನು ನಿನ್ನ ಪ್ರಾಣವನ್ನು ಜ್ಞಾನ ವಿಶ್ವಾಸಗಳ ಕಣ್ಣಿಸಿಂದ ಶೃಂಗರಿಸಿದ್ದಾನೆ. ಈ ದೃಷ್ಟಿಯನ್ನು ಕಳಕೊಳ್ಳದ ಹಾಗೆ ದೇವರಿಗೆ ಯಾವಾಗಲೂ ಪ್ರಾರ್ಥಿಸುವದಕ್ಕೆ, ಆತನೆ ನಿನಗೆ ಕೃಪೆ ಕೊಡಲಿ! ಇದನ್ನು ಕಳಕೊಂಡರೆ ಶರೀರದಲ್ಲಿಯೂ ಆತ್ಮದಲ್ಲಿಯೂ ಕುರುಡನಾಗಿ ಹೋದೀ ಅಲ್ಲಾ!" ಮರುವರುಷ ಈ ಕುರುಡ ಹುಡುಗನು ಅಧ್ಯಕ್ಷ ಹೂಪರನನ್ನು ಹಿಂಬಾಲಿಸ ಬೇಕಾಯಿತು. ಆ ತಾಲೂಕಿನ ಕಾರ್ಯಸ್ಥನು ಈ ಬಡ ಹುಡುಗನ ಕಡೇ ವಿಚಾರಣೆಯ ಸಮಯದಲ್ಲಿ ಅಲ್ಲಿ ಇದ್ದನು. ಅವನು ಹೇಳುವದೇನಂದರೆ: "ಈ ಹುಡುಗನು, ರೊಟ್ಟಿಯು ಕ್ರಿಸ್ತನ ಶರೀರವಾಗಿ ಹೋಗುವದಿಲ್ಲವೆಂದು ನೆನಸುತ್ತಾನೆಂಬದನ್ನು ಕರಣೀಕ ಪಂಡಿತ ವಿಲಿಯಮ್ಸನು ತಿಳಿದು, ಥಾಮ ದ್ರಾರಿಗೆ ಕೇಳಿದ್ದು: "ನೀನು ಪಾಷಂಡಿ, ನಿನ್ನನ್ನು ಸುಟ್ಟು ಬಿಡತಕ್ಕದ್ದು. ನಿನಗೆ ಯಾರು ಈ ಪಾಷಂಡಿ ಬೋಧನೆಯನ್ನು ಕಲಿಸಿ ಕೊಟ್ಟರು?" ಹುಡುಗನು, ಕರಣೀಕರೆ, ತಾವೇ ಅಂದನು. "ನಾನು! ಯಾವಾಗಲೋ? ಪರಲೋಕದಾಣೆ" ಎಂದು ಭಯದಿಂದ ಕೇಳಿದನು. ಅದಕ್ಕೆ ಹುಡುಗನು, ಓ ಅಲ್ಲಿ, ಆ ಸ್ಥಳದಲ್ಲಿ ಎಂದು ಹೇಳಿ, ಸ್ಥಳ ತಕ್ಕಷ್ಟು ನೆನಪಿಗೆ ತಂದು, ಪ್ರಸಂಗಪೀಠಕ್ಕೆ ಬೆರಳು ತೋರಿಸಿದನು. ನಿನಗೆ ಯಾವಾಗ ಹಾಗೆ ಕಲಿಸಿ ಕೊಟ್ಟೆನೋ, ಅಂದಾಗ, ಹುಡುಗನು ಹೇಳಿದ್ದು: ನನಗೆ ಮಾತ್ರವಲ್ಲ, ಕೇಳುವವರೆಲ್ಲರಿಗೆ ಪ್ರಸಾದದ ವಿಷಯ ಪ್ರಸಂಗ ಮಾಡಿದಾಗ, ಹಾಗೆ ಕಲಿಸಿ ಕೊಟ್ಟಿರಿ. ಪ್ರಸಾದವನ್ನು ಆತ್ಮಿಕವಾಗಿ ವಿಶ್ವಾಸದಲ್ಲಿ ತಕ್ಕೊಳ್ಳ ಬೇಕು, ಪೋಪನವರ ಹಾಗೆ ಮಾಂಸವಾಗಿ ನಿಜವಾಗಿ ಅಲ್ಲಾ ಎಂದು ಹೇಳಿದಿರಿ ಅಲ್ಲವೋ? ಅಂದನು. ಹುಡುಗನ ಮಾತು ಸತ್ಯವಾಗಿ ಇತ್ತು. ಹ್ಯಾಗೆಂದರೆ, ಸುವಾರ್ತಾಪ್ರಿಯನಾದ ಅರಸು ಎಡ್‍ವರ್ಡನ ಕಾಲದಲ್ಲಿ ಪಂಡಿತ ವಿಲಿಯಮ್ಸನು ಆ ಪ್ರಕಾರ ಬೋಧಿಸುತ್ತಾ ಇದ್ದನು. ಆದರೆ ಈ ಲಜ್ಜೆ ಇಲ್ಲದ ದುರ್ಮಾರ್ಗಿಯು ಯಾವ ಉತ್ತರ ಕೊಟ್ಟನಂದರೆ: "ಒಳ್ಳೇದು, ನೀನು ಸಹಾ ನನ್ನ ಹಾಗೆಯೆ ಮಾಡು, ಆಗ್ಯೆ ನೀನು ಸಹಾ ನನ್ನ ಹಾಗೆಯೆ ಜೀವದಿಂದುಳಿದು, ಅಗ್ನಿ ಮರಣಕ್ಕೆ ತಪ್ಪ ಬಹುದು" ಅದಕ್ಕೆ ಹುಡುಗನು "ನೀವು ದೇವರಿಗೂ, ಆತನ ವಾಕ್ಯ

ಕ್ಕೂ, ನಿಮ್ಮ ಮನಸ್ಸಾಕ್ಷಿಗೂ, ಬೇಕಾದರೆ, ಅಪಹಾಸ್ಯ ಮಾಡಿರಿ, ಆದರೆ ನಾನು ಹಾಗೆ ಮಾಡಲಾರೆನು" ಎಂದು, ಅಂದದಕ್ಕೆ, ಕರಣೀಕನು: "ಹಾಗಾದರೆ ದೇವರು ನಿನಗೆ ಕೃಪೆ ಕಾಡಲಿ, ಯಾಕಂದರೆ ನಾನು ನಿನ್ನ ಮೇಲೆ ಮರಣಶಿಕ್ಷೆಯನ್ನು ನಿರ್ಣೈಸುವೆನು" ಅಂದನು. ಹುಡುಗನು ದೇವರ ಚಿತ್ತವಾಗಲಿ ಅಂದನು. ಆ ಮಠದ ಕಾರ್ಯಸ್ಥನು, ಇಲ್ಲಿ ನಡದದ್ದನ್ನು ಕಂಡು, ಹೃದಯ ಕಲ್ಲೋಲವಾಗಿ, ಮಧ್ಯದಲ್ಲಿ ಹೇಳಿದ್ದೇನಂದರೆ: "ಛೀ, ಎಂಥಾ ನಾಚಿಕೆ, ನೀವು ನಿಮ್ಮನ್ನೆ ಆಜ್ಞೆನಿರ್ಣೈಸಲಿಕ್ಕಿದ್ದೀರೋ? ಬೇಡಾ, ಮಠಾಧ್ಯಕ್ಷನು ತೀರ್ಪು ಮಾಡಲಿ!" ಆದರೆ ಈ ಕಠಿಣ ಹೃದಯದ ಅಧ್ಯಕ್ಷನು ಹೇಳಿದ್ದು: "ಹಾಗಲ್ಲಾ, ನಾನು ನಿಯಮಕ್ಕೆ ವಿಧೇಯನಾಗಿ, ನಂನ ಉದ್ಯೋಗಕ್ಕೆ ಅನುಸಾರವಾಗಿ, ನಾನೇ ತೀರ್ಪು ಮಾಡುವೆನು." ಈ ಬಡ ಕುರುಡ ಹುಡುಗನು ಮರಣದ ತೀರ್ಪನ್ನು ಹೊಂದಿ, ಅಗ್ನಿಜ್ವಾಲೆಗಳಲ್ಲಿ ಭಸ್ಮವಾದನು.

ಮರಣಸಾಕ್ಷಿಯಾದ ಯೋಹಾನ್‌ಲೋರೆನ್ಸನು ಕಾಲ್ಚೆಸ್ತರದಲ್ಲಿ ಸುಡಲ್ಪಡುವ ಮುಂಚೆ, ಅವನು ಪಟ್ಟ ದೀರ್ಘಕಾಲದ ದುಃಖ ಕಷ್ಟಗಳಿಂದ ಅವನ ಕಾಲುಗಳು ಹುಣ್ಣಿನಿಂದ ತುಂಬಾಗಿ ನಿರ್ಬಲವಾಗಿರುವದರಿಂದ ಪೋಪನವರು ಅವನನ್ನು ಒಂದು ಕುರ್ಚಿಯಲ್ಲಿ ಕುಂಡ್ರಿಸಿ, ಅಗ್ನಿಚಿತಿಗೆ ಹೊತ್ತುಕೊಂಡು ಹೋಗ ಬೇಕಾಯಿತು, ಅವನು ಈ ಕುರ್ಚಿಯಲ್ಲಿ ಕೂತಿರುವಾಗ್ಯೆ, ಒಂದು ಚಿಕ್ಕ ಮಕ್ಕಳ ಗುಂಪು ಉರಿಯುವ ಬೆಂಕಿಯ ಬಳಿಗೆ ಬಂದು, ಕಿರಿಗಿ ಕಿರಿಗಿ ಹೇಳಿದ್ದೇನಂದರೆ: "ಕರ್ತನೇ ನಿನ್ನ ವಾಗ್ದತ್ತವನ್ನು ಕೈಕೊಂಡು, ನಿನ್ನ ದಾಸನನ್ನು ಬಲ ಪಡಿಸು." ಈ ಪ್ರಕಾರ ದೇವರು ಕೂಸುಗಳ ಬಾಯಿಯಿಂದ ಸ್ತೋತ್ರವನ್ನು ಸಿದ್ಧ ಮಾಡಿದನು.

ಲೋರೆನ್ಸ್ ಸಾಂದರ್ಸ್ ಎಂಬವನನ್ನು ೧೫೫೫ರಲ್ಲಿ ಚಿತಿಗೆ ಎಳಕೊಂಡು ಬಂದಾಗ, ಅವನು ಅದಕ್ಕೆ ಮುದ್ದಿಟ್ಟು ಹೇಳಿದ್ದೇನಂದರೆ: "ಕ್ರಿಸ್ತನ ಕ್ರೂಜೆಯೆ, ಸ್ವಾಗತ! ನಿತ್ಯಜೀವವೆ, ಸ್ವಾಗತ!" ಈ ಪ್ರಕಾರ ಹೇಳಿ ಮರಣದೊಳಗೆ ಹೊಕ್ಕನು.

ಸ್ವಲ್ಪ ಕಾಲದ ಮೇಲೆ ಸುವಾರ್ತಾಪಕ್ಷದವನಾದ ಬಾರ್ಬರ್ ಎಂಬವನಿಗೆ ಅಗ್ನಿಮರಣವನ್ನು ನಿರ್ಣೈಸಿದರು. ಶಿಕ್ಷೆಯ ದಿನವು ಬೆಳಗಿತು. ಈ ಮರಣಸಾಕ್ಷಿಯನ್ನು ಸ್ಮಿತ್‌ಫೀಲ್ಡಿಗೆ ತಂದು, ಚಿತಿಯ ಖಂಬಕ್ಕೆ ಕಟ್ಟಿದರು, ಕಟ್ಟಿಗೆಯನ್ನು ಅವನ ಸುತ್ತಲೂ ಒಟ್ಟಿದರು. ಮಾರೆಕಾರನು ಬೆಂಕಿ ಹಚ್ಚುವದಕ್ಕೆ ಸಿದ್ಧನಾಗಿ, ಅಪ್ಪಣೆ ಮಾತ್ರವೆ ಕಾದು ಕೊಂಡಿದ್ದನು. ಈ ನಿಮಿಷದಲ್ಲಿಯೆ ಮರೀಯ ರಾಣಿಯ ಮರಣದ ವರ್ತಮಾನ ಬಂದು ಮುಟ್ಟಿತು. ಹೀಗಿರಲಾಗಿ, ಈಗ ರಾಣಿಯಾದ ಎಲಿಸಬೇತಳ ಅಪ್ಪಣೆ ವಿನೆಂದು ತಿಳಿಯುವ ವರೆಗೆ ಉದ್ಯೋಗಸ್ಥರು ಕಾರ್ಯ ಮುಂದರಿಸದೆ ಇರುವದು ಅವಶ್ಯವಾಯಿತು. ಆದರೆ ಎಲಿಸಬೇತಳು ಸುವಾರ್ತಾಪಕ್ಷದವರಿಗೆ ಆಶ್ರಯ ಕಾದು

ವವಳಾಗಿ ಇದ್ದದರಿಂದ, ಬಾರ್ಬರನಿಗೆ ಬಿಡುಗಡೆಯಾಯಿತು. ಈ ಪ್ರಕಾರ ಮರಣದ ದಾಡೆಯಿಂದ ತಪ್ಪಿದೆನೆಂದು ನೆನಸಿ, ಉರಿಯುವ ಬೆಂಕಿಯಿಂದ ಎಳದು ತೆಗದ ಕೊಳ್ಳಿಯಂತೆ ತನಗೆ ಆಯಿತೆಂದು ಹೇಳಿ, ಈ ಆಶ್ಚರ್ಯಕರವಾದ ರಕ್ಷಣೆಯ ಜ್ಞಾಪಕಾರ್ಥವಾಗಿ, ಬಾರ್ಬರನು ಎಲಿಸಬೇತ ರಾಣಿಯ ಚಿತ್ರವನ್ನೂ ಸುತ್ತಲೂ ಯೋಗ್ಯವಾದ ಅಲಂಕಾರಗಳನ್ನೂ ಮಾಡಿಸಿ, ತನ್ನ ಮರಣಪತ್ರದಲ್ಲಿ ಈ ಚಿತ್ರವು ತನ್ನ ಕುಟುಂಬದ ಉತ್ತರಾಧಿಕಾರಿಗಳ ಹಿರೇ ಯಜಮಾನನಲ್ಲಿ ಮುಂದಿನ ಕಾಲಕ್ಕೆ ಗುರ್ತಾಗಿ ಇರ ತಕ್ಕದ್ದೆಂದು ನಿಶ್ಚೈಸಿದನು.

ಅಂಗ್ಲ ದೇಶವಲ್ಲಿ ಅಧ್ಯಕ್ಷಾಧಿಕಾರದ ಕ್ರೈಸ್ತಸಭೆಯನ್ನು ಎಲಿಸಬೇತ ರಾಣಿಯೆ ಪೂರ್ಣವಾಗಿ ಸ್ಥಾಪಿಸಿದವಳಾದಳು. ಈಕೆ ಸಹಾ ಮರೀಯ ರಾಣಿಯ ಹಾಗೆಯೆ ಅರಸು ೮ನೆ ಹೆನ್ರಿಯ ಮಗಳಾಗಿದ್ದಳು. ತಾಯಿಯ ಹೆಸರು ಅನ್ನಬೋಲಿನ್ ಎಂದು ಇತ್ತು. ಎಲಿಸಬೇತಳು ೩ ವರುಷ ಪ್ರಾಯ ಹೊಂದುವ ಮುಂಚೆ, ಎಳೆ ಕೂಸಾಗಿರುವಾಗಲೆ, ಮರಣದಿಂದ ತಾಯಿಯನ್ನು ಕಳಕೊಂಡಳು. ಮಹಾಧ್ಯಕ್ಷನಾದ ಕ್ರೆನ್ಮರನ ಪರಾಮ್ಮರಿಕೆಯಿಂದ ಅವಳು ಪುನಃಸ್ಥಾಪನೆಯ ಮಾರ್ಗದಲ್ಲಿ ಪಾಲನೆಯಾಗಿ, ವಿದ್ಯೆಗಳಲ್ಲಿ ಸಹಾ ಬಹು ಪ್ರಯಾಸ ತಕ್ಕೊಂಡು, ಎಲ್ಲಾ ವಿಧವಾಗಿಯೂ ಬುದ್ಧಿವಂತೆಯಾದಳು. ಅವಳು ಲತೀನ ಗ್ರೇಕ ಭಾಷೆಗಳಲ್ಲಿ ಇರುವ ಗ್ರಂಥಗಳನ್ನು ಓದ ಶಕ್ತಳಾಗಿ ಇದ್ದಳು. ಸವತಿಸಹೋದರಿಯಾದ ಮರೀಯ ರಾಣಿಯಿಂದ ಅನೇಕ ಕಷ್ಟಗಳನ್ನು ಅನುಭವಿಸಿ, ಎರಡು ಸಾರಿ ಬಂಧನದಲ್ಲಿ ಬಿದ್ದು, ಕಡೆಯಲ್ಲಿ ಬಿಡುಗಡೆ ಹೊಂದಿ, ಅಂದಿನಿಂದ ಅರಮನೆಯ ಗೋಜಿಗೆ ಹೋಗದೆ, ಹೆಟ್‌ಫೀಲ್ಡ್ ಎಂಬ ಭೂಮಿಮನೆಯಲ್ಲಿ ಕಾಲಕ್ಷೇಪ ಮಾಡಿ ಕೊಂಡಿದ್ದಳು. ಅಲ್ಲಿರುತ್ತಿರುವಾಗ ಮರೀಯಳು ತೀರಿ ಹೋಗಿ, ತಾನು ಪಟ್ಟದ ಬಾಧ್ಯಸ್ಥಳಾದಳೆಂಬ ವರ್ತಮಾನ ಹೊಂದಿದಳು. ಆಗಲೆ ಅವಳು ಮೊಣಕಾಲೂರಿ ದೇವರಿಗೆ ಸ್ತೋತ್ರ ಮಾಡಿ, ಹೇಳಿದ್ದೇನಂದರೆ: "ಇದು ಕರ್ತನ ಕೆಲಸ, ನಮ್ಮ ಕಣ್ಣಿಗೆ ಆಶ್ಚರ್ಯಕರವಾಗಿದೆ." ಬಹು ವಿದ್ಯಾವಂತೆಯಾಗಿಯೂ, ದೌರ್ಭಾಗ್ಯದಿಂದ ಕಷ್ಟವೇನೆಂಬದನ್ನು ಅನುಭವದಿಂದ ತಿಳಿದವಳಾಗಿಯೂ, ತನ್ನ ಪ್ರಜೆಯನ್ನು ಸುಖವಾಗಿ ಇರಿಸ ಬೇಕೆಂಬ ಸ್ಥಿರವಾದ ಮನೋಭಿಪ್ರಾಯ ಉಳ್ಳವಳಾಗಿಯೂ, ಪರಸ್ಪರ ಉಗ್ರವಾಗಿ ಎದುರು ನಿಲ್ಲುವ ಪಕ್ಷಗಳನ್ನು ಯೇಕೀಕರಿಸ ಬೇಕೆಂಬ ಆಲೋಚನೆಯಲ್ಲಿಯೂ, ರಾಜ್ಯಭಾರ ಆರಂಭಿಸಿದಳು. ಆಗ್ಯೆ ಮರೀಯಳ ಕಾಲದಿಂದ ಅನೇಕ ರೋಮಿಯ ಯಾಜಕರು ಪುನಃಸ್ಥಾಪನೆಯ ಶತ್ರುಗಳಿದ್ದರು. ಅತ್ತಕಡೆಯಲ್ಲಿ ಆ ಕಾಲದ ಹಿಂಸೆಗಳಿಂದ ಮನಸ್ಸಂತಾಪದಲ್ಲಿರುವ ಜನರು ಬಲಾತ್ಕಾರದಿಂದಲಾದರೂ ಪುನಃಸ್ಥಾಪನೆಯನ್ನು ಸ್ಥಿರ ಮಾಡುವದಕ್ಕೆ ನೋಡಿದರು.

ಎಲಿಸಬೇತಳು ಬಹು ಬಲ ಜ್ಞಾನಗಳಿಂದಲೂ, ನಯಭಯದಿಂದಲೂ, ಆತ್ಮಿಕ ಕಾರ್ಯಗಳಲ್ಲಿ ಪತ್ರಾಯ ನಡಿಯ ಬಾರದೆಂದು ಪ್ರಕಟ ಮಾಡಿ, ಇತ್ತ ಕಡೆಯಲ್ಲಿ ವಿಶ್ವಾಸದ ದೆಸೆಯಿಂದ ಹಿಂಸೆ ಪಟ್ಟು ಬಂಧನದಲ್ಲಿ ಬಿದ್ದವರನ್ನೆಲ್ಲಾ ಬಿಡುಗಡೆ ಮಾಡಿದಳು, ಅತ್ತ ಕಡೆಯಲ್ಲಿ ಹಿಂಸಕರಿಗೆ ಸಹಾ ಎಲ್ಲರಿಗೂ ಅಭಯ ಕೊಟ್ಟು ಕ್ಷಮಿಸಿದಳು. ಪೋಪನ ಸಂಗಡ ಸಹಾ ಸಮಾಧಾನದಲ್ಲಿಯೆ ಇರ ಬೇಕೆಂದು ಪ್ರಯತ್ನ ಮಾಡುತ್ತಿರುವಾಗ್ಯೆ, ಈತನು, ನಾನು ಒಪ್ಪದಂಥಾ ವಿವಾಹದ ಹೆಂಡತಿಯಲ್ಲಿ ಹುಟ್ಟಿದವಳಾಗಿ ಇಂಗ್ಲಿಷು ಸಿಂಹಾಸನಕ್ಕೆ ಎಷ್ಟಾದರೂ ಬಾಧ್ಯಸ್ಥಿಕೆ ಇಲ್ಲದವಳಾಗಿದ್ಧಿ ಎಂದು ಹೇಳಿದಾಗ, ಎಲಿಸಬೇತಳು ಪೋಪನ ಸಂಸರ್ಗವನ್ನು ಪೂರ್ಣವಾಗಿ ಕಡದು ಬಿಟ್ಟು, ಸಭೆಯ ಮೇಲಧಿಕಾರವನ್ನು ತನ್ನ ಕ್ಯೆಯಲ್ಲೇ ತಕ್ಕೊಂಡು, ಪಾರಮಾರ್ಥಿಕರಿಂದ ಮೇಲಧಿಕಾರದ ಪ್ರಮಾಣವನ್ನು ಮಾಡಿಸಿ ಕೊಂಡಳು. ಇಂಗ್ಲಿಷು ದೇಶದ ಕಿರೀಟಧಾರಿಗಳು ಇಂದಿನವರೆಗೂ ಈ ಪ್ರಕಾರ ನಡದು ಬರುತ್ತಾರೆ. ಯಾರಾದರೂ ಈ ಪ್ರಕಾರ ಪ್ರಮಾಣ ಮಾಡಲೊಲ್ಲೆವೆಂದು ಹೇಳಿದ್ದಲ್ಲಿ, ಎಲಿಸಬೇತ ರಾಣಿಯು ಅವರನ್ನು ಉದ್ಯೋಗದಿಂದ ತೆಗಿಯುವದು ಅವಶ್ಯ ಬಿದ್ದರೂ, ಅವರಿಗೂ ಕರುಣೆ ತೋರಿಸಿ, ಯೋಗ್ಯವಾದ ವರ್ಷಾಶನಗಳನ್ನು ನೇಮಿಸಿದಳು. ಉಳಿಕೆಯಲ್ಲಿ, ಎಲಿಸಬೇತ ರಾಣಿಯು, ಇಂದಿನ ವರೆಗೂ ನಡಿಯುತ್ತಾ ಬರುವ ಪ್ರಕಾರ, ರೋಮಿಯ ಸಭೆಯ ಅಧ್ಯಕ್ಷಾಧಿಕಾರದ ಕ್ರಮವನ್ನು ಸಾಂಗೋಪಾಂಗವಾಗಿ ಇದ್ದ ಹಾಗೆ ಇಟ್ಟಳು. ಈ ಪ್ರಕಾರ ಇಂಗ್ಲಿಷು ಸಭೆಗೆ ಅರಸನ ತರುವಾಯ, ಮುಖ್ಯಸ್ಥಾನ ಬಿರಿದು ಹೊಂದಿರುವ ಮಹಾಧ್ಯಕ್ಷರೂ, ಐಶ್ವರ್ಯವೂ ಘನವೂ ಉಳ್ಳ ಅಧ್ಯಕ್ಷರೂ, ಅನೇಕಾನೇಕ ಪುರೋಹಿತರೂ ಇದ್ದಾರೆ. ಇದಲ್ಲದೆ ಲಿಟರ್ಜಿ ಎಂಬ ಸಮಸ್ತ ಸಭಾಚಾರಗಳ ಪುಸ್ತಕವನ್ನು ಎಡ್ವರ್ಡನ ಕಾಲದಲ್ಲಿ ರಚಿಸಿದ ಇದೇ ತರದ ಪುಸ್ತಕದ ಆಧಾರದಿಂದ ಮಾಡಿಸಿದಳು. ಇದಲ್ಲದೆ ಮೇಲೆ ಹೇಳಿದ ಪ್ರಕಾರ ವಿಶ್ವಾಸಪ್ರಮಾಣಗಳನ್ನು ತಿದ್ದುಪಡಿಸಿ, ಸಭೆಯ ಅರಿಕೆಯಾಗಿ ೩೯ ಸೂತ್ರಗಳನ್ನು ಬರಿಸಿದಳು. ಈ ಸೂತ್ರಗಳಲ್ಲಿ ಶುದ್ಧ ಸುವಾರ್ತಾವಿಶ್ವಾಸವು ಸ್ಥಾಪನೆಯಾಗಿರಲಾಗಿ, ಇಂಗ್ಲಿಷು ದೇಶದಲ್ಲಿ ನಮ್ಮ ಕರ್ತನಾದ ಯೇಸುವಿನ ಸುವಾರ್ತೆಗೆ ಅನುಕೂಲವಾದ ಜೀವನ ಸಹಾ ಉಂಟಾಗುವದಕ್ಕೆ ಆಧಾರವಾಯಿತು. ಇದೆಲ್ಲಾ ಒಳ್ಳೆದು, ಛಂದವಾಗಿತ್ತು; ಆದರೆ ಒಂದು ಕಾರ್ಯವು ಸಮವಾಗಿರಲಿಲ್ಲಾ. ಅದೇನಂದರೆ, ಎಲಿಸಬೇತ ರಾಣಿಯು ಈ ಕ್ರಮಗಳು ಅತ್ಯುತ್ತಮವೆಂದು ಎಣಿಸಿ, ಸುವಾರ್ತೆಯ ಗುಣಕ್ಕೆ ವ್ಯತಿರಿಕ್ತವಾಗಿ, ಆ ಕ್ರಮಗಳನ್ನು ಎಲ್ಲಾ ಕಡೆಯಲ್ಲಿಯೂ ಪತ್ರಾಯದಿಂದ ಸ್ಥಿರ ಪಡಿಸುವದಕ್ಕೆ ನೋಡಿದ್ದು ತಪ್ಪಾಯಿತು. ಅದರಿಂದ ಬಹಳ ಪಕ್ಷಗಳೂ

ಭಯಂಕರವಾದ ಹೋರಾಟಗಳೂ ಉಂಟಾದವು. ಅವುಗಳನ್ನೆಲ್ಲಾ ಕೂಲಂಕುಶವಾಗಿ ವಿಚಾರಿಸಲಿಕ್ಕೆ ನಮಗೆ ಸಮಯವಿಲ್ಲಾ. ಇಷ್ಟು ಮಾತ್ರ ಹೇಳ ಬೇಕು. ಇಂಥಾ ಸಮಯದಲ್ಲಿಯೂ ದೇವರು ಸದ್ಭಕ್ತರಿಗೆ ಸಹಾಯ ಮಾಡಿ, ಮುಂಚೆ ಪೋಪನ ಕಡೆಯಿಂದಾದರೆ ಈಗ ಸರ್ಕಾರ ಕಡೆಯಿಂದ ಬಂದ ಸರ್ವಸಂಕಷ್ಟಗಳನ್ನು ನಿವಾರಿಸಿ, ತನ್ನ ಸಭೆಯನ್ನು ಬಹಿರಂಗದಲ್ಲಿ ಬಹುವಿಧವಾಗಿ ರೂಪಿಸಿ, ಆತ್ಮದಲ್ಲಿ ಯೇಕೀಕರಿಸಿ, ಇಂದಿನ ವರೆಗೂ ಕಾಪಾಡುತ್ತಾ ಬಂದಿದ್ದಾನೆ.

ಕಡೆಯಲ್ಲಿ ಸ್ಕಾತ್ಲೇಶದ ಪುನಃಸ್ಥಾಪನೆಯ ವರ್ತಮಾನವನ್ನು ಸಹಾ ಕೇಳುವಾ. ಈ ದೇಶವು ಇಂಗ್ಲಿಷು ದೇಶಕ್ಕೆ ಅತ್ಯಂತ ಸಂಬಂಧವಾಗಿದ್ದರೂ, ಅಲ್ಲಿಯ ಪುನಃಸ್ಥಾಪನೆಯ ಗಮನವು ಪೂರ್ಣ ಬೇರೆಯಾಗಿತ್ತು. ಕಲ್ವೀನನು ಸಿದ್ಧಾಂತ ಮಾಡ ಎತ್ತೈಸಿದ ಪುನರೂಪಿತ ಸಭೆಯ ವಿಶ್ವಾಸದ ಅರಿಕೆಯು, ಪೂರ್ಣ ಖಂಡಿತವಾಗಿ ಜ್ಞಾನದಲ್ಲಿ ಮಾತ್ರವಲ್ಲ, ನಡತೆಯಲ್ಲಿ ಸಹಾ, ಸ್ಕಾತ್ ದೇಶದ ಹಾಗೆ, ಎಲ್ಲಿಯೂ ಸ್ಥಾಪನೆ ಆಗಲಿಲ್ಲಾ. ಈ ದೇಶದವರು ಆರಂಭದಿಂದಲೆ ಇಂಗ್ಲಿಷು ದೇಶಕ್ಕಿಂತ ಹೆಚ್ಚಾಗಿ ಪೋಪನಿಗೆ ಎದುರು ನಿಂತು, ಹೆಚ್ಚಾದ ಸ್ವತಂತ್ರವನ್ನು ಸ್ಥಾಪಿಸುತ್ತಾ ಬಂದಿದ್ದರು. ಆದರೆ ಅಷ್ಟಕ್ಕೆ ಹೆಚ್ಚಾಗಿ ಗರ್ವ ಐಶ್ವರ್ಯವುಳ್ಳ ಜ್ಞಾನಶೂನ್ಯರಾದ ಯಾಜಕರು ಅಧಿಕಾರ ನಡಿಸುತ್ತಾ ಬರಲಾಗಿ, ಜನರು ರೋಮಿಯ ಅಪವಿಶ್ವಾಸದ ಮಹಾ ಅಂಧಕಾರದಲ್ಲಿ ಬಿದ್ದಿದ್ದರು. ಆದರೂ ಆಗಿಂದಾಗ್ಯೆ ಸತ್ಯದ ಬೆಳಕನ್ನು ಹೊಂದ ಬೇಕೆಂಬ ಅಪೇಕ್ಷೆಯು ಅಲ್ಲಿಲ್ಲಿ ಪ್ರತ್ಯಕ್ಷವಾಗುತ್ತಾ ಇತ್ತು. ವಿಕ್ಲಿಫನ ಗ್ರಂಥಗಳನ್ನು ಸಹಾ ಅನೇಕರು ಸಂತೋಷದಿಂದ ತೆಗದು ಕೊಂಡು, ಮಧ್ಯರಾತ್ರಿಯ ಸಮಯದಲ್ಲಿ ದೇವರ ವಾಕ್ಯವನ್ನು ಓದುತ್ತಾ, ವಿಶ್ವಾಸವನ್ನು ಘಟ್ಟಿ ಮಾಡಲಿಕ್ಕೆ ನೋಡಿದರು. ಮತ್ತೆ ಪತ್ರಿಕ್ ಹಮಿಲ್ತನ್ ಎಂಬ ಯೌವನಸ್ಥನಾದ ರಾಜಮಂತ್ರಾನಕ್ಕೆ ಸಂಬಂಧಿಕನಾದ ಶ್ರೀಮಂತನೊಬ್ಬನು ಜರ್ಮನಿ ದೇಶದಲ್ಲಿ ಕಲಿತು ಕೊಂಡ ಲುಥರನ ಬೋಧನೆಯನ್ನು ಪ್ರಕಟವಾಗಿ ಸಾರಲಿಕ್ಕೆ ತೊಡಗಿದಾಗ, ಎಲ್ಲರೂ ವಿಸ್ಮಯವಾದರು. ಈತನು ೧೫೨೮ಲ್ಲು ಅಗ್ನಿಮರಣವನ್ನು ಅನುಭವಿಸ ಬೇಕಾಯಿತು ಸರಿ; ಆದರೆ ಈ ಪ್ರಕಾರ ಅವನನ್ನು ಹತ ಮಾಡುವಾಗ್ಯೆ ಸುಡುವ ಕೆಲಸದಲ್ಲಿ ಅತಿ ಪ್ರಯತ್ನ ಮಾಡಿದ ಒಬ್ಬ ಬೈರಾಗಿಗೆ ಅವನು ಅತಿ ಧೈರ್ಯದಿಂದ ಹೇಳಿದ್ದೇನಂದರೆ: “ಓ ತಬ್ಬಿ ಮನುಷ್ಯನೇ, ನಾನು ಈಗ ಯಾವ ಬೋಧನೆಗೋಸ್ಕರ ಜೀವ ಕೊಡುತ್ತೇನೋ, ಆ ಬೋಧನೆಯು ಸತ್ಯವೆಂಬದಕ್ಕೆ ನಿನ್ನ ಮನಸ್ಸಾಕ್ಷಿಯೆ ಒಪ್ಪಿ ಕೊಳ್ಳುತ್ತದೆ. ನೀನೇ ಮುಂಚೆ ನನಗೆ ಅರಿಕೆ ಮಾಡಿದ್ಧಿ. ಇಕೋ! ಜೀವವುಳ್ಳ ದೇವರ ನ್ಯಾಯಾಸನದ ಮುಂದೆ ನಿನ್ನನ್ನು ವಿಚಾರಣೆಗೆ ಕರಿಯುತ್ತೇನೆ.” ಈ ಮಾತಿನ ಪ್ರಕಾರ ಆ ಬೈರಾಗಿಯು ಸ್ವಲ್ಪ ಕಾಲದ ಮೇಲೆ ಹುಚ್ಚು

ಹಿಡಿದು, ಸತ್ತು ಹೋದನು. ಇದರಿಂದ ಮರಣಸಾಕ್ಷಿಯ ಕೀರ್ತಿ ದೊಡ್ಡದಾಯಿತು. ಅನೇಕರಿಗೆ ಅವನು ದೇವರ ಪ್ರವಾದಿಯೂ ಪರಿಶುದ್ಧ ಚಿತ್ತನೂ ಎಂದು ನಿಶ್ಚಯವಾಯಿತು. ಅದೇ ಪ್ರಕಾರ ಗೆಯೊರ್ಗ್ ವಿಸ್‌ಹರ್ಟ್ ಎಂಬ ಮರಣಸಾಕ್ಷಿಯನ್ನು ಕೊಲ್ಲುವಾಗ್ಯೆ ನಡದ ಸಂಗತಿಯಿಂದ ಅನೇಕರ ಮನಸ್ಸು ಬೇರೆ ಆಯಿತು. ಅದೇನಂದರೆ, ಈ ಮನುಷ್ಯನು ಅವಸಾನಕಾಲದಲ್ಲಿ ರಾತ್ರಿಭೋಜನವನ್ನು ತಕ್ಕೊಳ್ಳಲಿಕ್ಕೆ ಅಪೇಕ್ಷಿಸಿದನು. ಆದರೆ ರೋಮಿಯ ಯಾಜಕನಿಂದ ತಕ್ಕೊಳ್ಳಲೊಲ್ಲದೆ, ಪಾರಣವಾದ ಮೇಲೆ, ಮೇಜಿನಲ್ಲಿ ಇದ್ದ ರೊಟ್ಟಿ ದ್ರಾಕ್ಷಿರಸಗಳನ್ನು ತಾನೇ ಆಶೀರ್ವದಿಸಿ, ಸ್ನೇಹಿತರ ಸಂಗಡ ರಾತ್ರಿಭೋಜನವನ್ನು ಆಚರಿಸಿದನು. ಈ ದೆಶೆಯಿಂದಲೂ ಅವನ ಮೇಲೆ ಬಹಳ ಹೆಚ್ಚಾಗಿ ಕೋಪ ಮಾಡಿದಂಥಾ ಪ್ರತಿಕಕ್ಷಿಕರ ಕ್ರೂರ ಹಿಂಸಕನಾದಂಥಾ ಮಹಾಧ್ಯಕ್ಷ ಬೀತನ್ ಈ ವಿಸ್‌ಹರ್ಡನ ಮರಣಕ್ಕೆ ಸಹಾ ಕಾರಣವಾಗಿದ್ದು, ತನ್ನ ದುರ್ಗದ ಕಿಟಕಿಗಳಿಂದ ಅಗ್ನಿಜ್ವಾಲೆಗಳಲ್ಲಿ ವ್ಯಥೆ ಪಡುವವನ ಯಾತನೆಗಳನ್ನು ನೋಡುತ್ತಾ ಇದ್ದನು. ಸಾಯುವವನು ಅಗ್ನಿಜ್ವಾಲೆಗಳಿಂದ ಪ್ರವಾದಿಸುವವನಂತೆ ಅವನ ಅಂತ್ಯ ಸಹಾ ಸಮೀಪವಾಯಿತೆಂದು ಹೇಳಿದ ಪ್ರಕಾರ, ಸ್ವಲ್ಪ ದಿನದ ಮೇಲೆ ಯಾರೋ ಅವನನ್ನು ದುರ್ಗದಲ್ಲಿಯೆ ಕೊಂದು ಹಾಕಿದರು.

ಮೊದಲೆ ಅದ್ಭುತಗಳನ್ನು ನಿರೀಕ್ಷಿಸುವ ಜನರ ಮನಸ್ಸಿಗೆ, ಇಂಥಾ ಆಶ್ಚರ್ಯ ಕಾರ್ಯಗಳು ಬಹು ವಿಶೇಷವಾಗಿ ಕಂಡವು. ಅಂಥಾ ಸಮಯದಲ್ಲಿ ಪುನಃಸ್ಥಾಪನೆಯ ಕಾರ್ಯವನ್ನು ಅತಿ ಬಲದಿಂದ ನಡಿಸಿ, ತೀರಿಸಿದವನೊಬ್ಬನು ಎದ್ದನು. ಅವನ ಹೆಸರು ಯೋಹಾನ ನಾಕ್ಸ್ ಈತನು ಖಂಡಿತ ಮನೋಭಿಪ್ರಾಯದಲ್ಲಿಯೂ, ಕೈ ಹಾಕಿದ ಕೆಲಸವನ್ನು ಪೂರ್ತಿ ಮಾಡದೆ ಬಿಡದ ಅನಾಲಸ್ಯದಲ್ಲಿಯೂ ಲುಥರನ ಹಾಗೆಯೂ, ಸೂಕ್ಷ್ಮಬುದ್ಧಿಯಲ್ಲಿಯೂ ಮುಖ್ಯ ದಾಕ್ಷಿಣ್ಯವಿಲ್ಲದ ಗುಣದಲ್ಲಿಯೂ ಕಲ್ವೀನನ ಹಾಗೆಯೂ ಇದ್ದನು. ಇದಲ್ಲದೆ ಕಲ್ವೀನನ ಬೋಧಗ್ರಹಿಕೆಯನ್ನು ಪೂರ್ಣವಾಗಿ ಸ್ವೀಕರಿಸಿ, ನಿಜ ಪುನರೂಪಿತ ಸಭೆಯವನಿಗೂ ನಿಜ ಸ್ಕೋತನಿಗೂ ಒಪ್ಪುವ ಹಾಗೆ, ಅಂತರ್ಧ್ಯಾನಕ್ಕೆ ಅಷ್ಟು ಸಮಯ ಕೊಡದೆ, ಬಹಿರಂಗದ ಕಾರ್ಯಗಳಲ್ಲಿ ಹೆಚ್ಚಾಗಿ ಪ್ರವೇಶವಾಗಿ, ಅವುಗಳನ್ನು ನಡಿಸಿ, ಸಮ ಮಾಡುತ್ತಾ ಬರುವವನಾಗಿದ್ದನು. ಯಾರಿಗೂ ಹೆದರದೆ, ಸುಲಭದಿಂದ ತರ್ಕ ಹುಟ್ಟಿಸುವವನಾಗಿ, ಹೋರಾಟದಲ್ಲಿ ಗೆಲ್ಲುವ ವರೆಗೆ ಸುಮ್ಮನಿರದಂಥಾ ಈ ಅತಿ ಬಲಾಢ್ಯ ಮನುಷ್ಯನು, ಸ್ಕೋತ ಪುನಃಸ್ಥಾಪನೆಯಲ್ಲಿ ಹಸ್ತಗತ ಮಾಡಿದ ಗಂಭೀರತ್ವವು ಅಲ್ಲಿಯ ಸಭೆಗೆ ಇಂದಿನ ವರೆಗೂ ಇರುತ್ತದೆ.

ಅವನ ಚರಿತ್ರವು ಸಂಕ್ಷೇಪವಾಗಿ ಹ್ಯಾಗೆಂದರೆ: ಯೋಹಾನ ನಾಕ್ಸನು ಒಂದು
ಮಾನಸ್ಥಿಕೆಯ ಕುಟುಂಬದಲ್ಲಿ ೧೫೦೫ಲ್ಲಿ ಗಿಪ್ಫೋರ್ಡ ಎಂಬಲ್ಲಿ ಹುಟ್ಟಿದನು. ಚಿ
ಕ್ಕವನಾಗಿರುವಾಗಲೆ ಶುಭ್ರ ಚುರುಕಾದ ಬುದ್ಧಿಯೂ ಚಂಚಲವಾಗದ ಸ್ಥಿರ ಮ
ನಸ್ಸೂ ಅವನಲ್ಲಿ ಕಾಣ ಬಂದವು. ಗ್ಲಸ್ಕೊ ಸರ್ವಶಾಲೆಯ ಅತಿ ಬುದ್ಧಿವಂತನಾ
ದ ಒಬ್ಬ ಬೋಧಕನ ಉಪದೇಶದಿಂದಲೂ, ಸತ್ಯವೇದದ ಅಧ್ಯಾಪನದಿಂದಲೂ, ಹಿ
ಯರೋನಿಮ ಔಗುಸ್ತೀನರ ಗ್ರಂಥಗಳಿಂದಲೂ, ಮುಖ್ಯವಾಗಿ ಸುವಾರ್ತಾಪಕ್ಷದ
ವರ ಮೇಲೆ ಬಂದ ಹಿಂಸೆಗಳಿಂದಲೂ, ಯೌವನ ಪ್ರಾಯದಲ್ಲಿಯೆ ಅವನ ಮನಸ್ಸು
ಬೇರೆ ಆಗಿ, ಸುಳ್ಳು ಬೋಧನೆಗೆ ಎದುರು ನಿಲ್ಲುವ ಅಪೇಕ್ಷೆಯು ಅವನಲ್ಲಿ ಹುಟ್ಟಿತು.
ಮತ್ತೆ ಅಂದ್ರೆಯ ಸಭೆಯ ಪ್ರಸಂಗಿಯಾದಾಗ, ಅವನು ಮಹಾ ಆತ್ಮದ ಬಲದಿಂದ ದೇ
ವರ ವಾಕ್ಯವನ್ನು ಸಾರುತ್ತಿರಲಾಗಿ, ಸ್ವಲ್ಪ ಮಂದಿ ಮಾತ್ರವಲ್ಲ, ಪಟ್ಟಣದವರೆಲ್ಲರು
ಸುವಾರ್ತೆಯ ಬೋಧನೆಯನ್ನು ಸ್ವೀಕರಿಸಿದರು. ಆದರೆ ಸುವಾರ್ತಾಬೋಧನೆಯ
ಶತ್ರುಗಳು ಈ ಕಾರಣದಿಂದ ಆ ಪಟ್ಟಣದವರ ಮೇಲೆ ಕೋಪ ಮಾಡಿ, ಅವರು ಮಾ
ರ್ಗಲವರೆಂದು ಹೇಳಿ, ಫ್ರೆಂಚ ದೇಶದಿಂದ ಯುದ್ಧದ ಹಡಗಗಳನ್ನು ತರಿಸಿ, ಪಟ್ಟ
ಣದ ಮೇಲೆ ಬಹಳ ಒತ್ತಾಯ ನಡಿಸಿದರು. ನಾಕ್ಸನ ಬೋಧನೆಯಿಂದ ಧೈರ್ಯ
ತಕ್ಕೊಂಡು, ಈ ಪಟ್ಟಣದವರು ಎಷ್ಟು ಶೂರತ್ವದಿಂದ ಎದುರ್ನಿಂತು ಸಾಧಿಸಿದಾಗ್ಯೂ,
ಕಡೆಯಲ್ಲಿ ಸೋತು ಹೋದಾಗ, ನಾಕ್ಸನು ಪಟ್ಟಣದ ರಾಣುವೆಯವರ ಸಂಗಡ ಫ್ರೆಂ
ಚರ ಕೈಯಲ್ಲಿ ಬಿದ್ದನು. ಇವರು ಅವನನ್ನು ಬಂಧಿಖಾನೆಯಲ್ಲಿ ಹಾಕಿ, ಕಷ್ಟವಾದ
ಶಿಕ್ಷೆಯನ್ನು ಕೊಟ್ಟರು. ಆ ಕಾಲದಲ್ಲಿ ಬಂಧನದಲ್ಲಿದ್ದವರನ್ನು ಹಳೇ ವಿಶ್ವಾಸಕ್ಕೆ ತಿ
ರುಗಿಸ ಬೇಕೆಂದು ಎಷ್ಟು ಪ್ರಯತ್ನ ಮಾಡಿದಾಗ್ಯೂ, ಅವರು ಎಷ್ಟಾದರೂ ಕಿವಿ ಕೊ
ಡದೆ ಹೋದ್ದಲ್ಲದೆ, ಒಂದು ಸಾರಿ ಅವರಲ್ಲಿ ಒಬ್ಬನಿಗೆ ಮರೀಯ ಪ್ರತಿಮೆಯನ್ನು
ತೋರಿಸಿ, ಅದಕ್ಕೆ ಮುದ್ದಿಡ ಬೇಕೆಂದು ಹೇಳಿದಾಗ, ಈತನು ಅದನ್ನು ಕಸಕೊಂಡು,
ಹೊಳೆಯಲ್ಲಿ ಬಿಸಾಡಿ, "ಕನ್ನಿಕೆಯು ಬಹಳ ಹಗುರವಾಗಿದ್ದಾಳೆ, ಆಕೆಯನ್ನು ಈಸ
ಲಿಕ್ಕೆ ಕಲಿಯಗೊಡಿಸಿರಿ" ಎಂದು ಹೇಳಿದನು. ನಾಕ್ಸನು ತಾನೆ ಇಂಥಾ ಬಂಧನದ
ಲ್ಲಿ ಬಾಧೆಯನ್ನು ಸಹಿಸಲಾರದೆ, ರೋಗದಲ್ಲಿ ಬಿದ್ದನು. ಆದರೂ ಅದು ಸಹಾ
ವಿಶ್ವಾಸದಲ್ಲಿಯೂ ತಾಳ್ಮೆಯಲ್ಲಿಯೂ ಅಭಿವೃದ್ಧಿಯಾಗುವದಕ್ಕೆ ಅವನಿಗೆ ಒಳ್ಳೇ
ಉಪಾಯವಾಯಿತು. ಆ ಕಾಲದಲ್ಲಿ ಮಾಡಿದ ಅನುಭವದಿಂದಲೆ ಅವನು ಪ್ರಾರ್ಥ
ನೆಯ ವಿಷಯ ಒಂದು ಪ್ರಬಂಧವನ್ನು ರಚಿಸಿದನು. ಇದಲ್ಲದೆ ತನ್ನ ಬಾಧೆಯನ್ನು
ಮರತು, ತನ್ನ ದೇಶಸ್ಥರ ದುಖ್ಖವನ್ನು ನೆನಸಿ, ಯೇಸು ಕ್ರಿಸ್ತನ ಬಂಧನದಲ್ಲಿರುವ ದಾ
ಸನೆಂದು ಪೌಲನಂತೆ ಸ್ಕೋತ ದೇಶದಲ್ಲಿರುವ ವಿಶ್ವಾಸಿಗಳಿಗೆ ಪತ್ರಿಕೆ ಬರದು, ಸ್ಥಿರ

ವಾಗಿ ನಿಲ್ಲ ಬೇಕೆಂದು ಬುದ್ಧಿ ಹೇಳುತ್ತಾ ಇದ್ದನು. ಎರಡು ವರುಷದ ಮೇಲೆ ಅವನಿಗೆ ಬಿಡುಗಡೆ ಆಯಿತು. ಆದರೆ ಸ್ಕಾಕ್ತ ದೇಶಕ್ಕೆ ತಿರಿಗಿ ಹೋಗಲಿಕ್ಕೆ ಅಪ್ಪಣೆ ಇಲ್ಲದೆ ಇರಲಾಗಿ, ಅವನು ಇಂಗ್ಲಿಷು ದೇಶಕ್ಕೆ ಹೋದನು. ಆದರೆ ಅಧ್ಯಕ್ಷಾಧಿಕಾರದ ಸಭೆಯ ಕ್ರಮಗಳು ಅವನ ಮನಸ್ಸಿಗೆ ಸರಿ ಬೀಳದೆ ಇರುವದರಿಂದ, ಒಂದು ಸಾರಿ ಅಧ್ಯಕ್ಷೋದ್ಯೋಗವನ್ನು ಅವನಿಗೆ ಕೊಡಲಿಕ್ಕೆ ಇದ್ದಾಗ, ಅದು ಬೇಡಾ ಅಂದನು. ಇದರ ಹೊರ್ತು ರೋಮಿಯ ಪಕ್ಷದ ಮರೀಯ ರಾಣಿಯ ಹಿಂಸೆಗಳ ದೆಶೆಯಿಂದ ನಾಕ್ಸನು ಸಹಾ ದೇಶಾಂತರ ಹೋಗುವದು ಅವಶ್ಯವಾಗಿ, ಬೇರೆ ಎಲ್ಲಿಯೂ ಬೇಡವೆಂದು, ತನ್ನ ಮನಸ್ಸಿಗೆ ಹಿತವಾದ ಗೆನ್ಫಕ್ಕೆ ಕಲ್ವೀನನ ಬಳಿಗೆ ಬಂದನು. ಅಲ್ಲಿದ್ದ ಸಮಯವು ನಾಕ್ಸನಿಗೂ ಸ್ಕಾಕ್ತ ಸಭೆಯ ಗತಿಗೂ ಅತಿ ಮಂಗಲಕರವಾಯಿತು. ತನ್ಮಧ್ಯ ಸ್ವದೇಶದ ಸ್ಥಿತಿಯು ಬೇರೆಯಾದ್ದರಿಂದ, ನಾಕ್ಸನು ತಿರಿಗಿ ಅಲ್ಲಿಗೆ ಬರುವದಕ್ಕೆ ಧೈರ್ಯ ಮಾಡಿಕೊಂಡನು.

ಎದಿನ್ಬರ್ಗದಲ್ಲಿ ಸ್ವಲ್ಪ ಕಾಲದೊಳಗೆ ಒಬ್ಬ ಗೃಹಸ್ಥನ ಮನೆಯಲ್ಲಿ ತಕ್ಕಷ್ಟು ವಿಶ್ವಾಸಿಗಳು ಕೂಡಿ ಬರುವದಕ್ಕೆ ಆರಂಭವಾಯಿತು. ಆದರೆ ಹೋರಾಟ ಸಹಾ ಬೇಗನೆ ಬಂತು. ಪಾರಮಾರ್ಥಿಕರು ನಾಕ್ಸನನ್ನು ನ್ಯಾಯಸ್ಥಾನಕ್ಕೆ ಕರಿಸಿದರು. ಆದರೆ ಅವನ ಸಂಗಡ ಮಹಾ ಮಾನಸ್ಥರಾದ ಸ್ನೇಹಿತರು ಸಹಾ ಬಂದಿರಲಾಗಿ, ಹಗೆಗಾರರು ಅವನಿಗೇನೂ ಮಾಡಲಾರದೆ, ಅವನು ಅನೇಕ ಜನರ ಮುಂದೆ ಹತ್ತು ದಿನ ವರೆಗೆ ಪ್ರಸಂಗಿಸುತ್ತಾ ಇರುವದನ್ನು ಸಹಾ ನೋಡುತ್ತಾ ಸುಮ್ಮನಿರ ಬೇಕಾಯಿತು. ಆದಾಗ್ಯೂ ರಾಜ್ಯದಲ್ಲಿ ಯುದ್ಧ ಉಂಟಾಗುವ ಹಾಗೆ ತೋರಿದಾಗ, ಅವನು ಗೆನ್ಫದ ಸಭೆಯವರು ತಮ್ಮ ಪ್ರಸಂಗಿ ಆಗ ಬೇಕೆಂದು ಬರದು ಕಳುಹಿಸಿದ್ದನ್ನು ಕಂಡು, ಇದು ದೈವಘಟಣೆವೆಂದು ನೆನಸಿ, ಅಲ್ಲಿಗೆ ಹೋದನು. ಆದರೂ ಅವನ ಹೃದಯವು ಜನ್ಮದೇಶದಲ್ಲಿಯೇ ಇತ್ತು. ಹೋರಾಟದಲ್ಲಿರುವ ಸಹೋದರರಿಗೆ ತಿರಿಗಿ ತಿರಿಗಿ ಕಾಗದಗಳನ್ನು ಬರಿಯುತ್ತಾ ಇದ್ದನು.

ತಾನು ದೂರ ಹೋದರೆ ದೇಶದಲ್ಲಿ ಯುದ್ಧ ಕಂಟಕವು ತಪ್ಪೀತು ಎಂದು ನಾಕ್ಸನು ನೆನಸಿದ ಹಾಗೆಯೇ ಆಗುವ ಹಾಗೆ ಇರಲಿಲ್ಲ. ಮಾನಯೋಗ್ಯ ಒಲ್ತರ್ಮಿಲ್ ಎಂಬವನು ದೇಶದಲ್ಲಿ ಸಂಚರಿಸುತ್ತಾ, ಸುವಾರ್ತೆಯನ್ನು ಪ್ರಸಂಗಿಸುತ್ತಾ, ತನ್ನ ಕಡೇ ಕಾಲವನ್ನು ಕಳೆಯ ಬೇಕೆಂದಿದ್ದಾಗ, ಅಂದ್ರೆಯದ ಮಹಾಧ್ಯಕ್ಷನು ಅವನನ್ನು ಹಿಡಿಸಿ, ಪಾರಮಾರ್ಥಿಕರ ನ್ಯಾಯಸ್ಥಾನದಲ್ಲಿ ಅವನ ಮೇಲೆ ಅಗ್ನಿಮರಣವನ್ನು ನಿಶ್ಚೈಸುವದಕ್ಕೆ ಪ್ರಯತ್ನ ಮಾಡಿದನು. ಆದರೆ ಈ ತೀರ್ಪಿನ ಪ್ರಕಾರ ನಡಿಸಲಿಕ್ಕೆ ಮೊದಲಾಗಿ ಲೌಕಿಕ ನ್ಯಾಯಾಧಿಪತಿ ಯಾರೂ ಸಿಕ್ಕಲಿಲ್ಲ, ಮಾರೆಕಾರರಲ್ಲಿ

ಸಹಾ ಯಾರೂ ಈ ಕೆಲಸ ನಡಿಸಲಿಕ್ಕೆ ಒಪ್ಪಲಿಲ್ಲ. ಆದರೂ ಮಹಾಧ್ಯಕ್ಷನು ಶತ ಪ್ರಯತ್ನದಿಂದ ತನ್ನ ಕಾರ್ಯವನ್ನು ಸಾಧಿಸಿದನು. ಆದರೆ ಪೂರ್ವಕಾಲದಲ್ಲಿ ಹುಸ್ಸನು ಹ್ಯಾಗಾ, ಹಾಗೆಯೆ ಈಗ ಮಿಲ್ಲನು ಸಹ ಚಿತಿಯಲ್ಲಿ ನಿಂತು, ತನ್ನ ಬೂದಿಯಿಂದ ಸತ್ಯದ ಸಾಕ್ಷಿಗಳಾಗಿ ತನಗಿಂತ ಒಳ್ಳೆಯವರಾದ ೧೦೦ ಜನರು ಎದ್ದು ಬರುವರು ಎಂದು ಪ್ರವಾದಿಸಿದನು. ಜನರು ಮರಣಸಾಕ್ಷಿಯ ಪಕ್ಷ ತಕ್ಕೊಂಡು, ಅವನ ಮಾನಕ್ಕೆಂದು ಕೂಡಿಸಿ ತಂದ ಕಲ್ಲುಗಳ ಸ್ಥಂಭವನ್ನು ಮಾಡಿಸಿದರು. ಅಂದಿನಿಂದ ರೋಮಿಾಯ ಪಾರಮಾರ್ಥಿಕರ ಪೌತ್ರಾತ್ಯಕ್ಕೆ ಎದುರು ನಿಂತು, ತಾವೇ ಅನರ್ಥಗಳನ್ನು ನಿಲ್ಲಿಸುವದಕ್ಕೆಂದು ಅಲ್ಲಲ್ಲಿ ಬಲಾತ್ಕಾರ ನಡಿಸಲಿಕ್ಕೆ ತೊಡಗಿದರು. ೧೫೫೭ರಲ್ಲಿ ಪುನಃಸ್ಥಾಪನೆಯ ಕಡೆಯವರು ಕ್ರಿಸ್ತನ ಸಭೆ ಎಂಬ ಹೆಸರಿನ ಒಂದು ಒಪ್ಪಂದವನ್ನು ಮಾಡಿದರು. ಈ ಒಪ್ಪಂದದವರು ರಾಜ್ಯಾಧಿಕಾರ ನಡಿಸುವ ರಾಣಿಯಿಂದ ಮತಕಾರ್ಯಗಳಲ್ಲಿ ನಿರಾತಂಕವಾಗಿರುವ ಹಾಗೆ ಅಪ್ಪಣೆಯಾಗ ಬೇಕೆಂದು ಬೇಡಿಕೊಂಡಲ್ಲಿ, ಮುಂಚೆ ಅವರಿಗೆ ಅಪ್ಪಣೆ ಆಯಿತು; ಆದರೆ ಮತ್ತೆ ಸರ್ಕಾರದವರು ಮಾತಿಗೆ ತಪ್ಪಿದರು. ಆಗ್ಯೆ ಈ ಒಪ್ಪಂದದವರು ಸರ್ಕಾರದವರ ಮೇಲೆ ಕತ್ತಿ ಎಳದು, ಎದುರು ನಿಲ್ಲುವದು ಸಮವೆಂದು ನೆನಸಿದರು.

ಸರ್ಕಾರದವರು ನಿಷೇಧಿಸಿ ಇದ್ದರೂ, ಪ್ರತಿಕಕ್ಷಿಕರು ಅದಕ್ಕೆ ಗಾಡವೆ ಮಾಡದೆ, ಸ್ಕಾಟ್ಲ ದೇಶದ ದೊಡ್ಡ ಪಟ್ಟಣವಾದ ಫೆರ್ತದಲ್ಲಿ ಪುನರೂಪಿತ ಸಭೆಯ ರೀತಿಯಾಗಿ ದೇವಾರಾಧನೆಯನ್ನು ಆರಂಭಿಸುವದಕ್ಕೆ ತೊಡಗಿ, ನಾಕ್ಸನು ದೈವವಿರುದ್ಧವಾದ ಮಿಾಸಿಗೆ ಎದುರಾಗಿ ಪ್ರಸಂಗಪೀಠದಿಂದ ಮಾತಾಡುತ್ತಿರುವಾಗ್ಯೆ, ಒಬ್ಬ ರೋಮಿಾಯ ಯಾಜಕನು ಬಲಿಪೀಠದ ಹತ್ತರ ಮಿಾಸುಬಲಿಯನ್ನು ತಯಾರು ಮಾಡಲಿಕ್ಕೆ ಹೋದನು. ಹತ್ತರ ಒಬ್ಬ ಯೌವನಸ್ಥನು ಕೋಪಿಸಿ ಕೊಂಡು ಅದಾಗದೆಂದು ಹೇಳಿದ್ದಕ್ಕೆ, ಯಾಜಕನು ಕೆನ್ನೆಗೊಂದು ಪೆಟ್ಟು ಕೊಡಲಾಗಿ, ಯುವನನು ಒಂದು ಕಲ್ಲು ತಂದು, ಅವನಿಗೆಂದು ಹೊಡದದ್ದು ಪೀಠದ ಮೇಲಿರುವ ಪ್ರತಿಮೆಗೆ ತಾಗಿ, ಅದನ್ನು ಒಡದು ಬಿಟ್ಟಿತು. ಅದರಿಂದ ದೊಡ್ಡ ಗುಬಾರು ಆಗಿ, ಯಾಜಕನನ್ನು ಹೊಡದು ಜಡಿಸಿ, ಆ ಸಭೆಯಲ್ಲಿಯೂ ಪಟ್ಟಣದ ಬೇರೆ ಸಭೆಗಳಲ್ಲಿಯೂ ಇರುವ ಸಮಸ್ತ ಪ್ರತಿಮೆ ಮುಂತಾದವುಗಳನ್ನು ಕೋಪಾವಿಷ್ಟರಾದ ಜನರು ಹಾಳು ಮಾಡಿ ಬಿಟ್ಟರು.

ಮೇಲೆ ಹೇಳಿದ ಒಪ್ಪಂದದ ಬಲವು ಹೆಚ್ಚಿದಾಗ, ಸದ್ಯಕ್ಕೆ ಆಳುವ ರಾಣಿಗೆ ವಿರೋಧವಾಗಿ ಲಡಾಯಿ ಮಾಡಿ, ಇಂಗ್ಲಿಷು ದೇಶದ ಅರಸ್ತನದ ಸಂಗಡ ಒಡಂಬಡಿಕೆ ಮಾಡಿ, ೧೫೬೯ರಲ್ಲಿ ಸದ್ಯದ ರಾಣಿಯನ್ನು ಉದ್ಯೋಗದಿಂದ ತೆಗದು, ರಾಜ್ಯಸಭೆಯನ್ನು ಕರಸಿ, ಪುನರೂಪಿತ ದೇವಾರಾಧನೆಯನ್ನು ದೇಶದಲ್ಲೆಲ್ಲಾ ಸ್ಥಾಪನೆ ಮಾಡಿದರು.

ಅಷ್ಟರೊಳಗೆ ಸ್ಕಾತ್ಲ ದೇಶದ ಅರಸನಾಗಿದ್ದ ೫ನೆ ಜೇಮ್ಸನ ಮಗಳಾದ ಮರೀಯ ಸ್ತುವರ್ತ ಎಂಬವಳು, ಫ್ರೆಂಚು ದೇಶದ ಅರಸನಾದ ಫ್ರನ್‌ಸಿಸ್ಕನನ್ನು ಮದಿವೆ ಮಾಡಿ ಕೊಂಡವಳಾಗಿ, ಗಂಡನು ತೀರಿ ಹೋದ ಮೇಲೆ, ೧೯ ವರುಷದ ಯೌವನಸ್ಥೆ ವಿಧವೆ ಯಾಗಿದ್ದು, ೧೫೬೧ರಲ್ಲಿ ಸ್ವದೇಶಕ್ಕೆ ತಿರಿಗಿ ಬಂದು, ಸದ್ಯದ ರಾಣಿಯನ್ನು ಅಧಿಕಾ ರದಿಂದ ತೆಗದ ಮೇಲೆ, ತಾನೆ ರಾಜ್ಯಭಾರ ನಡಿಸಲಿಕ್ಕೆ ತೊಡಗಿದಳು. ಆದರೆ ಈಕೆ ಯು ಸೌಂದರ್ಯವೂ, ಯೌವನವೂ, ಲಘುಮನಸ್ಸೂ ಇದ್ದವಳಾಗಿ, ಕಾಮಾತು ರತ್ವಕ್ಕೂ ರೋಮಿಯ ಪಕ್ಷದವರ ಬುದ್ಧಿಗೂ ಎಡೆ ಬಿಟ್ಟಳು. ಈ ಪ್ರಕಾರ ರಾಣಿಗೂ ಪ್ರಜೆಗೂ ಬಹಳವಿವಾದವೂ ವಿರೋಧವೂ ಉಂಟಾಯಿತು.

ಈ ಮರೀಯ ಸ್ತುವರ್ತ ಎಂಬ ರಾಣಿಯು ಮುಂಚೆಯೆ ತಾನು ಇಂಗ್ಲಿಷು ಪ ಟ್ಟದ ಬಾಧ್ಯಸ್ಥಳೆಂದು ಹೇಳುತ್ತಾ ಇದ್ದು, ಕಡೆಯಲ್ಲಿ ಇಂಗ್ಲಿಷು ದೇಶದ ಎಲಿಸಬೇತ ರಾಣಿಗೆ ವಿರೋಧವಾಗಿ ವ್ಯವಹಾರ ನಡಿಸಲಿಕ್ಕೆ ತೊಡಗಿದಳು. ಮತ್ತೆ ಅವಳು ತನ್ನ ಗಂಡ ದರ್ನ್‌ಲಿ ಪ್ರಭುವನ್ನು ಮೋಸದಿಂದ ಕೊಂದು ಹಾಕಿದವನೆಂದು ಜನರು ನೆನಸಿ ದ ಬೊಥ್ವೆಲ್ ಎಂಬ ಶ್ರೀಮಂತನನ್ನು, ಈತನು ೬ ತಿಂಗಳ ಹಿಂದೆ ಮದುವೆ ಮಾಡಿದ ಮೊದಲನೆ ಹೆಂಡತಿಯನ್ನು ಬಿಡಿಸಿ, ತಾನೆ ಮದಿವೆ ಮಾಡಿ ಕೊಂಡಳು. ಆದರೆ ಬೊ ಥ್ವೆಲನು ದೇಶ ಬಿಟ್ಟು ಓಡಿ ಹೋಗ ಬೇಕಾಗಿ, ಸ್ವಲ್ಪ ಕಾಲ ಸಮುದ್ರ ಲೂಟಿಗಾರನಾ ಗಿ ಬದುಕಿ, ಬಂಧನದಲ್ಲಿ ಬಿದ್ದು, ಹುಚ್ಚು ತಾಗಿ ಸತ್ತನು. ಇದಾದ ಮೇಲೆ ಲಡಾಯಿ ಯಲ್ಲಿ ಅಪಜಯವಾಗಿ, ಇಂಗ್ಲಿಷು ದೇಶಕ್ಕೆ ಪಲಾಯನ ಮಾಡಿದಾಗ, ಅಲ್ಲಿ ಆಕೆ ಯನ್ನು ಹಿಡಿದರು. ೧೯ ವರುಷ ಬಂಧನದಲ್ಲಿದ್ದ ಮೇಲೆ, ತನ್ನ ಗಂಡನನ್ನು ಕೊಲ್ಲಿ ಸಿದವಳೆಂದೂ ಎಲಿಸಬೇತಳ ಮೇಲೆ ಸ್ವಾಮಿದ್ರೋಹ ಮಾಡಿದವಳೆಂದೂ ತೀರ್ಪಾಗಿ, ಸರ್ಕಾರದವರಿಂದ ಮರಣಶಿಕ್ಷೆಯನ್ನು ಅನುಭವಿಸ ಬೇಕಾಯಿತು.

ಪುನಃಸ್ಥಾಪಕ ನೊಕ್ಸನಿಗೆ ವಿರೋಧಿಯಾಗಿದ್ದ ಮರೀಯಳ ಗತಿಯು ಈ ಪ್ರ ಕಾರವಾದರೆ, ನೊಕ್ಸನ ಅಂತ್ಯವು ಎಷ್ಟು ಸಮಾಧಾನವುಳ್ಳದ್ದಾಗಿ ಇತ್ತು! ರೋಮಿ ಯಪಕ್ಷದವರಿಗೂ ಅಧ್ಯಕ್ಷಾಧಿಕಾರವನ್ನು ಸ್ಥಾಪಿಸ ಬೇಕೆಂದಿರುವವರಿಗೂ ಎದುರು ನಿಂತು ಹೋರಾಡಿ, ಜೈಸಿ, ಅತಿ ಕ್ಷೇಮಕರವಾದ ಕ್ರೈಸ್ತಸಭೆಯ ಕ್ರಮಗಳನ್ನು ನೆಲೆ ಗೊಳಿಸಿದ ಮೇಲೆ, ಪಕ್ಷವಾತದಿಂದ ಬಲಹೀನನಾಗಿದ್ದ ವೃದ್ಧ ನೊಕ್ಸನು ೧೫೭೨ನೆ ನವಂಬರ ೯ಲ್ಲು ಕಡೇ ಸರ್ತಿ ದೇವಾಲಯಕ್ಕೆ ಹೊರಿಸಿ ಕೊಂಡು ಹೋಗಿ, ತಾನು ಎಂದಾದರೂ ತನ್ನದನ್ನಲ್ಲಾ ಕ್ರಿಸ್ತನದನ್ನೆ ಹುಡುಕುವವನಾಗಿ, ದಿವ್ಯ ವಾಕ್ಯವನ್ನು ಸಾ ರುತ್ತಾ ಬಂದೆನೆಂದು ಹೇಳಿ, ಈ ಒಳ್ಳೆ ಕಾರ್ಯಕ್ಕೆ ನಂಬಿಕೆಯಾಗಿರ ಬೇಕೆಂದು ಬುದ್ಧಿ ಮಾತುಗಳನ್ನು ನುಡಿದು, ಸಭೆಗೆ ಕಡೇ ಆಶೀರ್ವಾದವನ್ನು ಕೊಟ್ಟು, ಸಮಾಧಾನ

ದಲ್ಲಿ ಕೋಲಿನ ಆಧಾರದಿಂದ ನಡಿಯುತ್ತಾ, ಅತ್ತು ಸಂಗಡ ಬರುವ ಅನೇಕರ ಸಹಿತವಾಗಿ, ಮನೆಗೆ ತಿರಿಗಿ ಬಂದನು. ಎರಡು ದಿನದ ಮೇಲೆ ಮರಣಕಾಲವು ಸಮೀಪಿಸಿತೆಂದು ತಿಳಿದು, ಇನ್ನೊಮ್ಮೆ ದೇವರ ವಾಕ್ಯದ ಆದರಣೆಯನ್ನು ದೇವಾಲಯದಲ್ಲಿ ಉಚ್ಚರಿಸ ಬೇಕೆಂದಿದ್ದನು. ಆದರೆ ಬಲ ಸಾಲದೆ ಹೋದ್ದರಿಂದ, ಸಭೆಯ ಪ್ರಸಂಗಿಗಳನ್ನೂ ಹಿರಿಯರನ್ನೂ ತನ್ನ ಕೋಣೆಗೆ ಕರಿಸಿ, ತಾನು ಕಠೋರವಾಗಿದ್ದರೆ, ಯಾರ ಮೇಲೆ ಆದರೂ ಹಗೆ ಇಟ್ಟದರಿಂದಲ್ಲ ದೇವರ ಕಾರ್ಯದಲ್ಲಿ ಆಸಕ್ತಿ ತಾಪದಿಂದಲೆ ಹಾಗಿದ್ದೆನೆಂದು ಹೇಳಿದನು. ರಾಜ್ಯದ ಪ್ರಧಾನರಿಗೆ, ಸ್ವಾರ್ಥದಿಂದಲಾಗಲಿ ಜಗಳಗಳಿಂದಲಾಗಲಿ ಸಭೆಯನ್ನೂ ರಾಜ್ಯವನ್ನೂ ಗಲಿಬಿಲಿ ಮಾಡ ಬಾರದೆಂದು ಹೇಳಿ ಕಳುಹಿಸಿದನು. ಕಡೆಯಲ್ಲಿ ಸೈತಾನನು ನಿನ್ನ ಒಳ್ಳೆ ಸತ್ಕ್ರಿಯೆಗಳಿಗೋಸ್ಕರ ಸ್ವರ್ಗವನ್ನು ಪಡಿಯುವಿ ಎಂದು ತನ್ನನ್ನು ಶೋಧಿಸುವ ಸಂಗತಿಯನ್ನು ವಿಶ್ವಾಸ ಸಹೋದರರಿಗೆ ತಿಳಿಸಿ, ದೇವರ ಕೃಪೆಯ ಮೇಲೆಯೆ ತನ್ನ ಭರವಸವನ್ನಿಡುತ್ತೇನೆಂದು ಸಾಕ್ಷಿ ಕೊಟ್ಟು, ಕಡೇ ಕಾಲದಲ್ಲಿ ಯೋಹಾನನ ಸುವಾರ್ತೆಯ ೧೭ನೆ ಸಂಧಿಯನ್ನು ತನ್ನ ಲಂಗರವೆಂದು ಮಾಡಿ ಕೊಂಡು, ಸ್ಥಿರ ವಿಶ್ವಾಸದಿಂದ ಸಮಾಧಾನವಾಗಿ ೬೭ ವರುಷ ಪ್ರಾಯದವನಾಗಿ ತೀರಿ ಹೋದನು. ಅವನ ಶವವನ್ನು ಸಮಾಧಿಗೆ ತಕ್ಕೊಂಡು ಹೋಗುವಾಗ್ಯೆ, ಅಳುತ್ತಿರುವ ಅನೇಕಾನೇಕ ಜನರೂ, ಶ್ರೀಮಂತರ ಸಹಿತವಾಗಿ ಸದ್ಯದ ಅರಸನಾದ ಮರ್ತನನೂ ಬಂದು ಇದ್ದರು. ಶವಪೆಟ್ಟಿಗೆಯನ್ನು ಇಳಿಸುವಾಗ್ಯೆ, ಈತನು ಘಟ್ಟಿ ಶಬ್ದದಿಂದ ಹೇಳಿದ್ದೇನಂದರೆ: “ಮನುಷ್ಯನ ಮುಖದ ಮುಂದೆ ಎಂದಿಗೂ ಹೆದರದಂಥವನು ಇಲ್ಲಿ ಮಲಗಿದ್ದಾನೆ.”

ಈ ಪ್ರಕಾರ ವಿಲಾಯಿತಿಯಲ್ಲಿ ಪ್ರತಿಕಕ್ಷಿಕರ ಮುಖ್ಯ ದೇಶಗಳಲ್ಲಿ ಪುನಃಸ್ಥಾಪನೆಯು ಹ್ಯಾಗೆ ಸ್ಥಿರವಾಯಿತೆಂದೂ, ಯೇಸು ಕ್ರಿಸ್ತನ ಕೃಪೆಯ ಮಾರ್ಗವು ಹ್ಯಾಗೆ ತಿರಿಗಿ ಪ್ರಬಲವಾಯಿತೆಂದೂ, ಕೇಳಿದಿರಿ. ಅದರಿಂದ ಬರುವ ಉತ್ತಮವಾದ ಫಲಗಳು ವಿಗ್ರಹಾರಾಧನೆಯ ಅಂಧಕಾರದಲ್ಲಿ ಬಿದ್ದಿರುವ ಕನ್ನಡ ನುಡಿಯುವ ಕನ್ನಡ ತಿಳಿಯುವ ಸಮಸ್ತರಿಗೂ ಪ್ರಾಪ್ತಿಯಾಗಲಿ!

# ಅನುಕ್ರಮಣಿಕೆ

# History of the Reformation

## ಸಂಕ್ಷೇಪವಾದ ಪುನಃಸ್ಥಾಪನೆಯ

# ಚರಿತ್ರವು

ಶಾಲೆಗಳಿಗೋಸ್ಕರವೂ ಮನೆತನಗಳಿಗೋಸ್ಕರವೂ
ಕೇದೆನ್ಬಖರನಿಂದ ಹೇಳಲಾಯಿತು

ಮಿಶನೆರಿ

ಹೆ. ಆ. ಕೌಂಡಿನ್ಯ

ಅದನ್ನು ಇಂಗ್ಲಿಷು ಸ್ಕೋತ ದೇಶಗಳ ಪುನಃಸ್ಥಾಪನೆಯ ಚರಿತ್ರ
ಕೂಡಿಸಿ ಕನ್ನಡಿಸಿದ್ದಾಯಿತು

ಮಂಗಳೂರು
ಬಾಸೆಲ್ ಮಿಶನ್ ಪ್ರೆಸ್
೧೮೬೩